ಮಾರ್ಚ್ 1998 ಮಾಸ ಪತ್ರಿಕೆ ರೂ. 10

ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಮನೆ
ಎಂದರೆ ಏನು?

ಮಹಿಳೆಯ ಆ ಸಮಯ!

ನೀವು ಟೀವಿ ಸೇರಬೇಕೆ?

BANK



ಮಾರ್ಚ್ ೧೯೯೮ ಸಂಪುಟ ೧ ಸಂಚಿಕೆ ೯

ಬಿಸಿಲ ಬದುಕು

ಮಾಸಪತ್ರಿಕೆ

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಸಂಪಾದಕ
ಚಂದ್ರಕಾಂತ ವಡ್ಡು

ಸಂಪಾದಕೀಯ ನೆರವು
ಎಚ್.ಎಂ. ಪಂಡಿತಾರಾಧ್ಯ

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಜಾಹೀರಾತು
ಬಿ.ಎಸ್. ತಿಪ್ಪೇಸ್ವಾಮಿ
ಎಸ್. ಕಿರಣ್

ಅಕ್ಷರ ಜೋಡಣೆ
ಜಿ. ಸುರೇಶ್
ಆಶಾ ರಮೇಶ್

ಲೇಖಕರು :
ಎ.ಎಸ್. ಭೂಷಣ್
ಎಸ್. ವಸುಧೇಂದ್ರ
ನಾರಾಯಣ ಎಂ. ಭಟ್
ಡಾ. ಆರತಿ ವೆಂಕಟೇಶ್
ಡಾ. ಸುನಂದಾ ಕುಲಕರ್ಣಿ
ಉತ್ತನೂರು ವ್ಯಾನ್ಸ್
ಎನ್.ಎಂ. ಮರುಳಾರಾಧ್ಯ
ಕೋ. ಚೆನ್ನಬಸಪ್ಪ
ಚಂದ್ರಕಾಂತ ಭಟ್
ಕೆ. ಜಗದೀಶ್
ಕೇಶವ ಉಮರ್ಜಿ
ಡಾ. ಎಸ್.ಸಿ. ಶರ್ಮಾ
ಉಷಾ ನವರತ್ನರಾಮ್
ನವಿಲೂರು ಪ್ರಕಾಶ್
ಪರಮೇಶ್ವರ ಕುದರಿ
ವಸಂತ ಮುರ್ಡೇಶ್ವರ
ಎನ್.ಕೆ. ಕುಲಕರ್ಣಿ
ಮಹಾದೇವಪ್ಪ ಆವಿನ

ಮುಖಪುಟ ವಿನ್ಯಾಸ
ಚಂದ್ರಶೇಖರ ಗುಬ್ಬಿ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079



ಮಹಿಳೆಯ ಬದುಕಿನ ಅವಿಭಾಜ್ಯ ಕ್ರಿಯೆಯಾದ ಋತುಚಕ್ರದ ಬಗ್ಗೆ ತಜ್ಞ ವೈದ್ಯೆಯರು ಇಲ್ಲಿ ಚರ್ಚಿಸಿದ್ದಾರೆ. ಹುಡುಗಿಯರಿಂದ ಹಿಡಿದು ವಯಸ್ಸಾದವರವರೆಗೆ ಪ್ರತಿಯೊಬ್ಬ ಸ್ತ್ರೀಯೂ ಸಂಗ್ರಹಿಸಿಟ್ಟುಕೊಳ್ಳಬೇಕಾದ ಸಮಗ್ರ ಲೇಖನವಿದು.

ವಿದ್ಯೆ-ಉದ್ಯೋಗ

ಸ್ಥಿರ ಶೀರ್ಷಿಕೆಗಳು



Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3358198 Fax : 080 5091136 Pager : 9622 738638 Printed at M.N.S. Enterprises, Bhattarahalli, Old Madras Road, Bangalore - 49 Editor : Chandrakanta Vaddu

ಫೆಬ್ರವರಿ ಸಂಚಿಕೆಯಲ್ಲಿ ಸಹೃದಯದ ಶಿವರಾಮ ಕಾರಂತರನ್ನು 'ಖಾರಂತ'ರನ್ನಾಗಿ ಮಾಡಿದಿರಿ. ಸರಳ ಹೆಸರನ್ನು ಈ ರೀತಿಯಾಗಿ ಬದಲಾಯಿಸಿದ್ದೀರಿ. ಇನ್ನು 'ಕಯ್ಯಾರ ಕಿಞ್ಞಣ್ಣ ರೈ'ರವರನ್ನು ಯಾವ ರೀತಿ ಬದಲಾಯಿಸುವಿರೋ?

– ಹಣಮಂತಪ್ಪ ಸೇಡಂಕರ್, ಗುರುಮಠಕಲ್

[ಶಿವರಾಮ ಖಾರಂತರು ಪದಪ್ರಯೋಗದಲ್ಲಿ ಕಾರಂತರ ವ್ಯಕ್ತಿತ್ವ ಬಿಂಬಿಸುವ ಪ್ರಯತ್ನವನ್ನು ತಾವು ಗಮನಿಸಿಲ್ಲ. **– ಸಂ**]

◆

ಕನ್ನಡದಲ್ಲಿ ಇಂತಹ ಒಂದು ಆರೋಗ್ಯಪೂರ್ಣ ಮಾಸಿಕ ನೋಡಿ ಸಂತೋಷವಾಯಿತು. ನಾನು 'ಬದುಕು' ಓದುಗ ಹಾಗೂ ಏಜೆಂಟ್ ಎರಡೂ ಹೌದು. ನನ್ನ ಅಪೇಕ್ಷೆ ಪ್ರಕಾರ ಪದಬಂಧ ಪ್ರಕಟಿಸುತ್ತಿರುವುದಕ್ಕೆ ಕೃತಜ್ಞತೆಗಳು.

– ಹೆಚ್. ಜಿ. ನಟರಾಜ, ಕೊಪ್ಪ

◆

ಈ ತಿಂಗಳ ಬದುಕು ಆಕರ್ಷಕವಾಗಿತ್ತು. ಮಹಿಳೆಯರಿಗಾಗಿ ಪ್ರಕಟವಾದ ಲೇಖನಗಳು ಅತ್ಯುತ್ತಮವಾಗಿದ್ದವು.

– ಜಯಶ್ರೀ ಕೆ., ಸುರಪೂರ

◆

'ಬಿಸಿಲ ಬದುಕು' ಓದುಗರ ಮನಸ್ಸನ್ನು ತೀಕ್ಷ್ಣಗೊಳಿಸುತ್ತಿದೆ. ನಿಮ್ಮ ಮಾಸಪತ್ರಿಕೆ ವಾರ ಪತ್ರಿಕೆಯಾಗಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದು ನನ್ನ ಬಯಕೆ.

– ನಾಗರಾಜ ಎಸ್. ಮೂರ್‌ಕೈ
ಸಾಗರ

ಟಪಾಲು

೧೫ರ ನಂತರ...

ಪ್ರತಿ ಸಲ ನಮ್ಮ ಅಣ್ಣನು ೧೫ನೇ ತಾರೀಖಿಗೆ 'ಬಿಸಿಲ ಬದುಕ'ನ್ನು ಮನೆಗೆ ಸ್ವಾಗತಿಸುತ್ತಿದ್ದನು. ಪ್ರವಾಸಕ್ಕೆ ಹೋದ ಕಾರಣ ೧೫ರ ನಂತರ ಮಾರುಕಟ್ಟೆಗೆ ಹೋದಾಗ 'ಬಿಸಿಲ ಬದುಕು' ಮುಗಿದು ಹೋಗಿತ್ತು. ಆದ್ದರಿಂದ ಯಾವ ವಿಷಯ ತಿಳಿಯಲಿಲ್ಲ. ದಯವಿಟ್ಟು ಇಂತಹ ಸಂದರ್ಭಕ್ಕೆ ಇನ್ನೊಮ್ಮೆ ಅವಕಾಶ ಕೊಡಬೇಡಿರಿ.

– ಭಾಗ್ಯರತ್ನ ರೋಣದ, ಅಬ್ಬಿಗೇರಿ

ಚಿನ್ನದ ಜಿಂಕೆ

ಧಾರವಾಡದ ಚಿನ್ನದ ಜಿಂಕೆ ರೇಣುಕಾ ಹೇಡೆಯಂಥ ಕ್ರೀಡಾಪಟುವಿನ ಬಗ್ಗೆ ಬರೆದ **ಬದುಕಿ**ಗೆ ಧನ್ಯವಾದಗಳು. ಈ ಚಿನ್ನಕ್ಕೆ ಮೆರುಗು ನೀಡಿದಂತಹ ತಾಯಿ (ಶಾರೀರಿಕ ಶಿಕ್ಷಕಿ) ಚೆನ್ನಮ್ಮನವರಿಗೂ ಧನ್ಯವಾದಗಳು. ಇಂತಹ ಅನೇಕ ಕ್ರೀಡಾಪಟುಗಳು ನಮ್ಮ ನಾಡಿನಲ್ಲಿದ್ದಾರೆ. ಚೆನ್ನಮ್ಮನವರಂತೆ ಎಲ್ಲಾ ಕ್ರೀಡಾಪಟುಗಳ ತಂದೆ ತಾಯಿಗಳು ಮೆರುಗು ನೀಡಿದರೆ ಸಾಕಷ್ಟು ಚಿನ್ನದ ಜಿಂಕೆಗಳನ್ನು ಕಾಣಬಹುದು.

– ಎಂ. ಕೋದಂಡರಾಮ, ಬಾದನಹಟ್ಟಿ

''ಸರಕಾರಿ ನೌಕರರ ಮುಷ್ಕರ ಮತ್ತು ಚುನಾವಣಾ ನೀತಿ ಸಂಹಿತೆ'' ಎಂಬ ಶೀರ್ಷಿಕೆಯಡಿ ಮೂಡಿ ಬಂದ ಕೋ. ಚೆನ್ನಬಸಪ್ಪನವರ ಚಿಂತನೆ ನಿಜಕ್ಕೂ ಮೆಚ್ಚುವಂತಹುದು.

ಇಂತಹ ಚಿಂತನೆಗಳು ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವುದರಿಂದ ನಮ್ಮ ರಾಜ್ಯ ಸೇವಾ ವರ್ಗದವರು ಏನು ಮಾಡಿದರು, ಹೇಗೆ ತಪ್ಪು ಮಾಡುತ್ತಾರೆ ಎಂಬುದು ತಿಳಿಯುತ್ತದೆ. ಚುನಾವಣಾ ನೀತಿ ಸಂಹಿತೆಗಳು ಏನು? ಸರಕಾರದ ನೀತಿ ನಿಯಮಗಳು ಏನು? ಇದರ ಬಗ್ಗೆ ಅವು ಏನು ಹೇಳುತ್ತವೆ, ಹೇಗೆ ಕ್ರಮ ತೆಗೆದುಕೊಳ್ಳುತ್ತವೆ ಎಂಬುದರ ಬಗ್ಗೆ ತಿಳಿಯುತ್ತದೆ.

– ಮೌನೇಶ ಪತ್ತಾರ, ಬೆಂಗಳೂರು

'ಬಿಸಿಲ ಬದುಕು' ಪತ್ರಿಕೆಯು ನಮಗೆ ತುಂಬಾ ಮೆಚ್ಚುಗೆಯಾಯಿತು. ಏಕೆಂದರೆ ಈ ಪತ್ರಿಕೆಯಲ್ಲಿ ಯಾವುದೇ ಕಳಪೆ ವಿಷಯಗಳು ಇರುವುದಿಲ್ಲ. ಒಂದೇ ಮಾತಲ್ಲಿ ಹೇಳಬೇಕೆಂದರೆ ಓದುಗರ ಮನಸ್ಸನ್ನು ಅಯಸ್ಕಾಂತದಂತೆ ತನ್ನಲ್ಲಿ ಸೆಳೆದುಕೊಳ್ಳುವಂತಾ ಪತ್ರಿಕೆ ಇದಾಗಿದೆ. **– ಟಿ.ಆರ್. ಶೈಲಜಾ, ಕೊಪ್ಪಳ**

ಎರಡೂ ಸರಿ

ಫೆಬ್ರವರಿ ಸಂಚಿಕೆಯ ೪ನೇ ಪುಟದಲ್ಲಿ 'ಟಪಾಲು' ವಿಭಾಗದಲ್ಲಿ 'ಹೇಳುತ್ತೀರಾ?' ಶೀರ್ಷಿಕೆಯಡಿ 'ವಂದೇ ಮಾತರಂ' ಗೀತೆಯ ರಚನೆಕಾರರು 'ಚಟರ್ಜಿ ಸರಿ' ಎಂದು ಎ.ಎಸ್. ಗೌಡರ, ನಲ್ಲೂರು ಅವರಿಗೆ ಉತ್ತರಿಸಿದ್ದೀರಿ.

ಬಂಕಿಮಚಂದ್ರ ಚಟ್ಟೋಪಾಧ್ಯಾಯವೂ ಸರಿ. ಏಕೆಂದರೆ ಆಂಗ್ಲರ ಆಡಳಿತ ಕಾಲದಲ್ಲಿ ಬಂಗಾಲಿಗಳ ಹೆಸರು ಆಂಗ್ಲೀಕರಣಗೊಂಡು ಉಚ್ಚರಿಸಲ್ಪಡುತ್ತಿದ್ದವು. ಉದಾ: ಚಟರ್ಜಿ - ಚಟ್ಟೋಪಾಧ್ಯಾಯ, ಬ್ಯಾನರ್ಜಿ-ಬಂದ್ಯೋಪಾಧ್ಯಾಯ, ಮುಖರ್ಜಿ-ಮುಖ್ಯೋಪಾಧ್ಯಾಯ ಇತ್ಯಾದಿ.

ಹಾಗಾಗಿ 'ಚಟರ್ಜಿ' (Anglicised)ಯನ್ನಾದರೂ ಉಪಯೋಗಿಸಬಹುದು. ಚಟ್ಟೋಪಾಧ್ಯಾಯವನ್ನಾದರೂ ಬಳಸಬಹುದು. ಇವೆರಡೂ ಸರಿ.

– ಟಿ.ವಿ. ವೆಂಕಟರಮಣಯ್ಯ, ಬೆಂಗಳೂರು

ತಾವು 'ಕ್ವಿಜ್' ವಿಭಾಗ ಇಟ್ಟು ಪ್ರತಿ ತಿಂಗಳು ಪತ್ರಿಕೆ ಬಗ್ಗೆ ಆಸಕ್ತಿ ತರಿಸುತ್ತೀರಿ. ತುಂಬಾ ಸಂತೋಷ. ಆದರೆ ಕ್ವಿಜ್ ಪುಟದ ಹಿಂದೆ ನಾವು ಸದಾ ಕಾಲ ತೆಗೆದಿಟ್ಟುಕೊಳ್ಳಬೇಕಾದಂತಹ ಆರ್ಟಿಕಲ್ ಪ್ರಕಟಿಸಿರುತ್ತೀರಿ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕ್ವಿಜ್ ಪುಟ ಬೇರೆ ಮಾಡಿ. ಅದರ ಹಿಂದೆ ಯಾವುದೇ ವಿಷಯಗಳು ಪ್ರಕಟವಾಗಿರದಿದ್ದರೆ ಬಹಳ ಉತ್ತಮವಲ್ಲವೆ?

– ಮೊಹಮ್ಮದ್ ನಜೀರುದ್ದೀನ್, ಕನಕಗಿರಿ

– ಪಿ.ಎಂ. ಶಿರಾಲಿ, ಭಟ್ಕಳ

ನನಗೆ 'ಬಿಸಿಲ ಬದುಕು' ಓದಬೇಕೆಂದು ಬಹಳ ಆಸೆ. ಆದರೆ ಏನು ಮಾಡುವುದು, ಈ ಪತ್ರಿಕೆ ನಮ್ಮ ಗುರುಮಠಕಲ್‌ಗೆ ತಡವಾಗಿ ಬರುತ್ತದೆ. ನಮಗೆ ಕ್ವಿಜ್ ಕಿಲಕಿಲ ತುಂಬಿ ಕಳಿಸಲು ಸಮಯ ಮೀರಿರುತ್ತದೆ. ಅದಕ್ಕಾಗಿ ನಾನು ಯಾದಗಿರಿಗೆ ಹೋಗಿ ಫೆಬ್ರವರಿ ಸಂಚಿಕೆಯನ್ನು ಕೊಂಡುಕೊಂಡು ಬಂದಿದ್ದೆ.

– ರಮೇಶ ಎಂ.ಟಿ. ಪಲ್ಲಿ, ಯಾದಗಿರಿ

ನಿಮ್ಮ 'ಬದುಕು' ಪತ್ರಿಕೆ ಎಷ್ಟೋ ಜನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಿದೆಯೆಂದು ಘಂಟಾಘೋಷವಾಗಿ ಹೇಳಬಹುದು. **– ವಿ. ವಾಸು, ಬೆಂಗಳೂರು**

ನಿಮ್ಮ 'ಬದುಕು' ಪತ್ರಿಕೆಯನ್ನು ಓದಿದವರು ಪುನಃ ಪುನಃ ಓದಬೇಕೆಂದು ಆಕರ್ಷಿತರಾಗುವುದರಲ್ಲಿ ಸಂಶಯವಿಲ್ಲ.

– ಉತ್ನೂರು ವೆಂಕಟಸ್ವಾಮಿ, ಕೋಲಾರ

ಮರ್ಯಾದೆ ಬೇಡವೇ?

ನಾನು ನಿಮಗೆ ೧೦ ಪ್ರಶ್ನೆಗಳನ್ನು ಕಳಿಸಿದ್ದೇನೆ. 'ಮನೆ' ಬಗ್ಗೆ ೩-೪ ಬಾರಿ ಬರೆದೆ. ನೀವು ಯಾವುದನ್ನೂ ಪ್ರಕಟಿಸಲಿಲ್ಲ. ಪ್ರಕಟವಾಗುವುದಕ್ಕೆ 'ರೂಗಳು' ಇದ್ದರೆ ಹೇಳಿರಿ. ಇನ್ನು ಮೇಲೆ ರೂ. ಕಳಿಸುತ್ತೇನೆ. ೧ ರೂ. ಖರ್ಚು ಮಾಡಿ ಅಂತರದೇಶಿ ಪತ್ರದಲ್ಲಿ ಬರೆದಿದ್ದಕ್ಕೆ ಮಾನ ಮರ್ಯಾದೆಯಾದರೂ ಬೇಕೋ ಬೇಡವೋ ತಿಳಿಸಿರಿ.

– ಸುರೇಶ ಭೀಮಣ್ಣ ಹೂಗಾರ, ಕಂದಗನೂರ

ನಿಗೂಢ ಜಗತ್ತು

ಆಕರ್ಷಕ ಮುಖಪುಟದೊಂದಿಗೆ ಬಂದ ಫೆಬ್ರವರಿ ತಿಂಗಳ ಸಂಚಿಕೆಯಲ್ಲಿನ ನಿಗೂಢ ಜಗತ್ತು ಎಂಬ ಲೇಖನ ತುಂಬಾ ಕುತೂಹಲಕಾರಿಯಾಗಿತ್ತು. ಇದಲ್ಲದೇ ''ಗರ್ಭಿಣಿಯರ ಸೌಂದರ್ಯ'' ಎಂಬ ಆರೋಗ್ಯ ಲೇಖನ

ತುಂಬಾ ಉಪಯುಕ್ತವಾಗಿತ್ತು.

- ಎಂ.ಎಸ್. ಮಾರ್ಲ್ಯಾಳ, ಮಂಗಳೂರು (ಸಿಂದಗಿ)

''ಎಲ್ಲಾ ಪತ್ರಿಕೆಯವರು ತಾವು ಹೊರಡಿಸಿದ ಮೊದಲ ಪತ್ರಿಕೆಯಿಂದಲೇ ಚಂದಾದಾರರಾಗುವ ಬಗ್ಗೆ ಪ್ರಕಟಿಸಿರುತ್ತಾರೆ. ಆದರೆ ನೀವೇಕೆ ಇದರ ಬಗ್ಗೆ ಪ್ರಕಟಿಸಿಲ್ಲ? ಏಕೆಂದರೆ ಇಲ್ಲಿ ಸಮಯಕ್ಕೆ ಪತ್ರಿಕೆ ಸಿಗದೆ ಪರಿತಪಿಸಬೇಕಾಗುತ್ತದೆ.

- ಪರಶುರಾಮ ಹ. ಸಾಲಕಟ್ಟಿ, ನಲವಂಗಲ

ಫೆಬ್ರವರಿ-೯೮ರ ಸಂಚಿಕೆ ಹಲವಾರು ಉತ್ತಮ ಲೇಖನಗಳನ್ನು ಹೊತ್ತು ತಂದಿದೆ. ಓದಿ ಸಂತೋಷ ವಾಯಿತು. ಸಿದ್ದರಾಜ ಎಂ. ಕೆಂಧೂಳಿ ಅವರ 'ಗೋಮೂತ್ರದಿಂದ ವಿದ್ಯುತ್ ಉತ್ಪಾದನೆ' ಉಪಯುಕ್ತ ಲೇಖನವಾಗಿದೆ.

- ಶೋಭಾ ಸಿ. ಮಿಣಜಗಿ, ವಿಜಾಪುರ

ನಾನು ಫೆಬ್ರವರಿ-೯೮ರ ಸಂಚಿಕೆಯನ್ನು ಓದಿದೆ. ಮೊದಲೇ ಏಕೆ ತೆಗೆದುಕೊಂಡು ಓದಲಿಲ್ಲ ಅಂತ ಅನ್ನಿಸಿತು. ನಿಜವಾಗಿಯೂ ತುಂಬಾ ಸುಂದರ ವಾಗಿದೆ. ಮುಂದೆ ಇನ್ನೂ ವೈವಿಧ್ಯಮಯವಾಗಿ ಬರಲಿ ಎಂದು ಆಶಿಸುತ್ತೇನೆ.

ಎಲ್ಲೆಲ್ಲೊ ಅಡಗಿರುವ
ಮುತ್ತುಗಳ ಹೆಕ್ಕಿ ತಂದು
ನಮ್ಮ ಮುಂದೆ ಇಡುತ್ತಿರುವ
'ಬಿಸಿಲ ಬದುಕು' ಸುಂದರ ಬದುಕು

- ನಟರಾಜ್ ಡಿ.ಜಿ., ದೊಮ್ಮನಕುಪ್ಪೆ

''ಗೋಮೂತ್ರದಿಂದ ವಿದ್ಯುತ್ ಉತ್ಪಾದನೆ'' ಲೇಖನ ಓದಿ ತುಂಬಾ ಸಂತೋಷವಾಯಿತು. ಅದೇ ರೀತಿ ಗೊಬ್ಬರ ಗ್ಯಾಸ್‌ನಿಂದ ಕೊಳವೆ ಬಾವಿ ನೀರನ್ನು ಹೇಗೆ ಮೇಲೆತ್ತುವುದು ಮತ್ತು ಸೌರಶಕ್ತಿಯಿಂದ ಕೊಳವೆಬಾವಿ ನೀರನ್ನು ಹೇಗೆ ಮೇಲೆತ್ತುವುದು ಅದಕ್ಕೆ ತಗಲುವ ವೆಚ್ಚ ಇವುಗಳ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿದರೆ ಉತ್ತಮ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಅಭಾವದಿಂದ ವ್ಯವಸಾಯಕ್ಕೆ ಆಗಬಹುದಾದ ತೊಂದರೆಗಳನ್ನು ಉತ್ತಮಪಡಿಸಿಕೊಳ್ಳಲು ರೈತರಿಗೆ ಉಪಯೋಗ ವಾಗುತ್ತದೆ.

- ಎ.ಎಸ್. ಲೋಕೇಶ್, ಹುಳಿಯಾರು

ವರ್ಷದ ಉಡುಗೊರೆ

ಒಮ್ಮೆ ಅರಸಿಕೆರೆ ಬಸ್ ನಿಲ್ದಾಣದಲ್ಲಿರುವ ಪುಸ್ತಕದ ಅಂಗಡಿಗೆ ಬೇರೆ ಪುಸ್ತಕಗಳನ್ನು ಕೊಂಡುಕೊಳ್ಳಲು ಹೋದಾಗ ನಿಮ್ಮ ಬದುಕು ಕಣ್ಣಿಗೆ ಬಿತ್ತು. ನೋಡೋಣ ಎಂದು ಕೊಂಡೆ. ಸ್ನೇಹಿತರು ಸುಮ್ಮನೆ ೧೦ ರೂ. ವ್ಯರ್ಥ ಮಾಡುತ್ತೀಯ ಎಂದರು. ಒಮ್ಮೆ ಹಾಳೆ ತಿರುವಿ ಹಾಕಿದಾಗ ಬದುಕು ಅರ್ಥಗರ್ಭಿತ ಶ್ರೇಷ್ಠ ಮಾಸಪತ್ರಿಕೆ ಎಂದು ತಿಳಿಯಿತು. ಅಂತೂ ಜನವರಿ ಸಂಚಿಕೆ ಹೊಸ ವರ್ಷದ ಉಡುಗೊರೆಯಾಗಿ ನನ್ನ ಕೈ ಸೇರಿತು

- ಲೋಕೇಶ ಜಿ., ಗೊಲ್ಲರಹಳ್ಳಿ

ಅರ್ಥ - ಅಪಾರ್ಥ

ದೇವೇಗೌಡರು ಪ್ರಧಾನಿಯಾದಾಗ ಕನ್ನಡಿಗರು ತುಂಬಾ ಸಂತೋಷಪಟ್ಟಿದ್ದರು. ರಾಜ್ಯದ ಹಲವು ಬೇಡಿಕೆಗಳು ನನಸಾಗಬಹುದು ಎಂದು **ಆಕೆ ಇಟ್ಟುಕೊಂಡಿದ್ದರು.**

[***ಸಂಜೆವಾಣಿ,*** ಕಲಬುರ್ಗಿ ಆವೃತ್ತಿ, ೨೯.೧.೯೮] **- ಎ. ಲಕ್ಷ್ಮಣ ಬಾಳಿಮಕ್ಕಿ,** ತ್ರಾಸಿ

ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದಲ್ಲಿ ಪ್ರೊಫೆಸರ್‌ರಾದ ಡಾ.ಎಸ್.ಟಿ. ನಂದಿಬೇವೂರರವರು ತಮ್ಮ ಹೆಚ್ಚಿನ ವ್ಯಾಸಂಗಕ್ಕಾಗಿ ದಿ. ೯.೨.೯೮ರಂದು **ರೋಮದ ಮುಖಾಂತರ** ಹಂಗೇರಿಗೆ ಪ್ರಯಾಣ ಬೆಳೆಸುವರು.

[***ಅಹಿಂಸಾ ಖಡ್ಗ,*** ಹರಪನಹಳ್ಳಿ ೯.೨.೧೯೯೮] **- ಪಿ. ಶಂಬುಲಿಂಗನಗೌಡ,** ಹರಪನಹಳ್ಳಿ

ವಿಸರ್ಜಿತ ಲೋಕಸಭಾ ಸದಸ್ಯ ಹಾಗೂ **ಮಾಜಿ ಪ್ರಧಾನಿ ಹೆಚ್.ಡಿ.ಕುಮಾರಸ್ವಾಮಿ** ಕನಕಪುರ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲಿದ್ದು, ಇದೇ ೨೩ರಂದು ಶುಕ್ರವಾರ ತಮ್ಮ **ನಾಪತ್ರ** ಸಲ್ಲಿಸಲಿದ್ದಾರೆ.

[***ಮಹಾನಂದಿ,*** ಮೈಸೂರು, ೧೭.೧.೯೮] **- ಸಚಿನ್ ಹೆಚ್.ಎನ್.,** ಹಾಸನ

ವಸತಿ ಮತ್ಸರ : ಕೊಲೆಯಲ್ಲಿ ಪರ್ಯವಸಾನ [ತಲೆ ಬರಹ]. ಸವತಿ ಮತ್ಸರ ಹತ್ಯೆಯಲ್ಲಿ ಮುಕ್ತಾಯಗೊಂಡ ಘಟನೆ ಗೋಕಾಕ ಗ್ರಾಮೀಣ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ನಾಯಕವಾಡಿ ಗ್ರಾಮದಲ್ಲಿ ಇಂದು ಬೆಳಗಿನ ಜಾವ ಸಂಭವಿಸಿದೆ.

[**ನಾಡೋಜ,** ಬೆಳಗಾವಿ, ೧.೨.೧೯೯೮] **- ಎಂ. ಮಾರುತಿ ಹೊದ್ಲೂರ,** ಬಾಗಲಕೋಟೆ

ರಾಷ್ಟ್ರಪತಿ ಕೆ.ಆರ್.ನಾರಾಯಣನ್, ಉಪರಾಷ್ಟ್ರಪತಿ ಕೃಷ್ಣಕಾಂತ್ ಹಾಗೂ ಪ್ರಧಾನಿ ಐ.ಕೆ.ಗುಜ್ರಾಲ್ ಅವರು ರಾಜ್‌ಘಾಟ್‌ಗೆ ತೆರಳಿ ಮಹಾತ್ಮಾಗಾಂಧಿ ಅವರಿಗೆ **ಅಂತಿಮ ನಮನ** ಸಲ್ಲಿಸಿದರು.

[***ಉದಯವಾರ್ತೆ,*** ಉದಯ ಟಿ.ವಿ., ೩೦.೧.೧೯೯೮]**- ಸವಿತಾ ಸುಬ್ರಹ್ಮಣ್ಯಂ,** ಬೆಂಗಳೂರು.

ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿಯನ್ನು ತೀವ್ರವಾಗಿ ಮುಟ್ಟಿಸಿರುವ ಈರುಳ್ಳಿಯನ್ನು ತಾತ್ಕಾಲಿಕವಾಗಿ ರಫ್ತು ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿದೆಯಲ್ಲದೆ, ವಿದೇಶಗಳಿಂದ **ಆಮದು** ಮಾಡಿಕೊಳ್ಳಲು ನಿರ್ಧರಿಸಿದೆ.

[***ಸಂಯುಕ್ತ ಕರ್ನಾಟಕ,*** ಹುಬ್ಬಳ್ಳಿ, ೧೭.೧.೧೯೯೮] **- ಲೀಲಾಧರ ಭಂಡಾರಿ,** ಧಾರವಾಡ

ಪಂಜಾಬಿನ **ಪೊಲೀಸರು ಫರೀದಕೋಟದಲ್ಲಿ ಅಡಗಿಸಿ ಇಟ್ಟಿದ್ದ** ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಪತ್ತೆ ಮಾಡಿದ್ದಾರೆ.

[**ನಾಗರಿಕ,** ಗದಗ, ೧೪.೧.೧೯೯೮] **- ಗೋವಿಂದರಾವ್ ಜೋಶಿ,** ಗದಗ

ಇದೊಂದು ಹೊಸ ಅಂಕಣ. ನೀವು ಓದುವ ದಿನಪತ್ರಿಕೆಗಳಲ್ಲಿ ವಾಕ್ಯದ ಅರ್ಥವನ್ನೇ ಕಳೆಯುವ ಇಂಥ ಹಲವು ಸಾಲುಗಳು ಆಗಾಗ ನುಸುಳುವುದುಂಟು. ಹೀಗೆ ಉಂಟಾಗುವ ದೋಷಗಳು ಮೇಲ್ನೋಟಕ್ಕೆ ತಮಾಷೆಯಾಗಿ ಕಂಡರೂ ಗಂಭೀರ ಪರಿಣಾಮ ಬೀರಬಲ್ಲವು. ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು.

-ಸಂ.

ಪರೀಕ್ಷೆಗಳು ಬರುತ್ತಿವೆ! ಹೆದರಬೇಡಿ! ಸಿದ್ಧರಾಗಿ

ವಿದ್ಯಾರ್ಥಿಗಳಿಗೆ ಫೆಬ್ರವರಿ ತಿಂಗಳಿನಿಂದ ಈ ಪರೀಕ್ಷೆ ಎಂಬ ಜ್ವರ ಶುರುವಾಗುತ್ತದೆ. "ರೋಗದಿಂದ ಸಾಯುವುದಕ್ಕಿಂತ ರೋಗದ ಭಯದಿಂದ ಸಾಯುವವರೇ ಹೆಚ್ಚು'' ಎಂಬ ಜನಪ್ರಿಯ ಗಾದೆಯಂತೆ, ಪರೀಕ್ಷೆಗಿಂತ ಪರೀಕ್ಷೆಯ ಭಯವೇ ಆಘಾತಕಾರಿ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಈ ಪರೀಕ್ಷೆ ವಿದ್ಯಾರ್ಥಿಗಳ ಅಳತೆಗೋಲು, ವಿದ್ಯಾರ್ಥಿಗಳು ತಾವು ಅಭ್ಯಾಸ ಮಾಡಿದ ಪಠ್ಯಕ್ರಮವನ್ನು ಅದು ಒಂದು ವರ್ಷದಲ್ಲಿ ಕೇವಲ ಮೂರೇ ಗಂಟೆಯೊಳಗೆ ತಾವು ಕಲಿತ ಪಾಠವನ್ನು ಬರೆಯಬೇಕು. ಈ ಪರೀಕ್ಷೆಗಳು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಶಿಕ್ಷಕರಿಗೂ ಕೂಡ ತಾವು ಬೋಧಿಸುತ್ತಿದ್ದ ವಿದ್ಯಾರ್ಥಿಗಳಿಗೆ ಸರಿಯಾಗಿ ಅರ್ಥ ಮಾಡಿಕೊಂಡರೆ ಅಥವಾ ಇಲ್ಲವೆ ಎಂಬುದು ಸಹ ಈ ಪರೀಕ್ಷೆಗಳಲ್ಲಿ ತಿಳಿಯುತ್ತದೆ. ಒಟ್ಟಾರೆಯಾಗಿ ಈ ಪರೀಕ್ಷೆಗಳು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಾಮರ್ಥ್ಯವನ್ನು ಅಳೆಯಲು ಅಳತೆಗೋಲು ಎಂದರೆ ತಪ್ಪಲ್ಲ.

ಈ ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿಗಳು ಮಾನಸಿಕವಾಗಿ ಯಾವ ರೀತಿಯಲ್ಲಿ ಸಿದ್ಧತೆ ಹೊಂದಬೇಕೋ ಅದೇ ರೀತಿ ದೈಹಿಕವಾಗಿಯು ಸಹ ಸಜ್ಜಾಗಬೇಕಾಗುತ್ತದೆ. ಪರೀಕ್ಷೆಯ ಸಮಯದಲ್ಲಿ ಯಾವುದೇ ರೀತಿಯಾದ ಮಾನಸಿಕ ಒತ್ತಡಗಳಿಗೆ ಸಿಕ್ಕಬಾರದು. ಆಹಾರದ ವಿಷಯದಲ್ಲಂತೂ ಬಹಳ ಎಚ್ಚರ ವಹಿಸಬೇಕಾಗುತ್ತದೆ. ಏಕೆಂದರೆ ನಾವು ಸೇವಿಸುವ ಆಹಾರದಲ್ಲಿ ಸಮತೋಲನ ತಪ್ಪಿದರೂ ಪರೀಕ್ಷೆಗಳ ಸಮಯದಲ್ಲಿ ಖಾಯಿಲೆ ಬರಬಹುದು. ರಾತ್ರಿ ಎಲ್ಲ ಕುಳಿತು ಓದುವುದರಿಂದ ಆಯಾಸ ಮತ್ತಷ್ಟು ಹೆಚ್ಚುತ್ತದೆ. ಆದ್ದರಿಂದ ಪರೀಕ್ಷೆಗಳ ಸಮಯದಲ್ಲಿ ೬ ಗಂಟೆಗಳ ಕಾಲ ವಿಶ್ರಾಂತಿ ಅಗತ್ಯ ಈ ವಿಶ್ರಾಂತಿ ಸಮಯದಲ್ಲಿ ನಾವು ಅಭ್ಯಾಸ ಮಾಡಿದ ಪಾಠಗಳನ್ನು Glance ಮಾಡಬಹುದು. ಪರೀಕ್ಷೆಯ ಸಮಯಗಳಲ್ಲಿ ಟಿ.ವಿ., ಸಿನಿಮಾ, ರೇಡಿಯೋ ಮುಂತಾದವುಗಳಿಂದ ದೂರ ಉಳಿಯುವುದು ಉತ್ತಮ. ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಮಾತ್ರ ಅಭ್ಯಸಿಸುವ ಕ್ರಮವನ್ನು ಬಿಡಬೇಕು. ಶೈಕ್ಷಣಿಕ ವರ್ಷದ ಆರಂಭ ದಿನದಿಂದಲೇ ಪುಸ್ತಕ ಸಂಪರ್ಕವಿಟ್ಟುಕೊಂಡರೆ ಉತ್ತಮ ಫಲಿತಾಂಶ ಪರೀಕ್ಷೆ ಎಂಬ ಭೀತಿಯನ್ನು ಬಿಟ್ಟು ಅದನ್ನು ಸ್ವಾಗತಿಸಬೇಕು.

ತರಗತಿಗಳಲ್ಲಿ ಮಾಡುವ ಪಾಠಗಳು ಎಷ್ಟರ ಮಟ್ಟಿಗೆ ವಿದ್ಯಾರ್ಥಿಗಳಿಗೆ ಅರ್ಥವಾಗಿವೆ. ಇದಲ್ಲದೆ ಪರೀಕ್ಷೆಗಳು ಮುಂದಿನ ತರಗತಿಗೆ ಬಡ್ತಿ ನೀಡಲು ಒಂದು ವಿಧಾನ. "ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು'' ಎಂಬ ಜವಹರ್‌ಲಾಲ್ ನೆಹರುರವರ ನುಡಿಯಂತೆ ನಮ್ಮ ಭವ್ಯ ಭಾರತದ ಪ್ರಜೆಗಳನ್ನು ರೂಪಿಸಲು ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳು ಸಾಕಷ್ಟು ಶ್ರಮ ವಹಿಸುತ್ತಿವೆ. ಈ ಉತ್ತಮ ಪ್ರಜೆಗಳನ್ನು ರೂಪಿಸುವ ಶಿಲ್ಪಿಯು ಶಿಕ್ಷಕ ಅಥವ ಗುರು. ಈ ಪರೀಕ್ಷೆಗಳು ಶಿಕ್ಷಕ ವರ್ಗದವರನ್ನು ಸಹ ಅಳೆಯುವ ಸಾಧನ. ಶಿಕ್ಷಕರು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಹೊರ ತೆಗೆಯಲು ತನ್ನಲ್ಲಿರುವ ಎಲ್ಲಾ ಉತ್ತಮ ಗುಣಗಳ ಕಡೆಗೆ ಗಮನಹರಿಸಬೇಕು. ವಿದ್ಯಾರ್ಥಿಗಳು ಸದಾ ಶಿಕ್ಷಕರ ನಡೆ-ನುಡಿಗಳ ಕಡೆಗೆ ಗಮನಹರಿಸುತ್ತಾರೆ. ಶಿಕ್ಷಕನು ತನ್ನ ವೃತ್ತಿಯಲ್ಲಿ ಅಪಾರ ಆಸಕ್ತಿ ವಹಿಸಿ ವಿದ್ಯಾರ್ಥಿಗಳ ಮನಸ್ಸನ್ನು ಗೆದ್ದು ಅದರಲ್ಲಿ ಕುತೂಹಲ ಮತ್ತು ಹೊಸತನ ಮೂಡಿಸಿ ನಿಜವಾದ ಮಾನವತೆಯ ಬಗ್ಗೆ ಕೊಂಡೊಯ್ಯಲು ಯಾರು ಯೋಗ್ಯರು ಅವರು ಮಾತ್ರ ಯೋಗ್ಯ ಶಿಕ್ಷಕರು. ಶಿಕ್ಷಕ ವರ್ಗದವರು ಪರೀಕ್ಷೆಗಳನ್ನು ಕುರಿತು ಗುಣಾತ್ಮಕವಾಗಿ ನೋಡಿದರೆ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಶೇಕಡ ೧೦೦ರಷ್ಟು ತಯಾರಾದಂತೆ. ಆದರೆ ನಮ್ಮ ಶಿಕ್ಷಕ ವರ್ಗ ಬಹಳಷ್ಟು ತೊಂದರೆಗಳನ್ನು ಎದುರಿಸುತ್ತಿದ್ದಾರೆ.



> ವಿದ್ಯಾರ್ಥಿಗಳಿಗೆ ಫೆಬ್ರವರಿ ತಿಂಗಳಿನಿಂದ ಈ ಪರೀಕ್ಷೆ ಎಂಬ ಜ್ವರ ಶುರುವಾಗುತ್ತದೆ. "ರೋಗದಿಂದ ಸಾಯುವುದಕ್ಕಿಂತ ರೋಗದ ಭಯದಿಂದ ಸಾಯುವವರೇ ಹೆಚ್ಚು'' ಎಂಬ ಜನಪ್ರಿಯ ಗಾದೆಯಂತೆ, ಪರೀಕ್ಷೆಗಿಂತ ಪರೀಕ್ಷೆಯ ಭಯವೇ ಆಘಾತಕಾರಿ.

೧. ಅತಿಯಾದ ಪಠ್ಯಕ್ರಮ (Over Syllabus)

೨. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ವರ್ಗಾವಣೆ (Transfers)

೩. ಖಾಸಗಿ ಅಥವಾ ಅನುದಾನಿತ (Aided) ಶಾಲಾ-ಕಾಲೇಜುಗಳಲ್ಲಿ Management ನವರಿಂದ ಆಗುವ ತೊಂದರೆ.

೪. ಹೆಚ್ಚಾಗುತ್ತಿರುವ ರಜಾ ದಿನಗಳು.

೫. ಸಂಸಾರಿಕ ತಾಪತ್ರಯ ಇವೇ ಮೊದಲಾದ ತೊಂದರೆಗಳು ಶಿಕ್ಷಕ ವರ್ಗದಲ್ಲಿ ಸಾಮೂಹಿಕವಾಗಿ ಕಾಣಿಸಿಕೊಂಡಿದೆ.

ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲು ಶಿಕ್ಷಕನು ಶಾಲಾ ಅವಧಿಗಳಲ್ಲಿ ಶಾಲೆಯಲ್ಲೆ ಇದ್ದು ವಿದ್ಯಾರ್ಥಿಗಳಿಗೆ ಯಾವದೇ ರೀತಿಯ ಸಂದೇಹಗಳು ಬರದಂತೆ ನೋಡಿಕೊಳ್ಳಬೇಕು. ಎಲ್ಲ ವಿದ್ಯಾರ್ಥಿಗಳ ಮೇಲೂ ನಿಗಾ ಇಡಲು ಸಾಧ್ಯವಿಲ್ಲದರಿಂದ, ಗ್ರೂಪ್ ಸ್ಟಡಿಗೆ ಸಹಕರಿಸಬೇಕು.

ಮುಖ್ಯ ಪರೀಕ್ಷೆಯ ದೃಷ್ಟಿಯಲ್ಲಿಟ್ಟು ವಾರಕ್ಕೆ ಅಥವಾ ತಿಂಗಳಿಗೆ ಒಂದು ಬಾರಿಯಾದರೂ ತರಗತಿಗಳಲ್ಲಿ ಟೆಸ್ಟ್‌ಗಳನ್ನು ಕೊಡುವುದು.

ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ತಿರುವಿ ಹಾಕಿಸುವುದು ಅಥವಾ ಅವಲೋಕಿಸುವುದು. ವಿದ್ಯಾರ್ಥಿಗಳನ್ನು ಪರೀಕ್ಷೆ ಎಂಬ ಭೀತಿಯಿಂದ ಮುಕ್ತವಾಗಿಸುವುದು. ಇವೇ ಮುಂತಾದ ಶಿಕ್ಷಕರ ಜವಾಬ್ದಾರಿಯಾದರೆ ಇನ್ನು ವಿದ್ಯಾರ್ಥಿಗಳು ಆಯಾ ದಿನದ ಪಾಠಗಳನ್ನು ಚಾಚು ತಪ್ಪದೆ ಮನೆಯಲ್ಲಿ ಓದುವುದಲ್ಲದೆ ವ್ಯವಸ್ಥಿತವಾದ ಟೈಮ್ ಟೇಬಲ್ ಸಹಾಯದಿಂದ ಎಲ್ಲ ವಿಷಯಗಳಿಗೆ ಸಾಕಷ್ಟು ಒತ್ತು ಕೊಡುವುದು. ಮಾಸಿಕ, ಅರ್ಧ ವಾರ್ಷಿಕ ಮತ್ತು ಪೂರ್ವಭಾವಿ ಪರೀಕ್ಷೆ (Preparatary) ಗಳನ್ನು ಯಾವುದೇ ಕಾರಣದಿಂದಲೂ ಹಗುರವಾಗಿ ನೋಡಬಾರದು. ತರಗತಿಗಳಲ್ಲಿ ಪಾಠಗಳನ್ನು ಗಮನವಿಟ್ಟು ಕೇಳುವುದು, ಉತ್ತಮ ಅಭಿರುಚಿ, ಬುದ್ಧಿವಂತರಾದ ಸ್ನೇಹಿತರುಗಳನ್ನು ಆರಿಸಿಕೊಳ್ಳುವುದು. ಪರೀಕ್ಷಾ ಕೊಠಡಿಗಳಲ್ಲಿ ಯಾವುದೇ ರೀತಿಯ ಅವ್ಯವಹಾರ ಅಂದರೆ ಕಾಪಿ, ಮಾತನಾಡುವುದಾಗಲಿ ಮಾಡಬಾರದು.

ಇನ್ನು ತಂದೆ-ತಾಯಿಗಳು ತಮ್ಮ ಮಕ್ಕಳ ಬಗ್ಗೆ ನಿಗಾ ವಹಿಸುವುದು ಉತ್ತಮ. ತಿಂಗಳಿಗೆ ಒಂದು ಬಾರಿಯಾದರೂ ಶಾಲಾ - ಕಾಲೇಜುಗಳಲ್ಲಿ ವಿಷಯಕ್ಕೆ ಸಂಬಂಧಿಸಿದ ಶಿಕ್ಷಕರನ್ನು ಕಾಣುವುದು

ರೂಢಿಯಲ್ಲಿರಬೇಕು. ಮಕ್ಕಳಿಗೆ ಹೆಚ್ಚು ಹಣ ಸಿಗದಂತೆ ಎಚ್ಚರ ವಹಿಸಬೇಕು. ಓದಲು ಬೇಕಾದ ಸಾಮಗ್ರಿಗಳನ್ನು ಒದಗಿಸುವುದಲ್ಲದೆ ಉತ್ತಮ ವಾದಂಥ ಪರಿಸರವನ್ನು ನಿರ್ಮಿಸಬೇಕು. ಕಡ್ಡಾಯವಾಗಿ ಇಷ್ಟೇ ಮಾರ್ಕ್ಸ್ ಅಥವಾ ಪರ್ಸೆಂಟ್ (Percent) ತೆಗಿ ಎಂದು ಯಾವುದೇ ರೀತಿಯಿಂದಲು ವಿದ್ಯಾರ್ಥಿಗಳ ಮನಸ್ಸಿಗೆ ಒತ್ತಡ ಹೇರಬಾರದು. ಕಡಿಮೆ ಅಂಕ ಬಂದರೂ. ಐ.ಟಿ.ಐ. ಮುಂತಾದ ಕೋರ್ಸ್‌ಗಳಿಂದ ಉದ್ಯೋಗವಕಾಶ ಬಹಳಷ್ಟಿದೆ. ಮನೆ-ಪಾಠ ಅಗತ್ಯ ಬಿದ್ದರೆ ಮಾತ್ರ ಮಕ್ಕಳನ್ನು ಕಳಿಸುವುದು. ಟಿ.ವಿ., ರೇಡಿಯೋಗಳನ್ನು ನಿಯಮಿತವಾಗಿ ನೋಡಲು ಅಥವಾ ಕೇಳಲು ಅವಕಾಶ ಮಾಡಿಕೊಡಬೇಕು. ತಂದೆ-ತಾಯಿಗಳು (ಪೋಷಕರು) ಫಲಿತಾಂಶದ ಕಡೆ ಕೊಡುವ ಗಮನ ಮಕ್ಕಳ ವ್ಯಾಸಂಗಕ್ಕೂ ಕೊಡುವುದು. "ಹಾಕಿದ ಬೆಳೆ ನೋಡದೆ ಹಾಳಾಯಿತು" ಎಂಬ ಗಾದೆ ಮಾತಿನಂತೆ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಗಮನಿಸದೆ, ಫಲಿತಾಂಶ ಬಂದ ನಂತರ ದುಃಖ ಅಸಹನೆಯಿಂದ ಇರುವುದಕ್ಕಿಂತ, ಶಾಲಾ-ಕಾಲೇಜಿನ ದಿನಗಳಲ್ಲಿ ವಿದ್ಯಾರ್ಥಿಗಳ ಬಗ್ಗೆ ಗಮನ ಹರಿಸುವುದು ಉತ್ತಮ.

ಒಟ್ಟಾರೆಯಾಗಿ ಈ ಪರೀಕ್ಷೆ ಎಂಬ ಅಸ್ತ್ರ ವಿದ್ಯಾರ್ಥಿಗಳ ಶ್ರದ್ಧೆ, ಶಿಸ್ತು, ಬುದ್ಧಿವಂತಿಕೆ, ಕಲಿಕೆಯ ಜ್ಞಾನದ ಜೊತೆಗೆ ಬರವಣಿಗೆಯ ಶೈಲಿಯು ಸಹ ತಿಳಿಸುವುದಲ್ಲದೆ, ಶಿಕ್ಷಕರು ತಾವು ಮಾಡಿದ ಬೋಧನೆ ವಿದ್ಯಾರ್ಥಿಗಳಿಗೆ ಮನದಟ್ಟಾಗಿದೆಯೆ ಎಂದು ತೋರಿಸುವುದಲ್ಲದೆ, ತಂದೆ-ತಾಯಿಗಳಿಗೂ ಕೂಡ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸುವ ಹಕ್ಕು ಈ ಪರೀಕ್ಷೆಗಳು ಮಾಡುತ್ತವೆ.

ಒಟ್ಟಿನಲ್ಲಿ ಕಲಿಕೆ-ಬೋಧನೆ ಒಂದು ನಾಣ್ಯದ ಎರಡು ಮುಖವಿದ್ದಂತೆ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಮುಂದಿನ ತರಗತಿ ಸೇರಲು ವಿದ್ಯಾರ್ಥಿ ಬಯಸುತ್ತಾನೋ ಅದೇ ರೀತಿ ಪರೀಕ್ಷೆಗಾಗಿ ತಯಾರು ಮಾಡಿದರೆ ಸಾಕು ಎಂಬ ಶಿಕ್ಷಕರ ಅನಿಸಿಕೆಯ ಜೊತೆಗೆ ಪರೀಕ್ಷೆಯಲ್ಲಿ ಹೇಗಾದರೂ ಉತ್ತಮ ಅಂಕಗಳಿಸಿ ಉತ್ತಮ ಶಾಲಾ-ಕಾಲೇಜು ಅಥವಾ ಕೋರ್ಸ್‌ಗೆ ಸೇರಿದರೆ ಸಾಕೆಂದು ತಂದೆ ತಾಯಿಗಳು ಯೋಚಿಸುತ್ತಾರೆ. ಅವು ಏನೇ ಆದರು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಯಂತು ಅನಿವಾರ್ಯ ಅಳತೆಗೋಲು ಮತ್ತು ಕ್ರಿಯೆ ಆಗಿದೆ. ಇನ್ನು ಸ್ಪಷ್ಟವಾಗಿ ಹೇಳಬೇಕು ಅಂದರೆ ಈ ಪರೀಕ್ಷೆಗಳಿಂದಲೇ ನಮ್ಮ ಭಾರತದ ಮುಂದಿನ ಪ್ರಜೆಗಳನ್ನು ಸೃಷ್ಟಿಸುತ್ತಿರುವುದು.

○ ಭೂಷಣ್ ಎ.ಎಸ್.

ಸಂಪಾದಕರಿಗೊಂದು ವಿಷಾದಪತ್ರ !

○ ವಸುಧೇಂದ್ರ, ಎಸ್.
೪೧, ಬಿ.ವಿ. ೬ನೇ ಕ್ರಾಸ್
ಜಯನಗರ ೩ನೇ ಬ್ಲಾಕ್ (ಪೂರ್ವ)
ಎಲ್ ಐಸಿ ಕಾಲೋನಿ,
ಬೆಂಗಳೂರು - ೫೬೦ ೦೧೧.


ಮಾನ್ಯ ಸಂಪಾದಕರೆ,

ಛಲ ಬಿಡದ ತ್ರಿವಿಕ್ರಮನಂತೆ ಮತ್ತೊಂದು ಕಥೆಯನ್ನು ಬರೆದು ನಿಮಗೆ ಕಳುಹಿಸುತ್ತಿದ್ದೇನೆ. ದೇವಕಿಯಂತೆ ಈವರೆಗೆ ನಾನು ಜನ್ಮ ನೀಡಿದ ಏಳು ಕಥೆಗಳನ್ನು ನೀವು ಈಗಾಗಲೇ ವಿಷಾದ ಪತ್ರವನ್ನು ಕಳುಹಿಸಿ ಕಂಸನಂತೆ ಸಂಹಾರ ಮಾಡಿದ್ದೀರ. ಇನ್ನಾದರೂ ಕೃಷ್ಣ ಹುಟ್ಟಿ ಬಂದಾನೆಯೆ? ಕರುಣೆ ತೋರಿ ಬೇತಾಳ 'ಸುಂಯ್' ಎಂದು ಹಾರಿ ಹೋಗಿ ಮರದ ಕೊಂಬೆಗೆ ನೇತಾಡದೆ ಹೆಗಲಮೇಲೆ ಉಳಿದಾನೆಯೆ?

ಏಳು ಕಥೆಗಳು ತಿರಸ್ಕೃತಗೊಂಡು ಚೈತನ್ಯದ ಸೆಲೆಯನ್ನು ಮುಚ್ಚಲು ಪ್ರಯತ್ನಿಸಿದರೂ ಮತ್ತೊಂದು ಕಥೆ ಬರೆಯುವ ಉತ್ಸಾಹವೆಲ್ಲಿಯದು? ಎಂದು ನಿಮಗೆ ಆಶ್ಚರ್ಯವಾಗಬಹುದು. ಸ್ವಾಮಿ, ನಾನೊಬ್ಬ ಭಾರತೀಯ ಕ್ರಿಕೆಟ್ ಅಭಿಮಾನಿ. ಒಂಬತ್ತು ವಿಕೆಟ್‌ಗಳ ನಷ್ಟ ವಿದ್ದು ಕಡೆಯ ಓವರ್‌ನಲ್ಲಿ ಗೆಲ್ಲಲು ಮೂವತ್ತಾರು ರನ್‌ಗಳು ಬೇಕಿದ್ದರೂ, ಏನಾದರೂ ಪವಾಡ ಜರುಗಿ ಪ್ರತಿಯೊಂದು ಬಾಲಿಗೂ ನಮ್ಮವರು ಸಿಕ್ಸರ್ ಬಾರಿಸಿ ಗೆಲ್ಲಬಹುದೇನೋ ಎಂದು ಆಸೆಯಿಂದ ಟಿ.ವಿ.ಯ ಮುಂದೆ ಕೂಡುವ ವ್ಯಕ್ತಿ! ಅಂತಹ ಆಶಾಜೀವಿಗೆ ಮೈಯ ರೋಮ ರೋಮದಲ್ಲೂ ಚೈತನ್ಯದ ಚಿಲುಮೆ, ಉತ್ಸಾಹದ ಬುಗ್ಗೆ.

ನಿಜ ಹೇಳ್ತೀನೆ, ಈ ಕಥೆ ಬರೆಯುವ ಹವ್ಯಾಸವೂ ಒಂದು ಚಟ. ಧೂಮಪಾನ, ಮದ್ಯಪಾನ, ಗುಟ್ಕಾ ಚಟದಂತೆ ಇದೂ ಒಂದು! ಮತ್ತಲ್ಲದೆ ಇನ್ನೇನು ಹೇಳಿ? ದಿನಗಟ್ಟಲೆ ಸಮಯವನ್ನು ಹಾಳು ಮಾಡಿಕೊಂಡು, ಒಂದು-ಎರಡು-ಮೂರು ಬಾರಿ ಬರೆದ ಕಥೆಯನ್ನು ತಿದ್ದಿ, ಕಾಗದ-ಅಂಚೆ ಚೀಟಿಗೆ ಹಣವನ್ನು ಸುರಿದು, ದಿನವೂ ಪೋಸ್ಟ್‌ಮ್ಯಾನ್‌ನ ಹಾದಿಯನ್ನು ಕಾದು, ಕಡೆಗೆ ವಿಷಾದಪತ್ರ ಬಂದಾಗ ಎರಡು ದಿನ ಅದೇ ವ್ಯಥೆಯಲ್ಲಿ ಕೊರಗಿ ಮತ್ತೊಂದು ಹೊಸ ಕಥೆಯನ್ನು ಹೆಣೆಯಲು ಸಿದ್ಧವಾಗುವುದು ಚಟವಲ್ಲದೆ ಮತ್ತೇನು?

ನಿಜ ಹೇಳ್ತೀನೆ, ಈ ಕಥೆ ಬರೆಯುವ ಹವ್ಯಾಸವೂ ಒಂದು ಚಟ.
ಧೂಮಪಾನ, ಮದ್ಯಪಾನ, ಗುಟ್ಕಾ ಚಟದಂತೆ ಇದೂ ಒಂದು!



ತಣ್ಣನೆಯ ನೀರಿನಲ್ಲಿ ಸ್ನಾನ ಮಾಡುವಾಗಲೋ, ವಾಹನವನ್ನು ಬೆಂಗಳೂರಿನ ರಸ್ತೆ ಎಂಬೋ ರಸ್ತೆಯಲ್ಲಿ ಓಡಿಸುವಾಗಲೋ, ರಾತ್ರಿ ಬಿದ್ದ ಯಾವುದೋ ಸ್ವಪ್ನದಿಂದ ಧಿಗ್ಗನೆ ಎಚ್ಚರವಾದಾಗಲೋ - ಮಿಂಚು ಮಿಂಚಿನಂತೆ ಕಥಾವಸ್ತುವೊಂದು ಹೊಳೆದು ಬಿಡುತ್ತದೆ. ಮುಂದೆ ಎರಡು ಗಂಟೆಗಳ ಕಾಲ ಮನಸ್ಸು ಇಹಲೋಕವನ್ನೇ ಮರೆತಂತೆ ಆ ಕಥಾಕೂಪದಲ್ಲೇ ಮುಳುಗಿ ತೇಲುತ್ತದೆ. ಕನ್ನಡದಲ್ಲಿ ಇಂತಹ ಕಥಾವಸ್ತುವನ್ನು ಯಾವುದೇ ಕಥೆಗಾರನೂ ಬಳಸಿಕೊಂಡಿಲ್ಲ ಎಂದು ಪ್ರಮಾಣ ಮಾಡಲು ಮನಸ್ಸು ಸಿದ್ಧವಾಗುತ್ತದೆ. ಎರಡು ಲಕ್ಷ ರೂಪಾಯಿ ಲಾಟರಿ ಹೊಡೆದಂತೆ ಖುಷಿಯಾಗುತ್ತದೆ.

ಮಿಂಚು ಮಿಂಚಿದಾಗ ಕಣ್ಣು ಕೋರೈಸುವಷ್ಟು ಬೆಳಕು ಮೂಡಿದ್ದರೂ, ಮಿಂಚು ಮರೆಯಾದ ತಕ್ಷಣ ಎಲ್ಲೆಲ್ಲೂ ಗಾಢಾಂಧಕಾರ ತುಂಬುವಂತೆ - ಒಮ್ಮೊಮ್ಮೆ ಅತ್ಯಂತ ಅದ್ಭುತವಾಗಿ ಕಂಡ ಕಥಾವಸ್ತು ಒಂದೆರಡು ದಿನಗಳಲ್ಲಿಯೇ ಸಪ್ಪೆಯೆನ್ನಿಸುವುದೂ ಉಂಟು. ಕಥಾವಸ್ತುವಿಗೆ ಮೂರ್ತಸ್ವರೂಪ ನೀಡಲು ಪ್ರಯತ್ನಿಸಿದಾಗ ಒಂದು ಪುಟ ಬರೆಯುವದರಲ್ಲಿಯೇ ಶೀಘ್ರ ಸ್ಖಲನಗೊಂಡಂತೆ ನಿರುತ್ಸಾಹ ಮೂಡಿ, ಈ ಕಥಾವಸ್ತು ಕಥೆಯಾಗಲು ಯೋಗ್ಯವೇ ಅಲ್ಲ ಎಂದು ನಿರ್ಧಾರಕ್ಕೆ ಬರುವುದೂ ಉಂಟು. ನಾರ್ವೆಯಲ್ಲಿ ಪೂರ್ವಕ್ಕಾಗಿ ಹುಡುಕಾಡಿದಂತೆ ಸುಸ್ತಾಗುತ್ತದೆ!

ಆದರೆ ಎಲ್ಲಾ ಬಾರಿ ಹೀಗಾಗುವುದಿಲ್ಲ. ಕೆಲವೊಮ್ಮೆ ಗಟ್ಟಿ ಕಾಳು ಸಿಗುವುದೂ ಉಂಟು. ಒಂದು ಪುಟ ಬರೆಯುವದರಲ್ಲಿಯೇ ಇನ್ನೆರಡು ಪುಟಗಳನ್ನು ಬರೆಯುವ ಉತ್ಸಾಹ ಮೂಡುತ್ತದೆ. ಪೊರೆ ಕಳಚಿದ ಹಾವಿನಂತೆ ಪೆನ್ನು ಸರಸರನೆ ಹರಿಯುತ್ತದೆ. ನವ ಯೌವನ ಮೂಡಿದಂತೆ ಕುಣಿಕುಣಿಯುತ್ತದೆ. ಬ್ರಹ್ಮಪುತ್ರ ನದಿಯ ಪ್ರವಾಹದಂತೆ ಅಡೆತಡೆಗಳಿಲ್ಲದೆ ಮುನ್ನುಗ್ಗುತ್ತದೆ. ಕಥೆ ಬರೆಯುವದಕ್ಕೆ ಮುಂಚೆ ಮನಸ್ಸಿನಲ್ಲಿ ಮೂಡಿದ್ದ ಅಸ್ಪಷ್ಟ ರೇಖೆಗಳು ಸ್ಪಷ್ಟಗೊಳ್ಳುತ್ತವೆ. ಅನುಭವದ ಉಗ್ರಾಣದಿಂದ ಯಾವು ಯಾವುದೋ ವಸ್ತುಗಳನ್ನು ಹೊರ ತೆಗೆದು, ಹುಣಸೆ ಹಣ್ಣು - ರಂಗೋಲಿ ಹಾಕಿ ತಿಕ್ಕಿ, ಥಳಥಳನೆ ಹೊಳೆಯುವಂತೆ ಮಾಡಿ ಕಥೆಗಳಲ್ಲಿ ಸೇರಿಸಿ ಬಿಡುತ್ತೇನೆ. ಅನುಭವದ ಉಗ್ರಾಣದಲ್ಲಿ ಸಿಗದ ವಸ್ತುವನ್ನು ಕಲ್ಪನೆಯ ಕಿರಾಣಿ ಅಂಗಡಿ

ಯಲ್ಲಿ ಕೊಳ್ಳುತ್ತೇನೆ.

ಕಥೆ ಬರೆದು ಮುಗಿಸಿದಾಗ ಹೆರಿಗೆಯಾದಂತೆ ನಿರಾಳವೆನ್ನಿಸುತ್ತದೆ. ಹುಟ್ಟಿದ ಮಗು, ಗರ್ಭಿಣಿಯಾದಾಗ ಊಹಿಸಿದ್ದ ರೂಪಕ್ಕಿಂತ ಭಿನ್ನವಾಗಿರುವ ಸಾಧ್ಯತೆಯೇ ಹೆಚ್ಚು. ಆದರೇನು? ಹೆತ್ತಮ್ಮಗೆ ಹೆಗ್ಗಣ ಮುದ್ದಲ್ಲವೆ? ಬರೆದ ಕಥೆಯನ್ನು ಹತ್ತು ಬಾರಿಯಾದರೂ ಓದುತ್ತೇನೆ. ಸುಂದರ ತರುಣಿಯೊಬ್ಬಳು ಪ್ರತಿಬಾರಿ ತನ್ನ ರೂಪವನ್ನು ಕನ್ನಡಿಯಲ್ಲಿ ನೋಡಿಕೊಂಡಾಗ ತಾನೇ ಮೋಹಗೊಳ್ಳುವಂತೆ, ನಾನು ಎಷ್ಟೇ ಬಾರಿ ಕಥೆ ಓದಿದರೂ ಅದು ತುಂಬಾ ಚೆನ್ನಾಗಿದೆ ಅನ್ನಿಸುತ್ತೆ. ನನ್ನ ಬಗ್ಗೆ ಹೆಮ್ಮೆ ಮೂಡುತ್ತದೆ. ಆ ಕಥೆಯ ಅಂಕುಡೊಂಕುಗಳು ಕಣ್ಣಿಗೆ ಬೀಳುವದಂತೂ ಸಾಧ್ಯವಿಲ್ಲದ ಮಾತು. ಬರೆದ ಕಥೆಯನ್ನು ಮುದ್ದಾದ ಅಕ್ಷರದಲ್ಲಿ ಹಸ್ತಪ್ರತಿಯನ್ನು ತಯಾರು ಮಾಡುವುದು ನಂತರ ಅಧ್ಯಾಯ. "ಒಂದೇ ಒಂದು ಕಾಗುಣಿತ ತಪ್ಪಿದ್ದರೂ ಸಂಪಾದಕರು ನಿನ್ನ ಕಥೆಯನ್ನು ಸ್ವೀಕರಿಸುವುದಿಲ್ಲ" ಎಂದು ಯಾರೋ ಹೇಳಿದ್ದು ನನ್ನ ತಲೆಯಲ್ಲಿ ಉಳಿದುಬಿಟ್ಟಿದೆ. ಸಂಪಾದಕರೆಂದರೆ ಕೈಯಲ್ಲಿ ಬೆತ್ತ ಹಿಡಿದು ಸ್ಪೆಲ್ಲಿಂಗ್ ತಪ್ಪು ಬರೆಯುವ ಕಥೆಗಾರರನ್ನು ಶಿಕ್ಷಿಸುವ ಶಾಲಾ ಮಾಸ್ತರರು ಅಂತ ಭಾವನೆ ಬೇರೂರಿದೆ. ಆದ್ದರಿಂದ ಹಸ್ತಪ್ರತಿಯಲ್ಲಿ ಒಂದೇ ಒಂದು ಅಕ್ಷರ ತಪ್ಪಾದರೂ, ಆಸಕ್ತಿಯಿಂದ ಇನ್ನೊಂದು ಬಾರಿ ಆ ಪುಟವನ್ನು ಬರೆಯುತ್ತೇನೆ!

ಬರೆದ ಕಥೆಯನ್ನು ಪತ್ರಿಕೆಗೆ ಕಳುಹಿಸುವ ಮೊದಲು ಯಾರಾದರೂ ಓದಿ ಚೆನ್ನಾಗಿದೆ ಎಂದು ಹೇಳಬೇಕಲ್ಲವೆ? ಸ್ನೇಹಿತರಿಗೆ ಗಂಟು ಬೀಳಲೇಬೇಕು.

"ಈ ಕೆಟ್ಟ ಕಥೆ ಬರೆದು ಸಮಯ ಹಾಳು ಮಾಡಿಕೊಳ್ಳುವ ಬದಲು ರೇಷನ್ ಅಂಗಡಿಯಲ್ಲಿ ಸೀಮೆ ಎಣ್ಣೆ ತರಬಹುದಿತ್ತು"

"ಛೆ! ತುಂಬಾ ಕೆಲಸ ಕಣೋ, ಓದ್ಲಿಕ್ಕೆ ಆಗ್ಲಿಲ್ಲ. ಮುಂದಿನ ತಿಂಗಳು ಖಂಡಿತಾ ಓದ್ತೀನಿ"

"ಏನ್ ಸಖತ್ತಾಗಿ ಬರದೀಯೋ! ಲಂಕೇಶ್, ತೇಜಸ್ವಿ ಅನಂತಮೂರ್ತಿ ಎಲ್ಲಾ ನಾಚಿಕೋಬೇಕು ನೋಡು"

"ನಿಮ್ಮ ಮನೆ ತುಂಬಾ ಕಸದ ಬುಟ್ಟಿಗಳನ್ನು ಇಟ್ಟೀಯಾ?"

"ನಿಂಗಿನ್ನೂ ಅನುಭವ ಕಮ್ಮಿ. ದೊಡ್ಡ ದೊಡ್ಡ ಲೇಖಕರ ಪುಸ್ತಕಗಳನ್ನು ಓದ್ಬೇಕು."

ಹೀಗೆ ತರಾವರಿ ಅಭಿಪ್ರಾಯಗಳು ಗೆಳೆಯರ ಬಾಯಿಂದ ಉದುರುತ್ತವೆ. ಕಥೆ ಚೆನ್ನಾಗಿಲ್ಲ ಎಂದವರಿಗೆ ನನ್ನ ಕಥೆ ಅರ್ಥವಾಗಿಲ್ಲವೆಂದೂ, ಕಥೆ ಚೆನ್ನಾಗಿದೆ ಎಂದವರು ಅತ್ಯುತ್ತಮ ಸಾಹಿತ್ಯಾಸಕ್ತರೆಂದೂ ಭಾವಿಸುತ್ತೇನೆ.

ಅಂಚೆ ಕಛೇರಿಗೆ ಹೋಗಿ ತೂಕ ಮಾಡಿಸಿ ಅವರು ಹೇಳಿದ್ದಕ್ಕಿಂತಾ ಎರಡು ರೂಪಾಯಿ ಅಂಚೆ ಚೀಟಿಯನ್ನು ಹೆಚ್ಚಾಗಿಯೇ ಖರೀದಿಸುತ್ತೇನೆ. ಒಂದು ವೇಳೆ ಆ ವ್ಯಕ್ತಿ ತಪ್ಪಾಗಿ ಅಗತ್ಯಕ್ಕಿಂತ ಸ್ವಲ್ಪ ಕಡಿಮೆ ಬೆಲೆಯ ಅಂಚೆ ಚೀಟಿ ಹಚ್ಚಲು ಹೇಳಿದ್ದರೆ? ಎಂಬ ಅನುಮಾನ. ಕೆಲವೊಮ್ಮೆ ಕೊಳ್ಳಬೇಕಾದ ಅಂಚೆ ಚೀಟಿಯ ಬೆಲೆ ತುಂಬಾ ಹೆಚ್ಚಾದರೆ, "ಇಷ್ಟು ದೊಡ್ಡ ಕಥೆ ಬರೆಯಬಾರದಿತ್ತು" ಅಂತ ಮನಸ್ಸಿಗೆ "ಚುರ್" ಅಂತ ಅನ್ನಿಸುತ್ತದೆ.

ನಾನು ಎಂದೂ ಅಂಚೆ ಕಛೇರಿಯಲ್ಲಿ ಸಿಗುವ ಜುಜುಬಿ ಅಂಟಿನಿಂದ ಲಕೋಟೆಯನ್ನು ಮುಚ್ಚುವುದಿಲ್ಲ. ದಾರಿಯಲ್ಲಿ ಎಲ್ಲಾದರೂ ಪೋಸ್ಟ್ ಆಫೀಸಿನವರ ಬೇಜವಾಬ್ದಾರಿಯಿಂದ ಲಕೋಟೆ ಬಾಯಿ ತೆರೆದು ಕಥೆ ಜಾರಿ ಹೋಗಿ, ಸಂಪಾದಕರಿಗೆ ಖಾಲಿ ಲಕೋಟೆ ತಲುಪಿದರೆ? ಆದ್ದರಿಂದ ಅತ್ಯುತ್ತಮವಾದ ಫೆವಿಕಾಲ್‌ನಿಂದ ಲಕೋಟೆಯನ್ನು ಮುಚ್ಚಿ, ನಾಸ್ತಿಕನ ಬಗ್ಗೆ ಕಥೆ ಬರೆದಿದ್ದರೂ ದೇವರ ಮುಂದೆ ಅದನ್ನಿಟ್ಟು, "ಹೇ ಪರಮಾತ್ಮ ಅನಾಥ ಬಂಧು - ಈ ಬಾರಿಯಾದರೂ ಕಣ್ಣು ತೆರೆದು ನನ್ನ ಕಡೆ ನೋಡು" ಅಂತ ಧ್ಯಾನಿಸಿ, ಸ್ವಲ್ಪ ಹೆಚ್ಚಾಗಿಯೇ ಅರಿಷಿಣ-ಕುಂಕುಮ-ಮಂತ್ರಾಕ್ಷತೆಗಳನ್ನು ಹಾಕಿ ಅಂಚೆ ಪೆಟ್ಟಿಗೆಯಲ್ಲಿ ಹಾಕುತ್ತೇನೆ. ಪಿ.ಯು.ಸಿ. ಯವರೆಗೆ ಮನೆಯಲ್ಲಿ ಬೆಳೆದ ಮಗನನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಿ ಪರವೂರಿಗೆ ಕಳುಹಿಸಿಕೊಡುವ ತಾಯಿಯ ಸ್ಥಿತಿ ನನ್ನದಾಗುತ್ತದೆ! ಆದರೇನು? ಅದು ಅವನ ಒಳ್ಳೆಯದಕ್ಕಾಗಿಯೇ ಅಲ್ಲವೆ?

ನಂತರದ್ದು 'ನಿರೀಕ್ಷೆ'ಯ ಅಧ್ಯಾಯ. 'ಪಿರವಿ' ಚಿತ್ರದ ಮುದುಕನಂತೆ ಕಾಯುತ್ತೇನೆ. ನಿಮಗೆ ಕಥೆ ತಲುಪಲು ಮೂರು ದಿನ, ನೀವು ಆ ದಿನವೇ ಅದನ್ನು ಓದಿ ನನಗೆ ಪ್ರತಿಕ್ರಿಯೆ ಕಳುಹಿಸಿದರೆ ಮತ್ತೆ ಮೂರು ದಿನ. ಅಂದರೆ ಒಂದು ವಾರದಲ್ಲಿ ಅವರ ಅಭಿಪ್ರಾಯ ನನ್ನ ಕೈ ಸೇರಬೇಕು ಎಂದು ನಿರ್ಧರಿಸುತ್ತೇನೆ.

ಈ ವಾರದ ಅವಧಿಯಲ್ಲಿ ಮನಸ್ಸು ಸಾಕಷ್ಟು ಕನಸು ಕಟ್ಟುತ್ತದೆ. ನನ್ನ ಕಥೆ ತಿಂಗಳ ಅತ್ಯುತ್ತಮ ಕಥೆಯಾದಂತೆ, ವರ್ಷದ ಶ್ರೇಷ್ಠ ಕಥೆಯೆಂದು ಸಾಹಿತ್ಯ ಅಕಾಡೆಮಿಯವರು ಕಥಾ ಸಂಕಲನದಲ್ಲಿ ಸೇರಿಸಿದಂತೆ, ವಾಚಕರು "ಕನ್ನಡದ ಶ್ರೇಷ್ಠ ಕಥೆಗಾರನೊಬ್ಬನ ಜನನ" ಎಂದು ಬರೆದಂತೆ, "ನಿಮ್ಮಿಂದ ಇನ್ನೂ ಹೆಚ್ಚು ಕಥೆಗಳು ಪ್ರಕಟವಾಗಲಿ" ಎಂದು ನಿಮ್ಮಿಂದ ಪತ್ರ ಬಂದಂತೆ, ಯಾರಾದರೂ ನಿರ್ದೇಶಕರು ಅದನ್ನು ಚಲನಚಿತ್ರ ಮಾಡಲು ನಮ್ಮ ಮನೆ ಬಾಗಿಲಿಗೆ ಕೇಳಿಕೊಂಡು ಬಂದಂತೆ. ಹೀಗೆ...

ಕೆಲವೊಮ್ಮೆ ನಾನು ಬರೆದ ಕಥೆ ಯಾವುದಾದರೂ ಜನಾಂಗದ ಭಾವನೆಗಳನ್ನು ಘಾಸಿಗೊಳಿಸುವದರಿಂದ ಅವರು ರಾಜ್ಯದಾದ್ಯಂತ ಗಲಾಟೆ ಮಾಡಿ, ನಾನು ಭೂಗತನಾಗುವ ಪರಿಸ್ಥಿತಿ ಬಂದರೂ ಬರಬಹುದೆಂದು ಆಲೋಚಿಸುತ್ತೇನೆ. ಮನೆ, ರಸ್ತೆ, ಆಫೀಸು... ಎಲ್ಲೆಲ್ಲೂ ನನಗೆ ಧಿಕ್ಕಾರ ಕೂಗುತ್ತಾ ಜನ ಗುಂಪುಗೂಡುವ ದೃಶ್ಯ ಕಣ್ಣ ಮುಂದೆ ಮೂಡುತ್ತದೆ. ದೂರದರ್ಶನ, ವೃತ್ತ ಪತ್ರಿಕೆಗಳ ಮುಖ್ಯ ಸುದ್ದಿಯೇ ನನ್ನ ಕಥೆಯಾಗಬಹುದೆಂದು ಅನ್ನಿಸುತ್ತದೆ. ಹಾಗೇನಾದರೂ ಆದರೆ, ನನ್ನನ್ನು ಯಾರಾದರೂ ಸಂದರ್ಶನ ಮಾಡಿದರೆ, ಅವರು ಕೇಳಬಹುದಾದ ಪ್ರಶ್ನೆ ಮತ್ತು ಅದಕ್ಕೆ ನಾನು ಕೊಡಬೇಕಾದ ಉತ್ತರ ಎರಡನ್ನೂ ಭಾವೋದ್ವೇಗದ ಪದಗಳಲ್ಲಿ ಸಿದ್ಧಮಾಡುತ್ತೇನೆ.

ರಸ್ತೆಯಲ್ಲಿ ವಾಹನ ಓಡಿಸುವಾಗಲೂ ನನ್ನ ಕಥೆಯ ಪಾತ್ರಗಳು ನನ್ನನ್ನು ಕಾಡುತ್ತವೆ. "ನಾವು ನಿನ್ನ ಮನಸ್ಸಿನ ಕೋಟೆಯಿಂದ ಹೊರ ಬಿದ್ದು ಹಕ್ಕಿಯಂತೆ ಹಾರಾಡಿ ಕರ್ನಾಟಕದ ಪ್ರತಿಯೊಬ್ಬ ವ್ಯಕ್ತಿಯೊಡನೆ ಮಾತನಾಡುವುದು ಯಾವಾಗ?" ಎಂದು ಅಧಿಕಾರದಿಂದ ಪ್ರಶ್ನಿಸುತ್ತವೆ. "ಸ್ವಲ್ಪ ದಿನ ತಡೆಯಿರಿ. ಆ ಕಾಲ ತುಂಬಾ ದೂರವಿಲ್ಲ" ಎಂದು ಸಮಾಧಾನ ಮಾಡುತ್ತೇನೆ. ಮತ್ತೆ ಮತ್ತೆ ಅವು ನನ್ನನ್ನು ಕೆಣಕಿದಾಗ ಕೋಪ ಬರುತ್ತದೆ. ನಾನು ಸೃಷ್ಟಿಸಿದ ಪಾತ್ರಗಳು ನನ್ನ ಮೇಲೆ ಅಧಿಕಾರ ಚಲಾಯಿಸುವದೆಂದರೇನು?

ಈ ದಿನಗಳಲ್ಲಿ ಪೋಸ್ಟ್‌ಮ್ಯಾನ್ ನನಗೆ ಅತ್ಯಂತ ಮಹತ್ವದ ವ್ಯಕ್ತಿಯಾಗಿ ಕಾಣುತ್ತಾನೆ. ಕಥೆಯ ಸ್ವೀಕೃತ ಪತ್ರ ಅವನೇ ಬರೆದು ಕೊಡುತ್ತಾನೇನೋ ಎನ್ನಿಸುವಷ್ಟು! ಅವನು ಮಧ್ಯಾಹ್ನ ಮನೆಗೆ ಬಂದು ಕಾಗದ ಕೊಡುವ ತನಕ ಕಾಯುವದಕ್ಕೆ ಮನಸ್ಸು ಒಪ್ಪುವದಿಲ್ಲ. ಜೊತೆಗೆ ಅವನು ನನ್ನ ಪತ್ರವನ್ನು ಬೇಜವಾಬ್ದಾರಿಯಿಂದ ರಸ್ತೆಯಲ್ಲಿ ಬೀಳಿಸಿಕೊಂಡರೆ ಅಥವಾ ಬೇರೆಯವರ ಮನೆಯಲ್ಲಿ ಹಾಕಿಬಿಟ್ಟರೆ ಎಂಬ ಸಂಶಯ ಮೂಡಿ, ನಾನೇ ಸೀದಾ ಅಂಚೆ ಕಛೇರಿಗೆ ಹೋಗುತ್ತೇನೆ.

"ನಂದೇನಾದ್ರೂ ಪತ್ರ ಇದೆಯೇನಪ್ಪ?"

"ಇಲ್ಲ ಬಿಡಿ ಸಾರ್, ಇಲ್ಲೀ ತನಕಾ ಯಾಕೆ ಬರ್ತೀರಾ? ಇದ್ರೆ ಮನೆಯಲ್ಲಿ ಕೊಡ್ತೀನಿ. ಯಾವ್ದಾದ್ರೂ ಇಂಪಾರ್ಟೆಂಟ್ ಕಾಗದ ಬರೋದಿತ್ತಾ?"

"ಹಾಗೇನೂ ಇಲ್ಲ. ಸುಮ್ನೆ ಈ ಕಡೆ ಬಂದಿದ್ದೆ. ಹಂಗೆ ಕೇಳ್ದೆ ಅಷ್ಟೆ!"

ನಾನು ದಿನ ನಿತ್ಯ ಅಂಚೆ ಕಛೇರಿಗೆ ಹೋಗುವದನ್ನು ಕಂಡು ಪೋಸ್ಟ್‌ಮ್ಯಾನ್‌ಗೂ ಸಂಶಯ ಬರುತ್ತದೆ. ಇದ್ಯಾವುದೋ ಕಥೆ ಬರೆಯುವ ಹುಚ್ಚಿನ ಕೇಸೇ ಅಂದು ಅರ್ಥವಾಗುತ್ತದೆ. ನನ್ನನ್ನು

ನೋಡಿದೊಡನೆ ತುಟಿಯಂಚಿನಲ್ಲಿಯೆ ನಗೆಯನ್ನು ತುಳುಕಿಸುತ್ತಾನೆ.

''ಸಾರ್, ನಿಮಗೊಂದು ಪತ್ರ ಬಂದಿದೆ, ಟೆಲಿಫೋನ್ ಬಿಲ್‌ದು'' ಒಬ್ಬ ಜುಜುಬಿ ಪೋಸ್ಟ್‌ಮ್ಯಾನ್ ಹಾಸ್ಯ ಮಾಡುತ್ತಾನೆ.

ಆದರೆ ಒಂದು ವಾರ ಕಳೆದರೂ ಯಾವುದೇ ಪ್ರತಿಕ್ರಿಯೆ ನಿಮ್ಮಿಂದ ಬರದಿದ್ದಾಗ, ನನ್ನ ಕಥೆಗೆ ಮುಕ್ಕಾಸಿನ ಬೆಲೆಯನ್ನೂ ಕೊಡದೆ ಕಸದ ಬುಟ್ಟಿಗೆ ಒಗೆದುಬಿಟ್ಟಿರುವಿರಾ? ಎಂದು ದಿಗಿಲಾಗುತ್ತದೆ. ಕಹಿಯನ್ನು ಸ್ವೀಕರಿಸಲು ಸಿದ್ಧವಿಲ್ಲದ ಮನಸ್ಸು ನೂರಾರು ಅಸಾಮಾನ್ಯ ಸಾಧ್ಯತೆಗಳನ್ನು ಊಹಿಸುತ್ತದೆ. ನನ್ನ ವಿಳಾಸವನ್ನೇ ಬರೆಯಲು ಮರೆತಿದ್ದೇನೆಯೆ? ನಿಮ್ಮ ವಿಳಾಸವೇನಾದರೂ ತಪ್ಪು ಬರೆದಿದ್ದನೆ? ಮೊನ್ನೆ ಮಳೆ ಬಂದಾಗ ನೀರು ಅಂಚೆ ಪೆಟ್ಟಿಗೆಯಲ್ಲಿ ನುಗ್ಗಿ ಕಥೆ ಕೊಚ್ಚಿಕೊಂಡು ಹೋಯಿತೆ? ನಾನಿಲ್ಲದಾಗ ಬಂದ ಪೋಸ್ಟ್‌ಮ್ಯಾನ್ ಪತ್ರವನ್ನು ಡಬ್ಬದಲ್ಲಿ ಹಾಕದೆ ಬಾಗಿಲಿನ ಮುಂದೆಯೇ ಹಾಕಿದ್ದಾಗ ಜೋರಾಗಿ ಬೀಸಿದ ಗಾಳಿಗೆ ಹಾರಿ ಹೋಯಿತೆ? ದುಗುಡಗೊಂಡ ಮನಸ್ಸಿಗೆ ಯಾವುದೂ ಸರಿಯೆನ್ನಿಸುವದಿಲ್ಲ ಅಥವಾ ಎಲ್ಲವೂ ಸರಿಯೆನ್ನಿಸುತ್ತದೆ.

ಕಡೆಗೊಮ್ಮೆ ನನ್ನೆಲ್ಲಾ ಕನಸುಗಳನ್ನು ಶಿಲುಬೆಗೇರಿಸುವ ದಿನ ಬರುತ್ತದೆ. ದೂರದಿಂದಲೇ ನನ್ನನ್ನು ನೋಡಿದ ಪೋಸ್ಟ್‌ಮ್ಯಾನ್ ಕೂಗುತ್ತಾನೆ.

''ಸಾರ್, ಸಾರ್, ನಿಮಗೊಂದು ವಿಷಾದಪತ್ರ ಬಂದಿದೆ. ಇದಕ್ಕೇನಾ ನೀವು ಇಷ್ಟು ದಿನ ಕಾದಿದ್ದು?''

ತುಟಿ ಪಿಟ್ಟೆನ್ನದೆ ಅವನ ಕಡೆ ಕೆಕ್ಕರುಗಣ್ಣಿಂದ ನೋಡುತ್ತೇನೆ. ಸೈಕಲ್ ಬೆಲ್ ''ಟ್ರಿಣ್, ಟ್ರಿಣ್'' ಸದ್ದು ಮಾಡುತ್ತಾ ''ಎಂಥಾ ಮರುಳಯ್ಯಾ ಇದು ಎಂಥಾ ಮರಳು,,,'' ಎಂದು ಹಾಡುತ್ತಾ ಹೊರಟು ಹೋಗುತ್ತಾನೆ.

ಸಂಪಾದಕ ಮಹಾಶಯರೆ, ನೀವೇನಾದರೂ ಆ ಸಂದರ್ಭದಲ್ಲಿ ನನ್ನ ಕೈಗೆ ಸಿಗುವಂತಿದ್ದರೆ ನಿಮ್ಮನ್ನು ಕಾರ್ಚೀಕಡ್ಡಿಯಂತೆ ಸೀಳಿ, ಪೂರ್ವಕ್ಕೊಂದು ಪಶ್ಚಿಮಕ್ಕೊಂದು ಭಾಗವನ್ನು ಎಸೆದುಬಿಡುತ್ತಿದ್ದೆ. ಕಥೆ ತಿರಸ್ಕೃತಗೊಂಡ ವಿಷಯ ಇಡೀ ಅಂಚೆ ಇಲಾಖೆಗೆ ಗೊತ್ತಾಗುವಂತೆ ಕಾರ್ಡಿನಲ್ಲಿ ಬರೆಯುವದಾದರೂ ಏಕೆ? ಒಂದು ಕವರಿನಲ್ಲಿ ಹಾಕಿ ಕಳುಹಿಸಬಾರದೆ? ಕಥೆಗಾರರ ಮಾನವನ್ನು ಮುಲಾಜಿಲ್ಲದೆ ಹರಾಜು ಹಾಕುವ ಅಧಿಕಾರ ನಿಮಗೆ ಕೊಟ್ಟವರ್‍ಯಾರು?

ಯಾಕೋ ಎಲ್ಲಾ ಕೆಲಸಗಳಲ್ಲೂ ಆಸಕ್ತಿಯೇ ಹೊರಟುಹೋಗುತ್ತದೆ. ಬೇರೆ ಯಾರೊಡನೆಯೂ ಮಾತನಾಡುವ ಆಸಕ್ತಿಯಿಲ್ಲದೆ ಏಕಾಂಗಿಯಾಗಿರುವಾಸೆ ಆಗುತ್ತದೆ. ಗೆಳೆಯರು ನನ್ನ ಬಗ್ಗೆ ಏನೇ ಮಾತನಾಡಿದರೂ, ನನ್ನ ಬಗ್ಗೆ ಗೇಲಿ ಮಾಡುತ್ತಿದ್ದಾರೆಯೆ ಎಂದು ಸಂಶಯ ಮೂಡುತ್ತದೆ.

ಆದರೆ ಮತ್ತೆರಡು ದಿನಗಳಲ್ಲಿ ಮನಸ್ಸು ಶಾಂತವಾಗುತ್ತದೆ. ಕಥೆ ತಿರಸ್ಕೃತಗೊಂಡಿರುವ ಕಾರಣಗಳಿಗಾಗಿ ಹುಡುಕಾಟ ನಡೆಸುತ್ತೇನೆ. ಮತ್ತೊಮ್ಮೆ ನನ್ನ ಕಥೆಯನ್ನು ಹೊಸ ದೃಷ್ಟಿಕೋನದಿಂದ ಓದುತ್ತೇನೆ. ಆಶ್ಚರ್ಯವೆಂದರೆ, ಈ ಬಾರಿ ಓದಿದಾಗ ಅನೇಕ ಅಂಕು ಡೊಂಕುಗಳು ಕಾಣುತ್ತವೆ. ಕಥಾವಸ್ತು ಸ್ವಲ್ಪ ಹಳಸಲಾಗಿದೆ, ಶೈಲಿಯಲ್ಲಿ ಅಷ್ಟೊಂದು ಬಿಗಿಯಿಲ್ಲ, ಕೆಲವೊಂದು ಪಾತ್ರಗಳು ಅನಾವಶ್ಯಕ, ಸರಿಯಾದ ಪ್ರತೀಕಗಳ ಬಳಕೆಯಿಲ್ಲ.... ಹೀಗೆ!

ಒಮ್ಮೊಮ್ಮೆ ತನ್ನ ಕಥೆ ತುಂಬಾ ಚೆನ್ನಾಗಿದೆಯಾದರೂ ತುಂಬಾ ದೊಡ್ಡದಾಗಿದೆಯೆಂಬ ಕಾರಣದಿಂದ ಪ್ರಕಟಿಸಿಲ್ಲ ಎಂಬ ಅನುಮಾನ ಬರುತ್ತದೆ. ತಕ್ಷಣ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಯಾವುದಾದರೂ ಒಂದು ಕಥೆಯಲ್ಲಿನ ಎಲ್ಲಾ ಪದಗಳನ್ನು ಗಣನೆ ಮಾಡುತ್ತೇನೆ. ನನ್ನ ಕಥೆಯಲ್ಲಿನ ಪದಗಳ ಸಂಖ್ಯೆ ಅದಕ್ಕಿಂತ ಹೆಚ್ಚಾದಾಗ ''ಅದೇ ಕಾರಣ'' ಅಂತ ಅನ್ನಿಸಿ ಮನಸ್ಸು ನಿರಾಳವಾಗುತ್ತದೆ. ಇನ್ನೊಮ್ಮೆ ಒಂದು ಪದದಲ್ಲಿನ ಅಕ್ಷರಗಳ ಸಂಖ್ಯೆ ಮತ್ತೊಂದಕ್ಕಿಂತ ಬೇರೆಯೇ ಬೇರೆ ಅನ್ನಿಸಿ, ಅಕ್ಷರ ಗಣನೆಯೇ ಹೆಚ್ಚು ನಿಖರವೆಂದು ಆ ಹುಚ್ಚ ಕಾರ್ಯಕ್ಕೂ ತೊಡಗುವುದುಂಟು.


ಆದರೆ ಅತ್ಯಂತ ಆಶ್ಚರ್ಯಕರವಾಗಿ, ಅದೇ ಸಮಯದಲ್ಲಿ ಮತ್ತೊಂದು ಕಥಾವಸ್ತು ಹೊಳೆಯುತ್ತದೆ. ಈ ಕಥಾವಸ್ತು ಖಂಡಿತವಾಗಿಯೂ ಹಿಂದಿನ ನನ್ನ ಎಲ್ಲಾ ಕಥೆಗಳಿಗಿಂತ ಅತ್ಯುತ್ತಮವಾದದ್ದೆಂದು ಅನ್ನಿಸಿಬಿಡುತ್ತದೆ. ಹಿಂದಿನ ಕಥೆಯನ್ನು ಇನ್ನೊಮ್ಮೆ ಕಣ್ಣೆತ್ತಿಯೂ ನೋಡಲಾರದಷ್ಟು ಈ ಹೊಸ ಕಥೆಯ ಮೇಲೆ ಆಕರ್ಷಣೆ ಉಂಟಾಗುತ್ತದೆ. ಹಿಂದೆ ಮಾಡಿದ ಯಾವುದೇ ತಪ್ಪನ್ನೂ ಈ ಬಾರಿ ಮಾಡುವುದಿಲ್ಲವೆಂದು ನಿರ್ಧರಿಸಿ ಹೊಸ ಕಥೆಯನ್ನು ಬರೆಯಲು ಪ್ರಾರಂಭಿಸುತ್ತೇನೆ. ಸುಟ್ಟು ಬೂದಿಯಾದರೂ ಫೀನಿಕ್ಸ್ ಪಕ್ಷಿಯಾಗಿ ಬದುಕಿ ಬರುವ ಆಸೆ! ರುಂಡ ಹೋದರೂ ಮುಂಡದಿಂದ ಓಡಾಡುವ ಬಯಕೆ!

ಅಯ್ಯಾ ಸಂಪಾದಕ ಮಹಾಶಯ, ನನಗೆ ನನ್ನೆಲ್ಲಾ ಭಾವನೆಗಳು ಅತಿರೇಕವೆನ್ನಿಸಬಹುದು, ಭಾವೋನ್ಮಾದವೆನ್ನಿಸಬಹುದು ಇಲ್ಲವೇ ಹುಚ್ಚಾಗಿಯೂ ಕಾಣಬಹುದು. ಇರಲಿ, ಎಸ್ಕಿಮೋ ಜನರು ಬಿಸಿಲಿಗಾಗಿ ಪರದಾಡುವದನ್ನು ಬಳ್ಳಾರಿಯವ ಹೇಗೆ ತಾನೆ ಅರ್ಥಮಾಡಿಕೊಂಡಾನು? ಮರಕುಟುಕವೊಂದು ಮರವನ್ನು ಕೊರೆದು ಗೂಡು ಮಾಡಿಕೊಂಡಿದ್ದು, ಮರವನ್ನೇ ಉರುಳಿಸುವ ಆನೆ ಹೇಗೆ ತಾನೆ ಮಹತ್ವದ್ದೆಂದು ಪರಿಗಣಿಸೀತು?

ಅದೇನೇ ಇರಲಿ, ಮತ್ತೊಮ್ಮೆ ನನ್ನ ಕಥೆಯನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇನೆ. ಶಂತನ ಕಂದಮ್ಮಗಳನ್ನು ಗಂಗೆ ನೀರಿಗೆ ಹಾಕಿದಂತೆ! ಇನ್ನು ಮುಂದೆ ವಿಷಾದ ಪತ್ರವನ್ನು ನಿರೀಕ್ಷಿಸುವದೇ ನನಗಿರುವ ಏಕೈಕ ಗುರಿ. ಇದೋ ನೋಡು - ಉರುಳಿ ಹೋಗುವ ದಿನಗಳನ್ನು, ದಿನಗಳಲ್ಲಿನ ಗಂಟೆಗಳನ್ನು, ಗಂಟೆಗಳಲ್ಲಿನ ನಿಮಿಷಗಳನ್ನು, ನಿಮಿಷಗಳಲ್ಲಿನ ಕ್ಷಣಗಳನ್ನು ಎಣಿಸುತ್ತೇನೆ.

ಒಂದು, ಎರಡು, ಮೂರು....

ಹೀಗೊಬ್ಬ
ತಿರಸ್ಕೃತ ಕಥೆಗಾರ



ಕ್ಲಾಸ್ ರೂಂ

ಕಾಂಬಿನೇಷನ್

ನಾನು ಡಿಪ್ಲೊಮಾ ದ್ವಿತೀಯ ವರ್ಷದ ವಿದ್ಯಾರ್ಥಿಯಾಗಿದ್ದಾಗ ನಡೆದ ಘಟನೆ ಇದು. ಮೇಡಮ್ ಕ್ಲಾಸ್‌ರೂಂನಲ್ಲಿ ಪಾಠ ಮಾಡುತ್ತಿದ್ದಾಗ ಹುಡುಗ-ಹುಡುಗಿಯರಲ್ಲಿ ಸಹಕಾರ ಮತ್ತು ಒಳ್ಳೆಯ ಮನೋಭಾವನೆ ಇರಬೇಕೆಂದು ಹೇಳುತ್ತಿದ್ದರು. ಒಬ್ಬ ಹುಡುಗ ಮೇಲೆದ್ದು ಈಗ ಹುಡುಗ-ಹುಡುಗಿಯರಲ್ಲಿ 'ಕಾಂಬಿನೇಷನ್'ಇಲ್ಲ ಮೇಡಂ ಎಂದನು. ಅವನು 'ಕೋ ಆಪರೇಷನ್' ಎನ್ನುವ ಬದಲು 'ಕಾಂಬಿನೇಷನ್' ಎಂದಿದ್ದ. ನಾನು ಕಾಂಬಿನೇಷನ್ ಪದದ ಅರ್ಥವನ್ನು ಎಲ್ಲ ಹುಡುಗರಿಗೆ ಕೇಳಿಸುವ ಹಾಗೆ ಹೇಳಿದಾಗ ಮೊದಲೇ ನಗುತ್ತಿದ್ದ ಹುಡುಗ-ಹುಡುಗಿಯರು ನನ್ನ ಮಾತನ್ನು ಕೇಳಿ ಹೊಟ್ಟೆ ಹುಣ್ಣಾಗುವಂತೆ ನಗತೊಡಗಿದರು.

-ಜಯತೀರ್ಥ ಶರ್ಮಾ,
ಗುರುಮಠಕಲ್

ಇನ್ನೂ ಬರೆಸಿ

ನಾನು ೮ನೇ ತರಗತಿಯಲ್ಲಿ ಓದುತ್ತಿದ್ದೆ. ಒಂದು ದಿನ ಗುರುಗಳು ನೋಟ್ಸ್ ಬರೆಸುತ್ತಿದ್ದರು. ಅಂದು ಅವರು ಬರೆಸುತ್ತಾ ಬರೆಸುತ್ತಾ ೧೪ ಪುಟ ಬರೆಸಿದರು. ಆಗ ಹುಡುಗರು ಸಾಕು ಸರ್, ಸಾಕು ಸರ್ ಎಂದು ಕೇಳಿದರು. ಆದರೆ ಹಿಂದಿನಿಂದ ಒಬ್ಬ ವಿದ್ಯಾರ್ಥಿ ಇನ್ನೂ ಬರೆಸಿ ಸಾರ್ ಎಂದ. ಗುರುಗಳು ಈತನ ಕೋರಿಕೆಯನ್ನು ಕೇಳಿ ಹೊಗಳಿದರು. ಆತನನ್ನು ಪ್ರಶಂಸಿಸಲು ಬರೆದುದನ್ನು ತೋರಿಸಲು ಕೇಳಿದರು. ಅದಕ್ಕಾತ ನಾನೀಗ ಬರೆಯುತ್ತಿಲ್ಲ ಸರ್ ಎಂದ.

- ಎಸ್.ಎಸ್. ಸೋಮನಕಟ್ಟಿ,
ರೋಣ

ಇಡ್ಲಿ

ವರ್ಗದ ಗುರುಗಳು ವಿಜ್ಞಾನ ಪಾಠ ಮಾಡುತ್ತಿದ್ದರು. ಪಾಠ ಮುಗಿದ ಮೇಲೆ ಅವರು ಕೆಲವು ಪ್ರಶ್ನೆಗಳನ್ನು ಕೇಳಿದರು. ಅವರು ಇಂಗಾಲದ ಬಹುರೂಪಗಳು ಯಾವುವು? ಎಂದು ಪ್ರಶ್ನಿಸಿ ಒಬ್ಬೊಬ್ಬರು ಒಂದೊಂದು ಉದಾಹರಣೆ ಕೊಡಿ ಎಂದರು.

ಒಬ್ಬ ಗ್ರಾಫೈಟ್ ಎಂದು ಹೇಳಿದ ತಕ್ಷಣ ಸರಿ ಎಂದರು. ನನ್ನ ಗೆಳೆಯ ಎದ್ದು ನಿಂತು ಇಂಗಾಲದ ಬಹುರೂಪ ಇದ್ದಿಲು ಎಂದು ಹೇಳುವ ಬದಲು 'ಇಡ್ಲಿ' ಎಂದು ಹೇಳಿದಾಗ ಎಲ್ಲಾ ಹುಡುಗರೂ ನಕ್ಕರು.

- ಎಂ.ಬಿ. ವೀರನಗೌಡ,
ಮಲಿಯಾಬಾದ್,

ಅಶೋಕ

ನಾನು ೪ನೇ ತರಗತಿ ಓದುತ್ತಿರುವಾಗ ಗುರುಗಳು ಚರಿತ್ರೆಯ ಅಶೋಕ ಚಕ್ರವರ್ತಿಯ ಪಾಠ ಪ್ರಾರಂಭಿಸಿದರು. ಗುರುಗಳು **ಪಾಠ ೧೦, ಅಶೋಕ** ಎಂದರು. ಆಗ ತರಗತಿಯಲ್ಲಿ ಕುಳಿತಿದ್ದ ಅಶೋಕನು ಗುರುಗಳ ಪಕ್ಕಕ್ಕೆ ಹೋಗಿ ನಿಂತನು. ಗುರುಗಳು ಯಾಕೋ ಬಂದೆ ಎಂದು ಕೇಳಿದಾಗ ಅವನು ನೀವು ಕರಿದ್ರಿಯಲ್ಲ ಸಾರ್ ಎಂದ. ಆಗ ತರಗತಿ ನಗೆಯ ಹೊನಲಿನಲ್ಲಿತ್ತು.

- ಶುಭ ಹೆಚ್.ಸಿ., ಬೆಂಗಳೂರು

ಕಿಸ್ ಮಿ !

ನಾನು ದ್ವಿತೀಯ ಪಿ.ಯು.ಸಿ.ಯಲ್ಲಿ ಓದುತ್ತಿದ್ದಾಗ ನಡೆದ ಘಟನೆ. ನನ್ನ ಗೆಳತಿಯೊಬ್ಬಳ ಹೆಸರು ಮೋಹನ್‌ಕುಮಾರಿ ಎಂದು. ನಾವು ಅವಳನ್ನು ಪ್ರೀತಿಯಿಂದ ಮೋಹನ್ ಎಂದೇ ಕರೆಯುತ್ತಿದ್ದೆವು. ಇದು ನಮ್ಮ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೂ ತಿಳಿದಿತ್ತು. ದ್ವಿತೀಯ ಪಿ.ಯು.ಸಿ.ಯಲ್ಲಿ ಒಬ್ಬ ಹೊಸ ಹುಡುಗ ಸೇರಿದ್ದ. ಒಂದು ದಿನ ತರಗತಿಯಲ್ಲಿ ಮೋಹನ ಕಿಸ್ ಮಿ ಎಂದೆ. ಅದೇ ಸಮಯಕ್ಕೆ ತರಗತಿಯ ಒಳಗೆ ಬಂದ ಹೊಸ ಹುಡುಗ ಇದನ್ನು ಕೇಳಿ ನನ್ನ ಕೆನ್ನೆಗೆ ಹೊಡೆದ. ನನಗೆ ಆಶ್ಚರ್ಯದ ಜೊತೆ ಅವಮಾನವಾದಂತಾಯಿತು. ನಾನು ನನ್ನ ಗೆಳತಿಗೆ ಕಿಸ್ ಮಿ ಚಾಕಲೇಟ್ ಕೊಡಲು ಹಾಗೆ ಕರೆದುದೆಂದು ತಿಳಿಸಿದೆ. ನಂತರ ಅವನು ಕೆಂಪಗಾಗಿದ್ದ ಕೆನ್ನೆ ನೋಡುತ್ತಾ ನನ್ನ ಕ್ಷಮೆ ಕೇಳಿದ. ಅಂದಿನಿಂದ ನನ್ನ ನೋಡಿದಾಗಲೆಲ್ಲಾ 'ಕಿಸ್‌ಮಿ' ಎಂದೇ ಹಾಸ್ಯ ಮಾಡುತ್ತಾನೆ.

- ಭುವನೇಶ್ವರಿ,
ಗೊಲ್ಲರಹಳ್ಳಿ

ತಂತಿ ಟೋಪಿ

ನಾನು ಎಂಟನೇ ತರಗತಿಯಲ್ಲಿ ಓದುತ್ತಿದ್ದಾಗ ಒಂದು ದಿನ ಗುರುಗಳು ತರಗತಿಯಲ್ಲಿ ಪ್ರಶ್ನೆ ಕೇಳುತ್ತಿದ್ದರು. ಸ್ವತಂತ್ರ ಹೋರಾಟಗಾರನಾದ ತಾತ್ಯಾ ಟೋಪಿಯ ಜನನ ಯಾವಾಗ ಆಯಿತು ಎಂದು ಬಸ್ವನನ್ನು ಕೇಳಿದರು. ಬಸ್ವನ ನಾಲಗೆ ಸ್ವಲ್ಪ ದಪ್ಪವಿದ್ದುದರಿಂದ ಸರ್ ತಂತಿ ಟೋಪಿ ಹುಟ್ಟಿದ್ದು... ಹುಟ್ಟಿದ್ದು... ಎಂದು ಹೇಳುತ್ತಾ ಸುಮ್ಮನೆ ನಿಂತ!

- ಈ.ಎಂ.ವೀರೇಶಗೌಡ,
ರಾಯಚೂರು

ಬಾಸುಂಡೆಗಳ ಗುರುತು


ನಾನಾಗ ೭ನೇ ತರಗತಿಯಲ್ಲಿದ್ದೆ ನಮ್ಮ ಶಾಲೆ ಗ್ರಾಮ ಛಾವಡಿ ಹತ್ತಿರವೇ ಇದ್ದುದರಿಂದ ಗ್ರಾಮಲೆಕ್ಕಾಧಿಕಾರಿಗಳು ಆಗಾಗ ನಮ್ಮ ಶಾಲೆಗೆ ಬರುತ್ತಿದ್ದರು. ಗ್ರಾಮಲೆಕ್ಕಾಧಿಕಾರಿಗಳು ಕಪ್ಪಗೆ ಇರುವುದರಿಂದ ನಾನೊಮ್ಮೆ ಕಾರಣಾಂತರದಿಂದ ಕರಿಮುಖದವನು ಎಂದು ಬಿಟ್ಟಿದ್ದೆ. ನಮ್ಮ ಗುರುಗಳು ಅವರು ಹೋದ ತಕ್ಷಣ ನನ್ನನ್ನು ಚೆನ್ನಾಗಿ ಬೆತ್ತದಿಂದ ಬಾರಿಸಿಬಿಟ್ಟರು. ಸೌಮ್ಯ ಸ್ವಭಾವದ ಅವರು ಅಂದು ವಿರಾಟ್ ರೂಪ ತಾಳಿದ್ದರು. ಅಂದು ನನಗೆ ಬೆತ್ತದಿಂದ ಬಡಿದ ವೀರಣ್ಣ ಮಾಸ್ತರು ಇಂದು ಎಲ್ಲಿರುವರೋ ಗೊತ್ತಿಲ್ಲ. ನನ್ನಿಂದ ಕರಿಮುಖದವನೆನಿಸಿಕೊಂಡ ಕಾಳಪ್ಪನೆಂಬ ಲೆಕ್ಕಾಧಿಕಾರಿ ಆಗಾಗ ಬಳ್ಳಾರಿಯಲ್ಲಿ ಕಂಡಾಗ ಕೈಗಳು ಅನಾಯಾಸವಾಗಿ ಅಂದಿನ ಬಾಸುಂಡೆ ಗುರುತುಗಳ ಮೇಲೆ ಹೋಗುತ್ತವೆ.

ಈಗ ನಾನು ಪದವಿ ಪಡೆಯುತ್ತಿದ್ದರೂ ಯಾರನ್ನಾದರೂ ಹೀಯಾಳಿಸಲು ಅಥವಾ ಅವರ ಆಕಾರವನ್ನು ವರ್ಣಿಸಲು ಮುಂದಾದಾಗ ಬಾಸುಂಡೆಗಳ ಗುರುತು ಇಗೋ ನಾವಿಲ್ಲಿದ್ದೇವೆ ಎಂದು ನೆನಪಿಸುತ್ತವೆ.

- ಎಂ. ಬಸವರಾಜ,
ಸೋಮಲಾಪುರ

ಕ್ಲಾಸ್ ರೂಂ

ಶಾಲೆ ಕಾಲೇಜುಗಳ ತರಗತಿ ಕೋಣೆಗಳಲ್ಲಿ ತಮಾಷೆಗಳಿಗೆ ಬರವುಂಟೆ? ಇಂಥ ಪ್ರಸಂಗಗಳು ಹಲವೊಮ್ಮೆ ಗಂಭೀರ ತಿರುವು ಪಡೆಯುವುದು ಅಸಂಭವವಲ್ಲ. ಈ ಬಗ್ಗೆ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಈ ಅಂಕಣದಲ್ಲಿ ಬರೆಯಬಹುದು.



ನಿಗೂಢ ಜಗತ್ತು

②

ಆಕಾಶದಿಂದ ಬೀಳುವ ದ್ವೀಪಗಳು !

ಈ ಲೇಖನಮಾಲೆಯಲ್ಲಿ ಪ್ರಕೃತಿಯ ಹಲವಾರು ನಿಗೂಢಗಳತ್ತ ಕುತೂಹಲಕಾರಿ ದೃಷ್ಟಿಬೀರಿ, ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನ ನಡೆದಿದೆ. ಇದು ಈ ಸರಣಿಯ ಎರಡನೇ ಲೇಖನ.

○ **ನಾರಾಯಣ ಎಂ. ಭಟ್**
ನಂ. ೧೪೪, ೪ನೇ ಮೇನ್, ಆಂಜನೇಯ ನಗರ, ಬಿ.ಎಸ್.ಕೆ. ೩ನೇ ಸ್ಟೇಜ್, ಬೆಂಗಳೂರು-೮೫

ಜರ್ಮನಿಯ 'ಕಕ್ಸ್‌ಹಾವನ್' ಬಂದರು ನಗರದ ಒಂದು ಪ್ರಶಾಂತ ದಿನ. ಆ ದಿನ ಗಾಳಿಯೇ ಬೀಸುತ್ತಿರಲಿಲ್ಲ. "ಅಮ್ಮಾ! ದ್ವೀಪವೊಂದು ಬೀಳುತ್ತಿದೆ ಆಕಾಶದಿಂದ!!" ಎಂದು ಚೀರುತ್ತ ಹೊರಗಡೆ ಆಡುತ್ತಿದ್ದ ಪುಟ್ಟ ಹುಡುಗನೊಬ್ಬ ಮನೆಯೊಳಕ್ಕೆ ಓಡಿದ. ಇದ್ಯಾವುದೋ ಮಗನ ತುಂಟಾಟ ಇರಬಹುದೆಂದು ತಿಳಿದು ತಾಯಿ ಮುಗುಳ್ನಕ್ಕಳು. ಆದರೆ, ಕಿಟಕಿಯಾಚೆ ಹೊರ ನೋಡಿದಾಗ ಅವಳಿಗೆ ಮಾತೇ ಹೊರಡದಂತಾಯಿತು. ದೂರ ತೀರದ 'ಹಲ್‌ಗೋ ಐಲ್ಯಾಂಡ್' ತಲೆಕೆಳಗಾಗಿ ನೇತಾಡುತ್ತಿದೆ!.

ಹೌದು; ಅದು ಹಲ್‌ಗೋದ್ವೀಪ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಲ್ಲಿನ ದಿಣ್ಣೆಗಳು, ಇನ್ನಿತರ ವಿವರಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಇಡೀ ದ್ವೀಪವನ್ನು ಒಂದು ಬೃಹತ್ ಕೈ ತೂಗುತ್ತಿರುವಂತೆ ತೋರುತ್ತಿತ್ತು. ತಾಯಿ ಮತ್ತು ಮಗನಿಗೆ ಹೆದರಿಕೆಯಾಗುತ್ತಿತ್ತು. ಅದು ಯಾವ ಕ್ಷಣದಲ್ಲಿಯಾದರು ಕೆಳಗೆ ಬೀಳುವಂತಿತ್ತು. ಆ 'ದ್ವೀಪ'ವು ಮೇಲೆ ಬಿದ್ದರೆ ಏನಪ್ಪಾ ಗತಿ!- ಆದರೆ ಸಂಜೆಯಾಗುತ್ತಿದ್ದಂತೆ ಈ 'ಭೂತಾಕೃತಿ' ನಿಧಾನವಾಗಿ ಕರಗಿ ಮಾಯವಾಯಿತು! ತಾಯಿ ಮತ್ತು ಮಗ ಸಮಾಧಾನದ ಉಸಿರಿಟ್ಟರು.

ಕಕ್ಸ್ ಹವನ್‌ನಲ್ಲಿ ಆಗಾಗ ಕಂಡು ಬರುವ 'ಹಲ್‌ಗೋ ದ್ವೀಪ'ದ ಭೂತಾಕಾರದ ಈ ಹುಸಿ ತೋರ್ಕೆಗಳು, ವಾತಾವರಣವೆಂಬ ರಂಗಭೂಮಿಯಲ್ಲಿ ಪ್ರತಿದಿನ ಮೂಡುವ ಬೇರೆ ಬೇರೆ ನಾಟಕಗಳ ಪೈಕಿ ಒಂದು ನಾಟಕ ಮಾತ್ರ. ಇಂತಹ ಚಿತ್ರ-ವಿಚಿತ್ರ ಭ್ರಾಂತಿಗಳು ಶತಮಾನಗಳಿಂದಲೂ ಪ್ರೇಕ್ಷಕರನ್ನು ವಿಸ್ಮಯಗೊಳಿಸಿದ್ದವು. ಇವೇನು? ಎನ್ನುವುದು ಗೂಢವಾಗಿಯೇ ಉಳಿದಿತ್ತು.

ಆರ್ಕ್‌ಟಿಕ್ ಪ್ರದೇಶದಲ್ಲಿ ಇಂತಹ ನಾಟಕಗಳ ಮಹಾ ಉತ್ಸವವೇ ಪ್ರತಿನಿತ್ಯ ನಡೆಯುತ್ತದೆ ಎಂದರೆ ಉತ್ಪ್ರೇಕ್ಷೆಯಲ್ಲ.

ಇಂತಹ ಮರೀಚಿಕೆ ಅಥವಾ ಭ್ರಾಂತಿಯ ಜಗತ್ ವಿಖ್ಯಾತ ಕ್ರೋಕರ್‌ಲ್ಯಾಂಡ್ ಪರ್ವತ ಶ್ರೇಣಿ ಹಲವಾರು ಅನ್ವೇಷಕರ ಪಾಲಿಗೆ ಬಹುದೊಡ್ಡ ಸವಾಲಿನಂತೆ ಎದುರಾಗಿದ್ದವು. ಈ ಪರ್ವತಗಳ ಬಗ್ಗೆ ಇರುವ ನಿಗೂಢತೆಯನ್ನು ಬಯಲು ಮಾಡಲು ಶ್ರಮಿಸಿದವರ ಪೈಕಿ ರೋಬಾರ್ಟ್‌ಪಿರಿ ಎಂಬಾತನನ್ನು ಸ್ಮರಿಸಲೇಬೇಕು. ಅವನೇ ಈ ಪರ್ವತ ಶ್ರೇಣಿಗೆ ನಾಮಕರಣ ಮಾಡಿದವನು.

ಈ ಶ್ರೇಣಿಗಳ ನಿಗೂಢತೆ ಏನೆಂದರೆ ಇವುಗಳ ಅಸ್ತಿತ್ವದ ಬಗ್ಗೆ ಯಾವ ನಕಾಶೆಯಲ್ಲಿಯೂ ನಮೂದಾಗಿರಲಿಲ್ಲ! ಆದರೆ ಹಲವಾರು ಜನ ಇವುಗಳ ಇರುವಿಕೆ ಬಗ್ಗೆ ಸಾಕ್ಷ್ಯ ನೀಡಿದ್ದರು. ಆದರೆ ಆ ಸಾಕ್ಷ್ಯಾಧಾರಗಳನ್ನು ನಂಬಿ ಅನ್ವೇಷಣೆಗೆ ಹೊರಟರೆ ಅಲ್ಲಿ ಯಾವ ಪರ್ವತವೂ ಇರುತ್ತಿರಲಿಲ್ಲ! ಇದೆಂತಹ ಭ್ರಾಂತಿ ಎಂದು ಎಲ್ಲರೂ ತಲೆಕೆಡಿಸಿಕೊಂಡಿದ್ದರು.

ರೋಬಾರ್ಟ್‌ಪಿರಿ ಅವುಗಳನ್ನು ತಾನು ಕಣ್ಣಾರೆ ಕಂಡಿದ್ದೇನೆ ಎಂದು ವರದಿ ಮಾಡಿ ಅತೀವ ಜನಾಸಕ್ತಿಯನ್ನು ಹುಟ್ಟುಹಾಕಿದ. ಈ ಪರ್ವತದಲ್ಲಿ ಏನಿರಬಹುದು ಎಂದು ಎಲ್ಲರೂ ಕುತೂಹಲಗೊಂಡಿದ್ದರು. ಅನೇಕ ಊಹಾಪೋಹಗಳು ಹುಟ್ಟಿಕೊಂಡಿದ್ದವು. ಅವುಗಳಲ್ಲಿ ಖನಿಜಗಳ ಭಂಡಾರವಿದೆ ಎಂದು ಕೆಲವರು ನಂಬಿದ್ದರೆ, ಇನ್ನು ಕೆಲವರು ಬಂಗಾರದ ಗಣಿಗಳಿವೆ ಎಂದು ಪ್ರಚಾರ ಪಡಿಸಿದರು.

ಈ ಎಲ್ಲಾ ಸಂಗತಿಗಳ ಮೇಲಿನ ರಹಸ್ಯದ ತೆರೆಯನ್ನು ಸರಿಸಲು ಅಮೇರಿಕದ ನ್ಯಾಚುರಲ್ ಹಿಸ್ಟರಿಯ ಸಂಗ್ರಹಾಲಯ 'ಡೋನಾಲ್ಡ್ ಮ್ಯಾಕ್ ಮಿಲನ್' ಎಂಬುವನ ನೇತೃತ್ವದಲ್ಲಿ ಒಂದು ವೈಜ್ಞಾನಿಕ ಅನ್ವೇಷಕ ತಂಡವನ್ನು ೩೦,೦೦೦ ಡಾಲರ್ ಸಹಾಯ ಧನ ನೀಡಿ ಕಳುಹಿಸಿತು. ವಿಶ್ವದಾದ್ಯಂತ ಈ ಅನ್ವೇಷಣೆ ತಂಡದ ಸಮಾಚಾರಗಳು ಅಗ್ರಮಾನ್ಯ ಸ್ಥಾನ ಪಡೆದು ರಾರಾಜಿಸಿದವು. ಫಲಿತಾಂಶಕ್ಕಾಗಿ ಇಡೀ ವಿಶ್ವವೇ ಎದುರು ನೋಡುತ್ತಿತ್ತು.

ಪರ್ವತಗಳು ಇರುವ ಜಾಗವೆಂದು 'ಪಿರಿ' ತಿಳಿಸಿದ ಸ್ಥಳಕ್ಕೆ ತಲುಪಿದ 'ಮ್ಯಾಕ್‌ಮಿಲನ್' ತಂಡಕ್ಕೆ ಅಚ್ಚರಿ ಕಾದಿತ್ತು. ಅಲ್ಲಿ ಪರ್ವತಗಳೇ ಇರಲಿಲ್ಲ. ಇದ್ದದ್ದೆಲ್ಲವೂ ಮಂಜಿನ ಗಡ್ಡೆಗಳು, ಹಿಮ ಚಪ್ಪಡಿಗಳು ಮಾತ್ರ! ಈ ಜಾಗದಲ್ಲಿ ಆಳ ಹಾಗು ವಿಶಾಲವಾದ ಕಣಿವೆ ಇದೆ ಎಂದು ಪಿರಿ ವಿವರಿಸಿದ್ದ. ಆದರೆ ಮ್ಯಾಕ್‌ಮಿಲನ್ ತಂಡಕ್ಕೆ ಇವ್ಯಾವೂ ಗೋಚರಿಸಲೇ ಇಲ್ಲ! ಹಾಗಾದರೆ ಎಲ್ಲಿ ಹೋದವು "ಕ್ರೋಕರ್‌ಲ್ಯಾಂಡ್" ಪರ್ವತಗಳು?.

ಮ್ಯಾಕ್‌ಮಿಲನ್ ತಂಡ ತನ್ನ ಅನ್ವೇಷಣೆಯನ್ನು ಜಾರಿಯಲ್ಲಿಟ್ಟಿತ್ತು. ಕೊನೆಗೂ, ಪರ್ವತಗಳು ಕಂಡುಬಿಟ್ಟವು. ಆದರೆ 'ಪಿರಿ' ತಿಳಿಸಿದ

ಸ್ಥಳದಿಂದ ೨೦೦ ಮೈಲಿ ದೂರದಲ್ಲಿ! ಹಡಗಿನಲ್ಲಿ ಅಲ್ಲಿಗೆ ಪಯಣಿಸಿದ ಮ್ಯಾಕ್‌ಮಿಲನ್‌ನ ತಂಡ ಲಂಗರು ಹಾಕಿ, ಮಂಜಿನ ಮೇಲೆ ಕಾಲ್ನಡಿಗೆಯನ್ನು ಆರಂಭಿಸಿತು. ಪರ್ವತಗಳನ್ನು ಸಮೀಪಿಸುವ ತವಕ ಎಲ್ಲರಿಗೂ ಇತ್ತು. ಆದರೆ ಅಲ್ಲಿ ಆಗುತ್ತಿದ್ದುದೇ ಬೇರೆ. ಇವರು ಪರ್ವತವನ್ನು ಸಮೀಪಿಸಲು ಮುಂದೆ ಹೆಜ್ಜೆ ಇಡುತ್ತಿರುವಂತೆಯೇ, ಪರ್ವತಗಳು ದೂರ ಸರಿಯುತ್ತಿದ್ದವು! ಇಂತಹ ಪರಿಸ್ಥಿತಿಯಲ್ಲಿ ಏನು ಮಾಡುವುದು ಎಂದು ತೋಚದೆ ಇಡೀ ತಂಡವೇ ಸುಮ್ಮನೆ ನಿಂತುಬಿಟ್ಟಿತು. ಪರ್ವತಗಳೂ ನಿಂತುಬಿಟ್ಟವು! ತಂಡ ಪುನಃ ಮುನ್ನಡೆದಂತೆ ಪರ್ವತಗಳೂ ಹಿಂದೆ ಸರಿದವು!.

ಇಡೀ ತಂಡಕ್ಕೆ ಒಂದು ರೀತಿಯ ಛಲ ಬಂತು. ಹೇಗಾದರೂ, ಆ ಪರ್ವತಗಳ ಬಳಿ ತಲುಪಿಯೇ ತೀರಬೇಕೆಂದು, ತಂಡದ ನಡಿಗೆಯ ವೇಗ ದ್ವಿಗುಣವಾಯಿತು. ಮೂರು ಕಡೆಗಳಿಂದ ಪರ್ವತದಿಂದ ಆವೃತವಾಗಿರುವ ಕಣಿವೆಯಂತಿರುವ ಪ್ರದೇಶದಿಂದ ಸಾಗುತ್ತಿರುವ ತಂಡಕ್ಕೆ ಹೊಸ ಹುರುಪು ಬಂತು. ಗೆಲುವಿನ ಕ್ಷಣಗಳು ಇನ್ನೇನು ಬಂದೇಬಿಟ್ಟವು ಎಂದೆನಿಸಿತು. ಪರ್ವತಗಳ ಉತ್ತುಂಗದಲ್ಲಿ ತಾವೆಲ್ಲ ಕೀರ್ತಿ ಪತಾಕೆಯನ್ನು ಹಾರಿಸುವ ಚಿತ್ರಣ ಮನದಲ್ಲಿ ಮೂಡಿದವು. ಆದರೆ ನಿಸರ್ಗ ಇನ್ನೊಂದು ನಿಗೂಢವನ್ನು ಅವರ ಮುಂದಿಟ್ಟು ಅವರೆಲ್ಲರ ಆಸೆಯ ಮೇಲೆ ತಣ್ಣೀರೆರಚಿತು.

ಅತ್ತ ದೂರದಲ್ಲಿ ಸೂರ್ಯ ಮುಳುಗಿಬಿಟ್ಟ, ನೋಡ ನೋಡುತ್ತಿದ್ದಂತೆಯೇ ಇಡೀ ಪರ್ವತ ಹಾಗು ಅಕ್ಕಪಕ್ಕದ ದೃಶ್ಯಗಳು ಗಾಳಿಯಲ್ಲಿ ಕರಗಿಹೋದವು!.

ಎಲ್ಲರೂ ದಂಗು ಬಡಿದವರಂತೆ ನಿಂತುಬಿಟ್ಟರು. ಸುತ್ತಮುತ್ತ ಎಲ್ಲಿ ನೋಡಿದರೂ, ಪರ್ವತಗಳ ಪತ್ತೆಯೇ ಇಲ್ಲ. ಆರ್ಕ್‌ಟಿಕ್‌ನ ಅಂಚಿನಲ್ಲಿ ನಿಂತ ಮ್ಯಾಕ್‌ಮಿಲನ್‌ನ ತಂಡ, ನಿಸರ್ಗ ಆಡಿ ತೋರಿಸಿದ ಭವ್ಯ ನಾಟಕವೊಂದರ ಮೂಕ ಪ್ರೇಕ್ಷಕರಾಗಿದ್ದರು.


ಮರುಭೂಮಿ ಪ್ರದೇಶಗಳಲ್ಲಿಯೂ ಇಂತಹ ಅನೇಕ ಭ್ರಮೆಗಳು ಉಂಟಾಗುತ್ತವೆ. ಮರುಭೂಮಿಯ ಯಾತ್ರಿಕರಿಗೆ ದೂರದಲ್ಲಿರುವ ತಾಳೆ ಮರಗಳು ಎರಡೆರಡಾಗಿ ಒಂದರ ಕೆಳಗೆ ಇನ್ನೊಂದು ಅಂದರೆ ಕನ್ನಡಿಯ ಬಿಂಬ ಪ್ರತಿಬಿಂಬ ಅಂಟಿಕೊಂಡಿರುವಂತೆ ಕಾಣುತ್ತವೆ. ಇದು ಅಲ್ಲಿ ಸರ್ವೇಸಾಮಾನ್ಯ (ಚಿತ್ರನೋಡಿ). ಕೆಲವೊಮ್ಮೆ ನೋಡುವ ದೃಶ್ಯ ಮೂಲವಸ್ತುವಿಗಿಂತ ಭಿನ್ನವಾಗಿರುತ್ತದೆ. ಈ ಬಿಂಬಗಳು ಮೂಲಕ್ಕಿಂತ ಬಹುಪಾಲು ದೊಡ್ಡದಾಗಿಯೂ ಇಲ್ಲವೇ ತೀರಾ ಚಿಕ್ಕದರಂತೆಯೂ ತೋರಬಹುದು. ನಮ್ಮೂರ ಜಾತ್ರೆಗಳಲ್ಲಿ ಕೆಲವೊಮ್ಮೆ ಒಂದು ಕೋಣೆಯಲ್ಲಿ ಹಲವಾರು ಬೇರೆ ಬೇರೆ ರೀತಿಯ ಕನ್ನಡಿಗಳು ಇರುವುದನ್ನು ಗಮನಿಸಿರಬಹುದು. ಅಲ್ಲಿಯ ಪ್ರತಿಯೊಂದು ಕನ್ನಡಿಯಲ್ಲಿ ಇಣಿಕಿದಾಗ ಬೇರೆ ಬೇರೆ ರೀತಿಯ ಬಿಂಬ ಮೂಡುತ್ತದೆ.

ಒಂದು ಕನ್ನಡಿಯಲ್ಲಿ ಸಣಕಲ ಕಡ್ಡಿ ಪೈಲ್ವಾನರಂತೆ ಕಂಡರೆ, ಇನ್ನೊಂದರಲ್ಲಿ

ನಿಗೂಢ ಜಗತ್ತು

ವಲಸೆ ಹೋಗುವ ಕಣ್ಣುಗಳು!

ದಿವ್ಯ ನೇತ್ರಗಳುಳ್ಳ ಮೀನುಗಳಿವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ನಿಜ ಹೇಳಬೇಕೆಂದರೆ ಈ 'ದಿವ್ಯದೃಷ್ಟಿ'ಯಿಂದ ಅವಕ್ಕೆ ಭೂತಕಾಲದ ಇಲ್ಲವೇ ಭವಿಷ್ಯದ ಘಟನೆಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಈ 'ದೃಷ್ಟಿ' ಕೇವಲ ವರ್ತಮಾನದಲ್ಲಿ ಆಹಾರ ಹುಡುಕಿ ಹೊಟ್ಟೆ ತುಂಬಿಸಿಕೊಳ್ಳಲು ನೆರವಾಗುತ್ತದೆ!.



ಕಡಲ ತೀರದ ತಳದಲ್ಲಿ ಕಂಡುಬರುವ ಕೆಲವು ಚಪ್ಪಟೆಯಾಕಾರದ ಮೀನುಗಳು ''ದಿವ್ಯ ನೇತ್ರ'' ಹೊಂದಿರುತ್ತವೆ. ನೆತ್ತಿಯ ಮೇಲೆ ಇರುವ ಈ ನೇತ್ರ ಆಕಾಶವನ್ನು ಸದಾ ದಿಟ್ಟಿಸುವುದರಿಂದ ಇದಕ್ಕೆ ಈ ನಾಮಕರಣ.

ಮೀನುಗಳಿಗೆ 'ಶಿರ'ದ ಎರಡು ಪಕ್ಕಗಳಲ್ಲಿ ಕಣ್ಣಿರುವುದು ನಮ್ಮೆಲ್ಲರಿಗೂ ತಿಳಿದ ವಿಷಯವೇ. ಆದರೆ ಕೆಲವು ಚಪ್ಪಟೆಯಾದ ಮೀನುಗಳಲ್ಲಿ ಎರಡು ಕಣ್ಣುಗಳು ದೇಹದ ಒಂದೇ ಬದಿಯಲ್ಲಿರುತ್ತವೆ!. ಅಂದರೆ ಕಣ್ಣುಗಳು ವಲಸೆ ಹೋಗುತ್ತವೆ ಎಂದರ್ಥ!


ಇದು ಏಕೆ ಹೀಗೆ ಎನ್ನುವುದು ನಮಗೆ ತಿಳಿಯಬೇಕಾದರೆ ಈ ಮೀನುಗಳ ಜೀವನ ಚಕ್ರದ ಬಗ್ಗೆ ತುಸು ಅರಿಯಬೇಕಾಗುತ್ತದೆ; ಈ ಚಪ್ಪಟೆ ಮೀನುಗಳ ಜನ್ಮಸ್ಥಳ ಸಮುದ್ರವಲ್ಲ; ದೊಡ್ಡ ನದಿಗಳಲ್ಲಿ ಜನಿಸುವ ಈ ಮೀನುಗಳು ಮರಿಯಾಗಿದ್ದಾಗ ಇತರ ಎಲ್ಲಾ ಮೀನುಗಳಂತೆ 'ಶಿರ'ದ ಎಡಕ್ಕೊಂದು, ಬಲಕ್ಕೊಂದು ಕಣ್ಣುಗಳನ್ನು ಹೊಂದಿರುತ್ತವೆ. ನೀರಿನ ಪ್ರವಾಹದೊಂದಿಗೆ ಈಜುತ್ತಾ ಸಮುದ್ರ ಸೇರುವ ಈ ಮೀನುಗಳು, ಅಲ್ಲಿ ತಲುಪುವಾಗ ತಮ್ಮ ದೇಹವನ್ನು ಚಪ್ಪಟೆಯಾಗಿ ರೂಪಾಂತರಿಸಿಕೊಂಡ ಪ್ರೌಢಾವಸ್ಥೆಯ ಮೀನುಗಳಾಗಿರುತ್ತವೆ!. ಹೀಗೆ ದೇಹದ ಆಕಾರ ಚಪ್ಪಟೆಯಾದುದರಿಂದ ಅವಕ್ಕೆ ಅನುಕೂಲ ಉಂಟು. ಕಡಲ ತಳದಲ್ಲಿ ತೆವಳಿಕೊಂಡು ಸುಲಭವಾಗಿ ಆಹಾರವನ್ನು ಕಬಳಿಸಬಹುದು. ದೇಹವು ಚಪ್ಪಟೆಯಾದಾಗ, ದೇಹವು ಯಾವ ಕಡೆ ವಾಲಿ ಚಪ್ಪಟೆಯಾಗುವುದು ಎನ್ನುವುದನ್ನು ಅವಲಂಬಿಸಿ, ಕಣ್ಣಿನ ವಲಸೆಯಾಗುತ್ತದೆ. ಚಪ್ಪಟೆಯಾದ ದೇಹದ ಮೇಲ್ಮೈ ಕಪ್ಪುಬಣ್ಣದಾಗಿದ್ದು, ಕೆಳಭಾಗವು ಬಿಳಿಯಾಗುತ್ತದೆ. ಇದರಿಂದ ಇವುಗಳಿಗೆ ವೈರಿಗಳ ವಿರುದ್ಧ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ, ತಳದ ಪರಿಸರದಲ್ಲಿ ಈ ಕಪ್ಪನೆಯ ಚಪ್ಪಟೆಯ ಮೀನುಗಳನ್ನು ಪತ್ತೆ ಹಚ್ಚುವುದು ಕಷ್ಟದ ಕೆಲಸ. ಈ ರೀತಿ ಮೀನು ತನ್ನ ಸಾಮಾನ್ಯ ರೂಪದಿಂದ ಚಪ್ಪಟೆಯಾಕಾರ ಪಡೆದು 'ದಿವ್ಯ ನೇತ್ರ' ಪಡೆಯುವುದು ಸೃಷ್ಟಿಯ ವೈಚಿತ್ರ್ಯವಲ್ಲದೆ ಮತ್ತಿನ್ನೇನು?

ಇಂದಿಗೂ 'ದಿವ್ಯ ನೇತ್ರ'ಗಳ ವಲಸೆ ಏಕೆ ಎಡದಿಂದ ಬಲಕ್ಕೆ ಅಥವಾ ಬಲದಿಂದ ಎಡಕ್ಕೆ ಆಗುತ್ತದೆ ಎಂದು ಖಚಿತವಾಗಿ ತಿಳಿದುಬಂದಿಲ್ಲ. ಇದು ಇಂದಿಗೂ ನಿಗೂಢವಾಗಿಯೇ ಉಳಿದಿದೆ.

ನಿಗೂಢ ಜಗತ್ತು

ಪ್ರಥಮ ವಿಶ್ವ ಯುದ್ಧದ ವೇಳೆಯಲ್ಲಿ ಜರ್ಮನಿಯ ಜಲಂತರ್ಗಾಮಿ ನೌಕೆಯ ಕಮಾಂಡರ್ ಒಬ್ಬ ನ್ಯೂಯಾರ್ಕ್‌ನ ಮೇಲೆ ದಾಳಿ ನಡೆಸುವ ಸಿದ್ಧತೆಯಲ್ಲಿದ್ದಾಗ, ಅವನಿಗೆ ನಗರದ ಎಲ್ಲ ಗಗನಚುಂಬಿ ಕಟ್ಟಡಗಳು ತಲೆ ಕೆಳಗಾಗಿ ನಿಂತತೆ ಕಂಡವು!

ತೊಣಪರಂತೆ ಕಾಣುತ್ತವೆ. ಇದೇ ರೀತಿ ನಿಸರ್ಗದಲ್ಲಿಯೂ ನಡೆಯುತ್ತದೆ. ಇವೆಲ್ಲ 'ಮರೀಚಿಕೆ' ಎಂಬ ವಿದ್ಯಮಾನದ ರೋಚಕ ರೂಪುಗಳು. ಈ 'ಮರೀಚಿಕೆ'ಯಿಂದಾಗಿ ಆರ್ಕಟಿಕ್‌ನಲ್ಲಿ ತೇಲಾಡುವ ಸಣ್ಣ ಹಿಮಚಪ್ಪಡಿಗಳು ಭಯಾನಕ ನೀರ್ಗಲ್ಲುಗಳಂತೆ ಕಂಡರೆ, ತಾಳೆಮರದಷ್ಟು ಎತ್ತರವಾಗಿರುವ ವಸ್ತುಗಳು ಹುಲ್ಲಿನ ಗರಿಯಷ್ಟು ಕುಬ್ಜವಾಗಿ ಕಾಣುವುದು, ದೂರದ ಗುಡಿಸಲು ಭವ್ಯ ಅರಮನೆಯಂತೆ ಕಂಗೊಳಿಸುವುದು ಇವೆಲ್ಲವೂ ದೃಶ್ಯ ಭ್ರಾಂತಿಗಳೇ.



''ಚಂಪಾ'' ಅವರು ಬಂದ್ರೆ, ಸಾಹೇಬರು ಆಫಿಸನಲ್ಲಿಲ್ಲ ಅಂತ ಹೇಳ್ಬಿಡು ರಾಮಣ್ಣ...

'ಮರೀಚಿಕೆ' ಅಥವಾ ದೃಶ್ಯಭ್ರಾಂತಿಗಳು ನಿಸರ್ಗದಲ್ಲಿ ಉಂಟಾಗಲು ವಾತಾವರಣದಲ್ಲಿ ಒಂದು ವಿಶೇಷ ಸ್ಥಿತಿ ನಿರ್ಮಾಣವಾಗಿರಬೇಕು. ಇಂತಹ ವಿಶೇಷ ವಾತಾವರಣದಲ್ಲಿ ಬೆಳಕಿನ ಕಿರಣಗಳು ಬಾಗುವುದರಿಂದ (ವಕ್ರೀಕರಣದಿಂದ) ದೃಶ್ಯಭ್ರಾಂತಿ/ಭ್ರಮೆಗಳು ಉಂಟಾಗುತ್ತವೆ. ಈ ವಿಶೇಷ ವಾತಾವರಣ ಇರುವಾಗ; ಗಾಳಿಯ ಅನೇಕ ಪದರಗಳ ಮೂಲಕ ಬೆಳಕಿನ ಕಿರಣಗಳು ಸಾಗುವಾಗ ಇಲ್ಲವೇ ಹಾಯ್ದು ಹೋಗುವಾಗ ಏನಾಗುತ್ತದೆ ಎನ್ನುವುದನ್ನು ಗಮನಿಸೋಣ.

ಮರುಭೂಮಿಯಲ್ಲಿ ಸೂರ್ಯನ ಶಾಖ ದಿಂದಾಗಿ ಮರಳು ಕಾಯ್ದುಬಿಡುತ್ತದೆ. ಈ ಕಾಯ್ದ ಮರಳಿನ ನಿಕಟ ಸಂಪರ್ಕದಲ್ಲಿರುವ ಗಾಳಿಯ ಪದರವೂ ಬಿಸಿಯಾಗುತ್ತದೆ. ಈ ಬಿಸಿ ಪದರದ ಮೇಲಿನ ಪದರಗಳು ಅಷ್ಟಾಗಿ ಬಿಸಿಯಾಗಿ ರುವುದಿಲ್ಲ. ಅಂದರೆ ಗಾಳಿಯ ಪ್ರತಿಯೊಂದು ಪದರವು ವಿಭಿನ್ನ ಉಷ್ಣತೆ ಹಾಗು ಸಾಂದ್ರತೆಯನ್ನು ಹೊಂದಿರುತ್ತದೆ. ಗಾಳಿಯ ಬಿಸಿಯಾದ ಪದರದ ಮೂಲಕ ಬೆಳಕಿನ ಕಿರಣಗಳು ಸುಲಭವಾಗಿ ಚಲಿಸಿದರೆ, ತಂಪಾಗಿರುವ (ಅಷ್ಟಾಗಿ ಕಾಯ್ದಿರದ) ಪದರಗಳ ಮೂಲಕ ಕಿರಣಗಳು ಚಲಿಸುವುದು ತುಸು ಕಷ್ಟದಿಂದಲೇ. ಬಿಸಿಯಾದ ಪದರದ ಸಾಂದ್ರತೆ ಕಮ್ಮಿ ಇರುವುದರಿಂದ ಬೆಳಕಿನ ಕಿರಣಗಳ ಸಂಚಾರ ಸುಲಲಿತ. ಈ ರೀತಿ ಪದರದಿಂದ ಪದರಕ್ಕೆ ಸಾಗುವ ಬೆಳಕಿನ ಕಿರಣಗಳ ವೇಗದಲ್ಲಿ (Velocity) ವ್ಯತ್ಯಾಸ ಉಂಟಾಗುತ್ತದೆ. ಇದರ ಫಲಸ್ವರೂಪ ಕಿರಣಗಳು ತುಸು ವಕ್ರವಾಗಿ ದಿಸೆ ಬದಲಿಸಿಕೊಂಡು ದೃಶ್ಯ ಭ್ರಮೆಗಳಿಗೆ ಕಾರಣವಾ ಗುತ್ತವೆ.

ಹಿಮ ಪ್ರದೇಶಗಳಲ್ಲಿಯೂ ದೃಶ್ಯಭ್ರಮೆ ಉಂಟಾಗಲು ಬೆಳಕಿನ ಕಿರಣಗಳ ಚಲನೆಯೇ ಕಾರಣ. ಇಲ್ಲಿ ನೋಡುಗನಿಗೆ ವಸ್ತುವಿನ ಪ್ರತಿಬಿಂಬ ತಲೆಕೆಳಗಾಗಿ ಕಾಣುತ್ತವೆ. ಆದ್ದರಿಂದ ಒಂದು ವಸ್ತುವಿನ ಎರಡೆರಡು ಬಿಂಬಗಳೂ ಮೂಡುವುದು ಸಾಧ್ಯ. ಹೀಗಾಗಿ ಪ್ರಶಾಂತವಾದ ಸಮುದ್ರದಲ್ಲಿ ತೇಲುತ್ತಿರುವ ಹಡಗಿನ ಕೆಳಗೆ ಕನ್ನಡಿಯಲ್ಲಿ ಮೂಡಿದಂತಹ ಬಿಂಬ ಮೂಡಿ. ನೋಡುಗನಿಗೆ ಎರಡೆರಡು ಹಡಗು ಕಂಡು ಬರುವುದು.

ಪ್ರಥಮ ವಿಶ್ವ ಯುದ್ಧದ ವೇಳೆಯಲ್ಲಿ ಜರ್ಮನಿಯ ಜಲಂತರ್ಗಾಮಿ ನೌಕೆಯ ಕಮಾಂಡರ್ ಒಬ್ಬ ನ್ಯೂಯಾರ್ಕ್‌ನ ಮೇಲೆ ದಾಳಿ ನಡೆಸುವ ಸಿದ್ಧತೆಯಲ್ಲಿದ್ದಾಗ, ಅವನಿಗೆ ನಗರದ ಎಲ್ಲ ಗಗನಚುಂಬಿ ಕಟ್ಟಡಗಳು ತಲೆ ಕೆಳಗಾಗಿ ನೀರಿನ ಮೇಲುಗಡೆ ನೇತಾಡುತ್ತಿರುವಂತೆ ಕಂಡು ಬರಲು, ಭಯಭೀತನಾಗಿ ಜಾಗ ಖಾಲಿ ಮಾಡಿದನಂತೆ. ದೃಶ್ಯಭ್ರಮೆಯಿಂದ ನ್ಯೂಯಾರ್ಕ್ ಉಳಿಯಿತು!.

ದೃಶ್ಯ ಭ್ರಮೆಗಳ ಪೈಕಿ ಅತ್ಯಂತ ಭವ್ಯ ಹಾಗೂ ನಿಗೂಢವಾದುದೆಂದರೆ ಇಟಲಿ ಮತ್ತು ಸಿಸಿಲಿಯ ನಡುವಣ ಮೆಸ್ಸಿನಾ ಜಲಸಂಧಿಯಲ್ಲಿ ಕಂಡ 'ಫಾಟ ಮಾರಗನ್' ದೃಶ್ಯಭ್ರಮೆ. ಇದೆಂತಹ ಅದ್ಭುತ ಹಾಗೂ ಆಶ್ಚರ್ಯ ಹುಟ್ಟಿಸುವ 'ಭ್ರಾಂತಿ' ಎಂದರೆ, ಇಲ್ಲಿ ನೆಟ್ಟಗಾದ, ತಲೆಕೆಳಗಾದ ದೊಡ್ಡದಾದ, ವಿರೂಪವಾದ, ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಈ ರೀತಿ ಬೇರೆ ಬೇರೆ ಸಾಧ್ಯತೆಯ ಹಾಗು ನಾವು ಊಹಿಸಲು ಸಾಧ್ಯವಿರದ ರೀತಿಯ ಬಿಂಬಗಳು ಉಂಟಾಗುತ್ತವೆ. 'ಮೆಸ್ಸಿನಾ ಜಲ ಸಂಧಿ' ಮೇಲಿರುವ ಗಾಳಿಯು ಬಿಸಿಯಾಗಿದ್ದು ನೀರು ಪ್ರಶಾಂತವಾಗಿರುವಾಗ ಮತ್ತು ಆಕಾಶದಲ್ಲಿ ಭೂತಾಕೃತಿಯ ಮೋಡಗಳಿರುವಾಗ, ಬಾನಿನಲ್ಲಿ ದೊಡ್ಡ ನಗರವೊಂದು ಕಂಗೊಳಿಸುತ್ತದೆ. ಸ್ವಲ್ಪ ಕ್ಷಣದ ನಂತರ ಇನ್ನೊಂದು ನಗರ ಅದರ ಮೇಲೆ ಮೂಡುತ್ತದೆ. ಇನ್ನೊಂದು ಕ್ಷಣದ ನಂತರ ಮೂರನೆಯ ನಗರ ಹೀಗೆ ಒಂದರ ಮೇಲೊಂದರಂತೆ ನಗರಗಳೂ ಕಾಣಿಸತೊಡಗಿ, ನೋಡುಗ ಬೆಕ್ಕಸಬೆರಗಾಗುತ್ತಾನೆ. ದೂರದ ತೀರದಲ್ಲಿರುವ ಮರ ಹಾಗು ಕಲ್ಲು ಬಂಡೆಗಳ ವಿರೂಪವಾದ ಪ್ರತಿ ಬಿಂಬಗಳು ಇವು ಎಂದು ಕೆಲವರು ವಾದಿಸಿದರೆ, ಇನ್ನು ಕೆಲವರು ಇಟಲಿಯ ಚಿಕ್ಕ ಹಳ್ಳಿಯೊಂದರ ಪ್ರತಿಬಿಂಬವೇ ಈ ದೃಶ್ಯಭ್ರಾಂತಿಗೆ ಕಾರಣವೆಂದು ನಂಬುತ್ತಾರೆ. ಯಾರು ಏನೇ ಹೇಳಲಿ ಒಟ್ಟಿನಲ್ಲಿ ಆಕಾಶದಲ್ಲಿ ಮೂಡುವ 'ಫಾಟ ಮಾರಗನ್' ನ ಮೂಲಕ ನಿಸರ್ಗವು ತನ್ನ ನಿಗೂಢತೆಯ ರಮಣೀಯತೆ ಯನ್ನು ಹಬ್ಬದಂತೆ ಕಣ್ಣಲ್ಲಿ ಮೂಡಿಸುತ್ತದೆ.

●

ಮುಂದಿನ ಸಂಚಿಕೆಯಲ್ಲಿ

ಭಯಾನಕ ತಲೆ ಬುರುಡೆಗಳ ರಹಸ್ಯ!

ಓದಲು ಮರೆಯಬೇಡಿ

ದೀರ್ಘಾಯುಷ್ಯಕ್ಕೆ ಅಧಿಕ ಸೆಕ್ಸ್

ಬ್ರಿಟನ್ನಿನ ವೈದ್ಯಕೀಯ ಪತ್ರಿಕೆಯೊಂದರಲ್ಲಿ ಅಚ್ಚರಿಯ ಸುದ್ದಿಯೊಂದು ಪ್ರಕಟವಾಗಿದೆ. ಸುದೀರ್ಘ ಸಂಶೋಧನೆಯ ನಂತರ ಪ್ರಕಟಗೊಂಡಿರುವ ಈ ವರದಿಯ ಪ್ರಕಾರ ಲೈಂಗಿಕ ಕ್ರೀಡೆಯಲ್ಲಿ ಅಧಿಕವಾಗಿ ತೊಡಗುವವರು ಕಡಿಮೆ ಲೈಂಗಿಕಾಸಕ್ತರಿಗಿಂತ ಹೆಚ್ಚು ಕಾಲ ಬಾಳುತ್ತಾರೆ!

೪೫ ರಿಂದ ೫೯ರ ವಯೋಮಾನದ ೯೧೮ ಪುರುಷರ ಲೈಂಗಿಕ ಜೀವನಕ್ರಮ ಹಾಗೂ ಆರೋಗ್ಯವನ್ನು ಪರೀಕ್ಷೆಗೊಳಪಡಿಸಿದ ಸಂಶೋಧಕರು ಅಂತಿಮವಾಗಿ ಈ ತೀರ್ಮಾನಕ್ಕೆ ಬಂದಿದ್ದಾರೆ.

ಈ ಸಂಶೋಧಕರ ಪ್ರಕಾರ ವಾರಕ್ಕೆ ಕನಿಷ್ಟ ಎರಡು ಬಾರಿ ಸಂಭೋಗ ನಡೆಸುವ ಪುರುಷರ ಮರಣ ಪ್ರಮಾಣವು ತಿಂಗಳಿಗೆ ಒಂದು ಸಾರಿ ರತಿ ಕ್ರೀಡೆಗಿಳಿಯುವವರಿಗಿಂತ ಅರ್ಧದಷ್ಟು ಕಡಿಮೆ!

ಗಂಡು ಗ್ಯಾರಂಟಿ

ಗಂಗಾವತಿಯಲ್ಲಿರುವ ನಮ್ಮ ಮನೆತನದ ಹೆಸರು ''ಬೇವಿನಹಾಳ್'' ಎಂದು ನಮ್ಮ ಮನೆತನದ ವೈಶಿಷ್ಟ್ಯವೆಂದರೆ ಮದುವೆಯಾದ ಗಂಡುಮಕ್ಕಳಿಗೆ ಅವರ ಚೊಚ್ಚಲು ಸಂತಾನ ಗಂಡೇ ಹುಟ್ಟುವುದು! ಯಾವ 'ಸ್ಕ್ಯಾನಿಂಗ್' ಪರೀಕ್ಷೆಯ ಅವಶ್ಯಕತೆ ಇಲ್ಲದೆಯೂ ಈ ಮನೆತನದ ಸೊಸೆ ಗಂಡೇ ಹಡೆಯುತ್ತಾಳೆಂಬುದು ಎಲ್ಲರ ಅಭಿಮತ. ಇದು ಏಳು ತಲೆಗಳಿಂದ ಅನೂಚಾನವಾಗಿ ನಡೆದು ಬಂದಿರುವ ಪದ್ಧತಿ. ಸೋಜಿಗವೆಂದರೆ ನಮ್ಮ ಮನೆಯಲ್ಲಿ ಕಟ್ಟಿದ್ದ ಆಕಳು ಕೂಡಾ ತನ್ನ ಮೊದಲ ಹೆರಿಗೆಯಲ್ಲಿ ಹೋರಿ ಕರುವನ್ನು ಹಾಕುತ್ತಾ ಬಂದು ಈ ವೈಶಿಷ್ಟ್ಯದ ಜೊತೆಗೆ ಸೋಜಿಗವನ್ನೂ ಬೆರೆಸಿದೆ.

- ಬಿ. ಪ್ರಾಣೇಶ್, ಗಂಗಾವತಿ

ಯುವತಿ ಯಾಕಿಲ್ಲ?

ಒಮ್ಮೆ ಗೌರವಾನ್ವಿತ ವ್ಯಕ್ತಿಯೊಬ್ಬರು ಚಳ್ಳಕೆರೆಯಲ್ಲಿ ಭಾಷಣ ಮಾಡುತ್ತ ''ಯುವಕರು ಮುಂದೆ ಬರಬೇಕು'' ಎಂದರು. ಇದರಿಂದ ನನಗೆ ಬಹಳ ಕೋಪ ಬಂತು, ನೋವುಂಟಾಯಿತು. ಈ ಮಹಾಶಯರು ಎಲ್ಲರನ್ನೂ ತಿದ್ದುವ ದೊಡ್ಡ ಹುದ್ದೆಯಲ್ಲಿರುವವರು (ಪತ್ರಿಕೆ ಸಂಪಾದಕರು!). ಇಂತಹವರೇ ಯುವತಿಯರನ್ನು ನಿರ್ಲಕ್ಷಿಸಿ ಯುವಕರಿಗೆ ಒತ್ತುಕೊಟ್ಟಿದ್ದು ನನಗೆ ಆಶ್ಚರ್ಯ ಮೂಡಿಸಿತು.

ಇಂಗ್ಲಿಷ್‌ನಲ್ಲಾದರೆ Youth ಎಂಬ ಶಬ್ದ ಯುವ ಜನಾಂಗವನ್ನು ಪ್ರತಿನಿಧಿಸುತ್ತದೆ. ಆದರೆ ಕನ್ನಡದಲ್ಲಿ ಯುವತಿ, ಯುವಕ ಎಂಬ ಪ್ರತ್ಯೇಕ ಪದಗಳಿವೆ. ಈ ಬಗ್ಗೆ ಅವರನ್ನು ವಿಚಾರಿಸಿದಾಗ, 'ಯುವಕರು ಎಂದರೆ ೧೮ ರಿಂದ ೪೦ ವರ್ಷದೊಳಗಿನ ಎಲ್ಲರೂ ಬರುತ್ತಾರೆ' ಎಂದರು. ಇದನ್ನು ಕೇಳಿ ಇನ್ನು ಆಶ್ಚರ್ಯವಾಯ್ತು.

ಓದುಗರಲ್ಲಿ ನನ್ನ ಒಂದೇ ಒಂದು ಅರಿಕೆಯೆಂದರೆ ನೀವಾದರೂ ಈ ರೀತಿಯ ಪಕ್ಷಪಾತ ಮುಂದುವರಿಸಬೇಡಿ; ಯುವಕ-ಯುವತಿಯರು ಎಂದೇ ಬಳಸಿ.

- ಬಿ.ಎಂ. ನಾಗರತ್ನ, ಚಳ್ಳಕೆರೆ

ಅನಾಥಗ್ರಾಮ

ನಾನು ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕಿನ ತೆಗ್ಗಿ ಗ್ರಾಮದ ನಿವಾಸಿ. ನಮ್ಮ ಗ್ರಾಮದಲ್ಲಿ ೪೦೦ ಮನೆಗಳು ಎರಡು ಸಾವಿರ ಜನ ಸಂಖ್ಯೆ ಇದೆ. ಬಾದಾಮಿಯಿಂದ ೧೫ ಕಿ.ಮೀ., ಗುಳೇದಗುಡ್ಡದಿಂದ ೧೦ ಕಿ.ಮೀ. ದೂರದಲ್ಲಿರುವ ಈ ಗ್ರಾಮಕ್ಕೆ ಬಸ್ಸು ಬರುವುದಿಲ್ಲ. ನಮ್ಮೂರು ಸಾರಿಗೆ ವಂಚಿತ ಗ್ರಾಮ. ಅಧಿಕಾರಿಗಳು ಇತ್ತ ಗಮನ ಹರಿಸುವರೇ?

- ಹೆಚ್.ಆರ್. ಕಡಿವಾಲ, ತೆಗ್ಗಿ

ಭಾನುವಾರದ ಬಸ್ಸು!

ನನ್ನೂರು ಸೋಮಲಾಪುರ. ಇಲ್ಲಿಂದ ವಿದ್ಯಾರ್ಥಿಗಳು ಓದಲು ಪಕ್ಕದ ಕುರುಗೋಡಿಗೆ ಹೋಗಬೇಕು. ಬೆಳಿಗ್ಗೆ ೮.೩೦ಕ್ಕೆ ಕುರುಗೋಡು ಮಾರ್ಗದಿಂದ ನಮ್ಮೂರಿಗೆ ಬಂದುಹೋಗುವ ಬಸ್ 'ಶಾಲೆ ಬಸ್ಸು' ಎಂದೇ ಪ್ರಖ್ಯಾತ, ಆದರೆ ಈ ಶಾಲೆ ಬಸ್ಸು ಬರುವುದೋ ಇಲ್ಲವೋ ಎಂಬುದು ವಿದ್ಯಾರ್ಥಿಗಳ ನಿತ್ಯದ ಆತಂಕ. ಏಕೆಂದರೆ ಒಂದು ದಿನ ಬಂದರೆ ಮತ್ತೆರಡು ದಿನ ಬರುವುದೇ ಇಲ್ಲ. ಇದರ ವಿಶೇಷದ ವಿಪರ್ಯಾಸವೆಂದರೆ ಈ ಶಾಲೆ ಬಸ್ಸು ಭಾನುವಾರ ಮಾತ್ರ ತಪ್ಪದೇ ಬಂದು ವಿದ್ಯಾರ್ಥಿಗಳನ್ನು ಅಣಕಿಸುತ್ತಾ ಹೋಗುವುದು.

- ಮಾರೆಣ್ಣ ಬಾವಿಕಟ್ಟೆ,
ಸೋಮಲಾಪುರ

ಬಾವೂರು

ಮುದ್ದೇಬಿಹಾಳ ತಾಲೂಕಿನ ಪುಟ್ಟ ಗ್ರಾಮ 'ಬಾವೂರು'. ಮೂರ್ತಿ ಚಿಕ್ಕದಾದರೂ ಕೀರ್ತಿದೊಡ್ಡದೆನ್ನುವಂತೆ ಪುಟ್ಟ ಗ್ರಾಮ ಹಲವು ಕಲೆಗಳನ್ನು, ಸಾಂಸ್ಕೃತಿಕ ನೆಲೆಗಳನ್ನು ಮೈಗೂಡಿಸಿಕೊಂಡಿದೆ.

೬೩ ಪುರಾತನ ಶರಣರಲ್ಲಿ ಒಬ್ಬರೆನಿಸಿದ ಶ್ರೀ ಬ್ರಹ್ಮಲಿಂಗೇಶ್ವರ ಈ ಊರಿನ ಆರಾಧ್ಯ ದೈವ. ಶ್ರೀ ಶರಣ ಬ್ರಹ್ಮಲಿಂಗೇಶ್ವರ ಜಾತ್ರೆಯು ಶ್ರಾವಣ ಕೊನೆಯ ಸೋಮವಾರ ಮತ್ತು ಮಹಾಶಿವರಾತ್ರಿಯ ಅಮವಾಸ್ಯೆಯ ದಿನದಂದು ವಿಜೃಂಭಣೆಯಿಂದ ನಡೆಯುತ್ತದೆ.

ಇತಿಹಾಸ ಪ್ರಸಿದ್ಧ ಬ್ರಹ್ಮಲಿಂಗೇಶ್ವರ ದೇವಾಲಯದಲ್ಲಿ ಒಂದು ಶಿಲಾಶಾಸನ ಇದ್ದು ಪುರಾತತ್ವ ಇಲಾಖೆಯವರು ಮತ್ತು ಅಧಿಕಾರಿಗಳು ಇತ್ತ ಗಮನಹರಿಸಿಲ್ಲ. ಊರಿನ ಜನರ ನಿರ್ಲಕ್ಷ್ಯದಿಂದಲೂ ದೇಗುಲ ಜೀರ್ಣಾವಸ್ಥೆಗೆ ತಲುಪಿದೆ.

ಜನಪದ ಕಲೆಯಾದ ಬಯಲಾಟ, ಕರಡಿಮಜಲು, ಕರಕುಶಲ ಕಲೆಯಾದ ಸೀರೆ ನೆಯ್ಗೆಯ ಕುಸುರಿ ಕೆಲಸ - ಇಷ್ಟೆಲ್ಲಾ ಕಲೆಯ ಬೀಡಾಗಿರುವ ನನ್ನೂರಿಗೆ ಸರಿಯಾದ ಬಸ್ಸಿನ ವ್ಯವಸ್ಥೆ ಮತ್ತು ಗ್ರಂಥಾಲಯದ ವ್ಯವಸ್ಥೆ ಇಲ್ಲ.

-ಸರೋಜ ಶಿ.ಹಡಪದ, ಬಾವೂರು

ನೀರು ನಿಲ್ದಾಣ

ಬಸವನ ಬಾಗೇವಾಡಿ ಬಿಜಾಪುರ ಜಿಲ್ಲೆಗೆ ಸೇರಿದ ತಾಲೂಕಾಗಿದ್ದು ಇಲ್ಲಿ ಜಗಜ್ಯೋತಿ ಬಸವೇಶ್ವರರು ಜನ್ಮ ತಾಳಿದ್ದಾರೆ. ಆದರೆ ಈ ಗ್ರಾಮದಲ್ಲಿನ ಬಸ್ ನಿಲ್ದಾಣದಲ್ಲಿ ಕಾಲಿಟ್ಟು ಕಣ್ಣಾಡಿಸಿದರೆ ನಿಲ್ದಾಣದ ತುಂಬ ಬರೇ ತಗ್ಗುಗಳೇ ಇವೆ. ಮಳೆ ಬಂದಾಗ ನಿಲ್ದಾಣದ ತುಂಬಾ ನೀರೇ ಕಾಣುತ್ತದೆ. ಆಗ ಇದು ಬಸ್ ನಿಲ್ದಾಣವಲ್ಲ ನೀರು ನಿಲ್ದಾಣವೆಂದು ಸ್ಪಷ್ಟವಾಗುತ್ತದೆ. ಮೇಲಾಧಿಕಾರಿಗಳೆಲ್ಲ ಇಲ್ಲಿ ಸುತ್ತಾಡುತ್ತಿದ್ದರೂ ಸಹ ಯಾರಿಂದಲೂ ಪರಿಹಾರ ಕಾಣದೆ ತೊಳಲಾಡುತ್ತಿದೆ ಬಸವನ ಬಾಗೇವಾಡಿ ಬಸ್ ನಿಲ್ದಾಣ.

-ಕಲಾವಿದ ಶಿವಪುತ್ರ, ಹುಣಶ್ಯಾಳ

ತಿರುಗಿ ನೋಡದ ಶಾಸಕ

ನನ್ನೂರಿನಲ್ಲಿ ೨೦೦ ರಿಂದ ೩೦೦ ಮನೆಗಳಿವೆ. ಇದು ಸಿಂದಗಿ ತಾಲೂಕಿನಲ್ಲಿದೆ. ಆದರೆ ನನ್ನೂರಿನ ಮತಕ್ಷೇತ್ರ ಇಂಡಿಗೆ ಸಂಬಂಧಿಸಿದೆ. ನಮ್ಮಿಂದ ಮತಗಳನ್ನು ಗಳಿಸಿ ಆಯ್ಕೆಯಾಗಿ ಹೋದ ಶಾಸಕರು ಮತ್ತೆ ನಮ್ಮೆಡೆಗೆ ಗಮನ ಹರಿಸುವುದಿಲ್ಲ.

ನಮ್ಮೂರಿನ ಶಾಲೆಯಲ್ಲಿ ೨೫೦ ರಿಂದ ೩೦೦ವರೆಗೆ ವಿದ್ಯಾರ್ಥಿಗಳಿದ್ದಾರೆ. ಇಷ್ಟೂ ವಿದ್ಯಾರ್ಥಿಗಳಿಗೆ ಕೇವಲ ನಾಲ್ಕು ಜನ ಶಿಕ್ಷಕರಿದ್ದಾರೆ. ಇದರ ಬಗ್ಗೆ ಯಾರೂ ಲಕ್ಷ್ಯ ವಹಿಸಿಲ್ಲ. ಸಂಬಂಧಪಟ್ಟವರು ಈ ಶಾಲೆಯ ಶಿಕ್ಷಕರ ಕೊರತೆಯನ್ನು ನಿವಾರಿಸುತ್ತೀರೆಂದು ನಂಬಿರುತ್ತೇನೆ.

-ಶ್ರೀಶೈಲ ಗೋ.ಬಿರಾದಾರ
ಭಂಟನೂರು

ಈ ಸಂಸದರ ಮಗಳ ಬೆಲೆ ೫೦೦ ಪೌಂಡ್!

ಆಕೆಯ ಹೆಸರು ಕರೋಲಿನ್ ಬೋಸ್‌ವೆಲ್. ಹತ್ತೊಂಬತ್ತರ ಹರೆಯದ ಈ ಕಿಶೋರಿ ಇಂಗ್ಲೆಂಡಿನ ಹಿರಿಯ ಸಂಸದರ ಮಗಳು. ಈಕೆ ಉನ್ನತ ಮಟ್ಟದ ವೇಶ್ಯೆಯಾಗಿ ಹಣ ಗಳಿಸುವ ಕ್ರಿಯೆಯಲ್ಲಿ ನಿರತಳಾಗಿದ್ದಾಳೆಂದರೆ ನೀವು ನಂಬುವಿರಾ?

'ನ್ಯೂಸ್ ಆಫ್ ವರ್ಲ್ಡ್' ಪತ್ರಿಕೆಯ ವಿಸ್ತೃತ ವರದಿಯಂತೆ ಈಕೆ ಮೈ ಮಾರಿಕೊಳ್ಳುವುದು ನಿಜ. ಆದರೆ ಅಗ್ಗದ ಬೆಲೆಗಲ್ಲ! ಈ ಹುಡುಗಿಯೊಂದಿಗೆ ಒಂದು ರಾತ್ರಿ ಕಳೆಯಲು ೫೦೦ ಪೌಂಡ್ ಕಕ್ಕಬೇಕಾಗುತ್ತದೆ.

ಮನೆ ಎಂದರೆ... ಏನು?

ಮನೆ ಕುರಿತು ಓದುಗರು ಕಳುಹಿಸಿದ ವಿವಿಧ ವ್ಯಾಖ್ಯಾನಗಳು ಇಲ್ಲಿವೆ.

ದಿನನಿತ್ಯದ ಊಟಕ್ಕೆ, ಮಲಗುವುದಕ್ಕೆ ಇರುವ ಶಾಶ್ವತ ಸ್ಥಳ.

- ಎಂ.ಎಸ್. ಸುಚೇತ, ಬೆಂಗಳೂರು

ಬಿಸಿಲು, ಮಳೆ, ಚಳಿ, ಗಾಳಿಗಳಿಂದ ರಕ್ಷಿಸಿಕೊಂಡು ಬಾಳಲು ಮನುಷ್ಯ ನಿರ್ಮಿಸಿಕೊಂಡ ಗೃಹ.

- ಕೆ.ಎಸ್. ಜ್ಯೋತಿ, ಕೊಪ್ಪ

ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸುವ ಸಂಕೇತ.

- ವೈ. ಸುರೇಶ್‌ಕುಮಾರ್, ಬೆಂಗಳೂರು

ಸಾವಿರುವ ಗೂಡು.

- ಅನಿತಾ ಡಂಬಳ, ಕಲಾದಗಿ

ನೆಮ್ಮದಿಯಿಂದ ಜೀವನ ಸಾಗಿಸಲು ಇರುವ ಯೋಗ್ಯ ನೆಲೆ.

- ಸುಮಿತ್ರ ಆರೇಗರ್, ಹಿರೇಜಂತಕಲ್

ಯಶಸ್ವಿ ಜೀವನಕ್ಕೆ ಸ್ಫೂರ್ತಿ ನೀಡುವ ನೆಲೆ.

- ಜಿ. ಶಿವಪ್ರಕಾಶ್, ಬಳ್ಳಾರಿ

ಮನೆ ಎಂದರೆ ನಾಲ್ಕು ಗೋಡೆಗಳು!

- ಕೆ.ಜಿ.ಎನ್. ನಾಗರಾಜ, ಕೊಂಡಜ್ಜಿ

ಸುಖಿ, ದುಃಖಿ, ಮುಗ್ಧ ಮಕ್ಕಳೆಲ್ಲಾ ತಹತಹಿಸಿ ಹುಡುಕಿ ಬರುವ ನೆಲೆ.

- ಕೆ.ಎಂ. ಮಲ್ಲಿಕಾರ್ಜುನ, ಹೂವಿನ ಹಡಗಲಿ

ಒಂದು ಸಮಾಜ ಸರ್ವಾಂಗ ಸುಂದರವಾಗಿ ರೂಪುಗೊಳ್ಳಲು ಆನಂದಮಯ ಜೀವನ ನಿರಾತಂಕವಾಗಿ ಸಾಗಲು ಅವಶ್ಯವಿರುವ ಗುಣಗಳನ್ನು ಕಲಿಸುವ ಶಾಲೆ.

- ಕೆ.ಎಮ್. ಶ್ವೇತ, ಕುಂದಾಪುರ

ಪರಿಪೂರ್ಣ ವ್ಯಕ್ತಿತ್ವ ಹಾಗೂ ಸಾಮೂಹಿಕ ಹಿತ ಸಾಧನೆಯ ಕರ್ಮಭೂಮಿ.

- ದರ್ಶನ್ ಎಸ್. ಬೆಂಗಳೂರು

ದೇಶದ ಅತ್ಯುತ್ತಮ ಪ್ರಜೆಗಳಿಗೆ ತರಬೇತಿ ನೀಡುವ ಕೇಂದ್ರ.

- ಎಂ. ಸಿದ್ದು, ಮಂಗಳೂರು

" ಈ ಜೀವಾತ್ಮನ ತೆರದಿ ಕುಟಿಲಗಳ, ರಾಗ ದ್ವೇಷಗಳ ಹೊತ್ತ- ಆದರೆ ಕಳೆವ ದೇವಾಲಯ!"

- ಹೆಚ್.ಆರ್. ಮುರಳೀಧರ, ಹೆಗ್ಗೆರೆ

ಒಂದು ಧಾರಾವಾಹಿಯ ಹೆಸರು.

- ಯು.ಎಸ್. ಪರಶುರಾಮ, ಬೆಂಗಳೂರು

ಮನೆ - ಬಹುಮಾನ ವಿಜೇತರು

ಕರ್ನಾಟಕದ ಎಲ್ಲೆಡೆ ತೀವ್ರ ಕುತೂಹಲ ಕೆರಳಿಸಿರುವ ಈ ಪ್ರಶ್ನೆಯ ಸರಿಯಾದ ಉತ್ತರ :

ಮನೆ ಎಂದರೆ ಒಂದು ಮಾಸ ಪತ್ರಿಕೆ

ಈ ಪ್ರಶ್ನೆಗೆ ಸರಿಯಾದ ಉತ್ತರ ಕಳಿಸಿದ ಈ ಕೆಳಗಿನ ನಾಲ್ಕು ಜನರಿಗೆ ಬಹುಮಾನ ಮೊತ್ತವಾದ ರೂ. ೫೦೦ನ್ನು ಸಮವಾಗಿ ಹಂಚಲಾಗಿದೆ.

- **ಸುಶೀಲ ರಾಜಶೇಖರ**
  ೧೯೧೦, ೨ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ, **ಬೆಂಗಳೂರು** - ೫೬೦ ೦೬೦
- **ಎಸ್.ಮಹೇಶ್‌ಕುಮಾರ್**
  ರೈತ ಸಂಘದ ಸಂಚಾಲಕರು, ಮುಸುಕಲೋಜ, ಮಂಜಲಗೆರೆ - ೫೭೨ ೧೪೩
  ಶಿರಾ ತಾಲೂಕು ತುಮಕೂರು ಜಿಲ್ಲೆ
- **ಆಶಾ ಎ. ಕಾಂಬಳೆ**
  ಇ/ಮ ಎ.ಟಿ. ಕಾಂಬಳೆ, ಮೇಗಳಪೇಟೆ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ
- **ಸಂಗಮೇಶ ಮೇಟಿ**
  ಇ/ಮ ದೇವೇಂದ್ರಪ್ಪ ಕಮ್ಮಾರ,
  ಭಗತ್‌ಸಿಂಗ್ ಸರ್ಕಲ್, ಸರ್ದಾರ ಓಣಿ, ಸಾಲಾರ ಜಂಗ್ ರೋಡ್, **ಕೊಪ್ಪಳ**

ವಾಣಿಜ್ಯವೇ ಮನೆಯ ಸೊಬಗು
ವಿಕಾಸವೇ ಮನೆಯ ಸುಖ
ಮಾಹಿತಿಯೇ ಮನೆಯ ವೈಭವ
ಸಂಪರ್ಕವೇ ಮನೆಯ ಕೇಶ
ಓದುಗನೇ ಮನೆಯ ಯಜಮಾನ

- ಎಚ್. ಚನ್ನಬಸಪ್ಪ, ಯಾದಗಿರಿ

ಮನೆ ಎಂದರೆ ಮೊದಲ ಪಾಠಶಾಲೆ.

- ಮೊಹಮ್ಮದ್ ನಜೀರುದ್ದೀನ್, ಕನಕಗಿರಿ

ಬಿಸಿಲು ಕುದುರೆಯನ್ನು ಏರದೆ ರಾಜಕೀಯದ ಉರಿಬಿಸಿಲಿನಲ್ಲಿಯೂ ಸುಸಂಸ್ಕೃತ ಬದುಕನ್ನು ನಡೆಸುವ ಪರಿವಾರ.

- ಇ. ಪದ್ಮಾವತಿ, ಸಿಂಧನೂರು

ನೋವು, ನಲಿವುಗಳ ಬಚ್ಚಿಟ್ಟ ರಹಸ್ಯವಾದ ಒಡಲು.

- ಉಷಾ ಕೆ.ಸಿ., ಆತವಾಡಿ

ಮನಗಳೆಲ್ಲಾ ಒಂದಾಗಿ ಬೆರೆತು ಬಾಳುವ ಜಗವೇ ಮನೆ.

- ಸುಷ್ಮಾ ಕಾರಂತ, ಕೋಣಿ, (ಕುಂದಾಪುರ)

ಪರಸ್ಪರ ಪ್ರೀತಿ, ವಿಶ್ವಾಸ, ಸಹಮತ, ತುಂಬಿರುವ ಮನುಷ್ಯರ ತಾಣ

- ಸುಜಾತ ಅವಂಟಿ, ಮಸ್ಕಿ

ಬುದ್ಧಿವಂತರು, ಜ್ಞಾನವಂತರು, ತತ್ವಜ್ಞಾನಿಗಳನ್ನು ದೇಶಕ್ಕೆ ಒದಗಿಸುವ ನೆಲೆ ಬೀಡು.

- ಯಶೋಧ ಪಿ. ವೈ., ಕೂಡ್ಲಿಗಿ

ಬಿಸಿಲ ಬದುಕಿಗೆ ಮೇಲ್ಛಾವಣಿ.

- ಎನ್. ಸುಬ್ರಹ್ಮಣ್ಯ, ಹರಿಹರ

ತ್ರಿಕಾಲಗಳ ಸಾರ್ಥಕ ನೆಲೆ.

- ಶಿವಪ್ಪ ಹುರುಳಿಹಾಳ, ವರಕನಹಳ್ಳಿ

ಮನುಷ್ಯನಿಗೆ ಶಾಂತಿ-ವಿಶ್ರಾಂತಿ ಕಲ್ಪಿಸುವ ಗೂಡು.

- ಎಂ. ಸುಂದ್ರೇಶ್, ಮಳವಳ್ಳಿ

ಭಾವನೆಗಳನ್ನು ಅರಿತು ಬಾಳುವುದು.

- ಜಿ. ರುದ್ರೇಶ್, ಜೋಡುಗಟ್ಟೆ

ಪ್ರತಿಯೊಬ್ಬನು ತನ್ನದೇ ಆದ ಕುಟುಂಬವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಕಟ್ಟಿಕೊಂಡಿರುವ ಕೋಟೆ.

- ವಿದ್ಯಾ ಕೆ. ಎಲ್ಲೂರ್, ಮುಂಡರಗಿ

ಒಂದು ಸಂಸಾರ ಕೂಡಿ ಬಾಳುವೆ ಮಾಡುವ ಸ್ಥಾನ.

- ಜಿ.ಹೆಚ್. ವಿಜಯಲಕ್ಷ್ಮಿ, ಗುಬ್ಬಿ

ಒಂದೇ ಕುಟುಂಬದ ಅನೇಕ ಸದಸ್ಯರ ಆಶ್ರಯ ತಾಣ.

- ಶಾಕುಂತಲಾ ಪ್ರತಾಪ್, ಬೆಂಗಳೂರು

ಬದುಕಿನ ನೆರಳು.

- ಶಿವಲಿಂಗ ವಿ. ಸಿದ್ನಾಳ, ಹಂದಿಗುಂದ

ಸಂತೃಪ್ತಿಯ ತಾಣ.

- ರಾಮಕೃಷ್ಣ ಎನ್. ನಾಯಕ್, ಹಿರೇಗುತ್ತಿ

ಬಿಸಿಲ ಬದುಕಿನ ಅಂಚೆ ಪೆಟ್ಟಿಗೆ.

- ರೇಖಾ ಎಂ. ಕೆ., ಕಲ್ಮನೆ

ಸಹಬಾಳ್ವೆಯಿಂದ ಜೀವನ ನಡೆಸಲು ಬೇಕಾಗುವ ವ್ಯವಸ್ಥೆಯೇ ಮನೆ.

- ಪ್ರಕಾಶ ಹೆಚ್., ಕಾರ್ಗಲ್

ಕಷ್ಟ ಸುಖಗಳನ್ನು ಹಂಚಿಕೊಂಡು ಪ್ರೀತಿ, ವಿಶ್ವಾಸಗಳಿಂದ ಜೀವನ ನಡೆಸುವಂಥ ಪುಟ್ಟ ಗುಡಿಸಲೇ ಮನೆ.

- ಸುಗಂಧಿ ಹೆಗ್ಡೆಹರ, ಹಟ್ಟಿಕುದ್ರು (ಬಸ್ರೂರು)

ಸುಂದರ ಸ್ವಪ್ನದ ಲೋಕ.

- ಸುಶೀಲಾ ಎಸ್. ಕುಲಕರ್ಣಿ, ಬೆಳಗಾವಿ

ನಿಗೂಢ ಜಗತ್ತು.

- ವಿಮಲಾಕ್ಷ ವಿ. ಜಾಧವ್, ಗಲಗಲಿ

'ಮ'ಡದಿಯ 'ನೆ'ಚ್ಚಿನ ತಾಣ.

- ಬಸವರಾಜ ಡಿ.ಎಚ್., ಸಿದ್ದಾಪುರ

ಮನೆ ಎಂದರೆ ಹೆಂಡತಿ ಹಾಗೂ ಗಂಡ.

- ವೆಂಕಟೇಶ ಗಚ್ಚಿನಮನಿ, ಕವಿತಾಳ

ವಿದ್ವನ್ಮಣಿಗಳ ಆತ್ಮ ನೆಲೆಸಿರುವ ಸ್ಥಳ.

- ಸಿದ್ಧರಾಮ ಎನ್., ಹಾಸನ

ಎರಡನೆಯ ತಾಯಿ.

- ಶಾರದಾ ವಿ. ಸಜ್ಜನರ, ಸೂಡಿ

ಮಳೆ ಗಾಳಿಯಿಂದ ರಕ್ಷಿಸುವ ಸ್ಥಳ.

- ಬಿ.ಎ. ಪ್ರದೀಪ್, ಮುರ್ಡೇಶ್ವರ

ಮನೆ ಎಂದರೆ ನೆಲೆ (ಇದಿಲ್ಲದಿದ್ದರೆ ಅಲೆ)

- ಗಂಗಾಧರಯ್ಯ, ಗೊಲ್ಲರಹಳ್ಳಿ

ಮನೆ ಎಂದರೆ ದೇವರು (ತಂದೆ ಮತ್ತು ತಾಯಿ) ಇರುವ ಸ್ಥಳ.

- ರಾಘವೇಂದ್ರ ಕುಲಕರ್ಣಿ, ಜಮಖಂಡಿ

ಮಾನವನಿಗೆ ಎಲ್ಲವನ್ನು ದೊರಕಿಸಿಕೊಡುವ ವಿಶ್ವವಿದ್ಯಾಲಯ.

- ವಿನಾಯಕ, ಎನ್. ಭಟ್ಟ, ಅಣಲಗಾರ

ಮನುಜನ ನಿರಂತರ ನೆನಪಿನ ಗುಡಿ.

- ಎಸ್. ಬಸವರಾಜು, ಬೆಂಗಳೂರು

ಮನೆ ಎಂದರೆ ಸ್ವರ್ಗ-ನರಕಗಳ ತವರು ಮನೆ.

- ಆನಂದ ಕುಲಕರ್ಣಿ, ಮುರಾಡಿ

ಮನೆ ಎಂದರೆ ೮.೨ ಸೆಂ.ಮೀ. X ೧೦.೫ ಸೆಂ.ಮೀ. ಅಳತೆ ಕೂಪನ್!

- ಜಿ.ಎಸ್. ಚಂದ್ರಶೇಖರಪ್ಪ, ಹರಿಹರ

ಮನೆ ಎಂದರೆ ಸಾಧನೆಯ ಮೂಲ.

- ಕುಮಾರಿ ಪಿ.ಆರ್. ಆಶಾ, ಗದಗ

ಮನೆ ಎಂದರೆ ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವುದಲ್ಲ.

- ಮಧು ಬಗರೆ, ಹರಪನಹಳ್ಳಿ

ಮನೆ ಎಂದರೆ ಕಾಮಧೇನು.

- ಎ.ಎಂ. ಮಲ್ಲಿಕಾರ್ಜುನಯ್ಯ, ಜೇವರಗಿ

ಮನೆ ಎಂದರೆ ಜಗತ್ತಿನ ತೊಟ್ಟಿಲು.

- ಎಸ್.ಹೆಚ್. ದೇಸಾಯಿ, ಕಿಲ್ಲಾ (ಕೆರೂರು)

ಶಾಂತಿ, ಸಂತೋಷ ಮತ್ತು ನೆಮ್ಮದಿಯಿಂದ ಕೂಡಿರುವುದೇ ಮನೆ.

- ಮೇರಿ ಬವ್ಲ, ಬೀದರ್

ಮನೆ ಎಂದರೆ ವಾಸಿಸುವ ಮನೆ, ಪದಬಂಧದ ಮನೆ, ಆಟದ ಮನೆ, ಅಂಕದ ಮನೆ ಇತ್ಯಾದಿ ಅರ್ಥ.

- ಬಿ.ಟಿ. ಚಂದ್ರಮ್ಮ, ಬೀರೂರು

ಮನಗಳ ಕೂಡಿಸಿ ನಡೆಸುವ ಬದುಕಿನ ರಥ.

- ಬಿ. ದೊಡ್ಡಮಾರೆಣ್ಣ, ಸೋಮಲಾಪುರ

ದುಡಿದು ಬಂದು ಕುಟುಂಬದ ಜೊತೆ ವಿಶ್ರಾಂತಿ ತೆಗೆದುಕೊಳ್ಳುವ ಸ್ಥಳ.

- ಜಾಹೀದಬೇಗಂ, ನಾರಾಯಣಪುರ

ನೆಲೆಸಲೋಸುಗ ನಿರ್ಮಿಸಿದ ನಿರ್ದಿಷ್ಟ ತಾಣವೇ ಮನೆ.

- ಎ. ಲಕ್ಷ್ಮಣ್ ಬಾಳಿಮಕ್ಕಿ, ಕುಂದಾಪುರ

ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಧಿ.

- ವೈ.ಎಸ್. ಸುನೀತ, ಚಿಕ್ಕಮಲ್ಲನ ಹೊಳೆ

ದಿನದ ಕೆಲಸದ ನಂತರ ಆನಂದದಿಂದ ಆಶ್ರಯ ಕೊಡುವ ಸ್ಥಳ.

- ಶ್ರೀಶೈಲ ಪಿ. ಚಲವಾದಿ, ಹುಲಗಿನಾಳ

ಮನುಷ್ಯತ್ವ ಸಂಪಾದನೆಯ ಕೇಂದ್ರ.

- ಜವಳಿ ವೀರಣ್ಣ, ಹುಬ್ಬಳ್ಳಿ

ಪ್ರೀತಿ, ವಿಶ್ವಾಸ, ತ್ಯಾಗಗಳು ಸ್ವಯಂ ಸ್ಫೂರ್ತಿಯಿಂದ ನೆಲೆಸಿದ ಸುಂದರ ಮಂದಿರ.

- ಅಶ್ವಿನಿ ಬಿ. ಹೂಲಿ, ಹಿಡಕಲ್ಲ ಡ್ಯಾಂ

ದೈನಿಕ ಕೊರತೆ ನೀಗಿಸುವ ರಸಗವಿತೆಯೇ ಮನೆ.

- ಪಾಂಡು ಬಿ. ಸಂಡೂರು

ನಿರಂತರ ಪರಿಶ್ರಮದ ನಂತರ ವಿಶ್ರಾಂತಿ ಪಡೆಯಲು ಇರುವ ಒಂದು ತಾಣ.

- ವೀರಣ್ಣ ಎ. ಹಿರೇಮೇಗಳಗೆರೆ

ಬದುಕಿನ ಎಲ್ಲಾ ಆಗುಹೋಗುಗಳ ಕೇಂದ್ರ ಬಿಂದು. ನಮ್ಮ ಮನಸ್ಸಿಗೆ ಶಾಂತಿಯನ್ನೂ, ನೆಮ್ಮದಿಯನ್ನೂ ನೀಡುವ ಶಾಂತಿಧಾಮ.

- ಬಿ. ಮಲ್ಲಪ್ಪ ಬಿಳೂಟಗಿ, ಮಸ್ಕಿ

ಬಿಸಿಲಿನ ಬವಣೆಯಿಂದ ಬಳಲಿದ ಬದುಕಿಗೆ ನೆರಳಿನ ನೆಲೆ ಒದಗಿಸುವ, ಹುಟ್ಟಿ, ಬೆಳೆದು, ಬದುಕಿ ಬಾಳಲು ಸಹಕಾರಿಯಾಗಿರುವ ನೆಮ್ಮದಿಯ ನಿಲಯ, ಆನಂದದ ಆಶ್ರಯ ತಾಣ.

ಮನುಜನ ನೆಮ್ಮದಿಯ ನೆಲೆ.

- ಅಶ್ವಿನಿ ಕೆ.ಸಿ. ಕೆರೆಕೊಪ್ಪ

> ಬಾಹ್ಯ ಒತ್ತಡದಿಂದ ಕುಟುಂಬದ ಜನರಿಗೆ ರಕ್ಷಣೆ ನೀಡುವ ಒಂದು ಸುವ್ಯವಸ್ಥಿತ ಕಟ್ಟಡ.
>
> **- ಶ್ರೀಶೈಲ ಪಿ. ಚಲವಾದಿ,** ಹುಲಗಿನಾಳ
>
> ಮನಸ್ಸುಗಳು ಸಮ್ಮಿಲನ ಹೊಂದುವ ಕೇಂದ್ರ.
>
> **- ಬಿ.ಕೆ. ರಶ್ಮಿ,** ಬೀರೂರು

ಜೀವನವೆಂಬ ಸಾಗರ ಈಜಿ ಮೃತ್ಯುವಿನ ದಡ ಸೇರುವವರೆಗೆ ಮಾನವ ಮತ್ತು ನೈಸರ್ಗಿಕ ಕೃತ್ಯಗಳಿಂದ ರಕ್ಷಿಸುವ ಸ್ಥಳ.

- ಕಿರಣ ಎಂ.ಕೆ., ಹೊಸಪೇಟೆ

ಮಾನವ ಸಮಾಜದಲ್ಲಿ ತನ್ನ ಕುಟುಂಬ ಸಮೇತವಾಗಿ, ಸುರಕ್ಷಿತವಾಗಿರಲು ರಚಿಸಿಕೊಂಡಿರುವ ಒಂದು ಚಿಕ್ಕ ಕೋಟೆ.

- ಮೋಹನ್ ಎಚ್.ಎಂ., ಹರಪನಹಳ್ಳಿ

> ಆಧುನಿಕ ಅರ್ಥದಲ್ಲಿ ಸ್ನೇಹ, ಪ್ರೀತಿ, ಅನುಕಂಪ, ವಿಧೇಯತೆ, ಔದಾರ್ಯ, ಸಹಬಾಳ್ವೆ ಮುಂತಾದ ವಿಶಾಲ ಮನೋಭಾವನೆಗಳ ಹೆಚ್ಚಿನ ಕೊರತೆಯಿಂದ ಬಳಲುತ್ತಿರುವ ದುರ್ಬಲ ಸಾಮಾಜಿಕ ಸಂಸ್ಥೆ.
>
> **- ವೈ.ಎಸ್. ಮೀನಾಕ್ಷಮ್ಮ,** ದೊಣೆಹಳ್ಳಿ

ಮನುಷ್ಯನ ನಿತ್ಯ ಚಟುವಟಿಕೆಗಳಿಗೆ ಆಸರೆ ಕೊಡುವ ಸ್ಥಳ.

- ಅಕ್ಬರ್, ಬೆಂಗಳೂರು

ಕಷ್ಟ-ಸುಖಗಳ ಆಗರವಾಗಿ ಬದುಕಿಗೆ ಆಸರೆ ಯಾಗುವ ಸ್ಥಳ.

- ಪರಮೇಶ್ವರ ಎಸ್. ಕುದರಿ, ಚಳ್ಳಕೆರೆ

ಮನುಷ್ಯ ನೆಮ್ಮದಿಯಾಗಿ ಬದುಕಿ ಜೀವನ ಸಾಗಿಸಲಿಕ್ಕೆ ಯೋಜಿಸಿಕೊಂಡ ಒಂದು ತಾಣ.

- ಬಾಪುಸಾಬ ಮಂಗಳೂರ, ಕನಕಗಿರಿ

ಮನುಷ್ಯನು ನೆಲೆಸುವ ಸ್ಥಳವೇ ಮನೆ.

- ಭಾಗ್ಯರತ್ನಮ್ಮ ರೋಣದ, ಅಬ್ಬಿಗೇರಿ

ಜೀವಂತ ದೇವರಗುಡಿ.

- ಸಂಜೀವ ಎ. ಕುಲಕರ್ಣಿ, ಹಲಸಂಗಿ

ಮಾನವನಿಗೆ ಸಕಲ ವಿಶ್ರಾಂತಿ ತಾಣ.

- ಎಚ್.ಟಿ. ಹನುಮಂತಯ್ಯ, ತಿರುಮಲಾಪುರ

ಮಂಗನಿಂದ ಮಾನವನಾದ ಹಾಗೆ ಗಿಡ, ಮರ ಗುಹೆಯಿಂದ ರೂಪಾಂತರಗೊಂಡ ವಾಸಸ್ಥಳ.

- ಎಂ. ನಟರಾಜ, ಬಳ್ಳಾರಿ

ನಾಲ್ಕು ಗೋಡೆಗಳ ಪುಟ್ಟ ಪ್ರಪಂಚ.

- ಡಿ.ಕೆ. ಮಾಲಿದಶ ಮಾಪುರ, ಕನಕಗಿರಿ

ಹಲವಾರು ಜೀವಿಗಳನ್ನು ಪ್ರೀತಿ ಪ್ರೇಮದ ಬಂಧನದಿಂದ ಒಂದುಗೂಡಿಸಿದ ಗೂಡು.

- ಪರಶುರಾಮ ಸ. ವಾಲಿಕಾರ, ನೆಲ್ಲೂರು

ಮಾನವನ ಪ್ರಾಥಮಿಕ ಅವಶ್ಯಕತೆಗಳಲ್ಲಿ ಒಂದು.

- ಅಬ್ದುಲ್ ಜಬ್ಬಾರ್ ಜಾವೀದ್, ನುಗ್ಗೇಹಳ್ಳಿ

ಸಮಾಜದ ಒಂದು ಘಟಕ.

- ಗೀರ್ಯಾ ನಾಯ್ಕ, ದೂಪದಹಳ್ಳಿ ತಾಂಡ

ಮಮತೆ, ಪ್ರೀತಿ ತುಂಬಿರುವ ಮತ್ತು ಮನುಷ್ಯ ತನ್ನ ಸುಭದ್ರ ಇರುವಿಕೆಗಾಗಿ ನಿರ್ಮಿಸಿರುವ ಕಟ್ಟಡ.

- ಬಸವರಾಜ ಸಂ. ಕರನಂದಿ, ಹುನಗುಂದ

ಸಂಸಾರವೆಂಬ ನೌಕೆಯನ್ನು ಸಾಗಿಸುವ ಆ ವಾಸವೇ ನಿವಾಸ ಅಥವಾ ಮನೆ.

- ಬಸವರಾಜ ಪಾಂ. ಕುಂಬಾರ, ಸೀಮಿಕೇರಿ

ಸಾಂಸಾರಿಕ ಸಹಬಾಳ್ವೆಯ ಗುಟ್ಟನ್ನು ಅರಿಯುವ ಸ್ಥಳ.

- ಎಸ್.ಎನ್. ನರಸಿಂಹಗೌಡ, ಸಾಸಲು

ಜೀವನವೆಂಬ ಸುದೀರ್ಘ ಪ್ರಯಾಣದಲ್ಲಿ ತಂಗುನಿಲ್ದಾಣ.

- ಸಂತೋಷಿ ಶ್ರೀಧರ ಕರ್ಜಗಿ, ಚಳಗೇರಿ

ಸಂಸಾರವೆಂಬ ಯುದ್ಧದ ರಣಭೂಮಿ.

- ಕು. ವಿದ್ಯಾವತಿ ಬ. ಅಕ್ಕಿ, ಗದಗ

ಮನುಷ್ಯನಿಗೊಂದು ನೆಲೆ ಹಾಗೂ ಅವನ ಜೀವನಕ್ಕೊಂದು ಬೆಲೆ ತಂದುಕೊಡುವ ಪ್ರೇಮಾಲಯ.

- ಫಕ್ಕೀರೇಶ ಬ. ಅಕ್ಕಿ, ಮಜ್ಜಗುಡ್ಡ

ವ್ಯಕ್ತಿಯ ಜನನದಿಂದ ಮರಣದವರೆಗೆ ಆಶ್ರಯ ನೀಡುವ ತಾಣ.

- ನವೀನ ಪೂಜಾರ, ನಂದಿಕೇಶ್ವರ

ಸಮಾಜದ ಪ್ರಾಥಮಿಕ ಪ್ರಮುಖ ಘಟಕ.

- ಅರುಣ ಕುಮಾರಿ ಎಮ್. ಹಿರೇಮಠ, ಮುಧೋಳ

> ಬದುಕು ನಡೆಸಲು ಸುರಕ್ಷಿತ ಸ್ಥಳ.
>
> **-ಎಂ. ಎಚ್. ರವಿಶಂಕರ್,** ಬೆಂಗಳೂರು
>
> ವಾಸಕ್ಕಾಗಿ ಕಟ್ಟಿಕೊಂಡ ಒಂದು ಸೂರು.
>
> **- ಪ್ರಕಾಶ ಹಳವಳ್ಳಿ,** ಹೊನ್ನಾವರ

ಸಾಂಸಾರಿಕವಾಗಿ ಸಮಾಜದಲ್ಲಿ ಬದುಕಲು ಬೇಕಾದ ಅವಶ್ಯಕ ವಸ್ತು.

- ಪಿ. ಯರ್ರಿಸ್ವಾಮಿ, ಕುರುಗೋಡು

ಬಿಸಿಲು, ಮಳೆ, ಚಳಿಗೆ ಸುರಕ್ಷಿತವಾಗಿ ಕುಟುಂಬದ ಸರ್ವ ಸದಸ್ಯರು ಸುಖ, ದುಃಖದಲ್ಲಿ ಪ್ರೀತಿ, ಪ್ರೇಮ, ವಾತ್ಸಲ್ಯದಿಂದ ಬದುಕುವ ಸುಂದರ ಬೀಡು.

- ಶ್ರೀಮತಿ ಅರ್ಪಿತಾ ಎನ್. ನಾಯ್ಕ, ಶಿಗ್ಗಾಂವ

ದಿನದ ದುಡಿತದ ನಂತರ ಉಸ್ಸಪ್ಪಾ ಎಂದು ತಲೆ ಕೆಳಗೆ ಹಾಕಿ ಕುಳಿತುಕೊಳ್ಳುವ ಸ್ಥಳ.

- ಚನಗೌಡ ಹ. ಬಿರಾದಾರ, ಇಂಡಿ

ವಾಸಸ್ಥಳ - ಆಶ್ರಯ ಸ್ಥಾನ.

- ಎಂ.ಜಿ. ಕುರಡೇಕರ, ಶಾಲವಾಡಿ

ನಮ್ಮ ಗುರಿ


ಸಂಪೂರ್ಣ ಅಭಿವೃದ್ಧಿ

ನವ ರಾಷ್ಟ್ರವೊಂದರ ನಿರ್ಮಾಣಕ್ಕೆ ಲೋಕಶಕ್ತಿಯು ಬದ್ಧವಾಗಿದೆ.

ಅನಕ್ಷರತೆ, ಬಡತನ, ನಿರುದ್ಯೋಗ, ಸಾಮಾಜಿಕ ಅನ್ಯಾಯ ಹಾಗೂ ಸಾಮಾಜಿಕ ಅಸಾಮರಸ್ಯದಿಂದ ಮುಕ್ತವಾಗಿರುವ ರಾಷ್ಟ್ರಕ್ಕಾಗಿ.

ಪ್ರತಿಯೊಂದು ಮಗುವೂ ಉಜ್ವಲ ಭವಿಷ್ಯದ ಭರವಸೆ ಹೊಂದಿರುವ ರಾಷ್ಟ್ರಕ್ಕಾಗಿ.

ವೈಜ್ಞಾನಿಕವಾಗಿ ಮುಂದುವರೆದ ಹಾಗೂ ಆರ್ಥಿಕವಾಗಿ ಬಲಿಷ್ಠವಾದ ರಾಷ್ಟ್ರಕ್ಕಾಗಿ.



ಯೋಚಿಸಿ ಮತ ನೀಡಿ.
ಲೋಕ ಶಕ್ತಿಗೆ ಮತ ನೀಡಿ.

+

ಲೋಕ ಶಕ್ತಿ ಬಿಜೆಪಿ

ಪ್ರಗತಿಗಾಗಿ ಮೈತ್ರಿ

ಪ್ರಕಟಣೆ : ಡಾ. ಎಂ.ಪಿ. ನಾಡಗೌಡ, ಜನರಲ್ ಸೆಕ್ರೆಟರಿ, ಲೋಕಶಕ್ತಿ

ಲೋಕ ಶಕ್ತಿ. ಕೇವಲ ಪಕ್ಷವಲ್ಲ. ಅದೊಂದು ಆಂದೋಲನ

ಋತುಚಕ್ರ ಎಂಬ ಗರ್ಭಾಶಯದ ಕಣ್ಣೀರು!



ಮಹಿಳೆಯ ಬದುಕಿನ ಅವಿಭಾಜ್ಯ ಕ್ರಿಯೆಯಾದ ಋತುಚಕ್ರದ ಬಗ್ಗೆ ಮಹಿಳೆಯರಿಗೇ ಗೊತ್ತಿಲ್ಲದ ಅನೇಕ ಸಂಗತಿಗಳ ಕುರಿತು ಮೂವರು ತಜ್ಞ ವೈದ್ಯೆಯರು ಇಲ್ಲಿ ಚರ್ಚಿಸಿದ್ದಾರೆ. ಹುಡುಗಿಯರಿಂದ ಹಿಡಿದು ವಯಸ್ಸಾದವರವರೆಗೆ ಪ್ರತಿಯೊಬ್ಬ ಸ್ತ್ರೀಯೂ ಸಂಗ್ರಹಿಸಿಟ್ಟುಕೊಳ್ಳಬೇಕಾದ ಸಮಗ್ರ ವಿಷಯ ಸಂಗ್ರಹ ಈ ಲೇಖನದಲ್ಲಿದೆ.

○ ಡಾ. ಆರತಿ ವೆಂಕಟೇಶ್

ಋತುಚಕ್ರ ಅಥವಾ ಮುಟ್ಟು ಆರಂಭವಾಗುವುದು ಹೆಣ್ಣಿಗೆ ಅವಳ ಹೆಣ್ತನ ಹಾಗೂ ತಾಯ್ತನದ ಸಂಕೇತವನ್ನು ಸೂಚಿಸುತ್ತದೆ. ಇದು ಹೆಣ್ಣಿಗೆ ಪ್ರಕೃತಿ ನೀಡಿರುವ ಅಮೂಲ್ಯ ಕೊಡುಗೆ. ಈ ಬಗ್ಗೆ ಮಹಿಳೆಯರು ಸಂಕೋಚದಿಂದಲೋ ದುಗುಡದಿಂದಲೋ ವರ್ತಿಸುವುದರಲ್ಲಿ ಯಾವ ಅರ್ಥವೂ ಇಲ್ಲ.

ಗರ್ಭಾಶಯದ ಕಣ್ಣೀರು!

ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಹನ್ನೆರಡರಿಂದ ಹದಿನೆಂಟನೆಯ ವಯಸ್ಸಿನ ಹೆಣ್ಣು ಮಕ್ಕಳಿಗೆ ಮುಟ್ಟು ಪ್ರಾರಂಭವಾಗುತ್ತದೆ. ಇದಕ್ಕೆ 'menarche' ಎನ್ನುತ್ತಾರೆ. Menarche ಎಂದರೆ 'ತಿಂಗಳ ಆರಂಭ' ಎಂದು ಅರ್ಥ. ಮುಟ್ಟು ಹೊಂದಿದ ಹುಡುಗಿ ಸಂಪೂರ್ಣವಾಗಿ ಹೆಣ್ತನದ ಗುಣಗಳನ್ನೂ, ತಾಯಿಯಾಗುವ ಸಾಮರ್ಥ್ಯವನ್ನೂ ಪಡೆದಿರುತ್ತಾಳೆ ಎಂಬ ನಂಬಿಕೆಯಿದೆ.

ಚಿತ್ರ : ವಸಂತ ಮಾಲವಿ



ಋತುಚಕ್ರ ಪ್ರಾರಂಭಿಸಿದ ಪ್ರತಿಯೊಬ್ಬ ಮಹಿಳೆಯೂ ತಾಯ್ತನ ಹೊಂದುತ್ತಾಳೆ ಎಂಬ ಮಾತು ಸಂಪೂರ್ಣ ಸತ್ಯವಲ್ಲ. ಋತುಚಕ್ರ ಸಾಮಾನ್ಯವಾಗಿ ಮಹಿಳೆಯರಲ್ಲಿ ೨೫ರಿಂದ ೨೮ ದಿನಗಳವರೆಗೂ ಇರುತ್ತದೆ. ಪ್ರತಿಯೊಂದು ಋತುಚಕ್ರದ ೧೪ನೇಯ ಅಥವಾ ೧೫ನೇಯ ದಿನದಲ್ಲಿ ಅಂಡಾಶಯದಿಂದ ಅಂಡಾಣುವನ್ನು ಬಿಡುಗಡೆ ಮಾಡುತ್ತದೆ. ಇದನ್ನು 'Ovulation' ಎನ್ನುತ್ತೇವೆ. ಪ್ರತಿ ತಿಂಗಳು ಅಂಡಾಣುವನ್ನು ಬಿಡುಗಡೆ ಮಾಡುವ ಮಹಿಳೆ ತಾಯಿಯಾಗುವ ಸೂಚನೆ ತೋರಿಸುತ್ತಾಳೆ. ವಾಸ್ತವವಾಗಿ ಮುಟ್ಟಿನ ಸಮಯದಲ್ಲಿ ಉಂಟಾಗುವ ರಕ್ತಸ್ರಾವಕ್ಕೂ ಈ ಅಂಡಾಣುವಿನ ಬಿಡುಗಡೆಗೂ ಸಂಬಂಧವಿಲ್ಲ. ತಿಂಗಳಿಗೆ ಹೊರಬರುವ ಋತುಸ್ರಾವ ಗರ್ಭಾಶಯಕ್ಕೆ ಸಂಬಂಧಿಸಿದ್ದರಿಂದ ಅಂಡಾಣು ಬಿಡುಗಡೆ ಮಾಡದ ಮಹಿಳೆಯರೂ ತಿಂಗಳಿಗೆ ಸರಿಯಾಗಿ ಮುಟ್ಟಾಗುವ ಸಾಧ್ಯತೆಯಿದೆ. ಆದ್ದರಿಂದ ಋತುಸ್ರಾವವೆಂದರೆ ಪ್ರತ್ಯೇಕವಾಗಿ ಗರ್ಭಕೋಶದ ಒಳಪದರ ಒಡೆದು ಉಂಟಾಗುವ ರಕ್ತಸ್ರಾವ.

ವೀರ್ಯಾಣುಗಳ ಸಂಯೋಗವಾಗದ ಗರ್ಭ ಪ್ರತಿ ತಿಂಗಳೂ ತಪ್ಪದೇ ಋತುಸ್ರಾವ ಹರಿಸುವುದರಿಂದ ವೈದ್ಯಕೀಯದಲ್ಲಿ ಋತುಚಕ್ರ 'ನಿರಾಶೆ ಹೊಂದಿದ ಗರ್ಭಾಶಯದ ಕಣ್ಣೀರು' (Crying of the disappointed uterus) ಎಂದು ನುಡಿಯುತ್ತಾರೆ.

ಮೂರು ದಿನ ಹೊರಗೇಕೆ?

ಹೆಣ್ಣು ಮಕ್ಕಳಿರುವ ಪ್ರತಿಯೊಬ್ಬ ತಾಯಿಗೂ ಋತುಚಕ್ರದ ಬಗ್ಗೆ ತಮ್ಮ ಮಗಳಿಗೆ ಸಂಪೂರ್ಣ ಮಾಹಿತಿ ನೀಡುವುದು ಅಗತ್ಯ. ಹಾಗೂ ಪ್ರಥಮ ಕರ್ತವ್ಯ! ಕೆಲವು ಸಂಪ್ರದಾಯ ಕುಟುಂಬಗಳಲ್ಲಿ ತಿಂಗಳಿಗೆ ಮುಟ್ಟಾಗುವ ಹೆಣ್ಣನ್ನು ಪ್ರತ್ಯೇಕವಾಗಿ ದೂರ ಕೂಡಿಸುತ್ತಾರೆ. ಈ ಪದ್ಧತಿ ಈಗಲೂ ಕೆಲವು ಮನೆಗಳಲ್ಲಿ ಜಾರಿಗೆ ಇವೆ. ಆದರೆ ಆ ಮುಗ್ಧ ಹೆಣ್ಣಿನ ಕೋಮಲ ಮನಸ್ಸಿಗೆ ಇದರಿಂದ ಎಂಥ ಆಘಾತವಾಗುತ್ತದೆ ಎಂದು ಅವರಿಗೆ ತಿಳಿದಿರುವುದಿಲ್ಲ. ಮುಟ್ಟಿನ ಸಮಯದಲ್ಲಿ ಹೆಣ್ಣು ಅಸ್ಪರ್ಶಳು ಎಂಬ ಭಾವನೆ ನಮ್ಮ ನಾಗರೀಕರಿಂದ ಮೊದಲು ತೊಲಗಬೇಕು. ಋತುಸ್ರಾವ ಕೇವಲ ಗರ್ಭಾಶಯದಿಂದ ಸ್ರವಿಸುತ್ತದೆಯೇ ಹೊರತು ಅದು ಯಾವ ವಿಷಮ, ಕಲ್ಮಶ ಅಂಶಗಳನ್ನೂ ಹೊಂದಿರುವುದಿಲ್ಲ. ಮುಟ್ಟಾದ ಸಮಯದಲ್ಲಿ ಹೆಣ್ಣು ಮೂಲೆ ಹಿಡಿದು ಕೂರುವುದು ಅನವಶ್ಯಕ. ಆ ಅವಧಿಯಲ್ಲಿ ಹೆಣ್ಣು ಮಕ್ಕಳು ಅಗತ್ಯವಾಗಿ ಸ್ನಾನ ಮಾಡಲೇಬೇಕು. ತಿಂಗಳ 'ಮೂರು' ದಿನಗಳು ಕೆಲವು ಹೆಣ್ಣು ಮಕ್ಕಳು ಅಡಿಗೆ ಮಾಡಬಾರದು, ಕೋಣೆಯೊಳಗೆ ಮಲಗಬಾರದೆಂಬ ನಿಯಮಗಳು ಇರುತ್ತವೆ.

ಇವೆಲ್ಲ ಅರ್ಥವಿಲ್ಲದ ನಂಬಿಕೆಗಳು ಎಂದು ವೈದ್ಯಕೀಯ ವಿಜ್ಞಾನದಿಂದ ತಿಳಿದು ಬಂದಿದೆ. ಮಹಿಳೆಯರು ಮುಟ್ಟಾದಾಗ ತಮ್ಮ ಎಂದಿನ ಚಟುವಟಿಕೆಗಳಲ್ಲಿ ತೊಡಗಬಹುದು. ಕೆಲವು ಅಜ್ಞಾನಿಗಳು ಮುಟ್ಟಾದಾಗ ಹೆಣ್ಣು ಮಕ್ಕಳ ಕೈಯಲ್ಲಿ ಬಚ್ಚಲು ಉಜ್ಜುವುದು, ಲೆಟ್ರಿನ್ ತೊಳೆಯುವುದು ಮುಂತಾದ ಕೊಳಕು ಕೆಲಸಗಳನ್ನು ಮಾಡಿಸುತ್ತಾರೆ. ಹೆಣ್ಣು ಆ ಸಮಯದಲ್ಲಿ 'ಅಶುಚಿ' ಎಂಬ ಭಾವನೆ ಅವರಲ್ಲಿ ಮೂಡಿರುತ್ತದೆ. ಆದರೆ ಈ ಬಗೆಯ ತಾತ್ಸಾರ ಹೆಣ್ಣು ಮಕ್ಕಳ ಮನಸ್ಸಿಗೆ ಪರಿಣಾಮ ಬೀರುತ್ತದೆ. ಮುಟ್ಟಾದ ಸಮಯದಲ್ಲಿ ತಾನು ಅಪವಿತ್ರಳು, ಯಾರನ್ನೂ ಮುಟ್ಟಬಾರದು, ಆ ಸಮಯದಲ್ಲಿ ತಾನು ಅಶುದ್ಧವಾದ ಕೆಲಸಗಳನ್ನು ಮಾಡಬೇಕೆಂಬ ಭಾವನೆ ಮನಸ್ಸಿನಲ್ಲಿ ಬೇರೂರಿ ಕೆಲವು ಅಮಾಯಕ ಹೆಣ್ಣು ಮಕ್ಕಳು ತಿಂಗಳಿಗೆ ತಾವು ಮುಟ್ಟಾಗುವುದನ್ನೇ ದ್ವೇಷಿಸುತ್ತಾರೆ!

ತಾಯಿಯ ಕರ್ತವ್ಯ

ಇಂಥ ಮೂಢನಂಬಿಕೆಗಳು ನಿವಾರಿಸ

ಬೇಕಾದರೆ ತಾಯಂದಿರು ತಮ್ಮ ಬೆಳೆಯುವ ಮುದ್ದು ಮಗಳಿಗೆ ಋತುಚಕ್ರದ ಬಗ್ಗೆ ನಯವಾಗಿ ವಿವರಿಸಿ. ಅವಳು ಶಾಲೆಗೆ ಹೋಗುವಾಗ ಯಾವ ರೀತಿಯ ಪೇಚಿಗೂ ಸಿಲುಕದಂತೆ ಎಚ್ಚರಿಕೆ ವಹಿಸುವುದು ಮುಖ್ಯ. ಮೊದಲನೆಯ ಬಾರಿ ನಿಮ್ಮ ಮಗಳು ಮುಟ್ಟಾದಾಗ ಸಹಜವಾಗಿ ಅವಳಲ್ಲಿ ನಾಚಿಕೆ, ಭಯ ಇರುತ್ತದೆ. ಋತುಕ್ರಿಯೆ ಸ್ವಾಭಾವಿಕವೆಂದು, ಅದರಲ್ಲಿ ಯಾವುದೇ ತೊಂದರೆ, ಅಸಹ್ಯ ಇಲ್ಲವೆಂದು ನೀವು ಅವಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ನಯವಾಗಿ ವಿವರಿಸಿ ಹೇಳುವುದರಿಂದ ನಿಮ್ಮ ಮಗಳಿಗೂ ನಿಮ್ಮಲ್ಲಿ ಹೆಚ್ಚು ವಿಶ್ವಾಸ, ಪ್ರೀತಿ ಉಂಟಾಗುತ್ತದೆ. ಮುಂದೆ ಯಾವ ತೊಂದರೆಗೆ ಸಿಲುಕಿದರೂ ಅವಳು ಅದನ್ನು ನಿಮ್ಮಿಂದ ಮುಚ್ಚಿಡದೇ ಮನಸ್ಸು ಬಿಚ್ಚಿ ಮಾತನಾಡಲು ಸಾಧ್ಯವಾಗುತ್ತದೆ.

ಮೈ ನೆರೆದ ಮಗಳು ತನಗೆ ಅಪರಿಚಿತಳಂತೆ ತೋರುತ್ತಾಳೆಂದು ಕೆಲವು ತಾಯಂದಿರು ಆಶ್ಚರ್ಯಪಡುತ್ತಾರೆ. ಮುಟ್ಟು ಪ್ರಾರಂಭವಾಗುವ ಜೊತೆ ಕಿಶೋರಿಯ ದೇಹಗಳಲ್ಲೂ ಹೆಣ್ತನದ ಬದಲಾವಣೆ ಉಂಟಾಗುವುದರಿಂದ ಹುಡುಗಿ ಸಹಜವಾಗಿ ಸಂಕೋಚ ಪಡುತ್ತಾಳೆ. ಮುಟ್ಟಿನ ಸಮಯದಲ್ಲಿ ಹೆಣ್ಣು ಮಕ್ಕಳನ್ನು ತಾಯಿಯಾದವರು ಅನವಶ್ಯಕವಾಗಿ ನಿರ್ಬಂಧಪಡಿಸಬೇಡಿ. ಅವಳನ್ನು ಅವಳ ದಿನಚರ್ಯೆಯೊಂದಿಗೆ ಬೆರೆಯಲು ಪ್ರೋತ್ಸಾಹಿಸಿ. ಋತುಚಕ್ರ ಅವಳ ವ್ಯಕ್ತಿತ್ವಕ್ಕೆ ಯಾವ ಧಕ್ಕೆಯೂ ಬರುವುದಿಲ್ಲವೆಂದು ಅವಳಿಗೆ ಮನವರಿಕೆ ಮಾಡಿ.

ಹಳೆ ಬಟ್ಟೆಗೆ ಬದಲು

ಮುಟ್ಟಾದ ಸಮಯಗಳಲ್ಲಿ ಹಿಂದಿನ ಪೀಳಿಗೆಯವರು ಹಳೆಯ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಅದನ್ನು ಸ್ವಚ್ಛವಾಗಿ ಒಗೆದು ಪುನಃ ಉಪಯೋಗಿಸಬಹುದಾದರೂ ಬಟ್ಟೆಗಳಿಂದ ಸೋಂಕು ತಗಲುವ ಸಂಭವ ಹೆಚ್ಚಾಗಿರುತ್ತದೆ. ಈಗ ಮಾರುಕಟ್ಟೆಗಳಲ್ಲಿ ಆಕರ್ಷಕ ಹೆಸರುಗಳನ್ನು ಹೊತ್ತಿರುವ 'ಸ್ಯಾನಿಟರಿ ಪ್ಯಾಡ್ಸ್' ಲಭ್ಯವಾಗಿವೆ. ಅವುಗಳನ್ನು ಉಪಯೋಗಿಸಿ ಎಸೆದುಬಿಡುವುದರಿಂದ ಸೋಂಕು ತಗಲುವ ಸಂಭವ ಕಡಿಮೆಯಾಗುತ್ತದೆ. ಮುಟ್ಟಾದ ಹೆಣ್ಣು ಮಕ್ಕಳಿಗೆ ತಾಯಿಯಾದವರು ಪ್ಯಾಡ್‌ಗಳನ್ನು ಧರಿಸುವ ರೀತಿಯನ್ನು ತಾಳ್ಮೆಯಿಂದ ತೋರಿಸಿಕೊಡಬೇಕು.

ಇತ್ತೀಚೆಗೆ ಟ್ಯಾಂಪೂನ್ (tampons) ಎಂಬ ಸಣ್ಣ ಸುರುಳಿ ಸುತ್ತಿದ ನ್ಯಾಪ್‌ಕಿನ್‌ಗಳು ಮಾರಾಟವಾಗುತ್ತಿದೆ. ಇದನ್ನು ಯೋನಿ ದ್ವಾರದಲ್ಲಿ ತೂರಿಸಿಕೊಳ್ಳುವ ಸೌಲಭ್ಯ ಇದೆ. ನೃತ್ಯಗಾರರು, ಆಟಗಾರರು, ಈಜುಗಾರರಿಗೆ ಇದು ಬಹಳ ಉಪಯುಕ್ತವಾಗಿರುತ್ತದೆ. ಆದರೆ ಟ್ಯಾಂಪೂನ್‌ಗಳಿಗೆ ಕೆಲವು ಅಡಚಣೆಗಳಿರುತ್ತವೆ.

೧. ಇದರ ಬಳಕೆಯಿಂದ ಕನ್ಯಾಪೊರೆ ಹರಿಯುತ್ತದೆ. (torn hymen) ಕನ್ಯೆಯಾದವಳಿಗೆ ಆತಂಕ ತರುವ ವಿಷಯವಾಗಬಹುದು.

೨. ಕೆಲವು ಹೆಣ್ಣು ಮಕ್ಕಳು ಅದನ್ನು ಹೊರತೆಗೆಯುವುದನ್ನು ಒಮ್ಮೊಮ್ಮೆ ಮರೆಯುವ ಸಾಧ್ಯತೆಯಿದೆ. ಕೆಲವು ಅವಿವೇಕಿಯಾದ ಮಹಿಳೆಯರ ದೇಹದಿಂದ ವಾರಗಟ್ಟಲೆ ಉಳಿದಿರುವ ಟ್ಯಾಂಪೂನ್‌ಗಳನ್ನು ವೈದ್ಯಕೀಯ ಸಲಕರಣೆಯಿಂದ ಹೊರತೆಗೆದ ಉದಾಹರಣೆ ಇವೆ. ಇದರಿಂದ ಮಹಿಳೆಯರ ಗರ್ಭಾಶಯದಲ್ಲಿ ಸೋಂಕು ತಗಲುವ ಅಪಾಯ ಹೆಚ್ಚು.



ಚಿತ್ರ : ಡಿ.ಪಿ. ನಾಗೇಶ್



೩. ಅತಿಯಾದ ರಕ್ತಸ್ರಾವವನ್ನು ಟ್ಯಾಂಪೂನ್‌ಗಳಿಂದ ತಡೆಗಟ್ಟಲು ಕಷ್ಟ. ಸಾಮಾನ್ಯವಾಗಿ ಸುಶಿಕ್ಷಿತ ಮಹಿಳೆಯರಲ್ಲಿ ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಹೆಚ್ಚು. ಮಾರುಕಟ್ಟೆಗಳಲ್ಲಿ ಜಾಹೀರಾತುಗಳಲ್ಲಿ ಸೂಚಿಸುವಂತೆ ಸುವಾಸನೆಯುಕ್ತ ಪ್ಯಾಡ್‌ಗಳನ್ನು (deodorant) ಉಪಯೋಗಿಸುವುದು ಆರೋಗ್ಯದ ದೃಷ್ಟಿಯಲ್ಲಿ ಒಳ್ಳೆಯದಲ್ಲ. ಇದು ಅನಾವಶ್ಯಕವಾಗಿ ಸ್ಥಳೀಯ ದುಷ್ಪರಿಣಾಮ ಬೀರುತ್ತದೆ.

ದುಡಿಯುವ ಮಹಿಳೆಯರಿಗೆ

ದುಡಿಯುವ ಮಹಿಳೆಯರು ಪ್ಯಾಡ್‌ಗಳನ್ನು ಬಳಸುವುದು ಉತ್ತಮ. ಈಗ ಮಾರಾಟವಾಗುವ ಪ್ಯಾಕುಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳ ಜೊತೆ ಹೊಂದಿಕೆಯಾಗುವ ಬೆಲ್ಟ್ ಕೂಡ ಸಿಗುತ್ತದೆ. ಕೆಲಸಕ್ಕೆ ಹೋಗುವ ಮಹಿಳೆಯರು ಬೆಲ್ಟ್ ಉಪಯೋಗಿಸುವುದರಿಂದ ಕಛೇರಿಗಳಲ್ಲಿ ನಿರಾತಂಕವಾಗಿ ಓಡಾಡಿಕೊಂಡಿರಬಹುದು. ಅತಿ ಸ್ರಾವದ ತೊಂದರೆಯಿಂದ ಮಹಿಳೆಯರು ತಮ್ಮ ವ್ಯಾನಿಟಿ ಬ್ಯಾಗ್‌ಗಳಲ್ಲಿ ಪ್ರತ್ಯೇಕವಾಗಿ ಒಂದೆರಡು ಪ್ಯಾಡ್‌ಗಳನ್ನು ಇಟ್ಟುಕೊಳ್ಳುವುದು ಸೂಕ್ತ. ಸಮಯ ಬಂದರೆ ಅದನ್ನು ಬದಲಾಯಿಸಿಕೊಳ್ಳಲು ಅನುಕೂಲವಾಗುತ್ತದೆ. ರಕ್ತಸ್ರಾವ ಐದು ದಿನಕ್ಕಿಂತ ಹೆಚ್ಚಾಗಿದ್ದರೆ, ಅಥವಾ ಸ್ರಾವದಲ್ಲಿ ಗಡ್ಡೆಗಳು ಹೆಚ್ಚಾಗಿದ್ದರೆ, ದಿನಕ್ಕೆ ಕನಿಷ್ಠ ಪಕ್ಷ ಐದಾರು ಪ್ಯಾಡ್‌ಗಳನ್ನು ಬದಲಾಯಿಸಬೇಕಿದ್ದರೆ ತಡಮಾಡದೇ ಸ್ತ್ರೀತಜ್ಞ ವೈದ್ಯರನ್ನು ಸಂಪರ್ಕಿಸಬೇಕು. ಋತುಚಕ್ರದಲ್ಲಿ ಯಾವುದೇ ಸಣ್ಣ ಬದಲಾವಣೆಯನ್ನೂ ನಿರ್ಲಕ್ಷಿಸಬಾರದು.



ಋತುಮತಿಯಾದ ಕಿಶೋರಿಗೇಕೆ ಪಬ್ಲಿಸಿಟಿ?

**ಹುಡುಗಿಯರು ಋತುಮತಿಯಾಗುವುದು ಸಹಜ ಕ್ರಿಯೆ.
ಈ ಬಗ್ಗೆ ತೀವ್ರ ದಿಗಿಲುಪಡಲು ಕಾರಣವೇನಿದೆ?**

ಯುಕ್ತ ವಯಸ್ಸು ಬಂದಾಗ ಗಂಡು ಮಕ್ಕಳಲ್ಲಾಗಲೀ, ಹೆಣ್ಣು ಮಕ್ಕಳಲ್ಲಾಗಲೀ ದೈಹಿಕವಾಗಿ, ಮಾನಸಿಕವಾಗಿ ಕೆಲವು ಬದಲಾವಣೆಗಳಾಗುವುದು ಸಹಜ. ಗಂಡು ಹುಡುಗರಿಗಾದರೆ ಕಂಠಸ್ವರ ಬದಲಾಗುವುದು, ದೈಹಿಕ ಬೆಳವಣಿಗೆಯಾಗುವುದು, ಮೈ ಕೋಮಲತ್ವ ಕಡಿಮೆಯಾಗಿ ಗಡುಸಾಗುವುದು, ಮೀಸೆಗಳು ಚಿಗುರುವುದು ಇತ್ಯಾದಿ ಸಹಜವೇ.

ಹಾಗೆಯೇ ಹೆಣ್ಣು ಯುಕ್ತ ವಯಸ್ಸಿಗೆ ಬಂದಾಗ ಅಂಗಾಂಗಗಳಲ್ಲಿ ಬದಲಾವಣೆ ಕಂಡುಬರುವುದು. ನಾಚಿಕೆ, ಭಯ, ಹೆಣ್ತನ ಮುಂತಾದ ಮಾನಸಿಕ ಅನಿಸಿಕೆಗಳು ಆಗಮನವಾಗುವವು. ಹನ್ನೆರಡರಿಂದ ಹದಿನಾರು ವಯಸ್ಸಿನ ಹುಡುಗಿಯರು ಋತುಮತಿಯಾಗುವುದು ಸಹಜ ಕ್ರಿಯೆ. ಕೆಲವರು ಹನ್ನೆರಡರ ಒಳಗೆ ಹದಿನಾರರ ನಂತರವೂ ಆಗಬಹುದು. ಈ ಬಗ್ಗೆ ತೀವ್ರ ದಿಗಿಲುಪಡಲು ಕಾರಣವೇನಿದೆ?

ತಕ್ಕ ವಯಸ್ಸಿಗೆ ಶರೀರದಲ್ಲಿ ಸಂಭವಿಸುವ ಈ ಬದಲಾವಣೆ ಒಂದು ಸಹಜವಾದ ಪರಿಣಾಮವೇ ಆದರೂ ಕೆಲವರಿಗೆ ಕ್ಲೇಶ ಕೆಲವರಿಗೆ ಮೋಜು. ಈ ಸಮಯದಲ್ಲಿ ಹೆಣ್ಣು ಹುಡುಗಿಯರು ಸಹಜವಾಗಿಯೇ ನಾಚಿಕೆ, ಭಯಕಂಪಿತರಾಗುವರು. ಕೆಲವರಿಗಂತೂ ಸ್ವಲ್ಪಮಟ್ಟಿಗೆ ಜ್ವರ ಕೂಡಾ ಬರಬಹುದು. ಅಂತಹ ಸಂದರ್ಭದಲ್ಲಿ ಆಡಂಬರದ ಕಾರ್ಯಕ್ರಮ ಹಮ್ಮಿಕೊಂಡು 'ಪಬ್ಲಿಸಿಟಿ' ಮಾಡುವುದು ಕೆಲವು ವಿದ್ಯಾವಂತ ಹುಡುಗಿಯರಿಗೆ ಬೇಕಾಗಿರುವುದಿಲ್ಲ. ಆದರೆ ಸಂಪ್ರದಾಯಗಳ ಕಾರಣದಿಂದಲೋ ಏನೋ ತಂದೆ ತಾಯಿಗಳು ಇವರ ಆಲೋಚನೆಗಳಿಗೆ ಸ್ಪಂದಿಸುವುದಿಲ್ಲ. ಹೀಗೆ ಸ್ಪಂದಿಸದೆ ಇರುವುದು ಅಪೇಕ್ಷಣೀಯವಲ್ಲ. ಏಕೆಂದರೆ, ಪರಿವರ್ತನಶೀಲ ಸಮಾಜದಲ್ಲೂ ಈ ಆಡಂಬರದ ಕಾರ್ಯಕ್ರಮಗಳನ್ನು ಮಾಡಿ ಮುಗಿಸಬೇಕೆಂಬ ಹಟ ಸಮರ್ಥನೀಯವೇ? ಮೊದಲೇ ಬೆದರಿ ಬೆವರಿ ನೀರಾಗುವ ಬಾಲೆಯನ್ನು ಇನ್ನೂ ಸಂಕಷ್ಟಕ್ಕೆ ಇಟ್ಟಂತಾಗುತ್ತದೆಯಲ್ಲವೇ? ಆದ್ದರಿಂದ ಜನ್ಮದಾತರು ಇಂತಹ ವಿಷಯಗಳನ್ನು ಹೆಚ್ಚು 'ಪಬ್ಲಿಸಿಟಿ' ಮಾಡದೆ ನಿರಾಡಂಬರದಿಂದ ಅನಿವಾರ್ಯವಿದ್ದವುಗಳನ್ನು ಮಾತ್ರ ಮಾಡಿ ಮುಗಿಸಬೇಕು.

ಈ ಸಮಯದಲ್ಲಿ ತಳಮಳಗೊಳ್ಳುವ, ಚಿಂತಿಸುವ ಹೆಣ್ಣು ಮಗಳಿಗೆ ಮನೆಯವರು, ಸ್ನೇಹಿತೆಯರು ಧೈರ್ಯ ತುಂಬಬೇಕು. ಋತುಮತಿಯಾದಳೆಂದರೆ ಸಾಕು ಏನೋ ಬಂಧನದಲ್ಲಿಟ್ಟಂತೆ ಭಾವಿಸುವುದು ಸರಿಯಲ್ಲ. ಮೊದಲಿದ್ದಂತೆ ಇರಲು ಆಕೆಗೆ ತಂದೆ ತಾಯಿಗಳು ಅವಕಾಶ ಮಾಡಿಕೊಡಬೇಕು. ಮುಖ್ಯವಾಗಿ ತಾಯಿ ಮಗಳಿಗೆ ಧೈರ್ಯ ತುಂಬಿ ಮನೋಸ್ಥೈರ್ಯ ಹೆಚ್ಚಿಸಬೇಕು. ಯಾವ ಸಮಸ್ಯೆಗಳೂ ಬರದಂತೆ ನೋಡಿಕೊಳ್ಳಬೇಕು.

ಮಗಳು ದೊಡ್ಡಾಕೆಯಾದ ತಕ್ಷಣವೇ ಮದುವೆಯ ಬಗ್ಗೆ ಆಲೋಚಿಸಿ ಚಿಂತೆಗೀಡಾಗುವುದು ಉಚಿತವಲ್ಲ. ಹೀಗೆ ಮಾಡುವುದರಿಂದ ಹುಡುಗಿಯರಲ್ಲಿ ಆತ್ಮವಿಶ್ವಾಸ, ಧೈರ್ಯ ಇಲ್ಲದಂತಾಗಿ ಅವರೂ ಚಿಂತೆಗೊಳಗಾಗುವರು. ಅನೇಕ ಚಿಂತಕರು ಹೇಳುವಂತೆ, ''ಮದುವೆಯೊಂದೇ ಜೀವನದ ಧ್ಯೇಯವಲ್ಲ. ಚೆನ್ನಾಗಿ ಓದಿ, ಸ್ವಯಂ ಕೃಷಿಯಿಂದ ಬಾಳುವುದೇ ಜೀವನದ ಧ್ಯೇಯ'' ಎಂಬಂತಹ ಸ್ಫೂರ್ತಿದಾಯಕ ಮಾತುಗಳನ್ನು ಹೇಳಿ ಮಕ್ಕಳ ಮನದಲ್ಲಿ ಮುದವನ್ನು ಮೂಡಿಸಬೇಕು.

ಋತುಮತಿಯಾಗುವುದು ಹೆಣ್ಣಿನ ಜೀವನಕ್ಕೆ ಹುಣ್ಣೆಂದು ಭಾವಿಸದೆ ಅದು ಒಂದು ಸಹಜ ಕ್ರಿಯೆ ಎಂಬುದನ್ನು ಮನಗಂಡು ಆಕೆಯ ಮೂಕವೇದನೆಯನ್ನು ನಿವಾರಿಸುವ ಸ್ವಾಸ್ಥ್ಯ ಸಮಾಜ ನಮ್ಮದಾದಾಗ ಸ್ತ್ರೀ ಸಂತತಿಗೆ ಆಶಾಕಿರಣ ಮೂಡಿದಂತೆಯೇ!

○ ಎನ್. ಎಂ. ಮರುಳಾರಾಧ್ಯ

ಗಂಡನ ಕರ್ತವ್ಯ

ಮುಟ್ಟಾದ ಸಮಯದಲ್ಲಿ ಗಂಡ ಹೆಂಡತಿಯ ಭಾವನೆಗಳಿಗೂ ಬೆಲೆ ಕೊಡುವುದು ಸೂಕ್ತ. ತನ್ನ ಪತ್ನಿಗೆ ಯಾವಾಗಲೂ ಪ್ರೀತಿ, ವಿಶ್ವಾಸ ಮುಖ್ಯವೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಮುಟ್ಟಾದಾಗ ಪತ್ನಿ ಪತಿಯಿಂದ ದೂರವಾಗಿ ಬೇರೆ ಮಲಗುವ ಅಗತ್ಯವೂ ಇಲ್ಲ. ಇಬ್ಬರೂ ತಮಗೆ ಪ್ರಿಯವಾದ ಸಂಗೀತವನ್ನೋ, ಕಾರ್ಯಕ್ರಮವನ್ನೋ ಹಾಕಿಕೊಂಡು ಆನಂದದಿಂದ ಕಾಲ ಕಳೆದರೆ ದಂಪತಿಗಳಲ್ಲಿ ಹೆಚ್ಚು ಅನ್ಯೋನ್ಯತೆ ಮೂಡುತ್ತದೆ.

ಹೆಣ್ಣು ಗಂಡಸಿಗಿಂತ ಸೂಕ್ಷ್ಮ, ಭಾವಜೀವಿ ಎನ್ನುವ ಮಾತು ಹಲವರ ಅಭಿಪ್ರಾಯ. ಹೆಣ್ಣಿನ ದೇಹದಲ್ಲಿ ಹಾರ್ಮೋನುಗಳ ಏರುಪೇರಿನಿಂದ ಮಾನಸಿಕವಾಗಿ ಕೆಲವು ಸಮಯದಲ್ಲಿ ಅಸ್ವಸ್ಥಳಾಗಿ ಹೆಚ್ಚು ಉದ್ವೇಗಗೊಳ್ಳುತ್ತಾಳೆ. ಇದು ಮುಟ್ಟಾಗುವ ಮುನ್ನ ಹೆಚ್ಚಾಗಿ ಕಂಡು ಬರುತ್ತದೆ. ಇದಕ್ಕೆ 'ಪ್ರೀಮೆನ್ಸ್ಟ್ರುಯಲ್ ಟೆನ್‌ಷನ್' (pre-menstrual tension) ಎಂದು ಕರೆಯಲಾಗುತ್ತದೆ. ಹೆಂಗಸರಿಗೆ ಮುಟ್ಟಾಗುವ ಮುನ್ನ ಹಾಗೂ ಮುಟ್ಟಿನ ಸಮಯದಲ್ಲಿ ಮಾನಸಿಕ ತೊಂದರೆಗಳಿರುತ್ತದೆ. ಆಲಸಿಕೆ, ತಲೆನೋವು ಅನವಶ್ಯಕ ಆತಂಕ, ಕಾರಣವಿಲ್ಲದೇ ಕೋಪ ತಾಪ, ಸ್ತನಗಳಲ್ಲಿ ನೋವು ಮುಂತಾದ ತೊಂದರೆಗಳು ಸಾಮಾನ್ಯ. ಕೆಲವರಿಗೆ ಕಿಬ್ಬೊಟ್ಟೆಯಲ್ಲಿ ನೋವು ನವಿರಾಗಿ ಅಥವಾ ಅಧಿಕ ಪ್ರಮಾಣದಲ್ಲಿ ಉಂಟಾಗುತ್ತದೆ. ಋತುಸ್ರಾವ ಪ್ರಾರಂಭವಾದಾಗ ಈ ತೊಂದರೆಗಳೆಲ್ಲ ಕ್ರಮೇಣ ಮರೆಯಾಗುತ್ತದೆ. ಇದು ಸಹಜವಾದ ಏರುಪೇರುಗಳೆಂದು ಇಂದಿನ ಸುಶಿಕ್ಷಿತ ಮಹಿಳೆ ಗ್ರಹಿಸಬೇಕು. ಮುಟ್ಟಾದಾಗ ಉಂಟಾಗುವ ಮಾನಸಿಕ ಘರ್ಷಣೆಗಳಿಗೆ ಹೆಂಗಸರಿಗೆ ಯೋಗಾಭ್ಯಾಸ ಬಹಳ ಉಪಯೋಗವಾಗುತ್ತದೆ.

ಮುಟ್ಟಿನ ಸಮಯದ ಹೊಟ್ಟೆನೋವು




ಮುಟ್ಟಿನ ಸಮಯದಲ್ಲಿ ಉಂಟಾಗುವ ಹೊಟ್ಟೆನೋವನ್ನು ಅನುಭವಿಸದಿರುವ ಸ್ತ್ರೀಯರೇ ವಿರಳವೆನ್ನಬಹುದು. ಹೊಟ್ಟೆನೋವಿನ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಮುಂಚೆ ಮುಟ್ಟು ಅಂದರೆ ಋತುಸ್ರಾವ ಹೇಗೆ ಉಂಟಾಗುತ್ತದೆಂದು ತಿಳಿದುಕೊಳ್ಳೋಣ.

ಋತುಸ್ರಾವ ಎಂದರೇನು?

ಬಾಲ್ಯಾವಸ್ಥೆಯಿಂದ ತಾರುಣ್ಯಾವಸ್ಥೆಗೆ ಕಾಲಿಡುವಾಗ ಹೆಣ್ಣಿನಲ್ಲಿ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳಾಗುತ್ತವೆ. ಮೆದುಳಿನ ಬುಡದಲ್ಲಿರುವ ನಿರ್ನಾಳ ಗ್ರಂಥಿಯು ಹಾರ್ಮೋನುಗಳನ್ನು ಸ್ರವಿಸಲು ಪ್ರಾರಂಭಿಸುತ್ತದೆ. ಅಂಡಾಶಯದ ಕೋಶಿಕೆಗಳನ್ನು ಪ್ರಚೋದನೆಗೊಳಿಸುವ ಹಾರ್ಮೋನಿನಿಂದಾಗಿ ಅಂಡಾಣು ಮಾಗಿ, ಅಂಡಾಶಯದ ಹೊರಪದರಕ್ಕೆ ಬಂದು ಅಲ್ಲಿ ಒಡೆಯುತ್ತದೆ. ಹೀಗೆ ಮಾಗಿದ ಅಂಡಾಣು ಅಂಡಾಶಯದಿಂದ ಹೊರಬಂದೊಡನೆ ಡಿಂಭನಳಿಕೆಯು ಅದನ್ನಾಕರ್ಷಿಸಿ ನಳಿಕೆಯೊಳಗೆ ಎಳೆದುಕೊಳ್ಳುತ್ತದೆ. ಈ ರೀತಿ ತಿಂಗಳಿಗೊಂದರಂತೆ ಅಂಡಾಣು ಮಾಗಿ ಹೊರಬರುತ್ತದೆ. ಅಂಡಾಶಯದಲ್ಲಿ ಈ ಬದಲಾವಣೆಯಾಗುತ್ತಿರುವಾಗ ಈಸ್ಟ್ರೋಜೆನ್ ಎಂಬ ಹಾರ್ಮೋನು ಸ್ರವಿಸುತ್ತದೆ. ಗರ್ಭಕೋಶವೇ ಈ ಹಾರ್ಮೋನಿನ ಕಾರ್ಯಬಿಂದುವಾಗಿರುತ್ತದೆ. ಈಸ್ಟ್ರೋಜೆನ್ ಪ್ರಚೋದನೆಯಿಂದಾಗಿ ಗರ್ಭಕೋಶದ ಒಳಪದರವು ರಕ್ತನಾಳಗಳು, ಗ್ರಂಥಿಗಳೊಡಗೂಡಿ ಬೆಳೆಯಲಾರಂಭಿಸುತ್ತದೆ. ಅಂಡಾಣು ವೀರ್ಯಾಣುವಿನೊಡನೆ ಮಿಲನವಾಗಿ ಫಲಿತಗೊಂಡು ಭ್ರೂಣವಾಗಿ ಅದು ನೆಲೆಸಲು ಮೆತ್ತಗಿನ ಹಾಸಿಗೆಯಂತಹ ಪದರವನ್ನು ಸಿದ್ಧಗೊಳಿಸುವುದು ಈ ಬೆಳವಣಿಗೆಯ ಉದ್ದೇಶವಾಗಿರುತ್ತದೆ. ಅಂಡಾಣು ಅಂಡಾಶಯದಿಂದ ಹೊರಬಂದಾಗ, ಉಂಟಾದ ಖಾಲಿ ಜಾಗದಲ್ಲಿ ಕಾರ್ಪಸ್ ಲೂಟಿಯಂ ಎಂಬ ವಿಶಿಷ್ಟ ಕೋಶಿಕೆ ಮೂಡುತ್ತದೆ. ಇದು ಪ್ರೊಜೆಸ್ಟೆರಾನ್ ಎಂಬ ಹಾರ್ಮೋನನ್ನು ಸ್ರವಿಸುತ್ತದೆ. ಈ ಹಾರ್ಮೋನು ಸಹ ಗರ್ಭಕೋಶದ ಒಳಪದರವನ್ನು ಇನ್ನಷ್ಟು ದಪ್ಪ ಮಾಡುವುದರಲ್ಲಿ ಸಹಾಯಕಾರಿಯಾಗುತ್ತದೆ. ಡಿಂಭನಳಿಕೆಯೊಳಗೆ ಮೆಲ್ಲನೆ ಮುಂದುವರಿಯುತ್ತಾ ಬರುವ ಅಂಡಾಣು ವೀರ್ಯಾಣುವಿಗಾಗಿ ಕಾಯುತ್ತದೆ. ವೀರ್ಯಾಣು ಎರಡು ಮೂರು ದಿನದೊಳಗೆ ಸಿಗದೇ ಹೋದರೆ ಅಂಡಾಣು ಸಾಯುತ್ತದೆ. ಅಂಡಾಣು ನಾಶವಾದೊಡನೆ ಅಂಡಾಶಯ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟೆರಾನ್ ಹಾರ್ಮೋನುಗಳನ್ನು ಸ್ರವಿಸುವುದನ್ನು ನಿಲ್ಲಿಸಿಬಿಡುತ್ತದೆ. ಹೀಗೆ ಹಾರ್ಮೋನುಗಳ ಪ್ರಚೋದನೆ ನಿಂತುಹೋದಾಗ, ಗರ್ಭಕೋಶದ ಒಳಪದರ ಚೂರುಚೂರಾಗಿ ಕಳಚಿಬೀಳುತ್ತದೆ. ಭ್ರೂಣದ ಆಗಮನವಾಗಲಿಲ್ಲವಾಗಿ ಗರ್ಭಕೋಶದ ಸಿದ್ಧತೆಯೆಲ್ಲ ವ್ಯರ್ಥವಾಯಿತಲ್ಲವೆ? ಹೀಗೆ ಸತ್ತ ಅಂಡಾಣು, ಕಳಚಿಬಿದ್ದ ಗರ್ಭಕೋಶದ ಒಳಪದರ ಇವುಗಳೆಲ್ಲ ಸೇರಿಕೊಂಡು ರಕ್ತದ ರೂಪದಲ್ಲಿ ಯೋನಿಯಿಂದ ಹೊರದೂಡಲ್ಪಡುತ್ತದೆ. ಇದನ್ನೇ ನಾವು ತಿಂಗಳ 'ಮುಟ್ಟು' ಅಥವಾ 'ಋತುಸ್ರಾವ' ಎನ್ನುತ್ತೇವೆ. ಆದ್ದರಿಂದ 'ಮುಟ್ಟು' ಕೆಟ್ಟ ರಕ್ತವಲ್ಲ. ನಮ್ಮ ದೇಹದ ರಕ್ತದ ಇನ್ನೊಂದು ಭಾಗವೇ ಎಂದು ತಿಳಿಯಿತಲ್ಲವೇ? ಇದರ ಬಗ್ಗೆ ಜುಗುಪ್ಸೆ, ಅಸಹ್ಯ ಮನೋಭಾವಗಳು ಸರಿಯಲ್ಲ.

○ ಡಾ. ವಸುಂಧರಾ ಭೂಪತಿ

ಮುಟ್ಟಿನ ಪ್ರಕ್ರಿಯೆ



೧. ಅಂಡಾಣು ಡಿಂಭನಳಿಕೆಯಲ್ಲಿ ೨. ಅಂಡಾಣು ಗರ್ಭಕೋಶದಲ್ಲಿ ೩. ಕಾರ್ಪಸ್ ಲ್ಯೂಟಿಯಂ ೪. ಮುಟ್ಟು

ಸಾಮಾನ್ಯವಾಗಿ ಹದಿಮೂರು-ಹದಿನಾಲ್ಕನೆಯ ವಯಸ್ಸಿಗೆ ನಮ್ಮ ದೇಶದ ಹುಡುಗಿಯರು ಋತುಮತಿಯರಾಗುತ್ತಾರೆ. ಕೆಲವರು ಸ್ವಲ್ಪ ಮುಂಚೆ, ಇನ್ನು ಕೆಲವರು ಸ್ವಲ್ಪ ತಡವಾಗಿಯೂ ಆಗಬಹುದು. ಒಮ್ಮೆ ಋತುಮತಿಯಾದ ಹುಡುಗಿ ಪ್ರತಿ ತಿಂಗಳೂ ಮುಟ್ಟಾಗುತ್ತಾ ಹೋಗುತ್ತಾಳೆ. ಆರೋಗ್ಯವಂತ ಸ್ತ್ರೀ ಇಪ್ಪತ್ತೆಂಟು ಅಥವಾ ಮೂವತ್ತು ದಿನಗಳಿಗೊಂದು ಬಾರಿ ಮುಟ್ಟಾಗುತ್ತಾಳೆ. ಕೆಲವು ಬಾರಿ ಹಾರ್ಮೋನಿನ ಏರುಪೇರಿನಿಂದ ಬೇಗನೇ ಆಗಬಹುದು. ಮುಟ್ಟಿನ ಸಮಯದಲ್ಲಿ ಸಾಧಾರಣವಾಗಿ ಮೂರರಿಂದ ಐದು ದಿನಗಳ ಕಾಲ ರಕ್ತಸ್ರಾವವಾಗುತ್ತದೆ. ಕೆಲವರಲ್ಲಿ ಏಳೆಂಟು ದಿನಗಳವರೆಗೂ ಸ್ರಾವವಾಗಬಹುದು.

ಹೊಟ್ಟೆನೋವು ಏಕೆ ಬರುತ್ತದೆ?

ಹೆಸರೇ ಸೂಚಿಸುವಂತೆ ಇದು ಮುಟ್ಟಿನ ಸಮಯದಲ್ಲಿ ಮಾತ್ರ ಬರುವಂತಹದು. ಕೆಲವರಿಗೆ ಮುಟ್ಟಾದ ಒಂದೆರಡು ಗಂಟೆಗಳು ಮಾತ್ರ

ಮೊಲೆ ನೋವೂ ಬರುವುದುಂಟು

ಸಾಧಾರಣವಾಗಿ ಮುಟ್ಟಾಗುವ ಒಂದು ವಾರಕ್ಕೆ ಮುಂಚೆ ಅನೇಕರಿಗೆ ಮೊಲೆ ನೋವು ಕಾಣಿಸಿಕೊಳ್ಳುತ್ತದೆ. ಇದನ್ನು ಹೃದಯಕ್ಕೆ ಸಂಬಂಧಿಸಿದ್ದೆಂದು ಗಾಬರಿಯಾಗುತ್ತಾರೆ. ಈ ನೋವು ಈಸ್ಟ್ರೋಜೆನ್ ಹಾರ್ಮೋನು ಹೆಚ್ಚಾಗಿ ಸ್ರವಿಸುವುದರಿಂದ ಬರುತ್ತದೆ. ಮುಟ್ಟಾದ ಬಳಿಕ ಈ ನೋವು ತನ್ನಿಂದ ತಾನೇ ಮಾಯವಾಗುತ್ತದೆ.

ಅವಿವಾಹಿತ ಯುವತಿಯರಲ್ಲಿ, ಮಕ್ಕಳಾಗದವರಲ್ಲಿ ಹಾಗೂ ಹೆದರಿಕೆಯ ಮನೋಭಾವದವರಲ್ಲಿ ಈ ನೋವು ಅಧಿಕವಾಗಿ ಕಂಡುಬರುತ್ತದೆ.



ಋತುಮತಿಯಾದ ಕಿಶೋರಿಗೇಕೆ ಪಬ್ಲಿಸಿಟಿ?

ಹುಡುಗಿಯರು ಋತುಮತಿಯಾಗುವುದು ಸಹಜ ಕ್ರಿಯೆ. ಈ ಬಗ್ಗೆ ತೀವ್ರ ದಿಗಿಲುಪಡಲು ಕಾರಣವೇನಿದೆ?

ಯುಕ್ತ ವಯಸ್ಸು ಬಂದಾಗ ಗಂಡು ಮಕ್ಕಳಲ್ಲಾಗಲೀ, ಹೆಣ್ಣು ಮಕ್ಕಳಲ್ಲಾಗಲೀ ದೈಹಿಕವಾಗಿ, ಮಾನಸಿಕವಾಗಿ ಕೆಲವು ಬದಲಾವಣೆಗಳಾಗುವುದು ಸಹಜ. ಗಂಡು ಹುಡುಗರಿಗಾದರೆ ಕಂಠಸ್ವರ ಬದಲಾಗುವುದು, ದೈಹಿಕ ಬೆಳವಣಿಗೆಯಾಗುವುದು, ಮೈ ಕೋಮಲತ್ವ ಕಡಿಮೆಯಾಗಿ ಗಡುಸಾಗುವುದು, ಮೀಸೆಗಳು ಚಿಗುರುವುದು ಇತ್ಯಾದಿ ಸಹಜವೇ.

ಹಾಗೆಯೇ ಹೆಣ್ಣು ಯುಕ್ತ ವಯಸ್ಸಿಗೆ ಬಂದಾಗ ಅಂಗಾಂಗಗಳಲ್ಲಿ ಬದಲಾವಣೆ ಕಂಡುಬರುವುದು. ನಾಚಿಕೆ, ಭಯ, ಹೆಣ್ತನ ಮುಂತಾದ ಮಾನಸಿಕ ಅನಿಸಿಕೆಗಳು ಆಗಮನವಾಗುವವು. ಹನ್ನೆರಡರಿಂದ ಹದಿನಾರು ವಯಸ್ಸಿನ ಹುಡುಗಿಯರು ಋತುಮತಿಯಾಗುವುದು ಸಹಜ ಕ್ರಿಯೆ. ಕೆಲವರು ಹನ್ನೆರಡರ ಒಳಗೆ ಹದಿನಾರರ ನಂತರವೂ ಆಗಬಹುದು. ಈ ಬಗ್ಗೆ ತೀವ್ರ ದಿಗಿಲುಪಡಲು ಕಾರಣವೇನಿದೆ?

ತಕ್ಕ ವಯಸ್ಸಿಗೆ ಶರೀರದಲ್ಲಿ ಸಂಭವಿಸುವ ಈ ಬದಲಾವಣೆ ಒಂದು ಸಹಜವಾದ ಪರಿಣಾಮವೇ ಆದರೂ ಕೆಲವರಿಗೆ ಕ್ಲೇಶ ಕೆಲವರಿಗೆ ಮೋಜು. ಈ ಸಮಯದಲ್ಲಿ ಹೆಣ್ಣು ಹುಡುಗಿಯರು ಸಹಜವಾಗಿಯೇ ನಾಚಿಕೆ, ಭಯಕಂಪಿತರಾಗುವರು. ಕೆಲವರಿಗಂತೂ ಸ್ವಲ್ಪಮಟ್ಟಿಗೆ ಜ್ವರ ಕೂಡಾ ಬರಬಹುದು. ಅಂತಹ ಸಂದರ್ಭದಲ್ಲಿ ಆಡಂಬರದ ಕಾರ್ಯಕ್ರಮ ಹಮ್ಮಿಕೊಂಡು 'ಪಬ್ಲಿಸಿಟಿ' ಮಾಡುವುದು ಕೆಲವು ವಿದ್ಯಾವಂತ ಹುಡುಗಿಯರಿಗೆ ಬೇಕಾಗಿರುವುದಿಲ್ಲ. ಆದರೆ ಸಂಪ್ರದಾಯಗಳ ಕಾರಣದಿಂದಲೋ ಏನೋ ತಂದೆ ತಾಯಿಗಳು ಇವರ ಆಲೋಚನೆಗಳಿಗೆ ಸ್ಪಂದಿಸುವುದಿಲ್ಲ. ಹೀಗೆ ಸ್ಪಂದಿಸದೆ ಇರುವುದು ಅಪೇಕ್ಷಣೀಯವಲ್ಲ. ಏಕೆಂದರೆ, ಪರಿವರ್ತನಶೀಲ ಸಮಾಜದಲ್ಲೂ ಈ ಆಡಂಬರದ ಕಾರ್ಯಕ್ರಮಗಳನ್ನು ಮಾಡಿ ಮುಗಿಸಬೇಕೆಂಬ ಹಟ ಸಮರ್ಥನೀಯವೇ? ಮೊದಲೇ ಬೆದರಿ ಬೆವರಿ ನೀರಾಗುವ ಬಾಲೆಯನ್ನು ಇನ್ನೂ ಸಂಕಷ್ಟಕ್ಕೆ ಇಟ್ಟಂತಾಗುತ್ತದೆಯಲ್ಲವೇ? ಆದ್ದರಿಂದ ಜನ್ಮದಾತರು ಇಂತಹ ವಿಷಯಗಳನ್ನು ಹೆಚ್ಚು 'ಪಬ್ಲಿಸಿಟಿ' ಮಾಡದೆ ನಿರಾಡಂಬರದಿಂದ ಅನಿವಾರ್ಯವಿದ್ದವುಗಳನ್ನು ಮಾತ್ರ ಮಾಡಿ ಮುಗಿಸಬೇಕು.

ಈ ಸಮಯದಲ್ಲಿ ತಳಮಳಗೊಳ್ಳುವ, ಚಿಂತಿಸುವ ಹೆಣ್ಣು ಮಗಳಿಗೆ ಮನೆಯವರು, ಸ್ನೇಹಿತೆಯರು ಧೈರ್ಯ ತುಂಬಬೇಕು. ಋತುಮತಿಯಾದಳೆಂದರೆ ಸಾಕು ಏನೋ ಬಂಧನದಲ್ಲಿಟ್ಟಂತೆ ಭಾವಿಸುವುದು ಸರಿಯಲ್ಲ. ಮೊದಲಿದ್ದಂತೆ ಇರಲು ಆಕೆಗೆ ತಂದೆ ತಾಯಿಗಳು ಅವಕಾಶ ಮಾಡಿಕೊಡಬೇಕು. ಮುಖ್ಯವಾಗಿ ತಾಯಿ ಮಗಳಿಗೆ ಧೈರ್ಯ ತುಂಬಿ ಮನೋಸ್ಥೈರ್ಯ ಹೆಚ್ಚಿಸಬೇಕು. ಯಾವ ಸಮಸ್ಯೆಗಳೂ ಬರದಂತೆ ನೋಡಿಕೊಳ್ಳಬೇಕು.

ಮಗಳು ದೊಡ್ಡಾಕೆಯಾದ ತಕ್ಷಣವೇ ಮದುವೆಯ ಬಗ್ಗೆ ಆಲೋಚಿಸಿ ಚಿಂತೆಗೀಡಾಗುವುದು ಉಚಿತವಲ್ಲ. ಹೀಗೆ ಮಾಡುವುದರಿಂದ ಹುಡುಗಿಯರಲ್ಲಿ ಆತ್ಮವಿಶ್ವಾಸ, ಧೈರ್ಯ ಇಲ್ಲದಂತಾಗಿ ಅವರೂ ಚಿಂತೆಗೊಳಗಾಗುವರು. ಅನೇಕ ಚಿಂತಕರು ಹೇಳುವಂತೆ, ''ಮದುವೆಯೊಂದೇ ಜೀವನದ ಧ್ಯೇಯವಲ್ಲ. ಚೆನ್ನಾಗಿ ಓದಿ, ಸ್ವಯಂ ಕೃಷಿಯಿಂದ ಬಾಳುವುದೇ ಜೀವನದ ಧ್ಯೇಯ'' ಎಂಬಂತಹ ಸ್ಫೂರ್ತಿದಾಯಕ ಮಾತುಗಳನ್ನು ಹೇಳಿ ಮಕ್ಕಳ ಮನದಲ್ಲಿ ಮುದವನ್ನು ಮೂಡಿಸಬೇಕು.

ಋತುಮತಿಯಾಗುವುದು ಹೆಣ್ಣಿನ ಜೀವನಕ್ಕೆ ಹುಣ್ಣೆಂದು ಭಾವಿಸದೆ ಅದು ಒಂದು ಸಹಜ ಕ್ರಿಯೆ ಎಂಬುದನ್ನು ಮನಗಂಡು ಆಕೆಯ ಮೂಕವೇದನೆಯನ್ನು ನಿವಾರಿಸುವ ಸ್ವಾಸ್ಥ್ಯ ಸಮಾಜ ನಮ್ಮದಾದಾಗ ಸ್ತ್ರೀ ಸಂತತಿಗೆ ಆಶಾಕಿರಣ ಮೂಡಿದಂತೆಯೇ!

○ ಎನ್. ಎಂ. ಮರುಳಾರಾಧ್ಯ

ಗಂಡನ ಕರ್ತವ್ಯ

ಮುಟ್ಟಾದ ಸಮಯದಲ್ಲಿ ಗಂಡ ಹೆಂಡತಿಯ ಭಾವನೆಗಳಿಗೂ ಬೆಲೆ ಕೊಡುವುದು ಸೂಕ್ತ. ತನ್ನ ಪತ್ನಿಗೆ ಯಾವಾಗಲೂ ಪ್ರೀತಿ, ವಿಶ್ವಾಸ ಮುಖ್ಯವೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಮುಟ್ಟಾದಾಗ ಪತ್ನಿ ಪತಿಯಿಂದ ದೂರವಾಗಿ ಬೇರೆ ಮಲಗುವ ಅಗತ್ಯವೂ ಇಲ್ಲ. ಇಬ್ಬರೂ ತಮಗೆ ಪ್ರಿಯವಾದ ಸಂಗೀತವನ್ನೋ ಕಾರ್ಯಕ್ರಮವನ್ನೋ ಹಾಕಿಕೊಂಡು ಆನಂದದಿಂದ ಕಾಲ ಕಳೆದರೆ ದಂಪತಿಗಳಲ್ಲಿ ಹೆಚ್ಚು ಅನ್ಯೋನ್ಯತೆ ಮೂಡುತ್ತದೆ.

ಹೆಣ್ಣು ಗಂಡಸಿಗಿಂತ ಸೂಕ್ಷ್ಮ, ಭಾವಜೀವಿ ಎನ್ನುವ ಮಾತು ಹಲವರ ಅಭಿಪ್ರಾಯ. ಹೆಣ್ಣಿನ ದೇಹದಲ್ಲಿ ಹಾರ್ಮೋನುಗಳ ಏರುಪೇರಿನಿಂದ ಮಾನಸಿಕವಾಗಿ ಕೆಲವು ಸಮಯದಲ್ಲಿ ಅಸ್ವಸ್ಥಳಾಗಿ ಹೆಚ್ಚು ಉದ್ವೇಗಗೊಳ್ಳುತ್ತಾಳೆ. ಇದು ಮುಟ್ಟಾಗುವ ಮುನ್ನ ಹೆಚ್ಚಾಗಿ ಕಂಡು ಬರುತ್ತದೆ. ಇದಕ್ಕೆ 'ಪ್ರೀಮೆನ್ಸ್ಟ್ರುಯಲ್ ಟೆನ್‌ಷನ್' (pre-menstrual tension) ಎಂದು ಕರೆಯಲಾಗುತ್ತದೆ. ಹೆಂಗಸರಿಗೆ ಮುಟ್ಟಾಗುವ ಮುನ್ನ ಹಾಗೂ ಮುಟ್ಟಿನ ಸಮಯದಲ್ಲಿ ಮಾನಸಿಕ ತೊಂದರೆಗಳಿರುತ್ತದೆ. ಆಲಸಿಕೆ, ತಲೆನೋವು ಅನವಶ್ಯಕ ಅತಂಕ, ಕಾರಣವಿಲ್ಲದೇ ಕೋಪ ತಾಪ, ಸ್ತನಗಳಲ್ಲಿ ನೋವು ಮುಂತಾದ ತೊಂದರೆಗಳು ಸಾಮಾನ್ಯ. ಕೆಲವರಿಗೆ ಕಿಬ್ಬೊಟ್ಟೆಯಲ್ಲಿ ನೋವು ನವಿರಾಗಿ ಅಥವಾ ಅಧಿಕ ಪ್ರಮಾಣದಲ್ಲಿ ಉಂಟಾಗುತ್ತದೆ. ಋತುಸ್ರಾವ ಪ್ರಾರಂಭವಾದಾಗ ಈ ತೊಂದರೆಗಳೆಲ್ಲ ಕ್ರಮೇಣ ಮರೆಯಾಗುತ್ತದೆ. ಇದು ಸಹಜವಾದ ಏರುಪೇರುಗಳೆಂದು ಇಂದಿನ ಸುಶಿಕ್ಷಿತ ಮಹಿಳೆ ಗ್ರಹಿಸಬೇಕು. ಮುಟ್ಟಾದಾಗ ಉಂಟಾಗುವ ಮಾನಸಿಕ ಘರ್ಷಣೆಗಳಿಗೆ ಹೆಂಗಸರಿಗೆ ಯೋಗಾಭ್ಯಾಸ ಬಹಳ ಉಪಯೋಗವಾಗುತ್ತದೆ.

ಮುಟ್ಟಿನ ಸಮಯದ ಹೊಟ್ಟೆನೋವು




ಮುಟ್ಟಿನ ಸಮಯದಲ್ಲಿ ಉಂಟಾಗುವ ಹೊಟ್ಟೆನೋವನ್ನು ಅನುಭವಿಸದಿರುವ ಸ್ತ್ರೀಯರೇ ವಿರಳವೆನ್ನಬಹುದು. ಹೊಟ್ಟೆನೋವಿನ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಮುಂಚೆ ಮುಟ್ಟು ಅಂದರೆ ಋತುಸ್ರಾವ ಹೇಗೆ ಉಂಟಾಗುತ್ತದೆಂದು ತಿಳಿದುಕೊಳ್ಳೋಣ.

ಋತುಸ್ರಾವ ಎಂದರೇನು?

ಬಾಲ್ಯಾವಸ್ಥೆಯಿಂದ ತಾರುಣ್ಯಾವಸ್ಥೆಗೆ ಕಾಲಿಡುವಾಗ ಹೆಣ್ಣಿನಲ್ಲಿ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳಾಗುತ್ತವೆ. ಮೆದುಳಿನ ಬುಡದಲ್ಲಿರುವ ನಿರ್ನಾಳ ಗ್ರಂಥಿಯು ಹಾರ್ಮೋನುಗಳನ್ನು ಸ್ರವಿಸಲು ಪ್ರಾರಂಭಿಸುತ್ತದೆ. ಅಂಡಾಶಯದ ಕೋಶಿಕೆಗಳನ್ನು ಪ್ರಚೋದನೆಗೊಳಿಸುವ

ಮುಟ್ಟಿನ ಪ್ರಕ್ರಿಯೆ



೧. ಅಂಡಾಣು ಡಿಂಭನಳಿಕೆಯಲ್ಲಿ ೨. ಅಂಡಾಣು ಗರ್ಭಕೋಶದಲ್ಲಿ ೩. ಕಾರ್ಪಸ್ ಲ್ಯೂಟಿಯಂ ೪. ಮುಟ್ಟು

ಹಾರ್ಮೋನಿನಿಂದಾಗಿ ಅಂಡಾಣು ಮಾಗಿ, ಅಂಡಾಶಯದ ಹೊರಪದರಕ್ಕೆ ಬಂದು ಅಲ್ಲಿ ಒಡೆಯುತ್ತದೆ. ಹೀಗೆ ಮಾಗಿದ ಅಂಡಾಣು ಅಂಡಾಶಯದಿಂದ ಹೊರಬಂದೊಡನೆ ಡಿಂಭನಳಿಕೆಯು ಅದನ್ನಾಕರ್ಷಿಸಿ ನಳಿಕೆಯೊಳಗೆ ಎಳೆದುಕೊಳ್ಳುತ್ತದೆ. ಈ ರೀತಿ ತಿಂಗಳಿಗೊಂದರಂತೆ ಅಂಡಾಣು ಮಾಗಿ ಹೊರಬರುತ್ತದೆ. ಅಂಡಾಶಯದಲ್ಲಿ ಈ ಬದಲಾವಣೆಯಾಗುತ್ತಿರುವಾಗ ಈಸ್ಟ್ರೋಜೆನ್ ಎಂಬ ಹಾರ್ಮೋನು ಸ್ರವಿಸುತ್ತದೆ. ಗರ್ಭಕೋಶವೇ ಈ ಹಾರ್ಮೋನಿನ ಕಾರ್ಯಬಿಂದುವಾಗಿರುತ್ತದೆ. ಈಸ್ಟ್ರೋಜೆನ್ ಪ್ರಚೋದನೆಯಿಂದಾಗಿ ಗರ್ಭಕೋಶದ ಒಳಪದರವು ರಕ್ತನಾಳಗಳು, ಗ್ರಂಥಿಗಳೊಡಗೂಡಿ ಬೆಳೆಯಲಾರಂಭಿಸುತ್ತದೆ. ಅಂಡಾಣು ವೀರ್ಯಾಣುವಿನೊಡನೆ ಮಿಲನವಾಗಿ ಫಲಿತಗೊಂಡು ಭ್ರೂಣವಾಗಿ ಅದು ನೆಲೆಸಲು ಮೆತ್ತಗಿನ ಹಾಸಿಗೆಯಂತಹ ಪದರವನ್ನು ಸಿದ್ಧಗೊಳಿಸುವುದು ಈ ಬೆಳವಣಿಗೆಯ ಉದ್ದೇಶವಾಗಿರುತ್ತದೆ. ಅಂಡಾಣು ಅಂಡಾಶಯದಿಂದ ಹೊರಬಂದಾಗ, ಉಂಟಾದ ಖಾಲಿ ಜಾಗದಲ್ಲಿ ಕಾರ್ಪಸ್ ಲೂಟಿಯಂ ಎಂಬ ವಿಶಿಷ್ಟ ಕೋಶಿಕೆ ಮೂಡುತ್ತದೆ. ಇದು

○ ಡಾ. ವಸುಂಧರಾ ಭೂಪತಿ

ಪ್ರೊಜೆಸ್ಟೆರಾನ್ ಎಂಬ ಹಾರ್ಮೋನನ್ನು ಸ್ರವಿಸುತ್ತದೆ. ಈ ಹಾರ್ಮೋನು ಸಹ ಗರ್ಭಕೋಶದ ಒಳಪದರವನ್ನು ಇನ್ನಷ್ಟು ದಪ್ಪ ಮಾಡುವುದರಲ್ಲಿ ಸಹಾಯಕಾರಿಯಾಗುತ್ತದೆ. ಡಿಂಭನಳಿಕೆಯೊಳಗೆ ಮೆಲ್ಲನೆ ಮುಂದುವರಿಯುತ್ತಾ ಬರುವ ಅಂಡಾಣು ವೀರ್ಯಾಣುವಿಗಾಗಿ ಕಾಯುತ್ತದೆ. ವೀರ್ಯಾಣು ಎರಡು ಮೂರು ದಿನದೊಳಗೆ ಸಿಗದೇ ಹೋದರೆ ಅಂಡಾಣು ಸಾಯುತ್ತದೆ. ಅಂಡಾಣು ನಾಶವಾದೊಡನೆ ಅಂಡಾಶಯ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟೆರಾನ್ ಹಾರ್ಮೋನುಗಳನ್ನು ಸ್ರವಿಸುವುದನ್ನು ನಿಲ್ಲಿಸಿಬಿಡುತ್ತದೆ. ಹೀಗೆ ಹಾರ್ಮೋನುಗಳ ಪ್ರಚೋದನೆ ನಿಂತುಹೋದಾಗ, ಗರ್ಭಕೋಶದ ಒಳಪದರ ಚೂರುಚೂರಾಗಿ ಕಳಚಿಬೀಳುತ್ತದೆ. ಭ್ರೂಣದ ಆಗಮನವಾಗಲಿಲ್ಲವಾಗಿ ಗರ್ಭಕೋಶದ ಸಿದ್ಧತೆಯೆಲ್ಲ ವ್ಯರ್ಥವಾಯಿತಲ್ಲವೆ? ಹೀಗೆ ಸತ್ತ ಅಂಡಾಣು, ಕಳಚಿಬಿದ್ದ ಗರ್ಭಕೋಶದ ಒಳಪದರ ಇವುಗಳೆಲ್ಲ ಸೇರಿಕೊಂಡು ರಕ್ತದ ರೂಪದಲ್ಲಿ ಯೋನಿಯಿಂದ ಹೊರದೂಡಲ್ಪಡುತ್ತದೆ. ಇದನ್ನೇ ನಾವು ತಿಂಗಳ 'ಮುಟ್ಟು' ಅಥವಾ 'ಋತುಸ್ರಾವ' ಎನ್ನುತ್ತೇವೆ. ಆದ್ದರಿಂದ 'ಮುಟ್ಟು' ಕೆಟ್ಟ ರಕ್ತವಲ್ಲ. ನಮ್ಮ ದೇಹದ ರಕ್ತದ ಇನ್ನೊಂದು ಭಾಗವೇ ಎಂದು ತಿಳಿಯಿತಲ್ಲವೇ? ಇದರ ಬಗ್ಗೆ ಜುಗುಪ್ಸೆ, ಅಸಹ್ಯ ಮನೋಭಾವಗಳು ಸರಿಯಲ್ಲ.

ಸಾಮಾನ್ಯವಾಗಿ ಹದಿಮೂರು-ಹದಿನಾಲ್ಕನೆಯ ವಯಸ್ಸಿಗೆ ನಮ್ಮ ದೇಶದ ಹುಡುಗಿಯರು ಋತುಮತಿಯರಾಗುತ್ತಾರೆ. ಕೆಲವರು ಸ್ವಲ್ಪ ಮುಂಚೆ, ಇನ್ನು ಕೆಲವರು ಸ್ವಲ್ಪ ತಡವಾಗಿಯೂ ಆಗಬಹುದು. ಒಮ್ಮೆ ಋತುಮತಿಯಾದ ಹುಡುಗಿ ಪ್ರತಿ ತಿಂಗಳೂ ಮುಟ್ಟಾಗುತ್ತಾ ಹೋಗುತ್ತಾಳೆ. ಆರೋಗ್ಯವಂತ ಸ್ತ್ರೀ ಇಪ್ಪತ್ತೆಂಟು ಅಥವಾ ಮೂವತ್ತು ದಿನಗಳಿಗೊಂದು ಬಾರಿ ಮುಟ್ಟಾಗುತ್ತಾಳೆ. ಕೆಲವು ಬಾರಿ ಹಾರ್ಮೋನಿನ ಏರುಪೇರಿನಿಂದ ಬೇಗನೇ ಆಗಬಹುದು. ಮುಟ್ಟಿನ ಸಮಯದಲ್ಲಿ ಸಾಧಾರಣವಾಗಿ ಮೂರರಿಂದ ಐದು ದಿನಗಳ ಕಾಲ ರಕ್ತಸ್ರಾವವಾಗುತ್ತದೆ. ಕೆಲವರಲ್ಲಿ ಏಳೆಂಟು ದಿನಗಳವರೆಗೂ ಸ್ರಾವವಾಗಬಹುದು.

ಹೊಟ್ಟೆನೋವು ಏಕೆ ಬರುತ್ತದೆ?

ಹೆಸರೇ ಸೂಚಿಸುವಂತೆ ಇದು ಮುಟ್ಟಿನ ಸಮಯದಲ್ಲಿ ಮಾತ್ರ ಬರುವಂತಹದು. ಕೆಲವರಿಗೆ ಮುಟ್ಟಾದ ಒಂದೆರಡು ಗಂಟೆಗಳು ಮಾತ್ರ

ಮೊಲೆ ನೋವೂ ಬರುವುದುಂಟು

ಸಾಧಾರಣವಾಗಿ ಮುಟ್ಟಾಗುವ ಒಂದು ವಾರಕ್ಕೆ ಮುಂಚೆ ಅನೇಕರಿಗೆ ಮೊಲೆ ನೋವು ಕಾಣಿಸಿಕೊಳ್ಳುತ್ತದೆ. ಇದನ್ನು ಹೃದಯಕ್ಕೆ ಸಂಬಂಧಿಸಿದ್ದೆಂದು ಗಾಬರಿಯಾಗುತ್ತಾರೆ. ಈ ನೋವು ಈಸ್ಟ್ರೋಜೆನ್ ಹಾರ್ಮೋನು ಹೆಚ್ಚಾಗಿ ಸ್ರವಿಸುವುದರಿಂದ ಬರುತ್ತದೆ. ಮುಟ್ಟಾದ ಬಳಿಕ ಈ ನೋವು ತನ್ನಿಂದ ತಾನೇ ಮಾಯವಾಗುತ್ತದೆ.

ಅವಿವಾಹಿತ ಯುವತಿಯರಲ್ಲಿ, ಮಕ್ಕಳಾಗದವರಲ್ಲಿ ಹಾಗೂ ಹೆದರಿಕೆಯ ಮನೋಭಾವದವರಲ್ಲಿ ಈ ನೋವು ಅಧಿಕವಾಗಿ ಕಂಡುಬರುತ್ತದೆ.



ನೋವಿರುತ್ತದೆ. ಮತ್ತೆ ಕೆಲವರಿಗೆ ಮೂರು, ನಾಲ್ಕು ದಿನ ಇರಬಹುದು. ಬಹಳಷ್ಟು ಜನರು ನೋವು ತಡೆದುಕೊಂಡು ದಿನನಿತ್ಯದ ಕೆಲಸ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ನೋವು ತಡೆಯದೇ ಹೊರಳಾಡುತ್ತಾರೆ.

ಗರ್ಭಕೋಶದ ಸಂಕುಚನದಿಂದ ಈ ನೋವು ಬರುತ್ತದೆ. ಗರ್ಭಕೋಶ ತನ್ನೊಳಗಿನ ವಸ್ತುಗಳನ್ನು ಹೊರಹಾಕುವವರೆಗೂ ಈ ನೋವು ಇರುತ್ತದೆ. ಇದು ಎಲ್ಲರಿಗೂ ಇದ್ದದ್ದೇ. ಆದರೆ ನೋವು-ತಡೆಯಲು ಶಕ್ತಿಯಿರದವರಿಗೆ ಇದೊಂದು ದೊಡ್ಡ ಪಿಡುಗಾಗಿ ಕಾಡುತ್ತದೆ. ಋತುಮತಿಯಾದ ಹೊಸತರಲ್ಲಿ ಈ ನೋವು ಸಾಮಾನ್ಯ. ಮದುವೆಯಾಗಿ ಒಂದು ಮಗುವಾದ ಮೇಲೆ ಯಾವ ಚಿಕಿತ್ಸೆಯೂ ಇಲ್ಲದೇ ಗುಣವಾಗುತ್ತದೆ.

ಈ ನೋವು ಉಂಟು ಮಾಡುವ ಕೆಲವು ಕಾರಣಗಳು :

೧. ಹಾರ್ಮೋನಿನ ಏರುಪೇರು : ಗರ್ಭಕೋಶ ಸಂಕುಚಿಸಿದಾಗ, ಗರ್ಭಕೋಶದ ಕುತ್ತಿಗೆ ಸಡಿಲಗೊಂಡು ಅಂತರ್ಮುಖ, ಬಹಿರ್ಮುಖಗಳೆರಡೂ ತೆರೆದುಕೊಳ್ಳಬೇಕು. ಆಗ ರಕ್ತಸ್ರಾವ ಸುಲಭವಾಗಿ ಆಗುತ್ತದೆ. ಪ್ರೊಜೆಸ್ಟೆರಾನ್ ಹಾರ್ಮೋನಿನ ಸ್ರಾವ ಜಾಸ್ತಿಯಾದಾಗ ಈ ಹೊಂದಾಣಿಕೆ ಏರುಪೇರಾಗುತ್ತದೆ. ಆದ್ದರಿಂದ ನೋವು ಉಂಟಾಗುತ್ತದೆ.

೨. ಗರ್ಭಕೋಶದ ತೊಂದರೆಗಳು : ಗರ್ಭಕೋಶ ಮುಂದೆ ಅಥವಾ ಹಿಂದೆ ಬಾಗಿರುವಿಕೆ, ಗರ್ಭಕೋಶದ ಮಧ್ಯೆ ಅಡ್ಡಗೋಡೆ ಇರುವುದು ಹಾಗೂ ಗರ್ಭಕೋಶದಲ್ಲಿ ಸೋಂಕು ಉಂಟಾಗಿದ್ದರೂ ನೋವು ಬರಬಹುದು.

೩. ಮಾನಸಿಕ ಕಾರಣಗಳು : ಮುಟ್ಟಿನ ಬಗ್ಗೆ ಇರುವ ಜುಗುಪ್ಸೆ, ಭೀತಿಗಳು ನೋವಿಗೆ ಮೂಲವಾಗಬಹುದು. ಮುಟ್ಟಾದವರು ಪ್ರತ್ಯೇಕ ಕುಳಿತುಕೊಳ್ಳುವ ಅಭ್ಯಾಸವಿರುವ ಮನೆಗಳಲ್ಲಿ ಅಸಹ್ಯದ ಭಾವನೆಯಿಂದಲೂ ನೋವು ಉಂಟಾಗಬಹುದು. ಪರರ ಗಮನವನ್ನು ಸೆಳೆಯಲು ಹಾಗೂ ಬೇರೆಯವರಲ್ಲಿ ತನ್ನ ಬಗ್ಗೆ ಅನುಕಂಪ ಮೂಡಿಸಲು ನೋವು ನೆರವಾಗುತ್ತದೆ.

ಕಷ್ಟಪಟ್ಟು ಕೆಲಸ ಮಾಡುವವರಿಗೆ ಈ ನೋವು ಬರುವುದು ಬಲು ಕಡಿಮೆ. ಹೆಚ್ಚಾಗಿ ಮಧ್ಯಮ ಹಾಗೂ ಶ್ರೀಮಂತ ವರ್ಗದ ಹೆಣ್ಣು ಮಕ್ಕಳಲ್ಲಿ, ನೋವು ತಡೆಯುವ ಶಕ್ತಿ ಇಲ್ಲದಿದ್ದರಿಂದ ಅಂಥವರಲ್ಲಿ ನೋವು ಅಧಿಕವಾಗಿರುತ್ತದೆ. ಸಾಮಾನ್ಯವಾಗಿ ಮದುವೆಯ ನಂತರ ಇಲ್ಲವೇ ಮಗುವಾದ ಮೇಲೆ ಈ ನೋವು ಮಾಯವಾಗಿಬಿಡುತ್ತದೆ.

ಬಹಳಷ್ಟು ಜನರು ತಮಗೇನೋ ದೊಡ್ಡ ತೊಂದರೆಯಿರುವುದರಿಂದ ಹೊಟ್ಟೆನೋವು ಬರುತ್ತದೆ ಎಂದು ತಿಳಿದಿರುತ್ತಾರೆ. ಕೆಲವರು ಈ ಹೊಟ್ಟೆನೋವಿದ್ದರೆ ಮಕ್ಕಳಾಗುವುದಿಲ್ಲ ಎಂದು ಭಾವಿಸಿಕೊಂಡಿರುತ್ತಾರೆ. ಅದೆಲ್ಲವೂ ಬರೀ ಮೂಢನಂಬಿಕೆಯಷ್ಟೆ.

ಹೊಟ್ಟೆನೋವಿಗೆ ಚಿಕಿತ್ಸೆ

ನೋವಿನ ಕಡೆಗೆ ಗಮನ ಕೊಡದಿರುವುದೇ ಮುಖ್ಯ ಚಿಕಿತ್ಸೆ. ಈ ಸಮಯದಲ್ಲಿ ಮನಸ್ಸನ್ನು ಬೇರೆ ಕೆಲಸ ಕಾರ್ಯಗಳಲ್ಲಿ ತೊಡಗಿಸುವುದೊಳ್ಳೆಯದು. ಬಹಳಷ್ಟು ನೋವಿದ್ದರೆ ಈ ಕೆಳಗೆ ತಿಳಿಸಿದ ಚಿಕಿತ್ಸೆ ಮಾಡಿಕೊಳ್ಳಬಹುದು. ನೋವು ನಿವಾರಕ ಮಾತ್ರೆ ತೆಗೆದುಕೊಳ್ಳಬಹುದು. ಔಷಧಿ ಚಿಕಿತ್ಸೆಗೂ ಕಡಿಮೆಯಾಗದಿದ್ದಲ್ಲಿ ಸ್ತ್ರೀರೋಗ ತಜ್ಞರನ್ನು ಕಾಣುವುದೊಳ್ಳೆಯದು.

೧. ತುಂಬೆಯ ರಸ ಒಂದು ಚಮಚ, ಒಂದು ಚಮಚ ನಿಂಬೆ ರಸ ತೆಗೆದುಕೊಂಡು ಅದರಲ್ಲಿ ಚಿಟಿಕೆ ಉಪ್ಪು ಸೇರಿಸಿ ತಕ್ಷಣವೇ ಸೇವಿಸಬೇಕು. ಮಾಸಿಕ ಸ್ರಾವದ ಮೊದಲ ಮೂರು ದಿನ ದಿನಕ್ಕೆರಡು ಬಾರಿ ಸೇವಿಸಬೇಕು. ಹೀಗೆ ಮೂರು ತಿಂಗಳೂ ರಜಸ್ರಾವವಾದಾಗ ತೆಗೆದುಕೊಳ್ಳಬೇಕು.

೨. ಒಂದು ಬಾಳೆಯ ಹಣ್ಣಿನಲ್ಲಿ ತುಪ್ಪದಲ್ಲಿ ಹುರಿದು ಶುದ್ಧ ಮಾಡಿದ ಇಂಗನ್ನು (ಹಿಂಗು) ಒಳಗಡೆ ಇಟ್ಟು ಸೇವಿಸಬೇಕು. ಮೇಲೆ ಸ್ವಲ್ಪ ಬಿಸಿನೀರನ್ನು ಕುಡಿಯಬೇಕು. ಹೀಗೆ ಮೂರು ದಿನ ಕ್ರಮವಾಗಿ ಮೂರು ತಿಂಗಳು ಮುಟ್ಟಿನ ಸಮಯದಲ್ಲಿ ಸೇವನೆ ಮಾಡಬೇಕು.

೩. ಅಮೃತಬಳ್ಳಿ, ನೆಲಗುಳ್ಳ, ಶುಂಠಿ ಇವುಗಳನ್ನು ಸಮಭಾಗ ಸೇರಿಸಿ ಕುಟ್ಟಿ ಪುಡಿ ಮಾಡಿ ಇಪ್ಪತ್ತು ಗ್ರಾಂನಷ್ಟು ತೆಗೆದುಕೊಂಡು ಕಷಾಯ ಮಾಡಿ ಬೆಳಿಗ್ಗೆ ಹಾಗೂ ರಾತ್ರಿ ಅರ್ಧರ್ಧ ಕಷಾಯವನ್ನು ಮುಟ್ಟಾದಾಗ ಮೂರು ದಿನ ಮೂರು ತಿಂಗಳು ಸೇವಿಸಬೇಕು.

೪. ತೊಂಡೆಯ ಬಳ್ಳಿಯನ್ನು ಒಣಗಿಸಿ ಕುಟ್ಟಿ ಪುಡಿ ಮಾಡಿ ಮೂರು ಚಿಟಿಕೆಯಷ್ಟು ತೆಗೆದುಕೊಂಡು ಅದಕ್ಕೆ ಮೂರು ಪಲಕು ಬೆಳ್ಳುಳ್ಳಿ, ೮ ಮೆಣಸಿನ ಕಾಳು ಇವುಗಳನ್ನು ನೀರು ಸೇರಿಸಿ ಅರೆದು ಮೂರು ದಿನ ಸೇವನೆ ಮಾಡಬೇಕು. ಹೀಗೆ ಮೂರು ತಿಂಗಳೂ ಸೇವಿಸಬೇಕು.


೫. ಕಡಲೆ ಕಾಳಿನ ಗಾತ್ರ ಕೆನೆಸುಣ್ಣ, ತುಪ್ಪದಲ್ಲಿ ಹುರಿದ ಇಂಗು ಮತ್ತು ಶ್ರೀಗಂಧದ ನುಣ್ಣಗಿನ ಪುಡಿ ಸಮಭಾಗ ತೆಗೆದುಕೊಂಡು ಮಿಶ್ರ ಮಾಡಿ ಮುಟ್ಟಿನ ಹೊಟ್ಟೆನೋವಿನ ಸಮಯದಲ್ಲಿ ದಿನಕ್ಕೆರಡು ಬಾರಿ ಮೂರು ದಿನ ಸೇವಿಸಬೇಕು. ಕ್ರಮವಾಗಿ ಮೂರು ತಿಂಗಳು ಸೇವನೆ ಮಾಡಬೇಕು.

ಲೈಂಗಿಕ ಸಂಪರ್ಕ ನಿಷಿದ್ಧವೇ?

ಮುಟ್ಟಿನ ಸಮಯದಲ್ಲಿ ಪತಿ-ಪತ್ನಿಯರ ಸಮಾಗಮ ನಿಷೇಧವೆಂದು ಹಲವರ ನಂಬಿಕೆ. ಇದು ವೈದ್ಯಕೀಯ ವಿಜ್ಞಾನದ ಪ್ರಕಾರ ತಪ್ಪೆಂದು ಹೇಳಲಾಗಿದೆ. ಹೆಣ್ಣಿಗೆ ರಕ್ತಸ್ರಾವವಾಗುವ ಐದು ದಿನಗಳು ಗರ್ಭ ನಿರೋಧಕ ಅನುಸರಿಸುವ ದಂಪತಿಗಳಿಗೆ ಬಹಳ ಸುರಕ್ಷಿತ ಅವಧಿ. (safe period) ಕೆಲವು ದಂಪತಿಗಳಿಗೆ ಮುಟ್ಟಿನ ಸಮಯದಲ್ಲಿ ಒಂದಾಗಲು ಮಾನಸಿಕ ಮತ್ತು ದೈಹಿಕ ಅಡೆತಡೆಗಳಿರುತ್ತದೆ ಮತ್ತೂ ಹಲವರಿಗೆ ಈ ಅವಧಿಯಲ್ಲಿ ಸೇರುವುದರಿಂದ ಲೈಂಗಿಕ ರೋಗ ಬರುತ್ತದೆಯೆಂಬ ನಂಬಿಕೆಯೂ ಉಂಟು. ವೈಜ್ಞಾನಿಕವಾಗಿ ಇದು ಸುಳ್ಳು. ಮುಟ್ಟಿನ ಸಮಯದಲ್ಲಿ ಕೆಲವು ಹೆಂಗಸರಿಗೆ ಮಾನಸಿಕ ಅಸ್ವಸ್ಥತೆ ಇರುವುದರಿಂದ ದಾಂಪತ್ಯ ಜೀವನದ ಬಗ್ಗೆ ಆಗ ಆಸಕ್ತಿಯಿರುವುದಿಲ್ಲ. ಅಥವಾ ಗಂಡಸರಿಗೆ ಪತ್ನಿಯ ಆ ಸ್ಥಿತಿಯಲ್ಲಿ ತೊಂದರೆ ಪಡಿಸಲು ಇಷ್ಟವಾಗದೇ ಇರಬಹುದು. ಇದು ಅವರವರ ಇಚ್ಛೆ, ಅನಿಚ್ಛೆಗಳನ್ನು ಅವಲಂಬಿಸುತ್ತದೆಯಾದರೂ ವಾಸ್ತವವಾಗಿ ಮುಟ್ಟಾದ ಸಮಯದಲ್ಲಿ ಪತಿ-ಪತ್ನಿಯರು ಪರಸ್ಪರ ಸಹಕಾರದಿಂದ ಒಂದಾಗುವುದರಲ್ಲಿ ಯಾವ ಹಾನಿಯೂ ಇಲ್ಲ.

- ಎ.ವಿ.

ಸ್ಯಾನಿಟರಿ ಪ್ಯಾಡ್ಸ್ ಬಗ್ಗೆ ತಿಳಿದಿರಿ



ಋತುಸ್ರಾವ ಆದಾಗ ಹೊರಬರುವ ದ್ರವದಿಂದ ಬಟ್ಟೆಗಳಿಗೆ ಕೊಳೆಯಾಗದಂತೆ ತಡೆಯಲು ''ಸ್ಯಾನಿಟರಿ ಪ್ಯಾಡ್'' (ನ್ಯಾಪ್‌ಕಿನ್ಸ್)ಗಳನ್ನು ಉಪಯೋಗಿಸಲಾಗುತ್ತದೆ. ಈ ಋತುಸ್ರಾವವು ಸಾಮಾನ್ಯವಾಗಿ ೫-೬ ದಿವಸಗಳವರೆಗೂ ಇರುತ್ತದೆ. ಋತುಸ್ರಾವದ ಸಮಯದಲ್ಲಿ ಉಪಯೋಗಿಸುವ ಈ ನ್ಯಾಪ್‌ಕಿನ್‌ಗಳನ್ನು ಅವರವರ ದೇಹಕ್ಕನುಗುಣವಾಗಿ ಆಯ್ಕೆ ಮಾಡಬೇಕಾದುದು ಅತ್ಯವಶ್ಯ.



ಚಿತ್ರ : ವಸಂತ ಮಾಲವಿ

ಕೆಲವು ಸ್ಯಾನಿಟರಿ ಪ್ಯಾಡ್‌ಗಳ ವಿವರ

ಕ್ರ. ಸಂ.	ವಿಧಗಳು	ತಯಾರಕರು	ಬೆಲೆ ರೂ.
೧.	ವಿಸ್ಪರ್	ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್ (ಇ.)ಲಿ.	೪೪/-
೨.	ಕೇರ್‌ಫ್ರೀ	ಜಾನ್ಸನ್ ಅಂಡ್ ಜಾನ್ಸನ್ (ಇ) ಲಿ.	
೩.	ಸ್ಟೇಫ್ರೀ	ಜಾನ್ಸನ್ ಅಂಡ್ ಜಾನ್ಸನ್ (ಇ) ಲಿ.	
೪.	ಮೊಮ್ಮಿ&ಮೀ	ಜಾನ್ಸನ್ ಅಂಡ್ ಜಾನ್ಸನ್ (ಇ) ಲಿ.	೩೩/-
೫.	ಕೂಟೆಕ್ಸ್	ಜೀನೋ ಕಂ.(ಇ) ಲಿ.	೨೦/-
೬.	ಷೇಪೆಕ್ಸ್	ಗಫಿಕ್ಸ್ ಕಂ. ಲಿ.	೩೦/-

''ವಿಸ್ಪರ್'' ನ್ಯಾಪ್‌ಕಿನ್‌ಗಳು ರಕ್ತಸ್ರಾವವನ್ನು ಹೀರುವುದಲ್ಲದೆ, ಆ ಜಾಗವನ್ನು ಒದ್ದೆಯಾಗಿಡದೆ ಶುದ್ಧವಾಗಿಡುತ್ತವೆ. ಇವುಗಳನ್ನು ಮುಂಬಯಿಯ ಪ್ರಾಕ್ಟರ್ ಅಂಡ್ ಗ್ಯಾಂಬಲ್ ಇಂಡಿಯಾ ಲಿಮಿಟೆಡ್ ಎಂಬ ಅಮೆರಿಕನ್ನರ ಸಹಯೋಗದ ಸಂಸ್ಥೆ ತಯಾರಿಸುತ್ತದೆ. ಇವುಗಳನ್ನು ಸ್ಟಿಕ್ಕರ್‌ಗಳ ರೀತಿಯಲ್ಲಿ ಚೆಡ್ಡಿಗೆ ಅಂಟಿಸಿಕೊಳ್ಳಬೇಕು.

''ಕೇರ್‌ಫ್ರೀ'' ನ್ಯಾಪ್‌ಕಿನ್‌ಗಳನ್ನು ಮುಂಬಯಿಯಲ್ಲಿರುವ ಜಾನ್ಸನ್ ಅಂಡ್ ಜಾನ್ಸನ್ (ಇ) ಲಿ. ಕಂಪನಿ ತಯಾರಿಸುತ್ತದೆ. ಇವು ಬೆಲ್ಟ್ ಸಹಿತ ಇರುವುದರಿಂದ ಸೂಕ್ತ ಸ್ಥಳದಲ್ಲಿರಿಸಿ ಬಿಗಿ ಮಾಡಿಕೊಳ್ಳಬೇಕು. ಇವುಗಳನ್ನು ಬೇರೆ ಪ್ಯಾಡ್‌ಗಳಿಗಿಂತ ಅತಿ ಸುಲಭವಾಗಿ ಹೊರ ತೆಗೆಯಬಹುದು.

''ಸ್ಟೇಫ್ರೀ'' ನ್ಯಾಪ್‌ಕಿನ್‌ಗಳನ್ನೂ ಮುಂಬಯಿಯ ಜಾನ್ಸನ್ ಅಂಡ್ ಜಾನ್ಸನ್ ಕಂಪನಿ, ''ಕೂಟೆಕ್ಸ್'' ಪ್ಯಾಡ್‌ಗಳನ್ನು ಜೀನೊ ಕಂಪೆನಿ, ''ಷೇಪೆಕ್ಸ್'' ಪ್ಯಾಡ್‌ಗಳನ್ನು ಗಫಿಕ್ಸ್ ಕಂಪನಿಗಳು ತಯಾರಿಸುತ್ತವೆ. ಇವೆಲ್ಲವೂ ಸ್ಟಿಕ್ಕರ್ ರೀತಿ ಅಂಟಿಸಿಕೊಳ್ಳಬಹುದಾದ್ದರಿಂದ ರಕ್ತಸ್ರಾವದಿಂದ ಬಟ್ಟೆಗಳಿಗೆ ಕೊಳೆಯಾಗುವುದಿಲ್ಲ. ಹೆಣ್ಣಿಗೆ ಋತುಸ್ರಾವದ ಸಮಯದಲ್ಲಿ ಆಗಬಹುದಾದ ಮುಜುಗರದಿಂದ ದೂರಮಾಡಲು ನೆರವಾಗುತ್ತವೆ.

ಸಾಮಾನ್ಯವಾಗಿ ರಕ್ತಸ್ರಾವವಾಗುತ್ತಿದ್ದರೆ ''ರೆಗ್ಯುಲರ್ ನ್ಯಾಪ್‌ಕಿನ್ಸ್'', ಅಧಿಕವಾಗಿ ರಕ್ತಸ್ರಾವ ಆಗುತ್ತಿದ್ದರೆ, ''ಎಕ್ಸ್‌ಟ್ರಾ ನ್ಯಾಪ್‌ಕಿನ್ಸ್'' ಹಾಗೂ ಅತ್ಯಧಿಕವಾಗಿ ರಕ್ತಸ್ರಾವ ಆಗುತ್ತಿದ್ದ ಪಕ್ಷದಲ್ಲಿ ''ಓವರ್‌ನೈಟ್ ನ್ಯಾಪ್‌ಕಿನ್ಸ್''ಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಒಮ್ಮೆ ಉಪಯೋಗಿಸಿದ ನ್ಯಾಪ್‌ಕಿನ್‌ನ್ನು ಮತ್ತೊಮ್ಮೆ ಉಪಯೋಗಿಸದೆ, ಪೇಪರ್‌ನಲ್ಲಿ ಸುತ್ತಿ ಕಸದ ಬುಟ್ಟಿಗೆ ಹಾಕಬೇಕು. ಅದನ್ನೇ ಸ್ವಚ್ಛಗೊಳಿಸಿ ಮತ್ತೊಂದು ಸಲ ಉಪಯೋಗಿಸುವುದು ಅನಾರೋಗ್ಯಕರ.

ಹೀಗೆ ರಕ್ತಸ್ರಾವವಾಗುವವರೆಗೂ ಆ ಜಾಗದಲ್ಲಿ ಸೂಕ್ತ ಸ್ಯಾನಿಟರಿ ಪ್ಯಾಡ್‌ಗಳನ್ನು ಉಪಯೋಗಿಸುವುದರಿಂದ ಹೆಣ್ಣು ಯಥಾಪ್ರಕಾರ ಸಂಚರಿಸಬಹುದಲ್ಲದೆ ಬಟ್ಟೆಗಳಿಗೆ ಕಿಂಚಿತ್ತೂ ಕೊಳೆಯಾಗಲಾರದು.

○ ಉತ್ತನೂರು ವ್ಯಾನ್ಸ್

ಮುಟ್ಟಿನ ಬಗ್ಗೆ ಮೂಢನಂಬಿಕೆಗಳು

೧. ಹೊಲಕ್ಕೆ ಹೋದಾಗಲೋ ಅಥವಾ ಹೊರಗೆಲ್ಲಾದರೂ ಹೋದಾಗ ಮೊದಲ ಸಲ ಋತುಮತಿಯಾದರೆ ದೋಷ ಬರುತ್ತದೆ.

೨. ಮುಟ್ಟಾದಾಗ ಅತಿಯಾಗಿ ಹೊಟ್ಟೆನೋವು ಬಂದರೆ ಮಕ್ಕಳಾಗುವುದಿಲ್ಲ.

೩. ಮುಟ್ಟಾದಾಗ ಹೊರಹೋಗುವುದು ಕೆಟ್ಟರಕ್ತ.

೪. ಮುಟ್ಟಾದಾಗ ಸಂಭೋಗ ಮಾಡಿದರೆ ಗಂಡಸರಿಗೆ ಕೆಡುಕಾಗುತ್ತದೆ ಮತ್ತು ಕಾಯಿಲೆ ಬರುತ್ತದೆ.

೫. ಮುಟ್ಟಾದಾಗ ಉಪಯೋಗಿಸಿದ ಬಟ್ಟೆಯನ್ನು ಹೊರಗೆಲ್ಲಾದರೂ ಎಸೆದರೆ ಅದನ್ನು ಕಾಗೆ ಬಂದು ಮುಟ್ಟಿದರೆ ಅದರಿಂದ ಸ್ತ್ರೀಗೆ ಕೆಡುಕಾಗುತ್ತದೆ.



ಋತುಸ್ರಾವ ಶಾಪವೇ? ವರವೇ?

○ ಡಾ. ಸುನಂದಾ ಕುಲಕರ್ಣಿ

ಕಡೆಗೆ, ಬಹಿಷ್ಠೆ, ಮುಟ್ಟು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಋತುಸ್ರಾವವು ಸುಮಾರು ೧೩-೧೪ ವರ್ಷಕ್ಕೆ ಶುರುವಾಗುವುದು. ನಂತರ ಈ ಋತುಸ್ರಾವದ ಅಂತ್ಯವು ಸುಮಾರು ೪೫ ವರ್ಷಕ್ಕೆ ಆಗುವದು. ಇದು ತಿಂಗಳಿಗೆ ಅಂದರೆ ೨೮ ರಿಂದ ೩೦ ದಿವಸಕ್ಕೆ ಒಂದು ಸಲ ಬರುವದು. ಒಂದು ಸಲ ಬಂದಾಗ ಅದು ೩-೪ ದಿನವಿರುವದು. ಈ ವೇಳೆಯಲ್ಲಿ ೫೦-೮೦ ಎಂ.ಎಲ್. ದಷ್ಟು ರಕ್ತಸ್ರಾವವಾಗುವದು. ಇದು ತಿಂಗಳು-ತಿಂಗಳಿಗೆ ಬರುವದಾದರೂ ಕೆಲವರಿಗೆ ಪ್ರತಿ ೨೬ ದಿನಕ್ಕೆ ಬಂದರೆ ಇನ್ನು ಕೆಲವರಿಗೆ ೩೫ ದಿನಗಳಿಗೊಂದು ಸಲದಂತೆ ಬರಬಹುದು. ಹಾಗೆಯೇ ರಕ್ತಸ್ರಾವ ಸಹಿತ ಸುಮಾರು ಜನರಲ್ಲಿ ೩-೪ ದಿನವಿದ್ದರೆ ಕೆಲವರಲ್ಲಿ ಮಾತ್ರ ೮-೧೦ ದಿನಗಳಿರಬಹುದು. ಇದರಿಂದ ಯಾರೂ ಗಾಬರಿಪಡಬೇಕಾಗಿಲ್ಲ. ಪ್ರತಿಯೊಬ್ಬ ಹೆಂಗಸಿಗೂ ಅವಳದೇ ಆದ ವಿಶಿಷ್ಟ ತರಹದ ಮುಟ್ಟು ಇರಬಹುದು.

ಈ ಋತುಸ್ರಾವವನ್ನು ಕಿಶೋರಿಯು ಹೇಗೆ ಪಾಲಿಸಬೇಕೆಂಬುದೊಂದು ಪ್ರಶ್ನೆ. ಋತುಸ್ರಾವದ ಬಗ್ಗೆ ನಮ್ಮ ದೇಶದಲ್ಲಿ ಯಾರೂ ಹೆಣ್ಣು ಹುಡಿಗಿಯರಿಗೆ ಮೊದಲು ಹೇಳುವದಿಲ್ಲ. ಅವರು ಮೊದಲ ಸಲ ರಕ್ತಸ್ರಾವವಾದಾಗ ಅದನ್ನು ನೋಡಿ ಹೆದರಿಬಿಡಬಹುದು. ಎಲ್ಲರಿಗೂ ತಾವು ದೊಡ್ಡವರಾದಾಗ ಮಾತ್ರ ಋತುಸ್ರಾವವೆಂದರೇನೆಂಬುದು ಗೊತ್ತಾಗುತ್ತದೆ. ಆದರೆ ಈಗೀಗ ಇದರ ಬಗ್ಗೆ ಪಠ್ಯಪುಸ್ತಕಗಳಲ್ಲಿ ಇರುವದರಿಂದ, ಹೊಸ ಪೀಳಿಗೆಯ ಹೆಣ್ಣು ಹುಡಿಗಿಯರಿಗೆ ಇದರ ಬಗ್ಗೆ ಗೊತ್ತಾಗುತ್ತಿದೆ. ಋತುಸ್ರಾವ ಆದಾಗ ಏನು ಮಾಡಬೇಕೆಂಬುದನ್ನು ಮನೆಯಲ್ಲಿ ಇರುವ ತಾಯಿ ಅಜ್ಜಿ ಹುಡಿಗಿಗೆ ಹೇಳಿಕೊಡುತ್ತಾರೆ. ಋತುಸ್ರಾವದ ಬಗ್ಗೆ ಹಲವಾರು ಮೂಢ ನಂಬಿಕೆಗಳಿವೆ. ದೋಷಯುಕ್ತ ರಕ್ತ ಹೋಗಿ, ಶರೀರ ಸ್ವಚ್ಛವಾಗುವದೆಂದು ಒಂದಾದರೆ, ಋತುಸ್ರಾವವಾದ ಹೆಂಗಸು ಮಲಿನವಾಗಿರುತ್ತಾಳೆಂಬುದು ಇನ್ನೊಂದು. ಹುಡುಗಿಯು ಮೊದಲ ಸಲ ಋತುಸ್ರಾವವಾದಾಗ ಅವಳ ಕೈಯಿಂದ ಗಿಡದ ಚಿಗುರನ್ನು ಮುರುಟಿಸಿ ನೋಡುವ ಪದ್ಧತಿಯೊಂದಿದೆ. ಆ ಗಿಡವು ಬಾಡಿಹೋದರೆ ಅವಳು ತರಕಾರಿ ಹೆಚ್ಚಲು ಅಡಿಗೆ ಮಾಡಲು ಅನರ್ಹಳೆಂದು ಪರಿಗಣಿಸಲಾಗುವದು. ಬ್ರಾಹ್ಮಣರಲ್ಲಿ ಬಹಿಷ್ಠೆಯಾದ ಹುಡಿಗಿಯನ್ನು ಪ್ರತ್ಯೇಕಿಸಿ, ಅವಳ ನೆರಳನ್ನೂ ಸಹ ಆ ವೇಳೆಯಲ್ಲಿ ಯಾರೂ ನೋಡಬಾರದು. ಅವಳ ಜೊತೆ ಕೆಲವರು ಮಾತು ಆಡುವದಿಲ್ಲ. ಬಹಿಷ್ಠೆ ಆದ ಹುಡಿಗಿಯ ಮಾತು ಕೇಳಿದರೂ ಸಹ ಮೈಲಿಗೆಯಾಗುವದು. ಇದರಿಂದ ಮೂರುದಿನ ಅವಳಿಗೆ ಬೇರೆ ತಟ್ಟೆಯಲ್ಲಿ ಊಟ ಹಾಕುತ್ತಾರೆ. ಈಗಲೂ ಕೆಲವರಲ್ಲಿ ಈ ಪದ್ಧತಿಯಿದೆ. ಬೈಬಲ್‌ನಲ್ಲಿಯೂ ಸಹ ಹೆಂಗಸು ಆ ವೇಳೆಯಲ್ಲಿ ಮಲಿನವಾಗಿರುತ್ತಾಳೆಂದಿದೆ. ಇದರಿಂದ ಹೆಂಗಸರಿಗೆ ಕೆಲವು ಸಲ ಮುಜುಗರವಾಗುತ್ತದೆ. ಆಗಿನ ಕಾಲದಲ್ಲಿ ಮುಟ್ಟು ಇರುವಾಗ ಹೆಂಗಸರಲ್ಲಿ ಒಂದು ತರಹದ ವಿಷ ಉತ್ಪನ್ನವಾಗುತ್ತದೆ, ಈ ವಿಷವು ಗಿಡಗಳಿಗೆ ಹಾನಿಕಾರಕ ಎಂದು ತಿಳಿಯುತ್ತಿದ್ದರಿಂದ, ಹೆಂಗಸರಿಗೆ ಅಡಿಗೆ ಮನೆಯ ಅಧಿಕಾರ ಹೋಗಿಬಿಡುತ್ತಿತ್ತು. ಆದರೆ ಇವು ಯಾವುವೂ ನಿಜವಲ್ಲ. ಆಗಿನ ಕಾಲದಲ್ಲಿ ಅಂದರೆ ಪೂರ್ವ ಕಾಲದಲ್ಲಿ ಗಾರ್ಗಿ, ಮೈತ್ರೇಯಿಯಂತಹ ವಿದ್ವಾನರೂ ಸಹಿತ ಋತುಸ್ರಾವ ಬಂದಾಗ ಮೂಲೆ ಹಿಡಿದು ಕುಳಿತುಕೊಳ್ಳುತ್ತಿರಲಿಲ್ಲ. ತಮ್ಮ ಗಂಡಂದಿರ ತಪಸ್ಸಿಗೆ ಭಂಗಬಾರದೆಂದು ಅವರು ದಿನನಿತ್ಯದ ಕೆಲಸ ಮಾಡಿಕೊಂಡು ವೇದ ಪಠನ ಸಹ ಮಾಡುತ್ತಿದ್ದರಂತೆ. ಇದರಿಂದ ಮುಟ್ಟಾದಾಗ ಯಾವುದೇ ಕೆಲಸ ಮಾಡಬಾರದು, ಮುಟ್ಟಬಾರದು ಎಂಬುದಕ್ಕೆ ಹುರುಳಿಲ್ಲವೆಂದು ತಿಳಿಯುತ್ತದೆ. ಬಹುಶಃ ತಿಂಗಳಿಡೀ ದುಡಿದ ಹೆಂಗಸಿಗೆ ಹೆಚ್ಚಿನ ರಕ್ತಸ್ರಾವವಿರುವಾಗ ವಿಶ್ರಾಂತಿ ತೆಗೆದುಕೊಳ್ಳಲಿ, ಆ ಸಮಯದಲ್ಲಿ ಗಂಡನ ನಳಪಾಕದ ರುಚಿ ನೋಡಲಿಯೆಂದು ಯಾರೋ ಸಹೃದಯದ ಗಂಡಸರು ಮಾಡಿದ ಪದ್ಧತಿಯಿರಬೇಕು! ಈ ತರಹದ ಪದ್ಧತಿಯಿಂದ ಗಂಡ ಅಡಿಗೆ ಕಲಿಯುವದಲ್ಲದೆ ಮಕ್ಕಳೂ ಸಹಿತ ಬೇಗ ಅಡಿಗೆಯನ್ನು ಕಲಿಯುತ್ತಾರೆ.

ಹೊಸದಾಗಿ ಋತುಮತಿಯಾದ ಹುಡಿಗಿಗೆ ಪೌಷ್ಟಿಕ ಆಹಾರ ಕೊಡಬೇಕು. ಅವಳಿಗೆ ಬೆಳೆಯುವ ವಯಸ್ಸಿರುವದರಿಂದ ಹಾಲು, ಹಣ್ಣು, ಸೊಪ್ಪಿನ ಪಲ್ಯೆ, ತರಕಾರಿ, ಬೇಳೆ, ಮೊಟ್ಟೆ ಮುಂತಾದವುಗಳನ್ನು ಕೊಡುವದರಿಂದ ಅವಳೂ ಬೆಳೆಯುತ್ತಾಳಲ್ಲದೆ, ತಿಂಗಳು ತಿಂಗಳು ಆದ ರಕ್ತಸ್ರಾವವನ್ನು ತಡೆದುಕೊಳ್ಳುತ್ತಾಳೆ ಮತ್ತು ಅವಳ ದೇಹದಲ್ಲಿ ಈ ಆಹಾರದಿಂದ ಹೊಸ ರಕ್ತ ಉತ್ಪತ್ತಿಯಾಗುತ್ತದೆ.


ರಕ್ತಸ್ರಾವವಾಗುತ್ತಿರುವಾಗ ಹೆಂಗಸರೇನು ಅಶಕ್ತರಾಗಿರುವದಿಲ್ಲ. ಅವರು ತಮ್ಮ ದಿನನಿತ್ಯದ ಕಾರ್ಯ, ಅಷ್ಟೇ ಅಲ್ಲ, ಆಟಗಳಲ್ಲಿಯೂ ಸಹ ಭಾಗ ತೆಗೆದುಕೊಳ್ಳಬಲ್ಲರು. ಸ್ವಲ್ಪ ಮುಜುಗರವಾಗಬಹುದಷ್ಟೇ. ಈ ರಕ್ತಸ್ರಾವಕ್ಕೆ ಯೋನಿಯ ಹತ್ತಿರ ಬಟ್ಟೆಗಳನ್ನು ಹಾಕಿದರೆ ಅದು ಹೀರಿಕೊಂಡು ಬಿಡುತ್ತದೆ. ಈ ಬಟ್ಟೆಗಳನ್ನು ಯಾವಾಗಲೂ ಸ್ವಚ್ಛವಾಗಿಟ್ಟಿರಬೇಕು. ಅವುಗಳನ್ನು ಸ್ವಚ್ಛವಾಗಿ ಒಗೆದು ತಿಕ್ಕಿ-ತಿಕ್ಕಿ ಹಾಕಿ ನಂತರ ಬಿಸಿಲಿನಲ್ಲಿ ಒಣಗ ಹಾಕಬೇಕು. ಸೂರ್ಯರಶ್ಮಿಯಿಂದ ಅವು ಜೀವಾಣುರಹಿತವಾಗಬಲ್ಲವಲ್ಲದೇ ವಾಸನೆಯೂ ಹೋಗಿಬಿಡುವದು. ಇಲ್ಲದಿದ್ದರೆ ಅವಕ್ಕೆ ಇಸ್ತ್ರೀ ಮಾಡಿದರೂ ಒಳಿತು. ಈ ಬಟ್ಟೆಗಳು ಬಹಳ ಮೆತ್ತಗಿದ್ದರೆ ಒಳಿತು. ಇಲ್ಲದಿದ್ದರೆ ಅವು ರಕ್ತಸ್ರಾವವಾದಂತೆ ಭಾರವಾಗಿ, ಗಟ್ಟಿಯಾಗಿ ಕಾಲುಗಳನ್ನು ಕೊರೆಯಬಹುದು. ಹಳೇ ಧೋತರ, ಲುಂಗಿ, ನೂಲಿನ ಸೀರೆ ಇವೇ ಮುಂತಾದವುಗಳನ್ನು ಉಪಯೋಗಿಸಬಹುದು.

ಮೊದಲಿನ ಕಾಲದಲ್ಲಿ ಈಗಿನಂತೆ ಮಾರುಕಟ್ಟೆಯಲ್ಲಿ ಉಪಯೋಗಿಸಿ ಎಸೆಯುವ ಮುಟ್ಟಿನ ವಸ್ತ್ರ (Sanitary Napkins)ಗಳು ಇರಲಿಲ್ಲ. ಕಾರಣ ಆಗಿನ ಜನರು ಒಂದು ಬಟ್ಟೆಯಲ್ಲಿ ಬೂದಿ ಹಾಗೂ ಇದ್ದಿಲು ಪುಡಿಯನ್ನು ಕಟ್ಟಿ ಅದನ್ನು ಉಪಯೋಗಿಸುತ್ತಿದ್ದರಂತೆ. ಬೂದಿಯು ರಕ್ತಸ್ರಾವವನ್ನು ಹೀರಿಕೊಂಡರೆ ಇದ್ದಿಲು ಪುಡಿಯಿಂದ ವಾಸನೆ ಹೋಗುತ್ತಿತ್ತು. ಒಂದು ಸಲ ಉಪಯೋಗಿಸಿದ ನಂತರ ಅದನ್ನು ಎಸೆಯಲೂ ಸಹಿತ ಬರುತ್ತಿತ್ತು. ಆದರೆ ಈಗ ಪೇಟೆಯಲ್ಲಿ ಒಂದು ಸಲ ಉಪಯೋಗಿಸಿ ಎಸೆಯುವ ನ್ಯಾಪಕಿನ್ಸ್, ಪ್ಯಾಡ್ಸ್‌ಗಳು ಬಂದಿವೆ. ಬಟ್ಟೆ ಗಲೀಜಾಗಬಾರದೆಂದು ಆದಕ್ಕೆ ಎರಡೂ ಕಡೆ ಸ್ವಲ್ಪ ಬೆಳೆಸಿದ ಪ್ಯಾಡುಗಳು

ಬಂದಿರುವದಿಂದ ಎಲ್ಲರಿಗೂ ಅನುಕೂಲ ವಾಗುತ್ತಿದೆ. ಸೊಂಟಕ್ಕೆ ಬೆಲ್ಟಿನಂತೆ ಕಟ್ಟಿ ನಂತರ ಪ್ಯಾಡ್ ಉಪಯೋಗಿಸುವದೂ ಈಗ ಹೋಗಿ ಒಳವಸ್ತ್ರಕ್ಕೆ (under wear) ಅಂಟಿಕೊಳ್ಳುವ ಪ್ಯಾಡ್ ಬಂದಿರುವದರಿಂದ ಹುಡಿಗಿಯರು ಈಗ ಪಂದ್ಯಾಟದಲ್ಲಿ ಈಜುವಲ್ಲಿ, ಓಡುವದರಲ್ಲಿ ಪಾಲುಗೊಳ್ಳುತ್ತಿದ್ದಾರೆ. ಇನ್ನೂ ಹೊಸತಾಗಿ ಯೆಂದರೆ ಸುವಾಸನೆಯುಕ್ತ ಪ್ಯಾಡ್ ಸಹ ಪಾಶ್ಚಾತ್ಯ ದೇಶಗಳಲ್ಲಿ ದೊರಕುತ್ತಿವೆ. ರಕ್ತಸ್ರಾವವಾದಂತೆ ಸುವಾಸನೆ ಬರಲು ಶುರುವಾಗುತ್ತದೆ. ರಕ್ತಸ್ರಾವ ಕೆಲವರಲ್ಲಿ ಜಾಸ್ತಿ ಇರಬಹುದು, ಇನ್ನು ಕೆಲವರಲ್ಲಿ ಕಡಿಮೆ ಇರಬಹುದು. ಇಂಥವರಿಗೂ ಸಹ ಈಗ ಚಿಕ್ಕ ಹಾಗೂ ದೊಡ್ಡ ಪ್ಯಾಡ್‌ಗಳು ಬಂದಿವೆ.

ಋತುಸ್ರಾವವಾದಾಗ ಅವರು ಮಲಿನ ವಾಗುತ್ತಾರೆಂದು ಅವರಿಗೆ ಸ್ನಾನವನ್ನು ಋತು ಸ್ರಾವ ಮುಗಿಯುವ ಹೊತ್ತಿಗೆ ೪ನೇಯ ದಿನ ತಲೆಸ್ನಾನ ಹಾಕುತ್ತಾರೆ. ಅವರು ಉಪಯೋಗಿಸಿದ ಬಟ್ಟೆ, ತಟ್ಟೆ, ತಂಬಿಗೆ ಮುಂತಾದುವುಗಳನ್ನು ಶುಭ್ರವಾಗಿ ತೊಳೆದು ಕೆಲವರು ಒಳಗೆ ತೆಗೆದುಕೊಂಡರೆ ಇನ್ನು ಕೆಲವರು ಬೆಳ್ಳಿಗೆ ಮಾತ್ರ ಮೈಲಿಗೆಯಾಗದೆಂದು, ಬೆಳ್ಳಿಯ ಲೋಟ, ತಟ್ಟೆ, ತಂಬಿಗೆಯನ್ನು ಒಳಗೆ ತೆಗೆದುಕೊಳ್ಳುತ್ತಾರೆ. ಬೆಳ್ಳಿಯ ಸಾಮಾನು ಇರದಿದ್ದರೆ ತಗಡಿನ ಡಬ್ಬಿಯನ್ನು ಕುಡಿಯಲು ಕೊಟ್ಟು, ಎಲೆಯಲ್ಲಿ ಊಟಕ್ಕೆ ಹಾಕುತ್ತಾರೆ. ನಂತರ ಅವುಗಳನ್ನು ಎಸೆಯುತ್ತಾರೆ. ಈ ಪದ್ಧತಿಯಿಂದ ಹುಡಿಗಿಯು ಮದುವೆಯಾಗುವಾಗ ಅವಳು ಮುಟ್ಟಾದಾಗ ಉಪಯೋಗಿಸಲೆಂದೇ ತಂದೆ-ತಾಯಿ ಬೆಳ್ಳಿಯ ಪಾತ್ರೆಗಳನ್ನು ಕೊಡಬೇಕಾಗುತ್ತದೆ. ಇಂಥವು ಗಳನ್ನು ಮಾಡುವ ಬದಲು ಹುಡುಗಿಯು ದಿನಾಲೂ ಸ್ನಾನ ಮಾಡಿ ಸ್ವಚ್ಛವಾಗಿದ್ದು, ನಿತ್ಯದ ಕೆಲಸ ಮಾಡುತ್ತಿದ್ದರೆ ಯಾರಿಗೂ ಅವಳು ಬಹಿಷ್ಠೆಯಾದದ್ದೂ ಸಹ ಗೊತ್ತಾಗುವದಿಲ್ಲ.

ಋತುಸ್ರಾವವೊಂದು ಶಾಪವೆಂದು ಪರಿ ಗಣಿಸುವಂತೆ ಹೆಣ್ಣು ಮಕ್ಕಳಿಗೆ ಸ್ನಾನ ಮಾಡಲು ಬಿಡದೇ, ಅವರನ್ನು ಪ್ರತ್ಯೇಕಿಸಿ ಇಡುವದರ



ಬದಲು ಅದೊಂದು ನೈಸರ್ಗಿಕವಾದ ಸಹಜ ಕ್ರಿಯೆ ಎಂಬುದನ್ನು ತಿಳಿಸಿ ಹೇಳಿ. ಕಿಶೋರಿಯು ಇನ್ನು ಹೆಂಗಸಾಗುವಳೆಂದು ತಿಳಿ ಹೇಳಿ ಅದನ್ನು ಪರಿಹರಿಸಿಕೊಳ್ಳಬೇಕೆಂಬುದನ್ನು ಹೇಳಿಕೊಟ್ಟರೆ, ಅವಳು ಸಂತೋಷದಿಂದ ಇರಬಲ್ಲಳು. ●

ಬಿಳಿಸೆರಗು : ಕಾರಣ, ಚಿಕಿತ್ಸೆ

ಯೋನಿಯ ಮುಖಾಂತರ ಬಿಳಿಯ ದ್ರವ ಸ್ರಾವವಾಗುವುದಕ್ಕೆ ಬಿಳಿಸೆರಗು ಎನ್ನುತ್ತಾರೆ. ಜನನೇಂದ್ರಿಯದ ಯಾವ ಭಾಗ ರೋಗಪೀಡಿತವಾದರೂ ಅದು ಬಿಳಿಸೆರಗಿನ ರೂಪದಲ್ಲಿ ಕಾಣಿಸಿಕೊಳ್ಳುವುದು.

೧. ಯೋನಿಯ ಸೋಂಕು : ಹಲವು ಬಗೆಯ ಕ್ರಿಮಿಗಳಿಂದ ಯೋನಿಯ ಒಳಪದರ ಸೋಂಕಿ ಗೀಡಾಗುತ್ತದೆ. ಗೊನೋಕಾಕಸ್, ಸ್ಟ್ರೆಪ್ಟೋಕಾಕಸ್, ಟ್ರೈಕೋಮೊನಾಸ್‌ಮತ್ತು ಕ್ಯಾಂಡಿಡಾ ಆಲ್‌ಬಿ ಕಾನ್ಸ್ ಮುಖ್ಯವಾದ ಕ್ರಿಮಿಗಳು. ಬಿಳಿಸೆರಗು ಹೋಗುವುದಲ್ಲದೇ ಯೋನಿಯೊಳಗೆ ತುಂಬ ನೋವಿರುತ್ತದೆ. ಹಿರಿಭಗೋಷ್ಠ ಮುಂತಾದ ಹೊರಲಿಂಗಗಳಲ್ಲಿ ನವೆಯೂ ಇರುತ್ತದೆ.

೨. ಗರ್ಭಕೋಶದ ಕುತ್ತಿಗೆಯ ಉರಿಯೂತ: ಇದರಲ್ಲಿಯೂ ಮೇಲೆ ತಿಳಿಸಿದ ಲಕ್ಷಣಗಳೇ ಇರುತ್ತವೆ.

೩. ಗರ್ಭಕೋಶದ ಉರಿಯೂತ : ಇದು ಸಾಧಾರಣವಾಗಿ ಹೆರಿಗೆಯಾದ ಬಳಿಕ ಇಲ್ಲವೇ ಗರ್ಭಸ್ರಾವವಾದ ಬಳಿಕ ಕಾಣಿಸಿಕೊಳ್ಳುತ್ತದೆ. ಬಿಳಿ ಸೆರಗು ವಿಪರೀತ ಸ್ರಾವವಾಗುವುದಲ್ಲದೇ ಜ್ವರ, ಹೊಟ್ಟೆನೋವೂ ಇರುತ್ತದೆ.

೪. ಡಿಂಭನಳಿಕೆಯ ಉರಿಯೂತ : ಸ್ಟ್ರೆಪ್ಟೋಕಾಕಸ್, ಗೊನೋಕಾಕಸ್, ಬಿ-ಕೋಲೈ ಮತ್ತು ಕ್ಷಯದ ಕ್ರಿಮಿಗಳು ಡಿಂಭನಳಿಕೆಯಲ್ಲಿ ಸೋಂಕನ್ನು ಉಂಟುಮಾಡಬಲ್ಲವು. ಎಡಗಡೆಯ ಅಥವಾ ಬಲಗಡೆಯ ಡಿಂಭನಳಿಕೆ ಉರಿಯೂತಕ್ಕೆ ಗುರಿಯಾಗಬಹುದು. ಎರಡೂ ಡಿಂಭನಳಿಕೆಗಳೂ ಸೋಂಕಿಗೀಡಾದರೆ ಕೆಳಹೊಟ್ಟೆಯಲ್ಲಿ ವಿಪರೀತ ನೋವಿರುತ್ತದೆ. ಇದರಿಂದ ಜ್ವರವೂ ಬರಬಹುದು.


೫. ಗಡ್ಡೆಗಳು : ಇವು ಸಾಮಾನ್ಯವಾಗಿ ಗರ್ಭಕೋಶದ ಶರೀರ ಅಥವಾ ಗರ್ಭಕೋಶದ ಕುತ್ತಿಗೆಯಲ್ಲಿ ಹುಟ್ಟಿಕೊಳ್ಳುತ್ತವೆ. ಇವು ಔಷಧಿ ಗಳಿಂದ ಕರಗುವಂತಹವಲ್ಲ. ಸಣ್ಣ ಗಾತ್ರದಲ್ಲಿ ಆರಂಭವಾಗಿ ಕ್ರಮೇಣ ಇಡೀ ಗರ್ಭಕೋಶವನ್ನೇ ವ್ಯಾಪಿಸಬಹುದು. ಒಂದು ಅಥವಾ ಅನೇಕ ಗಡ್ಡೆಗಳೂ ಇರಬಹುದು.

೬. ಅರ್ಬುದ (ಕ್ಯಾನ್ಸರ್) : ಗರ್ಭಕೋಶದ ಕುತ್ತಿಗೆಯಲ್ಲಿ ಇದು ಸಾಮಾನ್ಯವಾಗಿ ಆರಂಭ ವಾಗುತ್ತದೆ. ಹುಣ್ಣು ಹಾಗೂ ಗಡ್ಡೆಗಳಿಗೆ ಚಿಕಿತ್ಸೆ

ಮುಟ್ಟು

ಗಂಡಸರಿಗೆ
ಗುಟ್ಟು
ಹೆಂಗಸರಿಗೆ
ತಲೆಚಿಟ್ಟು

- ವಿ.ಬಿ.





ತೆಗೆದುಕೊಳ್ಳದಿದ್ದರೆ ಅವು ಕ್ರಮೇಣ ಕ್ಯಾನ್ಸರಿಗೆ ತಿರುಗುತ್ತವೆ. ಈ ತೊಂದರೆ ಸಾಮಾನ್ಯವಾಗಿ ನಲವತ್ತು ವರ್ಷ ದಾಟಿದ ಮಹಿಳೆಯರಲ್ಲಿ ಕಂಡು ಬರುತ್ತದೆ. ಮುಟ್ಟು ನಿಂತ ನಂತರ ಸ್ತ್ರೀಗೆ ಬಿಳಿ ಸೆರಗು ಕಂಡುಬಂದರೆ ಅದು ಕ್ಯಾನ್ಸರ್‌ನಿಂದಲೇ ಆಗುತ್ತದೆ ಎನ್ನುವುದು ಖಂಡಿತ.

ಚಿಕಿತ್ಸೆ

ಕೆಲವು ಮನೆಯಲ್ಲೇ ಮಾಡಿಕೊಳ್ಳುವ ಚಿಕಿತ್ಸೆ ತಿಳಿಸುತ್ತೇನೆ. ಅವುಗಳಿಂದ ಕಡಿಮೆಯಾಗದಿದ್ದಲ್ಲಿ ಸ್ತ್ರೀರೋಗ ತಜ್ಞರನ್ನು ಕಂಡು ಪರೀಕ್ಷೆ ಮಾಡಿಸಿ ಕೊಳ್ಳಬೇಕು.

ಗಡ್ಡೆಗಳನ್ನು ಮಾತ್ರ ಶಸ್ತ್ರಕ್ರಿಯೆಯಿಂದ ನಿರ್ಮೂಲಗೊಳಿಸಬಹುದು. ಕ್ಯಾನ್ಸರ್ ಸುತ್ತ ಮುತ್ತಲ ಜಾಗಗಳಿಗೆ ಹಬ್ಬಿಲ್ಲದಿದ್ದರೆ ಶಸ್ತ್ರಕ್ರಿಯೆ ಮಾಡಿ ಗರ್ಭಕೋಶವನ್ನು ತೆಗೆದುಹಾಕುತ್ತಾರೆ.

ಸಾಮಾನ್ಯ ಚಿಕಿತ್ಸೆ

೧. ಬಿಲ್ವಪತ್ರೆರಸ ನಾಲ್ಕು ಚಮಚೆಯಷ್ಟನ್ನು ಹಸುವಿನ ಹಾಲಿನೊಡನೆ ಸೇರಿಸಿ ಆಹಾರ ಸೇವನೆಗೆ ಮೊದಲು ದಿನಕ್ಕೆರಡು ಬಾರಿ ಸೇವಿಸಬೇಕು. ಎರಡು ವಾರ ಈ ಚಿಕಿತ್ಸೆ ತೆಗೆದುಕೊಳ್ಳಬೇಕು.

೨. ರಸಬಾಳೆಯ ಹಣ್ಣಿನಲ್ಲಿ ಎರಡು ಚಿಟಿಕೆ ನವಾಸಾಗರವನ್ನು ಇಟ್ಟು ನುಂಗುವುದರಿಂದ ಬಿಳಿಸೆರಗು ಕಡಿಮೆಯಾಗುತ್ತದೆ. ಇದನ್ನು ಒಂದು ವಾರ ಸೇವಿಸಬೇಕು.

೩. ೬ ಗ್ರಾಂ ನೆಲ್ಲಿಯ ಬೀಜವನ್ನು ನೀರಿನಲ್ಲಿ ನುಣ್ಣಗೆ ಅರೆದು ದಿನಕ್ಕೆರಡು ಸಲ ೬ ಗ್ರಾಂ ಸಕ್ಕರೆ ಸೇರಿಸಿ ಸೇವಿಸಬೇಕು. ಇದನ್ನು ಎರಡು ವಾರ ಸೇವಿಸಬೇಕು.

೪. ೧೨ ಗ್ರಾಂ ಅಮೃತ ಬಳ್ಳಿಯನ್ನು ಕುಟ್ಟಿ ರಾತ್ರಿಯ ಹೊತ್ತು ಒಂದು ಲೋಟ ನೀರಿನಲ್ಲಿ ನೆನೆಸಿ ಬೆಳಿಗ್ಗೆ ಚೆನ್ನಾಗಿ ಹಿಸುಕಿ ಸೋಸಿ ಕುಡಿಯಬೇಕು. ಇದನ್ನು ೧೫ ದಿನಗಳ ಕಾಲ ಸೇವಿಸಬೇಕು.

೫. ಉದ್ದಿನಹಿಟ್ಟು, ಅತಿ ಮಧುರ, ಬೂದುಗುಂಬಳದ ಬೇರು, ಅಶ್ವಗಂಧಿ ಇವುಗಳನ್ನೆಲ್ಲ ಸಮಭಾಗ ಕುಟ್ಟಿ ಪುಡಿ ಮಾಡಿ ಪ್ರತಿ ದಿನ ಎರಡು ಹೊತ್ತು ೧೦ ಗ್ರಾಂನಷ್ಟನ್ನು ಜೇನುತುಪ್ಪದಲ್ಲಿ ಸೇವಿಸಬೇಕು. ಎರಡರಿಂದ ಮೂರು ವಾರ ಕಾಲ ಸೇವನೆ ಮಾಡಬೇಕು.

ಬಾಹ್ಯ ಚಿಕಿತ್ಸೆ

ಬಿಳಿ ಸೆರಗಿನಿಂದ ಬಳಲುವವರು ಬಿಸಿ ನೀರಿನಿಂದ ಯೋನಿಯನ್ನು ಆಗಾಗ ತೊಳೆದುಕೊಂಡು ಸ್ವಚ್ಛವಾಗಿಟ್ಟುಕೊಳ್ಳಬೇಕು. ಇದರಲ್ಲಿ ಸ್ವಚ್ಛತೆಯೇ ಬಹುಮುಖ್ಯ ಚಿಕಿತ್ಸೆ. ತ್ರಿಫಲಾಚೂರ್ಣದಿಂದ ಕಷಾಯ ತಯಾರಿಸಿಕೊಂಡು ಅದರಿಂದ ಯೋನಿಯನ್ನು ತೊಳೆದುಕೊಳ್ಳಬೇಕು. ದಿನಕ್ಕೆರಡು ಬಾರಿ ಒಂದು ವಾರ ಮಾಡಿಕೊಳ್ಳಬೇಕು.

○ ಡಾ. ಎ.ಬಿ.

ಕಿಶೋರಿಯ ತಾಯಿಗೆ ಕೆಲವು ಸಲಹೆ

೧. ನಿಮ್ಮ ಮಗಳು ಪ್ರಾಪ್ತವಯಸ್ಸಿಗೆ ಬಂದಾಗ ನಿಸ್ಸಂಕೋಚವಾಗಿ ಋತುಚಕ್ರದ ಬಗ್ಗೆ, ಬೆಳವಣಿಗೆಯಲ್ಲಾಗುವ ಬದಲಾವಣೆಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸಿ. ಇದರಲ್ಲಿ ಸಂಕೋಚಪಡುವ ವಿಷಯವೇನೂ ಇಲ್ಲ.

೨. ನಿಮ್ಮ ಮಗಳು ಪ್ರಥಮ ಬಾರಿ ಋತುಮತಿಯಾದಾಗ ಅನಾವಶ್ಯಕವಾಗಿ ಅವಳನ್ನು ಗಾಬರಿಗೊಳಿಸಬೇಡಿ. ಬೆಳೆಯುವ ವಯಸ್ಸಿನಲ್ಲಿ ಇದು ಸ್ವಾಭಾವಿಕವೆಂದು, ಇದು ನಿಮ್ಮ ಮಗಳನ್ನೂ ಸುಂದರವಾಗಲು ಸಹಕಾರಿಯಾಗುತ್ತದೆ ಎಂದು ನಗುನಗುತ್ತಲೇ ತಿಳಿಸಿ. ಆರತಕ್ಷತೆ ಮುಂತಾದ ಸಮಾರಂಭಗಳು ಮಾಡುವ ಹಾಗಿದ್ದರೆ ಅನಗತ್ಯ ವಿಶ್ಲೇಷಣೆ ಮಾಡುವ ಹೆಂಗಳೆಯರನ್ನು ಆಹ್ವಾನಿಸದೇ, ಸರಳ ರೀತಿಯಲ್ಲಿ ನೆರವೇರಿಸಿ.

೩. ನಿಮ್ಮ ಮುದ್ದು ಮಗಳಿಗೆ ಅವಶ್ಯಕವಾದ ಒಳ್ಳೆ ದರ್ಜೆಯ ಸ್ಯಾನಿಟರ ನ್ಯಾಪ್‌ಕಿನ್ಸ್ ಕೊಡಿಸಿ ಅದನ್ನು ಬಳಸುವ ರೀತಿಯನ್ನು ಸಹನೆಯಿಂದ ತೋರಿಸಿಕೊಡಿ. ಶಾಲೆಯಲ್ಲಿ ಪೇಚಾಟದ ಸಂದರ್ಭ ಒದಗದಂತೆ ಪ್ರತಿ ತಿಂಗಳು ದಿನಗಳನ್ನು ಗುರುತಿಟ್ಟುಕೊಂಡು ಮಗಳ ಬ್ಯಾಗಿನಲ್ಲಿ ಪ್ಯಾಡೊಂದನ್ನು ನೀಟಾಗಿ ಪ್ಯಾಕ್ ಮಾಡಿ ಇಟ್ಟಿರಿ.

೪. ನಿಮ್ಮ ಮಗಳ ಗೆಳೆಯ ಗೆಳತಿಯರ ವಲಯದಲ್ಲಿ ಸದಾ ಕಣ್ಣಿಟ್ಟಿರಿ. ಅವಳು ಕೆಟ್ಟ ಸಹವಾಸ ಮಾಡದಂತೆ ಎಚ್ಚರಿಕೆ ವಹಿಸಿ.

೫. ನಿಮ್ಮ ಮಗಳನ್ನು ಒಂಟಿಯಾಗಿ ಯಾವ ಪರಿಚಿತರೊಂದಿಗೂ ಕಳುಹಿಸಬೇಡಿ. ಅಪರಿಚಿತರೊಡನೆ ಜಾಗರೂಕರಾಗಿರಬೇಕೆಂದು ಅವಳಿಗೆ ಮನಸ್ಸಿಗೆ ನಾಟುವಂತೆ ತಿಳಿಹೇಳಿ. ಅವಳನ್ನು ಒಂಟಿ ಗಂಡಸಿನೊಡನೆ (ಮುದುಕರಾಗಲಿ, ಹುಡುಗರಾಗಲಿ) ಅವನು ನಿಮ್ಮ ನೆಂಟನಾಗಿರಲಿ, ಗೆಳೆಯನಾಗಿರಲಿ ನಂಬಿ ಬಿಡಬೇಡಿ. ಪರರ ನಿಷ್ಠೂರವನ್ನು ಲೆಕ್ಕಿಸಬೇಡಿ! ಮಗಳ ಬಾಳು ಕಂಡವರ ಕೋಪಕ್ಕಿಂತ ಹೆಚ್ಚು ಎಂದು ಸದಾ ನೆನಪಿಡಿ.

೬. ಈಗ ನಿಮ್ಮ ಮಗಳು ನಿಮ್ಮ ಹೆಗಲನ್ನು ಮೀರಿ ಬೆಳೆಯುತ್ತಿದ್ದಾಳೆಯೇ? ಅವಳನ್ನು ಅಂಕೆಯಲ್ಲಿಡಲು ಅನಾವಶ್ಯಕವಾಗಿ ಪ್ರಯತ್ನಿಸದೇ ಅವಳನ್ನು ಸ್ನೇಹಿತಳಂತೆ ಕಾಣಬೇಕು. ಅವಳ ಸಣ್ಣ ಪುಟ್ಟ ಭಾವನೆಗಳಿಗೂ ಬೆಲೆ ಕೊಡುವುದನ್ನು ಕಲಿಯಿರಿ. ಅವಳಿಗೇನಾದರೂ ಸಮಸ್ಯೆ ಕಂಡರೆ ಅವಳ ಜೊತೆ ಕುಳಿತು ಆಸಕ್ತಿಯಿಂದ ಕೇಳಿ ಅದಕ್ಕೆ ಪರಿಹಾರ ಸೂಚಿಸಿ ಅವಳು ಈಗ ಪ್ರಬುದ್ಧಳಾಗಿದ್ದಾಳೆಂದು ತೋರಿಸಿಕೊಡಲು ಮನೆಯ ವಹಿವಾಟುಗಳ ಬಗ್ಗೆ ಅವಳ ಸಲಹೆ ಕೇಳಿ! ಅವಳ ಚಟುವಟಿಕೆಗಳು, ಹವ್ಯಾಸಗಳಲ್ಲಿ ಆಸಕ್ತಿ ತೋರಿ ಅವಳನ್ನು ಪ್ರೋತ್ಸಾಹಿಸಿ. ಹೆಣ್ಣಾಗಿ ಹುಟ್ಟಿದಳೆಂದು ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ ಎಂದೂ ತೋರಿಸಬಾರದು! ಹೆಣ್ತನವೆಂಬುದು ಪ್ರಕೃತಿಯ ಹೆಮ್ಮೆಯ ಕೊಡುಗೆಯೆಂದು ಅವಳಿಗೆ ಮನವರಿಕೆ ಮಾಡಿ. ನಿಮ್ಮ ಪ್ರೀತಿ, ವಿಶ್ವಾಸ, ಮಾರ್ಗದರ್ಶನ ನಿಮ್ಮ ಮಗಳಿಗೆ ಸದಾ ಅಗತ್ಯವಿದೆ. ಅದು ಯಥೇಚ್ಛವಾಗಿ ದೊರಕಿದರೆ ಅವಳು ಆತ್ಮವಿಶ್ವಾಸದಿಂದ ಮುನ್ನಡೆಯುತ್ತಾಳೆ. ಭವ್ಯ ಭಾರತದ ಪ್ರಜೆಯಲ್ಲಿ ಒಬ್ಬಳಾಗುತ್ತಳೆ!

– ಎ.ವಿ.

ಅಳುವುದೊಂದೇ ಉಳಿದಿರುವ ದಾರಿ!



ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
೧೨೭, ಪಶ್ಚಿಮ ಕಾರ್ಡ್ ರಸ್ತೆ
ಮಹಾಲಕ್ಷ್ಮೀಪುರ, ಬೆಂಗಳೂರು - ೮೬

ನಮ್ಮ ದೇಶ ಸಂವಿಧಾನವನ್ನು ಅಂಗೀಕರಿಸಿದ ಸುವರ್ಣ ಉತ್ಸವದ ನಿಮಿತ್ತವಾಗಿ ಮಹಾ ಸಂವಿಧಾನ ತಜ್ಞ, ನಮ್ಮ ದೇಶದ ಅಮೆರಿಕಾ ರಾಯಭಾರಿಯಾಗಿದ್ದ ನಾನೀ ಪಾಲ್ಕೀವಾಲಾರನ್ನು ದೂರದರ್ಶನದವರು ಸಂದರ್ಶನ ನಡೆಸಿದರು. ಸಂದರ್ಶಕರ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ನಮ್ಮ ಸಂವಿಧಾನ ಅತ್ಯಂತ ಶ್ರೇಷ್ಠವಾದದ್ದು. ಆದರೆ ಅದು ಅತ್ಯಂತ ಅಸಮರ್ಥರ ಕೈಗೆ ಸಿಕ್ಕು ಬಿದ್ದಿದೆ' ಎಂದು ಹೇಳಿದರು. ಸಂದರ್ಶಕರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಕೊಡುತ್ತ ಒಂದು ಹಂತದಲ್ಲಿ ಅವರು ಈ ದೇಶಕ್ಕೆ ಬಂದೊದಗಿದ ದುರ್ದೆಶೆಯನ್ನು ತಡೆದುಕೊಳ್ಳಲಾರದೆ ಮಗುವಿನಂತೆ ಅತ್ತು ಬಿಟ್ಟರು! ಇಡೀ ಲೋಕವೆ ಅವರ ತಡೆಯಲಾರದ ದುಃಖವನ್ನು ಕಂಡು ಸಂಕಟಪಟ್ಟಿತು!.


ನಮ್ಮ ಸಂವಿಧಾನ ಜಗತ್ತಿನ ಯಾವ ಸಂವಿಧಾನಕ್ಕಿಂತಲೂ ದೀರ್ಘವಾದದ್ದು. ಅಷ್ಟೇ ಶ್ರೇಷ್ಠವಾದದ್ದು. ಸಂವಿಧಾನವನ್ನು ಅಂಗೀಕರಿಸಿದ ಆ ದಿನ ನವೆಂಬರ್ ೨೬, ೧೯೪೯ರಂದು ಸಂವಿಧಾನ ಸಭೆಯಲ್ಲಿ ಅಮೋಘವಾದ ಭಾಷಣಗಳಾದವು. ಅಂದು ಯಾವ ಚರ್ಚೆಯೂ ನಡೆಯಲಿಲ್ಲ. ಯಾಕೆಂದರೆ ಮೂರು ವರ್ಷಗಳ ಕಾಲ-ಒಂದೊಂದು ಕಲಮಿನ ಮೇಲೆ ಕೂಲಂಕಷ ಸುದೀರ್ಘ ಚರ್ಚೆ ನಡೆದಿತ್ತು. ಚರ್ಚಿಸಬೇಕಾದದ್ದು ಏನೂ ಇರಲಿಲ್ಲ. ಅಂದು ಸಂವಿಧಾನ ಕರ್ತೃಗಳು, ಪಿತೃಗಳು ಧನ್ಯತೆಯ ಭಾವದಿಂದ ಎದೆ ತುಂಬಿ ಮಾತನಾಡಿದರು. ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರರು ಒಂದು ಮಾತನ್ನು ಹೇಳಿದರು.

''....ಒಂದು ಸಂವಿಧಾನ ಎಷ್ಟೇ. ಒಳ್ಳೆಯದಾಗಿದ್ದರೂ, ಅದು ಕೆಟ್ಟದ್ದಾಗಿ ಹೋಗಬಹುದು. ಏಕೆಂದರೆ ಅದನ್ನು ಕಾರ್ಯಗತಗೊಳಿಸುವವರು ಕೆಟ್ಟವರಾಗುವುದರಿಂದ, ಸಂವಿಧಾನ ಎಷ್ಟೇ ಕೆಟ್ಟದ್ದಾಗಿದ್ದರೂ ಅದು ಅತ್ಯಂತ ಶ್ರೇಷ್ಠವಾಗಬಹುದು. ಏಕೆಂದರೆ ಅದನ್ನು ಕಾರ್ಯಗತಗೊಳಿಸುವವರು ಒಳ್ಳೆಯವರಾದರೆ. ಒಂದು ಸಂವಿಧಾನ ಒಳ್ಳೆಯದು ಕೆಟ್ಟದ್ದು ಆಗುವುದು ಸಂಪೂರ್ಣ ಅದರಲ್ಲಿ ಏನು ಬರೆದಿದ್ದಾರೆ ಎಂಬುದರಿಂದಲ್ಲ, ಆದರೆ ಅದನ್ನು ಕಾರ್ಯಗತಗೊಳಿಸುವ ಜನರಿಂದ ಅದು ಒಳ್ಳೆಯದು ಕೆಟ್ಟದ್ದು ಆಗುತ್ತದೆ. ಅದನ್ನು ಕಾರ್ಯಗತಗೊಳಿಸುವವರು ಒಳ್ಳೆಯವರಾದರೆ ಅದು ಒಳ್ಳೆಯದು. ಕೆಟ್ಟವರಾದರೆ ಕೆಟ್ಟದ್ದಾಗುತ್ತದೆ....'' (ಸಂವಿಧಾನ ಚರ್ಚೆ ವರದಿ: ಪುಟ ೭೪೫ ದಿ. ೨೫.೧೧.೪೯)

ಡಾ. ಅಂಬೇಡ್ಕರರು ಚರ್ಚೆಯ ಕೊನೆಯ ದಿನ ಆಡಿದ ಮಾತನ್ನು ಸಂವಿಧಾನ ಸಭೆ ಸೇರಿದ ಮೊದಲನೆಯ ದಿನ, ಸಂವಿಧಾನ ಸಭೆಯ ಹಂಗಾಮಿ ಅಧ್ಯಕ್ಷ ಡಾ. ಸತ್ಯನಾರಾಯಣ ಸಿಂಹ ಅವರು ಒಂದು ಅಮೋಘವಾದ ಸತ್ಯವನ್ನು ಹೇಳಿದ್ದರು. ಅಮೆರಿಕೆಯ ಸಂ.ಸಂಸ್ಥಾನಗಳ ಸಂವಿಧಾನದ ಬಗ್ಗೆ ಸ್ಟೋರಿ-ಎಂಬ ನ್ಯಾಯಮೂರ್ತಿಗಳ ಮಾತನ್ನು ಸ್ಮರಿಸಿದರು.

''ಅಮೆರಿಕೆಯ ಅತ್ಯಂತ ಶ್ರೇಷ್ಠ ಬುದ್ಧಿವಂತರು, ಮಹಾಪ್ರತಿಭಾವಂತರು, ಕಷ್ಟಪಟ್ಟು ರಚಿಸಿದ ಈ ಸಂವಿಧಾನವನ್ನು ಕೆಡಿಸದೆ ನಮ್ಮ ಮುಂದಿನ ಪೀಳಿಗೆ ಈ ಪವಿತ್ರ ಶಾಸನವನ್ನು ಕಾಪಾಡಿಕೊಂಡು ಹೋಗುವಂತೆ ನಾವು ಪ್ರಯತ್ನಿಸಬೇಕು. ಈ ಸಂವಿಧಾನಕ್ಕಾಗಿ ಎಷ್ಟೋ ಜನರು ಪ್ರಾಣ ತೆತ್ತಿದ್ದಾರೆ, ಕಷ್ಟ ಅನುಭವಿಸಿದ್ದಾರೆ. ಕೊನೆಗೆ ಈ ದೇಶ ಒಂದಾಗಿ ಹೋಗುವುದಕ್ಕಾಗಿ ಈ ಸಂವಿಧಾನದ ಬಳುವಳಿ ಬಿಟ್ಟು ಹೋಗಿದ್ದಾರೆ''.

ಮೊದಲನೆಯ ದಿನ ಡಾ. ಸಿಂಹ ಹೇಳಿದ ಮಾತಿಗೆ ಅನುಗುಣವಾಗಿ ಕೊನೆಯ ದಿನ ಡಾ. ಅಂಬೇಡ್ಕರರು ಈ ಮೇಲಿನ ಅಮೋಘ ನುಡಿಗಳನ್ನು ಆಡಿದರು. ಈ ಮಾತುಗಳನ್ನು ಆಡಿದ ಮೇಲೆ, ಆಡಬೇಕಾದ ಮುಖ್ಯ ಮಾತುಗಳನ್ನು ಆಡಿ ಡಾ. ಅಂಬೇಡ್ಕರರು. ''ನಾನು ಇಲ್ಲಿಗೆ ನಿಲ್ಲಿಸಬಹುದಾಗಿತ್ತು. ಆದರೆ ನಮ್ಮ ದೇಶದ



ಪಾಲ್ಕೀವಾಲಾ ಕೇವಲ ಕಣ್ಣೀರಿನಿಂದ ತಮ್ಮ ದುಃಖವನ್ನು ಬಹಿರಂಗಪಡಿಸಿದ್ದಾರೆ. ಆದರೆ ಸ್ವಾತಂತ್ರ್ಯ ನಂತರ ಈ ದೇಶ ಭ್ರಷ್ಟರ, ಅಪ್ರಾಮಾಣಿಕರ, ದರೋಡೆಕಾರರ ಕೈಗೆ ಜಾರಿ ಹೋಗುತ್ತಿರುವ ನೋಡಬಾರದ ದೃಶ್ಯವನ್ನು ನೋಡಲಾರದೆ ಆತ್ಮಹತ್ಯೆ ಮಾಡಿಕೊಂಡವರೂ ಇದ್ದಾರೆ.

ಭವಿಷ್ಯದ ಬಗ್ಗೆ ನನ್ನ ಮನಸ್ಸೆಲ್ಲ ತುಂಬಿ ಹೋಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ಆ ಬಗ್ಗೆ ನನ್ನ ಆಲೋಚನೆಗಳನ್ನು ಮಂಡಿಸ ಬಯಸುತ್ತೇನೆ. ಜನವರಿ ೨೬, ೧೯೫೦ರಂದು ಭಾರತ ಸ್ವತಂತ್ರವಾಗುತ್ತದೆ. (ಹರ್ಷೋದ್ಗಾರ) ಅದರ ಸ್ವಾತಂತ್ರ್ಯ ಏನಾಗಬಹುದು? ಅದು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದೆ? ಅಥವಾ ಕಳೆದುಕೊಳ್ಳುವುದೇ?... ಹಿಂದೆ ಭಾರತ ಸ್ವಾತಂತ್ರ್ಯವನ್ನು ಅನೇಕ ಸಲ ಕಳೆದುಕೊಂಡಿದೆ. ತನ್ನ ಪ್ರಜೆಗಳ ದ್ರೋಹದಿಂದ ಮತ್ತು ವಂಚಕ ಬುದ್ಧಿಯಿಂದ ನಮ್ಮ ಪ್ರಜೆಗಳೇ ನಮ್ಮ ಸ್ವಾತಂತ್ರ್ಯವನ್ನು ಬಲಿಗೊಟ್ಟರು. ಇತರರಿಗೆ ಧಾರೆ ಎರೆದರು...''

''ನಮ್ಮ ದೇಶದಲ್ಲಿ ಪ್ರಜಾಸತ್ತೆ ಹಿಂದೆ ಇರಲಿಲ್ಲವೆಂದಲ್ಲ, ಇತ್ತು. ಆದರೆ ಅದನ್ನು ಕಳೆದುಕೊಂಡೆವು... ಭಾರತ ಮತ್ತೆ ಅದನ್ನು ಕಳೆದುಕೊಂಡೀತೆ? ನನಗೆ ಗೊತ್ತಿಲ್ಲ... ಆದರೆ ಭಾರತದಂಥ ಬೃಹತ್ ದೇಶ ಪ್ರಜಾಸತ್ತೆಯನ್ನು ಕಳೆದುಕೊಂಡು ಸರ್ವಾಧಿಕಾರ ಬರುವ ಅಪಾಯವಿದೆ..... ನಾವು ಪ್ರಜಾಸತ್ತೆಯನ್ನು ಉಳಿಸಿಕೊಳ್ಳಬೇಕಾದರೆ ಪ್ರಜಾಸತ್ತಾತ್ಮಕ ರೀತಿಗಳನ್ನು ಕೈಬಿಡಬಾರದು.... ಅರಾಜಕತೆವುಂಟಾಗದಂತೆ ನಾವು ಜಾಗರೂಕರಾಗಿರಬೇಕು.... (ಪು:೭೮)

ನಾನೀ ಪಾಲ್ಕೀವಾಲಾ ಅಂದು ಕಣ್ಣೀರು ಸುರಿಸಿದಾಗ ನಮ್ಮ ದೇಶ ಸ್ವತಂತ್ರವಾಗಲು ಅಕ್ಷರಶಃ ಸಹಸ್ರಾರು ಜನ ಕ್ರಾಂತಿಕಾರಿಗಳು, ಸತ್ಯಾಗ್ರಹಿಗಳು ಈ ದೇಶದ ಸ್ವಾತಂತ್ರ್ಯಕ್ಕಾಗಿ ನೇಣುಗಂಬವನ್ನು ಹತ್ತಿದ ಹಾಗೂ 'ವಂದೇ ಮಾತರಂ' ಎಂಬ ಮಂತ್ರವನ್ನು ವಧಾಪೀಠದ ಮೇಲೆ ಘೋಷಿಸಿ ಉರುಳುಗಣ್ಣೆಯನ್ನು ಕೊರಳಿಗೆ ತಾವಾಗಿಯೆ ಹಾಕಿಕೊಂಡ ದೃಶ್ಯ ಪಾಲ್ಕೀವಾಲಾರ ಕಣ್ಮುಂದೆ ಬಂದಿರಬೇಕು. ಲಕ್ಷೋಪಲಕ್ಷ ಜನರು ತುರಂಗವಾಸವನ್ನು ಅಂಡಮಾನ್ ದ್ವೀಪದಲ್ಲಿ, ಮಾಂಡಲೇಯಲ್ಲಿ, ಎರ್ರವಾಡ, ಅಲ್ಲೀಪುರ, ಬಳ್ಳಾರಿ....ಜೈಲುಗಳಲ್ಲಿ ಎಷ್ಟೋ ವರ್ಷಗಳ ಕಾಲ ಕಳೆದದ್ದು ಪಾಲ್ಕೀವಾಲಾರ ಕಣ್ಮುಂದೆ ಬಂದಿರಬೇಕು...ಕೊನೆಗೆ ಸಂವಿಧಾನ ಅಂಗೀಕಾರವಾಯಿತು.

ಆದರೆ ಈಗೇನಾಗಿದೆ?

ಡಕಾಯಿತರು, ದರೋಡೆಕಾರರು, ಹೀನ ಅಪರಾಧಗಳಲ್ಲಿ ಸಿಕ್ಕಿಕೊಂಡವರು, ಸರ್ಕಾರೀ ಖಜಾನೆಯನ್ನು ಲೂಟಿ ಮಾಡಿ ಭ್ರಷ್ಟಾಚಾರ ಕಾಯಿದೆಯ ಕೆಳಗೆ ನ್ಯಾಯಾಲಯಗಳಲ್ಲಿ ವಿಚಾರಣೆಯನ್ನು ಎದುರಿಸುತ್ತಿರುವವರು, ಸ್ತ್ರೀಮಾನಭಂಗ ಮಾಡಿದ ಪಾಪಿಗಳು ನಮ್ಮ ಸಂವಿಧಾನ ಸಭೆಯಲ್ಲಿ, ಶಾಸನ ಸಭೆಗಳಲ್ಲಿ ವಿರಾಜಮಾನರಾಗಿರುವ ದುಷ್ಪರ ಕೂಟವನ್ನು ಪಾಲ್ಕೀವಾಲಾ ನೆನಪು ಮಾಡಿಕೊಂಡಿರಬೇಕು... ಯಾವ ಪವಿತ್ರ ಸಂವಿಧಾನವನ್ನು ೫೦ ವರ್ಷಗಳ ಕೆಳಗೆ ನಮ್ಮ ಪೂರ್ವಜರು ಕೊಟ್ಟರೊ ಅದು ಈಗ ಕೆಲವು ಭ್ರಷ್ಟರ, ಪಿಂಡಾರಿಗಳ, ದರೋಡೆಗಾರರ ಪಾತಕಿಗಳ ಕೈಗೆ ಸಿಕ್ಕು ಹೋಗಿರುವುದು ಅವರ

ಕೋಟೆ ಚಿಂತನ


ಕಣ್ಮುಂದೆ ಬಂದಿರಬಹುದು. ಆದ್ದರಿಂದಲೆ ಅವರು ಕಣ್ಣೀರು ತಂದಿರಬೇಕು.

ಪಾಲ್ಕೀವಾಲಾ ಕೇವಲ ಕಣ್ಣೀರಿನಿಂದ ತಮ್ಮ ದುಃಖವನ್ನು ಬಹಿರಂಗಪಡಿಸಿದ್ದಾರೆ. ಆದರೆ ಸ್ವಾತಂತ್ರ್ಯ ನಂತರ ಈ ದೇಶ ಭ್ರಷ್ಟರ, ಅಪ್ರಾಮಾಣಿಕರ, ದರೋಡೆಕಾರರ ಕೈಗೆ ಜಾರಿ ಹೋಗುತ್ತಿರುವ ನೋಡಬಾರದ ದೃಶ್ಯವನ್ನು ನೋಡಲಾರದೆ ಆತ್ಮಹತ್ಯೆ ಮಾಡಿಕೊಂಡವರೂ ಇದ್ದಾರೆ. ಸ್ವಾತಂತ್ರ್ಯ ನಂತರದ ಐದು ವರ್ಷಗಳ ಒಳಗೇ, ಆಗತಾನೆ ಭ್ರಷ್ಟರಾಜಕಾರಣಿಗಳು ತಲೆಯೆತ್ತುತ್ತಿದ್ದ ಭೀಕರ ಸಂಗತಿಯನ್ನು ಸಹಿಸಲಾರದೆ ಸಾಣೇಗುರುಜಿಯಂಥ ಸಜ್ಜನರು, ಸಾಹಿತಿಗಳು, ಸ್ವಾತಂತ್ರ್ಯಯೋಧರು ಆತ್ಮಹತ್ಯೆ ಮಾಡಿಕೊಂಡು ಕಣ್ಮುಚ್ಚಿದರು. ಬದುಕಿರುವ ಸಜ್ಜನರು ಇನ್ನೂ ಪ್ರಾಣ ಹಿಡಿದುಕೊಂಡಿದ್ದರೆ ಆತ್ಮಹತ್ಯೆಗೆ ಧೈರ್ಯಸಾಲದೆಯೋ, ಭ್ರಷ್ಟ ರಾಜಕಾರಣಿಗಳ ಕೃಪಾ ಪಾತ್ರರಾಗಿಯೊ ಇಲ್ಲವೆ ಒಂದು ದಿನ ಈ ಭ್ರಷ್ಟರಿಗೆ ಫಾಶೀ ಶಿಕ್ಷೆಯಾಗುತ್ತದೆ ಎಂಬ ಆಶಾಕಿರಣದಿಂದಲೊ ಬದುಕಿದ್ದಾರೆ.

ಆದರೆ ಅಂಥ ಆಶಾ ಕಿರಣ ಕಾಣುತ್ತಿಲ್ಲ. ಭ್ರಷ್ಟರನ್ನು ರಾಜಕೀಯದಿಂದ ಬಹಿಷ್ಕರಿಸುವ ಮಾತು ಇರಲಿ. ಅವರು ಇನ್ನೂ ಅಧಿಕ ಸಂಖ್ಯೆಯಲ್ಲಿ ರಾಜಕೀಯದಲ್ಲಿ ಪ್ರವೇಶಿಸುತ್ತಿದ್ದಾರೆ. ರಾಜಕೀಯ ಕ್ಷೇತ್ರಕ್ಕೆ ಕಾಲಿಡುವುದಕ್ಕಿಂತ ಮುಂಚೆ ಆಟೋರಿಕ್ಷಾ ಓಡಿಸಿ, ಧರ್ಮಛತ್ರಗಳಲ್ಲಿ ಆಶ್ರಯ ಪಡೆದು ಬದುಕಿದ್ದ ನೀಚರು, ಅಪ್ರಾಮಾಣಿಕರು ಈಗ ಅರಮನೆಗಳಲ್ಲಿ ವಾಸಿಸುತ್ತಿದ್ದಾರೆ. ಹತ್ತು, ಹದಿನೈದು.... ಮೂವತ್ತು ಕ್ರಿಮಿನಲ್‌ಗಳು ಮೊಕದ್ದಮೆಗಳನ್ನು ನ್ಯಾಯಲಯಗಳಲ್ಲಿ ಎದುರಿಸಿ ವಿಚಾರಣೆಗೆ ಒಳಗಾಗಿರುವ ಕ್ರಿಮಿನಲ್ ಈಗ ಲೋಕಸಭೆಗೆ ಸ್ಪರ್ಧಿಸಿದ್ದಾರೆ. ಅಂಥವರಿಗೆ ಟಿಕೆಟ್ ಕೊಡಬೇಡಿರೆಂದು ರಾಷ್ಟ್ರಪತಿ ಮತ್ತು ಚುನಾವಣಾ ಆಯೋಗ, ಸಮಾಜ ಸುಧಾರಕರು ಕೈಮುಗಿದು ವಿನಂತಿಸಿಕೊಂಡರೂ ಅಂಥ ಕ್ರಿಮಿನಲ್‌ಗಳಿಗೆ ಟಿಕೆಟ್ ಕೊಟ್ಟು ಚುನಾವಣಾ ಕಣಕ್ಕೆ ಇಳಿಸಿದ್ದಾರೆ. ಅವರು ಗೆದ್ದು ಬಂದರೆ ಈಗ ಅವರ ಮೇಲಿರುವ ಕ್ರಿಮಿನಲ್ ಕೇಸುಗಳನ್ನು ವಾಪಸುಪಡೆಯಬಹುದು. ಇಲ್ಲವೆ ದುರ್ಬಲಪಡಿಸಬಹುದು. ಕೊನೆಗೆ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆಯನ್ನೇ ರದ್ದುಪಡಿಸಬಹುದು, ಇಲ್ಲವೆ, ಅವರ ಮೇಲೆ ಕೇಸು ಹಾಕಿದ ಸಿಬಿಐ ಅಧಿಕಾರಿಗಳನ್ನು ಮುಗಿಸಲೂಬಹುದು!! ಆಗಲೆ ಎಷ್ಟೋ ಜನರನ್ನು ಮುಗಿಸಿರುವ ಪುಂಡರು ಯಾರನ್ನು ಬಿಟ್ಟಾರು?

ಅಂದರೆ ಈ ದೇಶಕ್ಕೆ ಮುಕ್ತಿಯಿಲ್ಲವೆ? ಅಳುವುದೊಂದೇ ಉಳಿದಿರುವುದು? ಇಲ್ಲ ಪ್ರಜಾಸತ್ತೆಯಲ್ಲಿ ಪ್ರಜೆಗಳೇ ಸಾರ್ವಭೌಮರು. ಅವರು ಮನಸ್ಸು ಮಾಡಿದರೆ ಎಂಥ ಪ್ರಬಲ ಭಂಡರನ್ನೂ ಅಧಿಕಾರದಿಂದ ಕೆಳಗಿಳಿಸಬಹುದು. ಹಾಗೆ ಹಿಂದೆ ಮಾಡಿಯೂ ಇದ್ದಾರೆ. ಹಿಂದೆ ಮಾಡಲು ಸಾಧ್ಯವಾದರೆ ಇಂದೇಕೆ ಸಾಧ್ಯವಾಗದು? ಸಾಧ್ಯವಾಗಿಯೆ ಆಗುತ್ತದೆ. ಅಂಥ ಆತ್ಮವಿಶ್ವಾಸ ಇರಬೇಕು.

ಮೇಲಾಗಿ ಮತದಾರರು ಜಾಗ್ರತರಾಗಬೇಕು. ಜಾಗ್ರತರಾಗಲು ಅವರಿಗೆ ಶಿಕ್ಷಣದ ಮೂಲಭೂತ ಸೌಲಭ್ಯ ಸಿಗಬೇಕು. ಅಂಥ ಸೌಲಭ್ಯವನ್ನು ಒದಗಿಸುವಂತಹ ಪ್ರಾಮಾಣಿಕ ಜನರ ಕೈಗೆ ನಮ್ಮ ದೇಶ ಬರಬೇಕು. ಅನ್ಯಥಾ ದಾರಿಯಿಲ್ಲ ಇಂಥ ದೃಢ ಸಂಕಲ್ಪ, ಆಶಾವಾದ ನಮಗಿರಲಿ.



ಕ್ವಿಜ್-೮ ಬಹುಮಾನ ವಿಜೇತರು

ಪ್ರಥಮ ಬಹುಮಾನ
ರೂ. ೫೦೦-೦೦



ಎಂ.ಎಸ್. ತತ್ರಾಣಿ
C/o ಡಾ. ಎಸ್.ಎಸ್. ತತ್ರಾಣಿ
ಮಂಗಳಮ್ಮ ದೇವಸ್ಥಾನದ ಹತ್ತಿರ,
ಅಮೀನಗಡ - ೫೮೭ ೧೧೨
ತಾ. ಹುನಗುಂದ ಬಾಗಲಕೋಟೆ ಜಿಲ್ಲೆ

ದ್ವಿತಿಯ ಬಹುಮಾನ
ರೂ. ೨೦೦-೦೦

ರಮಾನಂದ ಶಿರಗುಂಜಿ
At: ಶಿರಗುಂಜಿ
ಅಂಚೆ: ವಾಸರ ಕುದ್ರಿಗೆ - ೫೮೧ ೩೫೭
ತಾ. ಅಂಕೋಲಾ ಉ.ಕ.ಜಿಲ್ಲೆ

ಸಮಾಧಾನಕರ ಬಹುಮಾನ
ತಲಾ ರೂ. ೧೦೦/-

ಆನಂದ ಟಿ. ಹೆಗಡೆ ಕನ್ನಳ್ಳಿ
C/o ತಿ.ಮ. ಹೆಗಡೆ
ಅಂಚೆ: ಅವರಗುಪ್ಪಾ - ೫೮೧ ೩೫೫
ತಾ. ಸಿದ್ದಾಪುರ ಉ.ಕ. ಜಿಲ್ಲೆ

ಪ್ರವೀಣ ಮನೋಹರರಾವ್ ಕುಲಕರ್ಣಿ
ಮನೋಹರ ನರಸಿಂಹರಾವ್ ಕುಲಕರ್ಣಿ
ಮು./ಅಂಚೆ: ಬೆಳವಡಿ - ೫೯೧ ೧೦೪
ತಾ. ಬೈಲಹೊಂಗಲ ಬೆಳಗಾವಿ ಜಿಲ್ಲೆ

ಬಸವರಾಜು
ಶ್ರೀ ಬಾಲಮುರುಗೇಶ್ ಟ್ರೇಡರ್ಸ್,
೪೧/ಎ, ಲಾರಿ ನಿಲ್ದಾಣ
(ಎ.ಪಿ.ಎಂ.ಸಿ. ಯಾರ್ಡ್ ಹತ್ತಿರ)
ಯಶವಂತಪುರ
ಬೆಂಗಳೂರು - ೫೬೦ ೦೨೨

ಕ್ವಿಜ್ - ೮ರ ಸರಿಯುತ್ತರ

೧. ಇಟಲಿ
೨. ಬನವಾಸಿ
೩. ಕೆ.ವಿ. ಅಯ್ಯರ್
೪. ಶಿವರಾಜಕುಮಾರ್
೫. ಆಸ್ಟ್ರೇಲಿಯಾ

ಕ್ವಿಜ್ ೯ರಲ್ಲಿ ಭಾಗವಹಿಸುವಿರಾ?

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತಿಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ ೧-೩-೧೯೯೮

ಕ್ವಿಜ್ - ೯

೧. ಚುನಾವಣೆಗೆ ಸ್ಪರ್ಧಿಸಲು ಪಕ್ಷದ ಟಿಕೆಟ್ ನಿರಾಕರಿಸಲ್ಪಟ್ಟ ಮಾಜಿ ಪ್ರಧಾನಿ ಯಾರು?

....

೨. ಭಾಲ್ಕಿ ತಾಲೂಕು ಯಾವ ಜಿಲ್ಲೆಯಲ್ಲಿದೆ?

....

೩. 'ಜನುಮದ ಜೋಡಿ' ಚಲನಚಿತ್ರದ ನಿರ್ದೇಶಕ ಯಾರು?

....

೪. ಶಾಂತಾ ರಂಗಸ್ವಾಮಿ ಯಾವ ಕ್ರೀಡೆಯಲ್ಲಿ ಪ್ರಸಿದ್ಧರು?

....

೫. ವಿಧಾನಸೌಧ ಕಟ್ಟಿಸಿದ ಮುಖ್ಯಮಂತ್ರಿ ಯಾರು?

....

ಹೆಸರು..
ವಿಳಾಸ..
....
....
ಪಿನ್ ಕೋಡ್.............................. ದೂರವಾಣಿ..............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

ಹೀಗೊಂದು ಬೈಲಹೊಂಗಲದ ಸಹಕಾರಿ ಬ್ಯಾಂಕು

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು ನಾಡಿನ ಸಾಂಸ್ಕೃತಿಕ ಇತಿಹಾಸಕ್ಕೆ ಮಹತ್ವದ ಕೊಡುಗೆ ನೀಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ತಾಲೂಕಿನ ಜನರು ತೋರಿದ 'ದೇಶಭಕ್ತಿ' ಅಪಾರವಾದುದು, ಈ ನೆಲದ ವೀರರಾದ ಬೆಳವಡಿ ಮಲ್ಲಮ್ಮ, ಕಿತ್ತೂರ ಚೆನ್ನಮ್ಮ, ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಮುಂತಾದವರು ಈ ತಾಲೂಕಿನ ಹಿರಿಮೆಗೆ ಸಾಕ್ಷಿ.

ಇಂತಹ ಗಂಡೆದೆಯ ತಾಣ ಬ್ರಿಟಿಷ್ ದೊರೆಗಳ ಸಂಕೋಲೆಯಲ್ಲಿ ಬದುಕುತ್ತಿದ್ದಾಗ ಸಹಕಾರವೆಂಬ ಮಹಾಮಂತ್ರದ ಶಕ್ತಿಯಿಂದ ಜನರ ಸಂಕಷ್ಟಗಳನ್ನು ಮತ್ತು ಆರ್ಥಿಕ ಸ್ಥಿತಿ-ಗತಿಗಳನ್ನು ಸುಧಾರಿಸಲು ಸಾಧ್ಯವೆಂಬ ಗುರಿ ಇಟ್ಟುಕೊಂಡು ಬೈಲಹೊಂಗಲದ ಪ್ರಮುಖರು ಸೇರಿಕೊಂಡು ೧೯೨೫ರಲ್ಲಿ ದಿ ಬೈಲಹೊಂಗಲ ಕೋ-ಆಪ್ ಕ್ರೆಡಿಟ್ ಸೊಸಾಯಿಟಿಯನ್ನು ಸ್ಥಾಪಿಸಿದರು.

ಅಂದು ಬಿತ್ತಿದ ಬೀಜ ಇಂದು ದಿ ಬೈಲಹೊಂಗಲ ಅರ್ಬನ್ ಕೋ-ಆಪ್ ಬ್ಯಾಂಕ್ ಲಿಮಿಟೆಡ್ ಎಂದು ಹೆಮ್ಮರವಾಗಿ ಬೆಳೆದು ಸಹಕಾರಿ ಕ್ಷೇತ್ರದಲ್ಲಿ 'ಕಲ್ಪವೃಕ್ಷ'ವಾಗಿ ಗಣನೀಯ ಪ್ರಗತಿ ಸಾಧಿಸಿದೆ. ಈಗ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದೆ, ೭೨ ವರ್ಷ ಕಾಲ ಸೇವೆ ಸಲ್ಲಿಸುತ್ತ ಶತಮಾನೋತ್ಸವದ ದೆಸೆಯಲ್ಲಿ ಹೆಜ್ಜೆ ಇಟ್ಟಿದೆ.

ಆರಂಭದಲ್ಲಿ ಈ ಬ್ಯಾಂಕು ಕೇವಲ ೭೯ ಸದಸ್ಯರು ಮತ್ತು ೫,೦೫೦ ರೂ. ಬಂಡವಾಳದೊಂದಿಗೆ ಸಹಕಾರಿ ರಂಗದಲ್ಲಿ ಹೆಜ್ಜೆ ಇಟ್ಟು ಹಲವಾರು ವ್ಯಾಪಾರಿಗಳ, ಉದ್ದಿಮೆದಾರರ ಸಹಕಾರ-ಸಹಯೋಗದಿಂದ ಬೆಳೆಯುತ್ತ ೧೯೯೬-೯೭ರಲ್ಲಿ ೨೩೭೦ ಸದಸ್ಯರನ್ನು ಹೊಂದಿದೆ. ೩೯,೦೮,೯೫೦ ರೂ. ಶೇರು ಹೊಂದಿ ಸಾಕಷ್ಟು ಪ್ರಗತಿಯನ್ನು ಸಾಧಿಸಿ 'ಎ' ಆಡಿಟ್ ವರ್ಗವನ್ನು ಪಡೆದಿದೆ.



ಬ್ಯಾಂಕಿನ ಆಫೀಸ್ ಕಟ್ಟಡ



ದಿ. ರಾವಬಹದ್ದೂರ ಮಲ್ಲನಾಯ್ಕ ಪಾಟೀಲ
ಸಂಸ್ಥಾಪನೆಗೆ ನೆರವಾದವರು

ಉದಯ

ಬೈಲಹೊಂಗಲದ ಆಗಿನ ಸಮಾಜ ಸೇವಾಕಾಂಕ್ಷಿಗಳಾದ ದಿವಂಗತ ಮಲ್ಲಿನಾಯಕ ಲಿಂಗನಾಯಕ ಪಾಟೀಲರು ಸಂಘಟಕರಾಗಿ ೧೨ ಜನ ಪ್ರಮುಖ ಪ್ರಮೋಟರರನ್ನು ಸೇರಿಸಿಕೊಂಡು ಆಗಿನ ಮುಂಬಯಿ ಸಹಕಾರಿ ಕಾಯಿದೆ ೧೯೧೨ರ ಕಲಮು ನಂ.೯ರ ಕೆಳಗೆ ದಿನಾಂಕ ೨೩ ಸಪ್ಟಂಬರ್ ೧೯೨೫ರಂದು "ದಿ ಬೈಲಹೊಂಗಲ ಅರ್ಬನ್-ಕೋ-ಆಪ್‌ರೇಟೀವ್ ಕ್ರೆಡಿಟ್ ಸೊಸಾಯಿಟಿ ಲಿಮಿಟೆಡ್" ಎಂದು ಸ್ಥಾಪಿತವಾಯಿತು.

ಪ್ರಪ್ರಥಮ ವಾರ್ಷಿಕ ಸಭೆಯಲ್ಲಿ ೭ ಜನ ನಗರದ ಪ್ರತಿಷ್ಠಿತ ವ್ಯಕ್ತಿಗಳನ್ನು ಸೇರಿಸಿ ಪ್ರಥಮ ಮ್ಯಾನೇಜಿಂಗ್ ಕಮೀಟಿಯನ್ನು ಮಾಡಿದರು. ಆ ಕಮಿಟಿಗೆ ಬಸವಣ್ಣೆಪ್ಪ ಚನ್ನಮಲ್ಲಪ್ಪ ಮೂಗಿ ಅವರನ್ನು ಪ್ರಥಮ ಚೇರಮನ್‌ರಾಗಿ ಮಾಡಿದರು. ಹೀಗೆ ಬ್ಯಾಂಕು ಸಹಕಾರಿ ರಂಗದಲ್ಲಿ ತನ್ನ ಸೇವೆಯನ್ನು ಪ್ರಾರಂಭಿಸಿತು.


ಬೆಳವಣಿಗೆ

ಸಂಘದ ಪ್ರಗತಿ ಹಾದಿಯ ಅಡೆತಡೆಗಳೇನೆಂಬುದನ್ನು ಅರಿತು ಶೇರು ಬಂಡವಾಳ ಹೆಚ್ಚಿಸಲಾಯಿತು. ಚಟುವಟಿಕೆಗಳನ್ನು ವಿಸ್ತರಿಸಲಾಯಿತು. ಈ ಕಾಯಕಲ್ಪ ಚಿಕಿತ್ಸೆಯಿಂದ ಬ್ಯಾಂಕು ಸಂಜೀವಿನಿ ಶಕ್ತಿ ಪಡೆದು ಆರ್ಥಿಕವಾಗಿ ಚೇತರಿಸಿಕೊಂಡಿತು. ನಂತರ ಹೊಸ ದಿಗ್ದರ್ಶಕ ಮಂಡಳಿಯು ಕ್ರಮೇಣವಾಗಿ ಸಾರ್ವಜನಿಕರ ಮನವಲಿಸಿಕೊಂಡು ಚಾಲ್ತಿ, ಸೇವಿಂಗ್ಸ್ ಮತ್ತು ಮುದ್ದತಿ ಠೇವುಗಳನ್ನು ಶೇಖರಿಸಲು ಪ್ರಾರಂಭಿಸಿತು.

೧೯೪೩ರಲ್ಲಿ ಬೈಲಹೊಂಗಲದ ಗಣ್ಯ ವ್ಯಾಪಾರಸ್ಥರಾದ ಶಿಖರೆಪ್ಪ ವಿರುಪಾಕ್ಷಪ್ಪ ಮೆಟಗುಡ್ ಅವರು ದಿಗ್ದರ್ಶಕ ಮಂಡಳಿಯನ್ನು ಸೇರಿ ಬ್ಯಾಂಕನ್ನು ಆರ್ಥಿಕವಾಗಿ ಸಬಲವಾಗಿ ಕಟ್ಟಲು ಶ್ರಮಿಸಿದರು. ಆ ಸಮಯದಲ್ಲಿ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಕಾರಣಕರ್ತರಾದ ದಿಗ್ದರ್ಶಕ ಮಂಡಳಿಯ ಸದಸ್ಯರ ಸೇವೆ ಸ್ಮರಣೀಯವಾದುದು.

೧೯೫೦ರಲ್ಲಿ ಬೆಳ್ಳಿಹಬ್ಬ

೧೯೫೦ರಲ್ಲಿ ಬ್ಯಾಂಕಿನ ಬೆಳ್ಳಿಹಬ್ಬವನ್ನು ಆಚರಿಸಲಾಯಿತು. ಅಷ್ಟೊತ್ತಿಗೆ ಬ್ಯಾಂಕು ಎಲ್ಲ ರೀತಿಯಲ್ಲಿ ಪರಿಪೂರ್ಣವಾಗಿ ಬೆಳೆದುನಿಂತು ಪ್ರಬಲವಾಗಿತ್ತು. ಆಗ ಪಿ.ಬಿ. ಉಗರಗೋಳ ವಕೀಲರು ಚೇರಮನ್‌ರಾಗಿದ್ದರು. ನಂತರ



ಎಂ.ಸಿ. ಮೆಟಗುಡ್, ವಕೀಲರು
ಚೇರ್‌ಮನ್

೧೯೫೧ರಲ್ಲಿ ಅರ್ಬನ್ ಸೊಸಾಯಿಟಿ ಎಂದು ಇದ್ದ ಹೆಸರನ್ನು "ಅರ್ಬನ್ ಬ್ಯಾಂಕ್" ಎಂದು ಬದಲಿಸಲಾಯಿತು. ೧೯೫೫ರಿಂದ ಬಂಗಾರದ ಆಭರಣಗಳ ಮೇಲೆ ಸಾಲವನ್ನು ನೀಡಲಾಯಿತು.

ಬ್ಯಾಂಕು ನಂತರ ಇನ್ನೂ ಹೆಚ್ಚಿನ ಬೆಳವಣಿಗೆಗಾಗಿ ಆಕರ್ಷಕ ಠೇವಣಿ ಯೋಜನೆಗಳನ್ನು ಪ್ರಾರಂಭಿಸಿತು. ಬ್ಯಾಂಕಿಗೆ ತನ್ನದೇ ಆದ ಸ್ವಂತ ಕಟ್ಟಡದ ಅವಶ್ಯಕತೆಯನ್ನು ಮನಗಂಡು ೧೯೭೫ರಲ್ಲಿ ವಿಶಾಲವಾದ ಹಾಗೂ ಸುಸಜ್ಜಿತವಾದ ಸುಂದರ ಕಟ್ಟಡವನ್ನು ನಿರ್ಮಿಸಲಾಯಿತು. ಆಗ ಎಂ.ಸಿ.ಮೆಟಗುಡ್ಡ ವಕೀಲರು ನವ-ಚೇತನವಾಗಿ ಬಂದು ಬ್ಯಾಂಕಿನ ಆಡಳಿತದ ಚುಕ್ಕಾಣಿಯನ್ನು ಹಿಡಿದರು. ಸರ್ವ ರೀತಿಯಿಂದಲೂ ಪ್ರಗತಿ ಪಥದತ್ತ ಕೊಂಡೊಯ್ದರು. ಮುಂದೆ ಬೆಳಗಾವಿ ಮತ್ತು ಬೈಲಹೊಂಗಲದಲ್ಲಿ ವಿಸ್ತೀರ್ಣ ಶಾಖೆಗಳನ್ನು ಪ್ರಾರಂಭಿಸಿದರು.

ಆರ್ಥಿಕ ಸಾಧನೆ

ಉತ್ಸಾಹದ ಖಣಿಗಳಾದ ಬ್ಯಾಂಕಿನ ಚೇರಮನ್ ಎಂ.ಸಿ.ಮೆಟಗುಡ್ಡರವರು "ಕಾಯಕವೇ ಕೈಲಾಸ" ಎಂದು ಬ್ಯಾಂಕಿನ ಬೆಳವಣಿಗೆಗಾಗಿ ಶ್ರಮಪಟ್ಟು ವಿವಿಧ ಯೋಜನೆಗಳ ಮೂಲಕ ಬ್ಯಾಂಕಿನ ಆರ್ಥಿಕ ಸುಭದ್ರತೆಯನ್ನು ಸಾಧಿಸಿದರು. ಆರ್ಥಿಕವಾಗಿ ದುರ್ಬಲರಾದ ವರ್ಗದವರನ್ನು ಮೇಲಕ್ಕೆತ್ತಲು ಕೂಡ ಬ್ಯಾಂಕು ಶ್ರಮಿಸುತ್ತಿದೆ. ಇಲ್ಲಿಯವರೆಗೆ ೮,೪೧,೦೨,೫೯೮ ರೂ ಠೇವುಗಳನ್ನು ಹೊಂದಿ ಸದ್ಯದ ೧೯೯೬-೯೭ರ ಆರ್ಥಿಕ ವರ್ಷದಲ್ಲಿ ೩೯,೦೮,೯೫೦ ರೂ. ಶೇರು ಹಾಗೂ ೧೧,೨೫,೨೩,೩೬೩ರೂ ದುಡಿಯುವ ಬಂಡವಾಳದೊಂದಿಗೆ ಒಟ್ಟು ೫೦,೧೩,೪೬೦ ರೂ ನಿವ್ವಳ ಲಾಭ ಪಡೆದು ಆರ್ಥಿಕವಾಗಿ ಸಾಧನೆಗೈದಿದೆ.

ಬ್ಯಾಂಕಿನ ಸಂಪನ್ಮೂಲಗಳು ಹೆಚ್ಚಾಗಿ, ಸಂಪನ್ಮೂಲಗಳ ಬಳಕೆಯು ಉತ್ತಮವಾಗಿ ಹಾಗೂ ಸಾಲ ವಸೂಲಿಯೂ ಸಹ ತೃಪ್ತಿಕರವಾಗಿ ಆಗಿದ್ದರಿಂದ ಬ್ಯಾಂಕು ನಿರೀಕ್ಷಿತ ಮಟ್ಟದಲ್ಲಿ ನಿವ್ವಳ ಲಾಭ ಹೊಂದಿದೆ. ಎರಡು ಶಾಖೆಗಳು ಅಲ್ಪಾವಧಿಯಲ್ಲಿಯೇ ಆರ್ಥಿಕ ಸಬಲತೆಯನ್ನು ಹೊಂದಿ ಲಾಭದಲ್ಲಿ ಮುನ್ನಡೆಯುತ್ತಲಿದೆ.

ಮೃತ್ಯುಂಜಯ ನಗರದ ವಿಸ್ತೀರ್ಣ ಶಾಖೆಯು ಪ್ರಾರಂಭದ ದಿನದಂದೇ ೨ ಕೋಟಿ ರೂಪಾಯಿ ಠೇವು ಸಂಗ್ರಹಿಸಿ ಆರ್.ಬಿ.ಐ.ದಲ್ಲಿ ದಾಖಲೆಯನ್ನು ಸ್ಥಾಪಿಸಿದೆ. ಗೃಹ ನಿರ್ಮಾಣಕ್ಕಾಗಿ ಸಾಲ, ವಾಹನಗಳಿಗೆ ಸಾಲ, ನೌಕರರಿಗೆ ಸಾಲವನ್ನು ಒದಗಿಸುವುದರೊಂದಿಗೆ ಉತ್ತಮ ಸೇವೆಯನ್ನು ನೀಡುತ್ತ ವಿಶ್ವಾಸ ಪಾತ್ರವಾಗಿ ಸೇವಾ ಮನೋಭಾವನೆಯಿಂದ ಕಾರ್ಯ ಮಾಡುತ್ತಲಿದೆ. ಹುಬ್ಬಳ್ಳಿ ಮತ್ತು ಸವದತ್ತಿ ಒಳಗೊಂಡಂತೆ ಹತ್ತು ವಿಸ್ತೀರ್ಣ ಶಾಖೆಗಳನ್ನು ಪ್ರಾರಂಭಿಸುವ ಉದ್ದೇಶವನ್ನು ಹೊಂದಿದೆ. ಅಲ್ಲದೆ ಕಂಪ್ಯೂಟರೀಕರಣವನ್ನು ಅಳವಡಿಸುವ ಯೋಜನೆಯನ್ನು ಹಾಕಿಕೊಂಡಿದೆ.

ಈ ಬ್ಯಾಂಕು ಆರ್.ಬಿ.ಐ. ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಿ ಅಭಿನಂದನಾರ್ಹವಾಗಿದೆ.ಈಗ ಒಟ್ಟು ೫೦ಕ್ಕಿಂತ ಹೆಚ್ಚು ಜನ ಬ್ಯಾಂಕಿನ ಸಿಬ್ಬಂದಿ ದಕ್ಷ ಸೇವೆಯನ್ನು ನೀಡುತ್ತಿದೆ. ಜನರಲ್ ಮ್ಯಾನೇಜರ್ ಜಿ.ಎಂ. ಕುಡಸೋಮಣ್ಣವರ, ಮೃತ್ಯುಂಜಯ ಶಾಖೆಯ ಮ್ಯಾನೇಜರ್ ಆರ್.ಎಸ್.ಚಿನಿವಾಲರ ಹಾಗೂ ಬೆಳಗಾವಿ ಶಾಖೆಯ ಮ್ಯಾನೇಜರ್ ಎಸ್.ಕೆ. ಮೂರಶಿಳ್ಳಿನರವರು ತಮ್ಮ ಸಿಬ್ಬಂದಿಯ ಸಹಯೋಗದೊಂದಿಗೆ ಬ್ಯಾಂಕಿನ ಉನ್ನತಿಗಾಗಿ ನಿಷ್ಠೆಯಿಂದ ದುಡಿಯುತ್ತಿದ್ದಾರೆ.


○ ಸಿದ್ಧರಾಜ್ ಎಂ. ಕೆಂಧೂಳಿ



ಕಾತರ

ಕನಸುಗಳಂತೆ
ಕತ್ತಲೆಯ ಮಬ್ಬಿನಲ್ಲಿಯೇ
ಜನ್ಮ ತಾಳುವ
ಕಾತರ
ನನ್ನ ಕವನಗಳಿಗೆ

– ರಾಜಶ್ರೀ, ರಾಯಚೂರು



ತಡೆಯಬಾರದ ಹದಿಮೂರು ವೇಗಗಳು!

○ ಪ್ರೊ. ಚಂದ್ರಕಾಂತ ಎಸ್. ಭಟ್
'ಭಾಗ್ಯಶ್ರೀ'
ಶಿವಾನಂದ ನಗರ, ಗದಗ - ೫೮೨ ೧೦೨

ಹಿತಕರ ಆಹಾರಗಳನ್ನು ಮಿತವಾಗಿ ಸೇವಿಸಿದ ನಂತರ, ಸರಿಯಾಗಿ ಜೀರ್ಣವಾದಾಗ ಮೂರು ವಿಧವಾಗಿ ವಿಭಾಗಗೊಳ್ಳುತ್ತದೆ. ಅದರಲ್ಲಿ ಸ್ಥೂಲವಾದ ಭಾಗವು ಪುರೀಷವಾಗುತ್ತದೆ. ಮಧ್ಯಮ (ರಸ) ಭಾಗವು ಮಾಂಸವಾಗುತ್ತದೆ. ಮತ್ತು ಸೂಕ್ಷ್ಮ ಭಾಗವು ಮನಸ್ಸಾಗುತ್ತದೆ. ತನ್ನ ಸಾರ ಅಂಶದಿಂದ ರಸ-ರಕ್ತಾದಿಗಳ ನಿರ್ಮಾಣ ಮಾಡಿ ಮಲ-ಮೂತ್ರ ದ್ವಾರ ಕಿಟ್ಟ ರೂಪದಲ್ಲಿ ಬೇಡಾದವುಗಳು, ಯಾವಾಗ ಶರೀರದಿಂದ ಹೊರಗೆ ಬರುತ್ತದೆಯೋ, ಆಗ ಸ್ವಾಸ್ಥ್ಯ ಸರಿಯಾಗಿರುತ್ತದೆ. ಒಂದು ವೇಳೆ ಮಲಮೂತ್ರಾದಿಗಳ ವೇಗಗಳನ್ನು ತಡೆಗಟ್ಟಿದರೆ, ಹಿತಕರ ಆಹಾರ -ವಿಹಾರ ಸೇವನೆ ಮಾಡಿದರೂ ಕೂಡ ಸ್ವಾಸ್ಥ್ಯ (ಆರೋಗ್ಯ) ಉತ್ತಮವಾಗಿರುವುದಿಲ್ಲ. ವಾತಾದಿ "ವೇಗ"ಗಳ ಪ್ರವರ್ತನೆಯಾದಾಗ, ಅವುಗಳನ್ನು ತಡೆದುಕೊಂಡು ಬೇರೆ ಕೆಲಸಗಳನ್ನು ಮಾಡಬಾರದು. ಸುಖ ಸಾಧ್ಯ ವ್ಯಾಧಿಗಳಿರುವಾಗ, ಅದನ್ನು ನಿವಾರಣೆ ಮಾಡದೆ, ಬೇರೆ ಕಾರ್ಯಗಳಿಗೆ ಪ್ರವರ್ತಿಸಬಾರದು. ಏಕೆಂದರೆ ಅವು ಕಷ್ಟಸಾಧ್ಯಗಳಾಗಿಯೋ, ಅಸಾಧ್ಯಗಳಾಗಿಯೋ ಪರಿಣಮಿಸುವ ಸಾಧ್ಯತೆಗಳಿವೆ. ವೇಗದ ತಡೆಗಟ್ಟುವಿಕೆಯಿಂದ ಹಾನಿಗಳನ್ನೂ, ಅದರ ಬಗ್ಗೆ ಚಿಕಿತ್ಸೆಯ ಮಾಹಿತಿಗಳನ್ನೂ ಚರಕ ಸಂಹಿತೆ ಹಾಗೂ ಅಷ್ಟಾಂಗ ಹೃದಯವೆಂಬ ಆಯುರ್ವೇದಿಯ ಗ್ರಂಥಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. "ಜನಸಾಮಾನ್ಯರಿಗೂ ಸ್ವಲ್ಪ ತಿಳಿಯಲಿ ಎಂಬುದು ಬರಹದ ಉದ್ದೇಶ".

೧೩ ಆಧಾರಣೀಯ ವೇಗಗಳು

ನ ವೇಗಾನ್ ಧಾರಯೇದ್ವಾತವಿಣ್ಮೂತ್ರಕ್ಷವತೃಟ್‌ಕ್ಷುಧಾಮ್ !
ನಿದ್ರಾಕಾಸ ಶ್ರಮಶ್ವಾಸಜೃಮ್ಭಾಶ್ರುಚ್ಛರ್ದಿ ರೇತಸಾಮ್ ॥

ಅರ್ಥ : ಅಧೋವಾತ, ಮಲ, ಮೂತ್ರ, ಶೀನು, ಬಾಯಾರಿಕೆ, ಹಸಿವು, ನಿದ್ರೆ, ಕೆಮ್ಮು, ಶ್ರಮಜನಿತಶ್ವಾಸ (ಏದುಬ್ಬಸ), ಆಕಳಿಕೆ, ಕಣ್ಣೀರು, ವಮನ, ಶುಕ್ರವೇಗ ಇವುಗಳುಂಟಾದಾಗ ಅವುಗಳನ್ನು ತಡೆಯಬಾರದು (ವೇಗಾನ್ ನ ಧಾರಯೇತ್)

ವಿವರಗಳು :

೧. ಅಪಾನವಾಯುವಿನ (ಹುರಕೆ, ಹೂಸು- ಗುದದ್ವಾರದಿಂದ ಹೊರಡುವ ವಾಯು) ವೇಗವನ್ನು ತಡೆದರೆ, ಗುಲ್ಮ, ಉದಾವರ್ತ, ಹೊಟ್ಟೆನೋವು, ಇಂದ್ರಿಯಾಯಾಸಗಳು, ವಾತ, ಮೂತ್ರ, ಮಲಗಳು ತಡೆದುಬಿಡುವುದೂ, ಹೃದ್ರೋಗ, ಅಗ್ನಿನಾಶ, ದೃಷ್ಟಿದೋಷ, ಇವುಗಳುಂಟಾಗುತ್ತವೆ. ಅವುಗಳ ನಿವಾರಣೆಗಾಗಿ ಸ್ನೇಹ ವಿಧಾನ - ಸ್ವೇದ ವಿಧಾನಗಳನ್ನೂ, ವಾತವನ್ನು ಸ್ವಮಾರ್ಗದಲ್ಲಿ ಸಂಚರಿಸುವಂತೆ ಮಾಡಲು ಗುದವರ್ತಿಗಳನ್ನೂ, ಆಹಾರಪಾನಗಳನ್ನೂ, ನಿರೂಹವಸ್ತಿ-ಸ್ನೇಹವಸ್ತಿ ಪ್ರಯೋಗಗಳನ್ನು ಮಾಡಿದರೆ ಹಿತವಾಗುತ್ತದೆ.

೨. ಮಲದ ವೇಗವನ್ನು ತಡೆದರೆ ಮೊಣಕಾಲಿನ ಹಿಂದಿರುವ ಮಾಂಸ ಪಿಂಡಗಳು ಬಿಗಿದು ನೋಯುತ್ತವೆ. ಮೈಕತ್ತರಿಸುವಂತೆ ನೋವು, ಎದೆ ತಡೆದಂತೆ ನೋವು, ತೇಗು, ನೆಗಡಿ ತಲೆನೋವು, ಉಂಟಾಗುತ್ತದೆ. ಮೇಲಿಂದ ಮೇಲೆ ಮಲದ ವೇಗವನ್ನು ತಡೆಯುತ್ತಿದ್ದರೆ ಬಾಯಿಂದಲೇ ಮಲವು ಹೊರಟು ಬರುವ ಸಾಧ್ಯತೆಗಳೂ ಇವೆಯಂತೆ. ಅಪಾನ ರೋಧದಿಂದುಂಟಾಗುವ ಗುಲ್ಮೋದಾವರ್ತಾದಿ ರೋಗಗಳೂ ಉಂಟಾಗುತ್ತವೆ. ಅವಗಾಹ ಸ್ನಾನ, ಸ್ವೇದ ಕರ್ಮ, ಬಸ್ತಿ ಪ್ರಯೋಗ ಫಲವರ್ತಿಗಳನ್ನಿಡುವುದು, ವಿಶಿಷ್ಟವಾದ ಅನ್ನಪಾನಗಳನ್ನು ಹೇಳಲಾಗಿದೆ.

೩. ಮೂತ್ರ ಬಂದಾಗ ವಿಸರ್ಜಿಸದೇ ತಡೆಗಟ್ಟಿದರೆ, ಮೈ ಕತ್ತರಿಸುವಂತೆ ನೋವು, ಅಶ್ಮರೀರೋಗ (ಮೂತ್ರ ದ್ವಾರದಲ್ಲಿ ಕಲ್ಲಿನಷ್ಟು ಗಟ್ಟಿಯಾದ ಪದಾರ್ಥಗಳುಂಟಾಗಿ ದ್ವಾರವನ್ನು ಮುಚ್ಚಿ ಮೂತ್ರದ ತಡೆಯುಂಟಾಗುತ್ತದೆ.) ಬಸ್ತಿ, ಶಿಶ್ನ, ತೊಡೆಯ ಸಂದು ಇವುಗಳಲ್ಲಿ ನೋವು ಉಂಟಾಗುತ್ತದೆ. ಅಪಾನವಾತದ ಮತ್ತು ಮಲದ ನಿರೋಧದಿಂದುಂಟಾಗುವ ರೋಗಗಳೂ ಸಂಭವಿಸುತ್ತವೆ. ಮೂತ್ರವನ್ನು ತಡೆಯುವುದರಿಂದುಂಟಾಗುವ ಅಜ್ಜ ಭಜ್ಞಾಶ್ಮರ್ಯಾದಿ ರೋಗಗಳಲ್ಲಿ ಪಾಗ್ಭಕ್ತ, ಜೀರ್ಣಾನ್ತಿಗಳೆಂಬ ಎರಡು ವಿಧ ಘೃತಪಾನಗಳೂ ಹಿತಕರಗಳು. ಜೀರ್ಣಾಂತಿಕದಲ್ಲಿ ಘೃತವು ಉತ್ತಮ ಪ್ರಮಾಣದಿಂದಿರಬೇಕು.

೪. ಶೀನನ್ನು ತಡೆದರೆ, ತಲೆನೋವು, ದೃಷ್ಟಿ ಮಾಂದ್ಯ-ಶಬ್ದಮಾಂದ್ಯಗಳುಂಟಾಗುತ್ತವೆ. ಕುತ್ತಿಗೆ ಹಿಡಿದುಕೊಂಡು, ಕಂಠವನ್ನು ಮೇಲಕ್ಕೂ ಕೆಳಕ್ಕೂ ಎಡಬಲಗಳಿಗೂ ತಿರುಗಿಸುವುದಕ್ಕೆ ಆಗುವುದಿಲ್ಲ. ಈ ಮನ್ಯಾಸ್ತಮ್ಭದಿಂದ ಅರ್ದಿತ ರೋಗ (ಮುಖ ಸೊಟ್ಟಗಾಗುವುದು) ಉಂಟಾಗುತ್ತದೆ. ತೀಕ್ಷ್ಣ ದ್ರವ್ಯಗಳಿಂದ ತಯಾರಿಸಿದ ಧೂಮಪಾನ, ಅಂಜನ, ಆಘ್ರಾಣ, ನಸ್ಯಕರ್ಮಗಳಿಂದಲೂ ಸೂರ್ಯಕಿರಣ ಹೊಳ್ಳೆಗಳಲ್ಲಿ ಸೇರಿಸಿರುವುದರಿಂದಲೂ ತಡೆಯಲ್ಪಟ್ಟಿರುವ 'ಸೀನು' ಹೊರಕ್ಕೆ ತರಿಸುವ ಪ್ರತ್ಯುಪಾಯಗಳನ್ನು ಆಯುರ್ವೇದೀಯ ವೈದ್ಯರಿಗೆ ತಿಳಿಸಲಾಗಿದೆ.

೫. ಬಾಯಾರಿಕೆ (ತೃಷ್ಣಾ, ನೀರಡಿಕೆ)ಯನ್ನು ತಡೆದರೆ ದೇಹಕಾರ್ಶ್ಯ, ಶಿರೋಭ್ರಮಣೆ, ಕಿವುಡುತನ, ಹೃದಯದ ಶೂಲೆ, ಕ್ಷಯರೋಗ ಇವುಗಳುಂಟಾಗುವ ಸಾಧ್ಯತೆಗಳಿವೆ. ಇವುಗಳಿಗೆ ಶೀತಲವಾದ ಪ್ರತೀಕಾರವನ್ನು ಮಾಡಿದರೆ ಹಿತಕಾರಿ. ಬಾಯಾರಿಕೆಯಾದಾಗ ಹೆಚ್ಚು ತಡಮಾಡದೆ ನೀರನ್ನು (ದ್ರವ ಪದಾರ್ಥಗಳನ್ನು ಕುಡಿಯಬೇಕು. ತಡೆಗಟ್ಟಬಾರದು.



ನಿನ್ನೆ ನೀನು ಬರೆದುಕೊಟ್ಟ ಭಾಷಣದ ಪ್ರಭಾವ ಕಣಯ್ಯಾ, ಮಹಿಳೆಯರನ್ನು ಸತ್ಕರಿಸಿ ಉದ್ಧರಿಸಿದ್ದೇನೆ ಎಂದು ಹೇಳುವ ಬದಲು ಬಲಾತ್ಕರಿಸಿ ಉದ್ಧರಿಸಿದ್ದೇನೆ ಎಂದುದೇ ಇಷ್ಟಕ್ಕೆಲ್ಲ ಕಾರಣ...

೬. ಹಸಿವೆಯನ್ನು ತಡೆದರೆ, ಹೊಟ್ಟೆನೋವು, ತಲೆತಿರುಗು, ಕೃಶತ್ವ, ಗ್ಲಾನಿ, ಅರುಚಿ, ಮೈ ತತ್ತರಿಸುವುದು ಇವುಗಳುಂಟಾಗುತ್ತವೆ. ಅಲ್ಪ ಪ್ರಮಾಣದ ಲಘು ಸ್ನಿಗ್ಧ ಉಷ್ಣ (ಸ್ವಲ್ಪ ಬಿಸಿಯಾದ) ಭೋಜನವನ್ನು ಮಾಡಿದರೆ ಶಮನವಾಗುತ್ತದೆ.

೭. ನಿದ್ರೆಯ ವೇಗವನ್ನು ತಡೆದರೆ, ಮತ್ತತೆಯುಂಟಾಗಿ, ತಲೆ-ಕಣ್ಣುಗಳು ಭಾರವೆನಿಸುತ್ತವೆ. ಆಕಳಿಕೆ, ಆಲಸ್ಯ, ಮೈನೋವುಂಟಾಗುತ್ತವೆ. ನಿದ್ರಿಸುವುದರಿಂದ ಇವುಗಳ ಪರಿಹಾರವಾಗುತ್ತದೆ.

೮. ಕೆಮ್ಮು ಬಂದಾಗ ತಡೆದರೆ, ಕೆಮ್ಮು ಹೆಚ್ಚುತ್ತದೆ. ಉಬ್ಬಸ (ದಮ್ಮು) ಹೃದ್ರೋಗ, ಅರುಚಿ, ಬಿಕ್ಕಳಿಕೆ, ಕ್ಷಯಗಳುಂಟಾಗುತ್ತವೆ. ಕೆಮ್ಮು ನಿಲ್ಲುವಂತೆ ಅತಿಶಯವಾಗಿ ಕಾಸಹರ ಚಿಕಿತ್ಸಾ ವಿಧಾನಗಳನ್ನೂ ಶಮನಕ್ಕಾಗಿ ಬಳಸಬೇಕಾಗಬಹುದು.

೯. ದೂರ ನಡೆಯುವಿಕೆ, ವ್ಯಾಯಾಮ ಮಾಡುವಿಕೆ, ಓಡುವಿಕೆ ಇತ್ಯಾದಿಗಳಿಂದ 'ಶ್ರಮಜನಿತಶ್ವಾಸ (ಏದುಬ್ಬಸ) ಬರುತ್ತಿರುವಾಗ ತಡೆದರೆ, ಗುಲ್ಮ, ಹೃದ್ರೋಗ ಅಜ್ಞಾನಗಳುಂಟಾಗುತ್ತವೆ. ಇವುಗಳಿಗೆ ವಿಶ್ರಾಂತಿ ಹೊಂದಿ ವಾತಾಹರಗಳಾದ ಕ್ರಿಯೆಗಳನ್ನು ಆಚರಿಸಲು ಹೇಳಲಾಗಿದೆ. ''ತೇಗು (ಉದ್ಗಾರ) ಬರುವುದನ್ನು ತಡೆದರೆ, ಅರುಚಿ, ಮೈನಡುಕ, ಹೊಟ್ಟೆಯುಬ್ಬರ, ಕೆಮ್ಮು, ಬಿಕ್ಕಳಿಕೆ, ಹೃದಯ ಎದೆಗಳು ಹಿಡಿದುಕೊಂಡಂತೆ ನೋವು ಉಂಟಾಗುತ್ತಿದ್ದು, ಬಿಕ್ಕಳಿಕೆಗೆ ಮಾಡುವ ಚಿಕಿತ್ಸೆಯೇ ಇದಕ್ಕೂ ಪ್ರತೀಕಾರವು.


೧೦. ಆಕಳಿಕೆ (ಜೃಮ್ಭಾ)ಯನ್ನು ತಡೆದರೆ, ಅಜ್ಗ ಭಜ್ಗಾಶ್ಮರೀ ಇತ್ಯಾದಿ ರೋಗಗಳುಂಟಾಗುತ್ತವೆ. ತಡೆಯದಿದ್ದರೆ ತಾನಾಗೆ ಶಮನಗೊಳ್ಳುತ್ತದೆ. ತಡೆಯುತ್ತಿದ್ದರೆ ವಾತಹರ ಚಿಕಿತ್ಸೆ ಮಾಡಬೇಕಾಗುತ್ತದೆ.

೧೧. ಕಣ್ಣೀರು ಬರುವುದನ್ನು ತಡೆದರೆ, ನೆಗಡಿ (ಮೂಗಿನಿಂದ ಕಫಸ್ರಾವ), ಕಣ್ಣುನೋವು, ತಲೆನೋವು, ಹೃದ್ರೋಗ, ಹೆಕ್ಕತ್ತು ಹಿಡಿದುಕೊಂಡು ತಿರುಗಿಸುವುದಕ್ಕಾಗದಿರುವುದು, ಅರುಚಿ, ಶಿರೋಭ್ರಮಣ, ಗುಲ್ಮರೋಗ, ಇವುಗಳುಂಟಾಗುತ್ತವೆ. ಇವುಗಳಿಗೆ ತಡೆಯದಿರುವಿಕೆಯಲ್ಲದೇ, ಸುಖವಾಗಿ ನಿದ್ರೆ ಮಾಡುವುದು, ಪ್ರಿಯಕಥೆ ಕೇಳುವುದು ಚಿಕಿತ್ಸೆಯಾಗಬಹುದಾಗಿದೆ.

೧೨. ವಮನ (ವಾಂತಿ) ಬಂದಾಗ ತಡೆದರೆ, ವಿಸರ್ಪ, ಪಿತ್ತದ ಗಂಧೆ, ಕಣ್ಣಿನಲ್ಲಿ ತುರಿಕೆ, ಪಾಂಡುರೋಗ, ಜ್ವರ, ಕಾಸ, ಶ್ವಾಸ, ಕುಷ್ಠ, ಬಾಯಲ್ಲಿ ನೀರೂರಿ ವಾಂತಿಯಾಗುವಂತೆ ಚಿಹ್ನೆಗಳು ತೋರುವುದು. ಬಂಗು, ಶ್ವಯಥು ಇವುಗಳುಂಟಾಗುತ್ತವೆ. ಉಪವಾಸ-ರೂಕ್ಷೌಷಧಗಳೊಂದಿಗೆ ಆಹಾರ ಸೇವಿಸಿ, ವಾಂತಿ ಮಾಡಿಸುವುದು. ವಿರೇಚನೌಷಧ ಪ್ರಯೋಗಗಳು ಹಿತಕಾರಿಗಳು.

೧೩. ಶುಕ್ರವೇಗವನ್ನು ತಡೆದರೆ, ಅಧಿಕ ಪ್ರಮಾಣದ ಶುಕ್ರಸ್ರಾವವುಂಟಾಗುತ್ತದೆ. ವೃಷಣ ಪಾಯುಗಳಲ್ಲಿ ನೋವೂ ಮತ್ತು ಶೋಥವೂ, ಜ್ವರ, ಮೂತ್ರದ ತಡೆ, ಎದೆನೋವು, ಮೈಕತ್ತರಿಸುವಂತಾಗುವುದು. ಅಣ್ಡವೃದ್ಧಿ, ಅಶ್ಮರಿರೋಗ, ಷಣ್ಡತ್ವ ಇತ್ಯಾದಿ ರೋಗಗಳುಂಟಾಗುತ್ತವೆ. ಇವುಗಳಿಗೆ ಬಸ್ತಿಕರ್ಮ, ಬೂದು ಗುಂಬಳದಿಂದ ತಯಾರಿಸಿದ ಹಾಲು, ಪ್ರಿಯಸ್ತ್ರೀ ಸೇವನೆಗಳಿಂದ ಅಡೆತಡೆಗಳ ನಿವಾರಣೆ.

ನೀರಡಿಕೆ, ಹೊಟ್ಟೆಶೂಲೆ, ದೇಹ ಕ್ಷೀಣತೆಗಳಿಂದ ಮಲವನ್ನು ವಾಂತಿ ಮಾಡುವ ವೇಗರೋದ ಮಾಡಿದ ರೋಗಿಗೆ ಚಿಕಿತ್ಸೆಯಿಲ್ಲ. ವಾತ, ಪುರೀಷ, ಮೂತ್ರ ಬರದಿದ್ದಾಗ, ಬಲವಂತದಿಂದ ಹೊರಹಾಕುವ ಪ್ರಯತ್ನವೂ ರೋಗಕಾರಿಯಾಗಿದೆ. ಮೇಲ್ಕಂಡಂತೆ, ಹಲವು ಶ್ಲೋಕಗಳಿಂದ ವಿಷಯವನ್ನು ವಿವರಿಸಿದ್ದು ಸಾಂದರ್ಭಿಕವಾಗಿ ಸಂಕ್ಷಿಪ್ತ ವಿವರಣೆಯನ್ನು 'ಸಾಧಾರ'ವಾಗಿ ನೀಡಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿಯನ್ನು ವೈದ್ಯರು ಮಾಡಿಕೊಳ್ಳುತ್ತಾರೆ. ●



ಒಬ್ಬ ಮೇಷ್ಟ್ರು ಕಟ್ಟಿ ಬೆಳೆಸಿದ

ಪಿ.ಇ.ಎಸ್. ಕಾಲೇಜಿನ ಕಥೆ

ಸುಮಾರು ೨೫ ವರ್ಷದ ಹಿಂದಿನ ಮಾತು, ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದ, ಮೇಷ್ಟರೊಬ್ಬರು ಬಾಡಿಗೆ ಮನೆಯೊಂದರಲ್ಲಿ ಕಾಲೇಜೊಂದನ್ನು ತೆರೆದಿದ್ದರು. ಆಗ ಈಗಿನಂತೆ ವಿದ್ಯಾರ್ಥಿಗೆ ಯೋಗ್ಯ ಶುಲ್ಕ ವಿಧಿಸುವಂತಿರಲಿಲ್ಲ. ಸರ್ಕಾರದ ನೆರವು ಬಯಸಿದರೂ ಸಿಕ್ಕುತ್ತಿರಲಿಲ್ಲ. ಎಲ್ಲಾ ಕೆಲಸಗಳಿಗೂ ಸಂಕಲ್ಪ ಶಕ್ತಿಯೇ ಬಂಡವಾಳವಾಗಿತ್ತು. ಬೆಟ್ಟದಂತಹ ಅಡೆತಡೆಗಳನ್ನು ಸರಿಸಿ ಶಿಕ್ಷಣ ಕ್ಷೇತ್ರದಲ್ಲಿ ಬೆಳೆದು ನಿಲ್ಲಬೇಕೆಂಬ ಸವಾಲು ಈ ಮೇಷ್ಟರನ್ನು ಗಟ್ಟಿಗೊಳಿಸಿತ್ತು.

ಅರ್ಥಶಾಸ್ತ್ರವನ್ನು ಅರ್ಥವತ್ತಾಗಿ ಹೇಳಿಕೊಡುತ್ತಿದ್ದ, ಎಂ.ಆರ್. ದೊರೆಸ್ವಾಮಿಯವರೇ ಈ ಗಟ್ಟಿಗ ವ್ಯಕ್ತಿ. ೧೯೭೨ರಲ್ಲಿ ಬಾಡಿಗೆ ಮನೆಯೊಂದರಲ್ಲಿ ಇವರು ಸ್ಥಾಪಿಸಿದ ಪಿ.ಇ.ಎಸ್. ಕಾಲೇಜು ಇಂದು ಬೆಂಗಳೂರಿನ ಮಹಾನಗರದಲ್ಲಿ ಬೃಹತ್ ವಿದ್ಯಾಸಂಸ್ಥೆಯಾಗಿ ಬೆಳೆದು ನಿಂತಿದೆ.

ದೊರೆಸ್ವಾಮಿಯವರು ೧೯೬೪ರಲ್ಲಿ ಎಸ್.ಎಸ್.ಒ.. ಶಾಲೆಯನ್ನು ಸ್ಥಾಪಿಸಿದರು, ಎಂಟು ವರ್ಷಗಳ ತರುವಾಯ ಅಂದರೆ ೧೯೭೨ರಲ್ಲಿ ಪಿ.ಇ.ಎಸ್. ಜೂನಿಯರ್ ಕಾಲೇಜ್ ಸ್ಥಾಪಿಸಿದರು. ಅಂದಿನಿಂದ ಈವರೆಗೂ ಇವರು ಹತ್ತು ವಿವಿಧ ಪಠ್ಯ ಕ್ರಮಗಳನ್ನೊಳಕೊಂಡ ಕಾಲೇಜುಗಳನ್ನು ತೆರೆಯುತ್ತಲೇ ಬಂದಿದ್ದಾರೆ.

ಶಿಕ್ಷಣ ನಿಂತ ನೀರಾಗಬಾರದು ಒಮ್ಮೆ ಹೀಗಾದಲ್ಲಿ ಇದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಎಂಬುದನ್ನು ಅರಿತ ದೊರೆಸ್ವಾಮಿಯವರು ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂಥ ಹೊಸ ಹೊಸ ವಿಷಯಗಳನ್ನು ಆರಂಭಿಸುತ್ತಿದ್ದಾರೆ. ಪಿ.ಇ.ಎಸ್. ಕಾಲೇಜಿನಲ್ಲಿರುವ ಹಲವಾರು ತಾಂತ್ರಿಕ ಹಾಗೂ ವಾಣಿಜ್ಯ ಕೋರ್ಸ್‌ಗಳೇ ಇದಕ್ಕೆ ಸಾಕ್ಷಿ.

ಶಿಕ್ಷಣ ಕ್ಷೇತ್ರದ ಸಮಗ್ರತೆಯ ಸಹಕಾರ ಮೂರ್ತಿಯಂತಿರುವ ದೊರೆಸ್ವಾಮಿಯವರಿಗೆ ರಾಜ್ಯ ಸರ್ಕಾರವು ಈ ವರ್ಷ ಗೌರವಿತ ರಾಜ್ಯ ಪ್ರಶಸ್ತಿಯನ್ನು ನೀಡಿ ಸತ್ಕರಿಸಿದೆ.

ಓದಿನಲ್ಲಿ ಹಿಂದೆ ಉಳಿದ ವಿದ್ಯಾರ್ಥಿಗಳಿಗೆ ನೆರವಾಗುವ ಸಲುವಾಗಿ ವಿಶೇಷ ಕಾರ್ಯಕ್ರಮವನ್ನು ಸಹ ಇಲ್ಲಿ ನಡೆಸಲಾಗುತ್ತದೆ. ತರಗತಿ ಹಾಜರಿ ಇಲ್ಲಿ ಕಡ್ಡಾಯ. ವಿದ್ಯಾರ್ಥಿಗಳ ಕಠಿಣ ಶ್ರಮಕ್ಕೆ ಅಧ್ಯಾಪಕರು ಸದಾ ಪೂರಕವಾಗಿ ನಿಲ್ಲುತ್ತಾರೆ. ಹೆಚ್ಚು ಅಂಕ ಗಳಿಸಿದ ಮತ್ತು ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವ ಮೂಲಕ ಎಲ್ಲಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಪಿ.ಇ.ಎಸ್. ಕಾಲೇಜಿನಲ್ಲಿ ಸಾಂಸ್ಕೃತಿಕ ಸಾಹಿತ್ಯಕ ಹಾಗೂ ವೈಚಾರಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಪ್ರಸಕ್ತ ದಿನದಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಿರುವ ಇಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳ ವಿದ್ಯಾರ್ಥಿಗಳ ಮೇಲೆ ಇಲ್ಲಿ ವಿಶೇಷ ಗಮನ ನೀಡಲಾಗುತ್ತಿದೆ. ಅವರಿಗಾಗಿ ಬ್ರಿಡ್ಜ್ ಕೋರ್ಸ್‌ಗಳು, ತಾಂತ್ರಿಕ ಕಾರ್ಯಕ್ರಮಗಳು, ವ್ಯಕ್ತಿತ್ವ ಬೆಳವಣಿಗೆ ಕಾರ್ಯಕ್ರಮಗಳು, ಕೈಗಾರಿಕಾ ಸಂಸ್ಥೆಗಳೊಡನೆ ಒಡನಾಟ ಮೂಡಿಸುವ ಕೆಲಸವನ್ನು ಇಲ್ಲಿ ಸಮರ್ಪಕವಾಗಿ ಮಾಡಲಾಗುತ್ತದೆ. ಸ್ಪರ್ಧಾತ್ಮಕವಾಗಿ ಬೆಳೆದು ಬಂದ ಎಲ್ಲಾ ವಿದ್ಯಾರ್ಥಿಗಳಿಗೂ ಅರ್ಹ ಉದ್ಯೋಗ ಕೊಡಿಸಲು ಸಹ ಈ ಕಾಲೇಜು ವಿಶೇಷ ಕಾರ್ಯಕ್ರಮ ನಡೆಸುತ್ತದೆ.

ಪಿ.ಇ.ಎಸ್. ಕಾಲೇಜು ಬೆಂಗಳೂರು ನಗರದ ಎರಡು ಕಡೆ ತನ್ನ ಕಟ್ಟಡವನ್ನು ಹೊಂದಿದೆ. ಬನಶಂಕರಿ ಮೂರನೇ ಹಂತದಲ್ಲಿ ೨೫ ಎಕರೆ ಭೂಮಿಯಲ್ಲಿರುವ ಸುಂದರ ಭವ್ಯ ಕಟ್ಟಡದಲ್ಲಿ ಸುಸಜ್ಜಿತ ಪ್ರಯೋಗಾಲಯಗಳು, ಅತ್ಯುನ್ನತ ಮಟ್ಟದ ಗ್ರಂಥಾಲಯ, ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗಿದೆ.

ಮೆಕ್ಯಾನಿಕಲ್, ಎಲೆಕ್ಟ್ರಾನಿಕ್, ಕಂಪ್ಯೂಟರ್ ವಿಜ್ಞಾನದ ಇಂಜಿನಿಯರಿಂಗ್ ಕೋರ್ಸ್‌ಗಳು, ಹೋಟೆಲ್ ಮ್ಯಾನೇಜ್‌ಮೆಂಟ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಪದವಿಗಳು, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್, ಮೈಕ್ರೊ, ಬಯಾಲಜಿ ಮತ್ತು ರೇಷ್ಮೆ ಕೃಷಿ ವಿಷಯಗಳನ್ನೊಳಗೊಂಡ ವಿಜ್ಞಾನ ಪದವಿ ಹಾಗೂ ವಾಣಿಜ್ಯ ಪದವಿ, ಫಾರ್ಮಸಿ, ಮೆಕಾನಿಕಲ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್‌ನ ಡಿಪ್ಲೊಮಾ ಕೋರ್ಸ್ ಮತ್ತು ಪಿ.ಯು.ಸಿ. ವಿಜ್ಞಾನ ತರಗತಿಗಳು ಇಲ್ಲಿ ನಡೆಯುತ್ತವೆ.

ಶಿಕ್ಷಣ ಎಂಬುದು ಎಲ್ಲರಿಗೂ ದೊರೆಯುವ ಆಸ್ತಿಯಾಗಿದೆ. ಕೆಲವು ಬಡ ಹುಡುಗರು ೮ ಅಥವಾ ೯ನೇ ತರಗತಿಯವರೆಗೆ ಮಾತ್ರ ಓದಿ ಕಾರಣಾಂತರದಿಂದ ಶಾಲೆಯನ್ನು ಬಿಟ್ಟು ದಾರಿ ಕಾಣದಾಗಿದ್ದಾರೆ. ಇಂಥ ಹುಡುಗರಿಗೆ ದಾರಿದೀಪವಾಗುವ ಕಾರ್ಯಕ್ರಮವೊಂದನ್ನು ಪಿ.ಇ.ಎಸ್. ಕಾಲೇಜ್ ಹೋದ ವರ್ಷ ಪ್ರಾರಂಭ ಮಾಡಿದೆ.

೮ ಅಥವಾ ೯ನೇ ಕ್ಲಾಸ್ ಓದಿ, ಶಾಲೆ ಬಿಟ್ಟ ಮಕ್ಕಳಿಗಾಗಿ ಈಗ ಪಿ.ಇ.ಎಸ್. ಕಾಲೇಜ್ ಆರು ತಿಂಗಳ ಕೋರ್ಸ್‌ಗಳನ್ನು ಪ್ರಾರಂಭ ಮಾಡಿತು. ಈ ಕೋರ್ಸ್‌ನಲ್ಲಿ ಫಿಟ್ಟರ್, ಟರ್ನರ್, ಮಿಲ್ಲರ್‌ನಂಥ ಉದ್ಯೋಗ ಒದಗಿಸುವಂಥ ಕೆಲಸಗಳನ್ನು ಕಲ್ಪಿಸಿಕೊಡಲಾಗುವುದು.

ಈ ಕೋರ್ಸ್‌ಗಳನ್ನು ಪ್ರಾರಂಭ ಮಾಡಲು ದೊರೆಸ್ವಾಮಿ ನಿಶ್ಚಯಿಸಿ, ಈ ಜವಾಬ್ದಾರಿಯನ್ನು ಅದೇ ಕಾಲೇಜಿನ ಇನ್ನೊಬ್ಬ ಅಧ್ಯಾಪಕರಾದ ಮಹೇಶ್ವರಪ್ಪನವರಿಗೆ ವಹಿಸಿದರು. ತಕ್ಷಣ ಮಹೇಶ್ವರಪ್ಪನವರು ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾದ ಮೈಕೋ, ಎನ್‌ಟಿಟಿಎಫ್, ಜಿಟಿಟಿಸಿ ಮುಂತಾದ ಸಂಸ್ಥೆಗಳಿಗೆ ಭೇಟಿ ನೀಡಿ ಅಲ್ಲಿಯ ಪಠ್ಯಕ್ರಮವನ್ನು ಕೂಲಂಕಷವಾಗಿ ಪರಿಶೀಲಿಸಿ, ನಂತರ ತಮ್ಮ ಕಾಲೇಜಿನ ಪಠ್ಯಕ್ರಮವನ್ನು ರೂಪಿಸಿದರು.

ಮೊದಲನೇಯ ವರ್ಷದಲ್ಲಿ ೨೫ ವಿದ್ಯಾರ್ಥಿಗಳಿದ್ದರು. ಈ ವಿದ್ಯಾರ್ಥಿಗಳೆಲ್ಲಾ ಕೋರ್ಸ್‌ಗಳನ್ನು ಮುಗಿಸಿಕೊಂಡು ಇಂದು ೧೫೦೦ರಿಂದ ೨,೦೦೦ ರೂ.ವರೆಗೂ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಒಟ್ಟಾರೆ ಪಿ.ಇ.ಎಸ್. ಕಾಲೇಜ್ ಈ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ.

''ನುರಿತ ಕೆಲಸಗಾರರಿಗೆ ಇವತ್ತೂ ಕೈಗಾರಿಕೆಯಲ್ಲಿ ತುಂಬಾ ಕೆಲಸವಿದೆ. ಆದರೆ ನುರಿತ ಕೆಲಸಗಾರರು ಸಿಗುವುದೇ ಕಷ್ಟವಾಗಿದೆ'' ಎಂದು ಮಹೇಶಪ್ಪನವರ ಅಭಿಪ್ರಾಯವಾಗಿದೆ.

ಕೊಬ್ಬರಿ ಬರ್ಫಿ

ಬೇಕಾಗುವ ಸಾಮಗ್ರಿಗಳು

೨ ತೆಂಗಿನಕಾಯಿ, ೫೦೦ ಗ್ರಾಂ ಸಕ್ಕರೆ, ಅರ್ಧ ಲೋಟ ಹಾಲು, ಒಂದಿಷ್ಟು ತುಪ್ಪ, ೨ ಎಲಕ್ಕಿ ಕಾಯಿ.

ಮಾಡುವ ವಿಧಾನ

ಮೊದಲು ಕೊಬ್ಬರಿಯನ್ನು ತುರಿದುಕೊಳ್ಳಬೇಕು. ಸಕ್ಕರೆಯನ್ನು ಪಾಕ ಮಾಡಲಿಕ್ಕೆ ಇಡಬೇಕು. ಪಾಕ ಬಂದ ಮೇಲೆ ತುರಿದ ಕೊಬ್ಬರಿಯನ್ನು ಹಾಕಿ ಕೈಯಾಡಿಸಿ ನಂತರ ಹಾಲು ತುಪ್ಪ ಹಾಕಿ ಕಲಸಿ ಅದನ್ನು ಒಂದು ಅಗಲವಾದ ತಟ್ಟೆಯಲ್ಲಿ ಹಾಕಿ ಆರಲಿಕ್ಕೆ ಬಿಡಿ. ಆರಿದ ನಂತರ ಕೊರೆದು ತೆಗೆಯಿರಿ. ಕೊಬ್ಬರಿ ಬರ್ಫಿ ರೆಡಿ.



- ರೇಣುಕಾ ಮಣೇಗಾರ್,
ರಾಣೇಬೆನ್ನೂರು

ಮಾಮಿಡಿ ಉಪ್ಪಿನಕಾಯಿ

ಬೇಕಾಗುವ ಸಾಮಗ್ರಿಗಳು

೧೦೦ ಮಾವಿನ ಮಿಡಿ (ಗಾತ್ರ ೨ ಇಂಚು), ಕಾಲು ಕೆ.ಜಿ. ಉಪ್ಪು, ೧೦೦ ಗ್ರಾಂ ಮೆಂತೆ, ೧೦೦ ಗ್ರಾಂ ಸಾಸಿವೆ, ೨೦೦ ಗ್ರಾಂ ಖಾರದ ಪುಡಿ (ಒಣಮೆಣಸಿನಕಾಯಿ), ೨ ಗ್ರಾಂ ಇಂಗು, ೧೦೦ ಗ್ರಾಂ ಅರಸಿನ ಪುಡಿ.

ಮಾಡುವ ವಿಧಾನ



ಮಿಡಿ ಕಾಯಿಯನ್ನು ತೊಳೆದು ಉಪ್ಪಿನಲ್ಲಿ ೬ ದಿನ ನೆನಸಬೇಕು. ಅದು ನೀರು ಬಿಟ್ಟು ಮುದುಡಿಕೊಳ್ಳುತ್ತದೆ. ಹೊರಗೆ ತೆಗೆದು ಒಣಗಿದ ನಂತರ ಮೇಲೆ ಕೊಟ್ಟಿರುವ ದಿನಸನ್ನು ಎಣ್ಣೆಯಲ್ಲಿ ಹುರಿದು ಪುಡಿ ಮಾಡಿ ಕಲಸಬೇಕು. ನಿಮಗೆ ಎಣ್ಣೆ ಹೆಚ್ಚು ಬೇಕೆಂದರೆ ಕಾಯಿಸಿ ಹಾಕಬೇಕು. ಒಂದು ವಾರದ ನಂತರ ಊಟ ಮಾಡಬೇಕು.

- ಸುಶೀಲಾ ಸಿದ್ದಲಿಂಗಸ್ವಾಮಿ,
ಬೆಳಗಾಂವ

ಪದರಪೇಡೆ

ಬೇಕಾಗುವ ಸಾಮಗ್ರಿಗಳು

೫೦೦ ಗ್ರಾಂ ಮೈದಾ ಹಿಟ್ಟು, ೫೦೦ ಗ್ರಾಂ ಸಕ್ಕರೆ, ೧೨೫ ಗ್ರಾಂ ಬೆಣ್ಣೆ, ಕರಿಯಲು ಎಣ್ಣೆ.

ಮಾಡುವ ವಿಧಾನ

ಮೈದಾ ಹಿಟ್ಟಿನಲ್ಲಿ ರುಚಿಗೆ ತಕ್ಕಷ್ಟು ಉಪ್ಪು, ಸ್ವಲ್ಪ ತಿನ್ನುವ ಸೋಡಾಪುಡಿ ಮತ್ತು ಹಾಲನ್ನು ಹಾಕಿ ಚಪಾತಿ ಹಿಟ್ಟಿನಂತೆ ನಾದಿ ಅರ್ಧಗಂಟೆವರೆಗೆ ನೆನೆಯಿಡಬೇಕು. ಲಿಂಬೆ ಗಾತ್ರದ ಹಿಟ್ಟನ್ನು ಚಪಾತಿ ಆಕಾರದಲ್ಲಿ ಲಟ್ಟಿಸಿ ಬೆಣ್ಣೆ ಸವರಿ ನಾಲ್ಕು ಮಡಿಕೆ ಮಡಿಚಬೇಕು. ಪ್ರತಿಸಲ ಬೆಣ್ಣೆ ಸವರಿ ಮಡಿಚಬೇಕು. ಇದರಂತೆ ೨-೩ ಸಲ ಲಟ್ಟಿಸಬೇಕು. ಲಟ್ಟಿಸಿದ್ದನ್ನು ಸುರುಳಿಯಾಕಾರ ಸುತ್ತಿ ಚೌಕಾಕಾರದ ತುಂಡುಗಳನ್ನು ಮಾಡಬೇಕು. ಇವುಗಳನ್ನು ಎಣ್ಣೆಯಲ್ಲಿ ಕರಿಯಬೇಕು. ಈಗಾಗಲೇ ಒಂದು ಪಾತ್ರೆಯಲ್ಲಿ ಸಕ್ಕರೆ ಪಾಕವನ್ನು ತಯಾರಿಸಿಟ್ಟಿರಬೇಕು. ಕರಿದ ತುಂಡುಗಳನ್ನು ಪಾಕದಲ್ಲಿ ಹಾಕಬೇಕು. ನಂತರ ತುಂಡಿನ ಪೇಡೆ ಪದರ ಪದರ ರೂಪಾಗಿ ಕಾಣುವದು. ತಯಾರಿಸಿ ತಿಂದು ನೋಡಿ. ಇದು ಬಹಳ ರುಚಿಕರವಾಗಿರುತ್ತದೆ.



- ಭಾಗ್ಯರತ್ನಮ್ಮ ರೋಣದ,
ಅಬ್ಬಿಗೇರಿ

ಜಹಾಂಗೀರ

ಬೇಕಾಗುವ ಸಾಮಗ್ರಿಗಳು

ಅರ್ಧ ಕೆ.ಜಿ. ಉದ್ದಿನಬೇಳೆ, ಎರಡು ಕೆ.ಜಿ. ಸಕ್ಕರೆ, ಕಾಲು ಕೆ.ಜಿ. ಆರಾರೂಟ್, ಕೇಸರಿ ಬಣ್ಣ, ೨೦ ರಿಂದ ೩೦ ಏಲಕ್ಕಿ ಪುಡಿ, ಕರೆಯಲು ಅಗತ್ಯವಿರುವಷ್ಟು ಡಾಲ್ಡಾ ಅಥವಾ ತುಪ್ಪ, ಜಹಾಂಗೀರ್ ಸೆಟ್ (ಇದು ಅಂಗಡಿಯಲ್ಲಿ ಕೇಳಿದರೆ ದೊರಕುತ್ತದೆ) ದಪ್ಪನೆಯ ಕಾಟನ್ ಬಟ್ಟೆ.

ಮಾಡುವ ವಿಧಾನ

ಮೂರು ಗಂಟೆಗಳ ಕಾಲ ನೆನೆಸಿದ ಉದ್ದಿನ ಬೇಳೆಯನ್ನು ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿ, ಉದ್ದಿನ ಬೇಳೆಯ ಕಾಳು ಒಂದು ಚೂರು ಕೂಡಾ ಇರಬಾರದು. ಈಗ ಒಲೆಯ ಮೇಲೆ ೨ ಕೆ.ಜಿ. ಸಕ್ಕರೆಯ ತೆಳು ಪಾಕವನ್ನು ತಯಾರಿಸಿಕೊಂಡಿರಿ. ಒಂದು ತಟ್ಟೆಯಲ್ಲಿ ಎರಡು ಸೌಟಿನಷ್ಟು ಉದ್ದಿನ ಹಿಟ್ಟನ್ನು ಸುರಿದುಕೊಂಡು ಅದಕ್ಕೆ ಒಂದು ಸೌಟಿನಷ್ಟು ಆರಾರೂಟ್ ಬೆರೆಸಿ, ಅಗಲವಾದ ಕೈಯನ್ನು ಊರಿ ಚೆನ್ನಾಗಿ ತಿಕ್ಕಿ. ಇನ್ನಷ್ಟು ಮೃದುಗೊಳಿಸಿ. ಹೀಗೆ ಮೃದುಗೊಳಿಸಿದ ಹಿಟ್ಟನ್ನು ತಯಾರಿಸಿಕೊಳ್ಳಬೇಕು. ನಂತರ ಕಾಟನ್ ಬಟ್ಟೆಗೆ ಚಿಕ್ಕದಾಗಿ ಒಂದು ರಂಧ್ರ ಕೊರೆಯಿರಿ. ಅಂಗಡಿಯಲ್ಲಿ ದೊರೆಯುವ ಜಹಾಂಗೀರ್‌ನಚ್ಚಿನ

ರವೆ ಕೋಡುಬಳೆ




ಬೇಕಾಗುವ ಸಾಮಗ್ರಿಗಳು

ಕಾಲು ಕೆ.ಜಿ. ರವೆ, ೨ ಕಪ್ಪು ಮೈದಾ ಅಥವಾ ಗೋಧಿ ಹಿಟ್ಟು, ಜೀರಿಗೆ, ಖಾರದ ಪುಡಿ, ಉಪ್ಪು, ಒಂದು ಚಿಟಿಕೆ ಸೋಡಾ, ಅರ್ಧ ಕಪ್ಪು ಎಣ್ಣೆ.

ಮಾಡುವ ವಿಧಾನ

ರವೆಯನ್ನು ಜರಡಿ ಹಿಡಿದು ಮೈದಾ ಅಥವಾ ಗೋಧಿ ಹಿಟ್ಟನ್ನು ಸೇರಿಸಬೇಕು. ಈ ಎರಡು ಹಿಟ್ಟುಗಳನ್ನು ಒಂದು ದೊಡ್ಡ ಪಾತ್ರೆಯಲ್ಲಿ ಹಾಕಿ ಅದಕ್ಕೆ ರುಚಿಗೆ ತಕ್ಕಷ್ಟು ಖಾರದ ಪುಡಿ ಉಪ್ಪು ಹಾಕಬೇಕು. ಸ್ವಲ್ಪ ಜೀರಿಗೆ ಮತ್ತು ಒಂದು ಚಿಟಿಕೆ ಸೋಡವನ್ನು ಸೇರಿಸಿ ಚೆನ್ನಾಗಿ ಹೊಂದುವಂತೆ ಕಲಸಬೇಕು. ಎಣ್ಣೆಯನ್ನು ಕಾಯಿಸಿ ಹಿಟ್ಟಿಗೆ ಸುರಿದು ಚೆನ್ನಾಗಿ ಕಲಸಿ ನಾದಬೇಕು. ನಂತರ ಆ ಹಿಟ್ಟನ್ನು ಚೆನ್ನಾಗಿ ಹೊಸೆದು ಕೋಡುಬಳೆ ಆಕಾರದಲ್ಲಿ ಮಾಡಬೇಕು. ನಂತರ ಎಣ್ಣೆಯಲ್ಲಿ ಕರಿಯಬೇಕು. ಕರಿದ ರವೆ ಕೋಡುಬಳೆ ತಿನ್ನಲು ರುಚಿಕರ.

- ಭುವನೇಶ್ವರಿ, ಗೊಲ್ಲರಹಳ್ಳಿ




ಸೆಟ್ಟನ್ನು ಆ ರಂಧ್ರಕ್ಕೆ ಸೆಟ್ ಮಾಡಿ. (ಇವು ಕಬ್ಬಿಣದ ನಟ್ಟು ಬೋಲ್ಟಿನ ರೀತಿಯೇ ಇರುತ್ತವೆ. ಅಗಲವಾದ ಕಾಟನ್ ಬಟ್ಟೆಯ ಮಧ್ಯ ರಂಧ್ರ ಕೊರೆದು ಬಟ್ಟೆಯ ಮೇಲ್ಮುಖ, ಹಾಗೂ ಕೆಳಮುಖದಲ್ಲಿ ನಟ್ಟುಗಳನ್ನು ಫಿಟ್ ಮಾಡಿರಬೇಕು.) ಕೇಸರಿ ಬಣ್ಣವನ್ನು ಹಿಟ್ಟಿಗೆ ಬೆರೆಸಿಡಿ. ಒಂದೊಂದು ಸೌಟಿನಷ್ಟು ಹಿಟ್ಟನ್ನು ಕಾಟನ್‌ನ ಬಟ್ಟೆಯಲ್ಲಿ ಸುರುವಿಕೊಂಡು, ನಾಲ್ಕೂ ಅಂಚುಗಳನ್ನು ಸೇರಿಸಿ ಚೀಲದಂತೆ ಕೈಯಲ್ಲಿ ಗಟ್ಟಿ ಆಧಾರವಿರಿಸಿಕೊಂಡು, ಹಂಚಿನಂತಿರುವ ಅಗಲವಾದ ಬಾಣಲೆಯಲ್ಲಿ ಕಾದ ಡಾಲ್ಡಾ ಅಥವಾ ತುಪ್ಪದಲ್ಲಿ ಚೀಲದ ಸಹಾಯದಿಂದಲೇ ಗಾಲಿಯಾಕಾರದಂತೆ ಹಿಟ್ಟಿನಿಂದ ರಚಿಸಿಕೊಳ್ಳಿ. ಗಾಲಿಯಾಕಾರದಂತೆ ಎಲ್ಲ ಜಹಾಂಗೀರ್‌ಗಳನ್ನು ಕಂದು ಬಣ್ಣಕ್ಕೆ ಕರೆದುಕೊಂಡು ಈ ಮೊದಲೇ ತಯಾರಿಸಿಕೊಂಡ ಪಾಕಕ್ಕೆ ಏಲಕ್ಕಿ ಪುಡಿಯನ್ನು ಬೆರೆಸಿ. ನಂತರ ಇವುಗಳನ್ನು ೭-೮ ಗಾಲಿಗಳಂತೆ ಪಾಕದಲ್ಲಿ ೨-೩ ನಿಮಿಷ ನೆನೆಸಿ ಬೇರೆಯೊಂದು ತಟ್ಟೆಗೆ ಹಾಕಿಡಿ. ಕೇಸರಿ ಬಣ್ಣದ ಬಿಸಿಬಿಸಿಯಾದ ಜಹಾಂಗೀರ್‌ಗಳನ್ನು ಒಂದು ತಟ್ಟೆಯಲ್ಲಿ ಅಂದವಾಗಿ ಜೋಡಿಸಿ ಬಂದ ಅತಿಥಿಗಳ ಮುಂದಿರಿಸಿದಾಗ, ನೋಡಲೂ ಚೆಂದ, ಸವಿಯಲು ಇನ್ನೂ ಚೆಂದ.



- ಲೀಲಾ ಬಳ್ಳಾರಿ,
ಪೊದಟೂರು, (ಆಂ.ಪ್ರ.)

ನಂತರ ತೆಗೆದು ಕೆಳಗಿಳಿಸಿ ಅದರಲ್ಲಿ ದ್ರಾಕ್ಷಿ, ಗೋಡಂಬಿ ಹಾಕಿ ಕೆಳಗಿಳಿಸಿ ಮುಚ್ಚಿಡಬೇಕು.

ಮೈದಾಹಿಟ್ಟಿನಲ್ಲಿ ಚಿಟಿಕೆ ಉಪ್ಪು ಒಂದು ಟೀ ಸ್ಪೂನ್ ಕಾಯಿಸಿದ ಎಣ್ಣೆ ಹಾಕಿ ಗಟ್ಟಿಯಾಗಿ ನಾದಿ ಗರಿಗರಿಯಾಗಿ ಪುರಿಯನ್ನು ಕರಿದಿಟ್ಟುಕೊಳ್ಳಬೇಕು. ಪುರಿ ಬಿರುಸಾಗಿರಬೇಕು, ಮೆದುವಾಗಿರಬಾರದು. ಊಟ ಮಾಡುವಾಗಲೇ ಎಷ್ಟು ಬೇಕೋ ಅಷ್ಟು ಪುರಿಯನ್ನು ಕಾಯಿಹಾಲಿನಲ್ಲಿ ಅದ್ದಿ ಬಡಿಸಿಕೊಳ್ಳಬೇಕು. ಇದು ಉಗಾದಿಗೆ ಸ್ಪೆಷಲ್ ಸಿಹಿಯಾಗಬಲ್ಲದು.



- ವಿಮಲಾ ಇನಾಮದಾರ,
ಅಳವಂಡಿ

ಮೈದಾ ಚಕ್ಕುಲಿ

ಬೇಕಾಗುವ ಸಾಮಗ್ರಿಗಳು

ಕಾಲು ಕೆ.ಜಿ. ಮೈದಾ ಹಿಟ್ಟು, ಅಜವಾನ, ಸ್ವಲ್ಪ ಜೀರಿಗೆ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕರಿಯಲು ಎಣ್ಣೆ.

ಮಾಡುವ ವಿಧಾನ

ಮೊದಲು ಮೈದಾ ಜರಡಿ ಹಿಡಿದುಕೊಂಡು ಬಿಡಬೇಕು. ನಂತರ ಒಂದು ಬೋಗಾಣಿಯಲ್ಲಿ ಅರ್ಧಕ್ಕಿಂತ ಇನ್ನು ಸ್ವಲ್ಪ ಒಳಗೆ ನೀರನ್ನು ಹಾಕಬೇಕು. ನಂತರ ಮೇಲೆ ಒಂದು ಬಟ್ಟೆಯನ್ನು ಕಟ್ಟಬೇಕು. ಆ ಬಟ್ಟೆಗೆ ನೀರು ಹತ್ತಬಾರದು. ಆ ಬಟ್ಟೆಯ ಮೇಲೆ ಮೈದಾ ಹಿಟ್ಟು ಹಾಕಿ ಒಲೆಯ ಮೇಲಿಡಬೇಕು. ಹಿಟ್ಟು ನೀರಿನ ಹುಗಿಗೆ ಅದರ ಜಿಗಿ ಎಲ್ಲವನ್ನು ಕಳೆದುಕೊಳ್ಳುತ್ತದೆ. ಹಿಟ್ಟು ಬಟ್ಟೆಯ ಮೇಲೆ ಸ್ವಲ್ಪ ಗಟ್ಟಿಯಾಗುತ್ತದೆ. ನಂತರ ಅದನ್ನು ಕೆಳಗಿಳಿಸಿ ಪುಡಿ ಮಾಡಿ ಮೇಲೆ ಹೇಳಿದ ಎಲ್ಲ ಸಾಮಾನನ್ನು ಹಾಕಿ ಸ್ವಲ್ಪ ಗಟ್ಟಿಯಾಗಿ ನಾದಬೇಕು. ಒಂದು ಬಾಣಲಿಯಲ್ಲಿ ಎಣ್ಣೆಯನ್ನು ಕಾಯಲಿಟ್ಟು, ಅದರಲ್ಲಿ ಚಕ್ಕುಲಿಯನ್ನು ಒತ್ತಬೇಕು. ಸ್ವಲ್ಪವೇ ನಸುಗೆಂಪಾಗಿ ಕರಿದು ತೆಗೆಯಬೇಕು. ಇದು ತಿನ್ನಲು ಬಹು ರುಚಿಯಾಗಿರುತ್ತೆ ಮತ್ತು ತುಂಬಾ ಹಗುರವಾಗಿರುತ್ತೆ. ಹಲ್ಲಿಲ್ಲದವರಿಗೂ ಸಹ ತಿನ್ನಲು ಬರುತ್ತೆ.



- ಹೇಮಾ ಪಾಟೀಲ್,
ಯಾದಗಿರ

ಹಾಲು ಹೋಳಿಗೆ

ಬೇಕಾಗುವ ಸಾಮಗ್ರಿಗಳು

೧ ತೆಂಗಿನಕಾಯಿ, ಸ್ವಲ್ಪ ಅಕ್ಕಿ, ಗಸಗಸೆ, ಬೇಕಾದಷ್ಟು ಸಕ್ಕರೆ, ದ್ರಾಕ್ಷಿ, ಗೋಡಂಬಿ, ಅರ್ಧ ಕೆ.ಜಿ. ಮೈದಾಹಿಟ್ಟು, ಕರಿಯಲು ಎಣ್ಣೆ.

ಮಾಡುವ ವಿಧಾನ

ಹಸಿ ತೆಂಗಿನಕಾಯಿಯನ್ನು ತುರಿದು ಅದರಲ್ಲಿ ನೆನೆ ಹಾಕಿದ ಒಂದು ಮುಷ್ಟಿ ಅಕ್ಕಿ, ಯಾಲಕ್ಕಿ, ಗಸಗಸೆ ಹಾಕಿ ಸ್ವಲ್ಪ ನೀರು ಹಾಕಿ ಮಿಕ್ಸಿಗೆ ಹಾಕಿ ನುಣ್ಣಗೆ ಮಾಡಿಕೊಳ್ಳಬೇಕು. ಈ ಮಿಶ್ರಣಕ್ಕೆ ನಿಮಗೆ ಬೇಕಾದಷ್ಟು ಸಕ್ಕರೆ ಹಾಗೂ ಸ್ವಲ್ಪ ನೀರು ಹಾಕಿ ಒಲೆಯ ಮೇಲಿಟ್ಟು ಸಣ್ಣ ಉರಿಯಲ್ಲಿ ಕುದಿಸಬೇಕು. ಇದು ತೀರಾ ನೀರಾಗಿರಬಾರದು. ಗಟ್ಟಿಯೂ ಆಗಿರಬಾರದು. ಒಂದು ಕುದಿ ಬಂದ

ಬದನೆಕಾಯಿ ಬಜ್ಜಿ (ಚಟ್ನಿ)

ಬೇಕಾಗುವ ಸಾಮಗ್ರಿಗಳು

ಬದನೆಕಾಯಿ, ಖಾರದ ಪುಡಿ, ಉಪ್ಪು, ಈರುಳ್ಳಿ, ಗುರಳ್ಳಪುಡಿ, ಎಣ್ಣೆ (ಹಸಿರು ಬದನೆಕಾಯಿ ಅಷ್ಟೊಂದು ರುಚಿಸುವುದಿಲ್ಲ)



ಮಾಡುವ ವಿಧಾನ

ಬದನೆಕಾಯಿಯನ್ನು ಕೆಂಡದಲ್ಲಿ ಸುಟ್ಟು (ಕೆಂಡ ಇಲ್ಲದವರು) ಗ್ಯಾಸ್‌ನಲ್ಲಿ ಸುಡಬಹುದು (ಬೆಯಿಸುವುದು) ಅಥವಾ ತವೆಯಲ್ಲಿ ಹೋಳುಗಳಂತೆ ಹೆಚ್ಚಿ ಚೆನ್ನಾಗಿ ಹುರಿದರೂ ಆಯಿತು.

ಸುಟ್ಟಿರುವ ಬದನೆಕಾಯಿಯ ಮೇಲಿನ ಸಿಪ್ಪೆಯನ್ನು ಸುಲಿದು ನೀವು ಎಷ್ಟು ಬದನೆಕಾಯಿ ಸುಟ್ಟಿರುತ್ತೀರೋ ಅದಕ್ಕೆ ತಕ್ಕಂತೆ ಖಾರದ ಪುಡಿ, ಉಪ್ಪು, ಗುರಳ್ಳಪುಡಿ (ಹುಚ್ಚೆಳ್ಳ ಪುಡಿ) ಈರುಳ್ಳಿ (ಒಗ್ಗರಣೆಗೆ ಹೆಚ್ಚಿದಂತೆ ಹೆಚ್ಚಬೇಕು) ಹಸಿ ಶೇಂಗಾ ಎಣ್ಣೆಯನ್ನು ಹಾಕಿ ಎಲ್ಲವನ್ನು ಕೈಯಿಂದ ಕಿವುಚಬೇಕು. ಆಗ ರೊಟ್ಟಿ ಅಥವಾ ಚಪಾತಿಯೊಂದಿಗೆ ತಿಂದು ನೋಡಿ ಬದನೆಕಾಯಿ ಬಜ್ಜಿಯ ರುಚಿಯನ್ನು.

- ಮೈತ್ರಾ ಶಿ. ಹದಡಿ, ರಾಣೇಬೆನ್ನೂರು

ವಿದ್ಯೆ-ಉದ್ಯೋಗ

ಬ್ಯಾಂಕ್ ಪರೀಕ್ಷೆ : ಪಾಸಾಗುವ ದಾರಿ

'Nothing is impossible' ಇದು ವಿಶ್ವವನ್ನೇ ಜಯಿಸ ಹೊರಟ ನೆಪೋಲಿಯನ್ನನ ವೀರವಾಣಿ. ಅಂತಹ ಅದಮ್ಯ ಆತ್ಮವಿಶ್ವಾಸವೇ ಅವನ ಯಶಸ್ಸಿನ ಮೊದಲ ಮೆಟ್ಟಿಲು. ಇದೊಂದು ಮಾತು ನಿಮ್ಮ ಮನದಾಳಕ್ಕಿಳಿದರೆ ಸಾಕು; ನಂತರ ಪರಿಶ್ರಮ, ಛಲ, ಏಕಾಗ್ರತೆಗಳು ತಂತಾನೇ ನಿಮ್ಮನ್ನು ಆವರಿಸುತ್ತವೆ.

ಇಂದಿನ ಬಹುಪಾಲು ನಿರುದ್ಯೋಗಿಗಳ ಕನಸನ್ನಾವರಿಸುವುದು ಈ ಬ್ಯಾಂಕ್ ಉದ್ಯೋಗ. ಆ ಕುರ್ಚಿ ತಲುಪಲು ಇರುವ ಮಾರ್ಗ ಯಾವುದು? ಸುಮಾರು ೧:೫೦೦ ರಷ್ಟು ಸ್ಪರ್ಧೆಯಿರುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದು ಅಸಾಧ್ಯವೆಂದು ಕೈಚೆಲ್ಲಿ ಕೂತವರೇ ಹೆಚ್ಚು. ಸರಿಯಾದ ನಿಟ್ಟಿನಲ್ಲಿ ಪ್ರಯತ್ನಿಸದಿರುವುದೇ ಅವರ ಹತಾಶೆಗೆ ಕಾರಣ. ಎಂ.ಎಸ್ಸಿ ಮುಗಿಸಿ ಪಟಪಟನೆ ಇಂಗ್ಲಿಷ್ ಮಾತಾಡುವ ಪ್ರತಿಭಾವಂತ ಆರು ಸಲ ಪರೀಕ್ಷೆಗೆ ಕೂತರೂ ಪಾಸಾಗಲಿಲ್ಲ. ನಿಂತಲ್ಲೇ ಗಣಿತದ ಸೂತ್ರಗಳನ್ನು ನಿಮ್ಮ ಮುಂದೆ ಬಿಡಿಸಿಡಬಲ್ಲ ಮೇಧಾವಿಯೂ ಪಾಸಾಗಲಿಲ್ಲ... ಏಕೆ? ಎಂಬ ಪ್ರಶ್ನೆ ನಿಮ್ಮ ತಲೆ ಕೊರೆಯುತ್ತಿರಬಹುದು. ಈ ಕ್ಷಣದಲ್ಲಿ ನಿಮಗೊಂದು ಅಚ್ಚರಿಯೂ ಕಾದಿರಬಹುದು. ನಿಮ್ಮ ಪಕ್ಕದ ಮನೆಯ ಹುಡುಗ ಕೇವಲ ಎಸ್ಸೆಸ್ಸೆಲ್ಸಿ ಮುಗಿಸಿದವ ನೌಕರಿ ಗಿಟ್ಟಿಸಿರುತ್ತಾನೆ! ಇದೆಲ್ಲ ಹೇಗೆ? ಏನು?

○ ಕೆ. ಜಗದೀಶ
ಭಾರತೀಯ ಸ್ಟೇಟ್ ಬ್ಯಾಂಕ್
ಎ.ಡಿ.ಬಿ. ಶಾಖೆ
ಬಸ್ಸ್ ನಿಲ್ದಾಣದ ಎದುರು
ಬಳ್ಳಾರಿ - ೫೮೩ ೧೦೧

ಈ ಪರೀಕ್ಷೆಯ ನಿಯಮಗಳು, ವಯೋಮಿತಿ, ಅರ್ಹತೆ ಇವೆಲ್ಲ ಅರ್ಜಿಯ ಜೊತೆ ಇರುತ್ತಾವಾದ್ದರಿಂದ ಪುನಃ ಅದನ್ನು ಇಲ್ಲಿ ತಿಳಿಸುವ ಅಗತ್ಯವಿಲ್ಲ. ಆದರೆ ಈ ಪರೀಕ್ಷೆಯಲ್ಲಿ ಸಹಜವಾಗಿ ಮಾಡುವ ತಪ್ಪುಗಳೇನು? ಯಶಸ್ಸಿನ ಗುರಿ ಮುಟ್ಟಲು ಯಾವ ಮಾರ್ಗವಿದೆ? ಎಂಬುದರ ಬಗ್ಗೆ ಗಮನ ಕೊಡೋಣ.

ಪ್ರಶ್ನೋತ್ತರಗಳ ಜಟಾಪಟಿಗಿಂತ ಮುಂಚೆ ಈ ಕೆಳಗಿನ ಅಂಶಗಳನ್ನು ಗಮನಿಸಿ.

೧. ಕಡಿಮೆ ಅವಧಿಯಲ್ಲಿ ಹೆಚ್ಚು ಸರಿಯಾದ ಉತ್ತರ ಬರೆಯಬೇಕು. ಸರಿಯಾದ ಉತ್ತರಕ್ಕಾಗಿ ತಡಕಾಡುತ್ತಾ ಕಾಲಹರಣ ಮಾಡುವುದಾಗಲೀ, ಎಲ್ಲಾ ಉತ್ತರಗಳನ್ನು ಶೀಘ್ರ ಮುಗಿಸಬೇಕೆಂಬ ಆತುರದಲ್ಲಿ ಸಿಕ್ಕಸಿಕ್ಕಂತೆ ಉತ್ತರಿಸುವುದಾಗಲೀ ತಪ್ಪು. ಖಚಿತತೆ, ಚಾಕಚಕ್ಯತೆ ಹಾಗೂ ಸಮಯ ನಿರ್ವಹಣೆ ಈ ಮೂರು ನಿಮ್ಮ ಬೀಜ ಮಂತ್ರಗಳಾಗಲಿ.

೨. ಋಣಾತ್ಮಕ ಅಂಕಗಳು (Negative Marks) ಇರುವುದರಿಂದ, ಅನುಮಾನದಿಂದ ಉತ್ತರಿಸುವುದಕ್ಕಿಂತ ಅಂತಹ ಪ್ರಶ್ನೆಗಳನ್ನು ಬಿಡುವುದೇ ಲೇಸು.

೩. ಅಕ್ಕಪಕ್ಕದವರು ಯಾವುದೇ ಕಾರಣಕ್ಕೆ ಮಾತಾಡಿಸಿದರೂ ಸ್ಪಂದಿಸಬೇಡಿ. ಅದು ನಿಮ್ಮ ಸಮಯವನ್ನು ಹಾಳು ಮಾಡುತ್ತದೆ. ಅಷ್ಟರಲ್ಲೇ ಹತ್ತು ಪ್ರಶ್ನೆಗಳಿಗೆ ಉತ್ತರಿಸಬಹುದೆಂಬುದು ಗಮನದಲ್ಲಿರಲಿ. ನೀವು ಸ್ವಾರ್ಥಿಗಳೆಂದು ಜರಿದರೂ ಜರಿಯಲಿ. ಆ ಕ್ಷಣದಲ್ಲಿ ನೀವು ಜಯಶಾಲಿಗಳಾಗುವುದು ಮುಖ್ಯ. Survival of the fittest ಎಂಬ ಮಾತು ಕೇಳಿದ್ದೀರಿ ತಾನೆ?

೪. ಕಾಪಿ ಹೊಡೆದು ಪಾಸಾಗುವೆನೆಂಬ ಪಂಡಿತರಿಗೆ ಸೋಲು ಕಟ್ಟಿಟ್ಟ ಬುತ್ತಿ. ಏಕೆ ಗೊತ್ತೆ? ಅವನ ಮುಂದಿನ ಅಭ್ಯರ್ಥಿಯ ಕೈಯಲ್ಲಿರುವ ಪ್ರಶ್ನೆ ಪತ್ರಿಕೆಯೇ ಬೇರೆಯಾಗಿರುತ್ತದೆ. ಪಕ್ಕದವನ ಪತ್ರಿಕೆಯೂ ಬೇರೆಯಾಗಿರುತ್ತದೆ.

೫. ಉತ್ತರಗಳನ್ನು ಗುರುತು ಹಾಕಲು ಬಳಸುವ ಪೆನ್ಸಿಲ್ ತೀರಾ ಚೂಪಾಗಿದ್ದಲ್ಲಿ ಉತ್ತರ ಪತ್ರಿಕೆಯೇ ತೂತು ಬೀಳುವ ಸಂಭವವುಂಟು. ಅಲ್ಲದೆ, ಉತ್ತರದ ವೃತ್ತ ತುಂಬಲು ವೇಳೆ ಹಿಡಿಯುತ್ತದೆ. ಹೆಚ್.ಬಿ. ಪೆನ್ಸಿಲ್ ಮಾತ್ರ ಬಳಸಿ.

೬. ಉತ್ತರ ತಪ್ಪಾದಾಗ ಅಳಿಸಲು ಉತ್ತಮ ಗುಣಮಟ್ಟದ ರಬ್ಬರನ್ನೇ ಬಳಸಿ. ಕಪ್ಪು ಮಚ್ಚೆ ಹಾಗೇ ಉಳಿದರೆ Optical Mark Reader (ಕಂಪ್ಯೂಟರ್) ತಪ್ಪು ನಿರ್ಣಯ ನೀಡುವ ಸಂಭವವಿರುತ್ತದೆ.

೭. ಉತ್ತರ ಹಾಳೆಯಲ್ಲಿ ಮನೆಗಳು ಚಿಕ್ಕದಾಗಿರುವುದರಿಂದ, ಪ್ರಶ್ನೆಗಳ ಸಂಖ್ಯೆ ತಪ್ಪಾಗಿ ಗ್ರಹಿಸಿ ಗುರುತು ಮಾಡುವ ಅಪಾಯವುಂಟು. ಇದರ ಬಗ್ಗೆ ಕಾಳಜಿಯಿರಲಿ. ಪ್ರಶ್ನೆ ಪತ್ರಿಕೆಯಲ್ಲಿ ೧೦-೧೫ ಉತ್ತರಗಳನ್ನು ಟಿಕ್ ಗುರುತು ಮಾಡಿಕೊಂಡು, ನಂತರ ಅವುಗಳನ್ನು ಉತ್ತರ ಹಾಳೆಯಲ್ಲಿ ಗುರುತು ಮಾಡಿರಿ.

೮. ಈ ಸ್ಪರ್ಧೆಯಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿದ ಕೆಲವೇ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರು, ಆದ್ದರಿಂದ ಕೇವಲ ಪಾಸಾದರೆ ಸಾಕೆಂಬ ಅಲ್ಪತೃಪ್ತಿ ಬೇಡ.

೯. ಪರೀಕ್ಷೆ ಪ್ರಾರಂಭವಾದೊಡನೆ ನೀವು ಉತ್ತರಿಸುವುದನ್ನು ಪ್ರಾರಂಭಿಸಬೇಕು. ಪೂರ್ಣ ಪ್ರಶ್ನೆಪತ್ರಿಕೆ ಓದುತ್ತಾ ಕಾಲಹರಣ ಮಾಡಬೇಡಿ.

೧೦. ಯಾವುದಾದರೊಂದು ಪ್ರಶ್ನೆ ಬಿಟ್ಟು ಮುಂದಿನ ಪ್ರಶ್ನೆಗೆ ಉತ್ತರಿಸುವಾಗ ಪ್ರಶ್ನೆಯ ಸಂಖ್ಯೆ ಗಮನಿಸಿ ಗುರುತು ಮಾಡಿರಿ. ಇಲ್ಲದಿದ್ದರೆ ಮುಂದಿನ ಉತ್ತರಗಳ ಸಂಖ್ಯೆಗಳೆಲ್ಲಾ ಏರುಪೇರಾದಾವು.

೧೧. ಕೊನೆಯಲ್ಲಿ, ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲವಲ್ಲ ಎಂಬ ದಿಗಿಲಿಗೆ ಒಳಗಾಗಬೇಡಿ. ಅದು ತಪ್ಪು ಉತ್ತರಗಳಿಗೆ ಎಡೆ ಮಾಡಿಕೊಡುತ್ತದೆ. ಎಲ್ಲಾ ಪ್ರಶ್ನೆಗಳಿಗೆ ಸಂಪೂರ್ಣ ಉತ್ತರಿಸುವವರು ತೀರಾ ಕಡಿಮೆ ಎಂಬುದು ಗಮನದಲ್ಲಿರಲಿ ಹಾಗೆಂದೂ ತೀರಾ ನಿಧಾನವಾಗಬೇಡಿ.

೧೨. ಗಣಿತ ವಿಭಾಗದಲ್ಲಿ ಉತ್ತರಿಸುವಾಗ BODMAS rule ಮರೆಯದಿರಿ. (Bracket open, Divide, Multiply, add & sub-

tract) ಉತ್ತರ ಕಂಡು ಹಿಡಿಯುವಾಗ ಈ ಕ್ರಮದಲ್ಲೇ ಸಾಗಬೇಕು.

೧೬. ಕೊಟ್ಟಂತಹ ಸಮಯಕ್ಕಿಂತ ಮುಂಚೆ ಪೇಪರ್ ಕೊಟ್ಟು ಹೊರಡದಿರಿ. ಆ ಉಳಿದ ಸಮಯವನ್ನು ಸದುಪಯೋಗಪಡಿಸಿಕೊಳ್ಳಿ ಈಗಾಗಲೇ ಬರೆದಿರುವ ಉತ್ತರಗಳ ಮೇಲೆ ಕಣ್ಣಾಡಿಸಿ, ಆಗಲೂ ಕೆಲವು ತಪ್ಪುಗಳನ್ನು ಸರಿಪಡಿಸುವ ಅವಕಾಶವಿರುತ್ತದಲ್ಲವೆ?

ಕ್ಲರ್ಕ್/ಕ್ಯಾಷಿಯರ್/ಟೈಪಿಸ್ಟ್ ಹುದ್ದೆಗಳ ಪರೀಕ್ಷೆಯಲ್ಲಿ ನಾಲ್ಕು Objective tests ಮತ್ತು ಒಂದು Descriptive paper ಇರುತ್ತದೆ. ಅದರ ವಿವರಗಳು ಈ ರೀತಿ ಇವೆ:

A. Objective Tests (ಭಾಷೆ: ಇಂಗ್ಲಿಷ್-ಕರ್ನಾಟಕದಲ್ಲಿ)

Name of the test	No. of Questions	Maximum Marks	Time
Reasoning ability (TORA)	50	80	95 minutes
English language (TOEL)	50	(50)*	Composite time
Numerical ability (TONA)	50	80	to complete all
Clerical aptitude (TOCA)	50	40	the 200questions
Total	200	200	

ಮೇಲಿನ ೪ ಪರೀಕ್ಷೆಗಳಲ್ಲಿ ಕನಿಷ್ಠ ಅಂಕಗಳನ್ನು ಗಳಿಸಲೇಬೇಕು. *English language testನಲ್ಲಿ ಗಳಿಸಿದ ಅಂಕಗಳನ್ನು ಒಟ್ಟು ಮೊತ್ತದ ಅಂಕಗಳಿಗೆ ಕೂಡಿಸುವುದಿಲ್ಲ.

ಮೇಲಿನ ೨೦೦ ಪ್ರಶ್ನೆಗಳಿಗೆ ೯೫ ನಿಮಿಷಗಳನ್ನು ಒಟ್ಟಾರೆಯಾಗಿ ನೀಡಿದ್ದರೂ, ಈ ಕೆಳಗಿನಂತೆ ಸಮಯವನ್ನು ಸರಿಸುಮಾರಾಗಿ ನಿಗದಿಪಡಿಸಿಕೊಳ್ಳುವುದು ಸೂಕ್ತ.

TORA - 30 Minutes
TOEL - 25 Minutes
TONA - 25 Minutes
TOCA - 15 Minutes
TOTAL 95 Minutes


B. Descriptive Paper : (ಭಾಷೆ : ಹಿಂದಿ/ಇಂಗ್ಲಿಷ್/ಕನ್ನಡ-ಕರ್ನಾಟಕದಲ್ಲಿ)

Objective test ಮುಗಿದ ಮೇಲೆ ೧೦ ನಿಮಿಷಗಳ ನಂತರ ಈ ಪರೀಕ್ಷೆ ಪ್ರಾರಂಭವಾಗುತ್ತದೆ. ಮೇಲ್ಕಂಡ ಯಾವುದೇ ಭಾಷೆಯಲ್ಲಿ ಉತ್ತರಿಸಬಹುದು. ಇದಕ್ಕೆ ೬೦ ಗರಿಷ್ಠ ಅಂಕಗಳಿದ್ದು, ಕನಿಷ್ಠ ಅಂಕಗಳನ್ನು ಪಡೆಯಲೇಬೇಕು. ಆದರೆ ಈ ಅಂಕಗಳನ್ನು ಒಟ್ಟು ಮೊತ್ತದ ಅಂಕಗಳಿಗೆ (Merit list ತಯಾರಿಸಲು) ಕೂಡಿಸುವುದಿಲ್ಲ.

ಕೊಟ್ಟಿರುವ ೪ ಪ್ರಶ್ನೆಗಳಲ್ಲಿ ೩ ಕ್ಕೆ ಉತ್ತರಿಸಬೇಕು. ೪೫ ನಿಮಿಷಗಳ ಅವಧಿಯಿರುತ್ತದೆ.

ಪ್ರಶ್ನೆ ಪತ್ರಿಕೆಯಲ್ಲೇ ಉತ್ತರಿಸಲು ಸ್ಥಳಾವಕಾಶವನ್ನು ಒದಗಿಸಿರುತ್ತಾರೆ. ಪ್ರತಿ ಪ್ರಶ್ನೆಗೆ ಉತ್ತರಿಸಲು ೧೦೦ ಪದಗಳ ಮಿತಿಯಿರುತ್ತದೆ. 100x 3= 300 ಪದಗಳಿಗೆ ಸಾಲುವಷ್ಟು ಸ್ಥಳಾವಕಾಶ ಉತ್ತರ ಪತ್ರಿಕೆಯಲ್ಲಿರುತ್ತದೆ. ಅಷ್ಟರಲ್ಲೇ ಬರೆದು ಮುಗಿಸಬೇಕಾದ್ದು ಅನಿವಾರ್ಯ. Supplement paperಗೆ ಅವಕಾಶವಿಲ್ಲ.

ನಿಮ್ಮ ಬೌದ್ಧಿಕ ಸಾಮರ್ಥ್ಯ, ಕಲ್ಪನಾ ಸಾಮರ್ಥ್ಯ, ಹೊಸ ಚಿಂತನೆ, ಭಾಷಾ ಸಾಮರ್ಥ್ಯ, ಸಂದರ್ಭದ ವಿಶ್ಲೇಷಣೆ, ಬ್ಯಾಂಕಿಂಗ್/ಆರ್ಥಿಕ ವಿಚಾರಗಳು



ಇತ್ಯಾದಿಗಳನ್ನು ಒರೆಗೆ ಹಚ್ಚಲು ಈ ಪರೀಕ್ಷೆ ಎಂಬುದನ್ನು ಗಮನಿಸಿ ನೀವು ತಯಾರಾಗಬೇಕು. ಅದೇನಿದ್ದರೂ ೧೦೦ ಪದಗಳ ಮಿತಿಯಲ್ಲೇ!

ಮೊದಲ ಪುಟದಲ್ಲೇ ನಿಮ್ಮ ಆಯ್ಕೆಯ ಭಾಷೆ ಯಾವುದೆಂದು ಗುರುತು ಮಾಡಿರಬೇಕು ಮತ್ತು ಮೂರು ಉತ್ತರಗಳನ್ನು ಅದೇ ಭಾಷೆಯಲ್ಲೇ ಬರೆಯಬೇಕು. ಬರವಣಿಗೆ ಉತ್ತಮವಾಗಿರಲಿ.

ನಾಲ್ಕರಲ್ಲಿ ಯಾವುದೇ ಮೂರು ಪ್ರಶ್ನೆಗಳಿಗೆ ಯಾವುದೇ ಕ್ರಮದಲ್ಲಿ ಉತ್ತರಿಸಬಹುದು. ಆದರೆ ಪ್ರಶ್ನೆಯ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

'Space for rough work' ಎಂದು ಕಾದಿರಿಸಿರುವ ಸ್ಥಳದಲ್ಲಿ ಉತ್ತರ ಬರೆಯಬಾರದು. ಅಲ್ಲಿ ಪ್ರಬಂಧ ಬರೆಯಲು ಬೇಕಾದ ಅಂಶಗಳನ್ನು ಗುರುತು ಹಾಕಿಕೊಳ್ಳಲು ಬಳಸಬಹುದು.

ಬಿ.ಎಸ್.ಆರ್.ಬಿ. ಮೂಲಕ ನೇಮಕಾತಿ ಮಾಡಿಕೊಳ್ಳುವ ಬ್ಯಾಂಕುಗಳು

೧. ಅಲಹಬಾದ್ ಬ್ಯಾಂಕ್
ಕಲ್ಕತ್ತ - ೭೦೦ ೦೦೧
೨. ಆಂಧ್ರ ಬ್ಯಾಂಕ್
ಹೈದರಾಬಾದ್ - ೫೦೦ ೦೦೧
೩. ಬ್ಯಾಂಕ್ ಆಫ್ ಬರೋಡ
ಬರೋಡ - ೩೯೦ ೦೦೬.
೪. ಬ್ಯಾಂಕ್ ಆಫ್ ಇಂಡಿಯಾ
ಮುಂಬೈ - ೪೦೦ ೦೨೧
೫. ಬ್ಯಾಂಕ್ ಆಫ್ ಮಹಾರಾಷ್ಟ್ರ
ಪೂನಾ - ೪೧೧ ೦೦೫
೬. ಕೆನರಾ ಬ್ಯಾಂಕ್
ಬೆಂಗಳೂರು - ೫೬೦ ೦೦೨
೭. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
ಮುಂಬೈ - ೪೦೦ ೦೨೧
೮. ಕಾರ್ಪೋರೇಷನ್ ಬ್ಯಾಂಕ್
ಮಂಗಳೂರು - ೫೭೫ ೦೦೧
೯. ದೇನಾ ಬ್ಯಾಂಕ್
ಮುಂಬೈ - ೪೦೦ ೦೦೫.
೧೦. ಇಂಡಿಯನ್ ಬ್ಯಾಂಕ್
ಚೆನ್ನೈ - ೬೦೦ ೦೦೧
೧೧. ಇಂಡಿಯನ್ ಓವರ್‌ಸೀಸ್ ಬ್ಯಾಂಕ್
ಚೆನ್ನೈ - ೬೦೦ ೦೦೧
೧೨. ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್
ನ್ಯೂ ಡೆಲ್ಲಿ - ೧೧೦ ೦೦೧
೧೩. ಪಂಜಾಬ್ ನ್ಯಾಷನಲ್ ಬ್ಯಾಂಕ್
ನ್ಯೂ ಡೆಲ್ಲಿ - ೧೧೦ ೦೦೧
೧೪. ಪಂಜಾಬ್ ಅಂಡ್ ಸಿಂದ್ ಬ್ಯಾಂಕ್
ನ್ಯೂ ಡೆಲ್ಲಿ - ೧೧೦ ೦೦೧
೧೫. ಸಿಂಡಿಕೇಟ್ ಬ್ಯಾಂಕ್
ಮಣಿಪಾಲ್ - ೫೭೬ ೧೧೯
೧೬. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ಮುಂಬೈ - ೪೦೦ ೦೨೧
೧೭. ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ
ಕಲ್ಕತ್ತ - ೭೦೦ ೦೦೧
೧೮. ಯುಕೋ ಬ್ಯಾಂಕ್
ಕಲ್ಕತ್ತ - ೭೦೦ ೦೦೧
೧೯. ವಿಜಯಾ ಬ್ಯಾಂಕ್
ಬೆಂಗಳೂರು - ೫೬೦ ೦೦೧
೨೦. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಮುಂಬೈ - ೪೦೦ ೦೨೧
೨೧. ಸ್ಟೇಟ್ ಬ್ಯಾಂಕ್ ಆಫ್ ಬಿಕನರ್ ಅಂಡ್ ಜೈಪುರ್
ಜೈಪುರ್ - ೩೦೨ ೦೦೫
೨೨. ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
ಹೈದರಾಬಾದ್ - ೫೦೦ ೧೭೭
೨೩. ಸ್ಟೇಟ್ ಬ್ಯಾಂಕ್ ಆಫ್ ಇಂದೂರ್
ಇಂದೂರ್ - ೪೫೨ ೦೦೩
೨೪. ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು
ಬೆಂಗಳೂರು - ೫೬೦ ೦೦೯
೨೫. ಸ್ಟೇಟ್ ಬ್ಯಾಂಕ್ ಆಫ್ ಪಟಿಯಾಲ
ಪಟಿಯಾಲ - ೧೪೭ ೦೦೧
೨೬. ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ
ಭಾವನಗರ - ೩೬೪ ೦೦೧
೨೭. ಸ್ಟೇಟ್ ಬ್ಯಾಂಕ್‌ಆಫ್ ಟ್ರಾವೆಂಕೂರ್
ತ್ರಿವೇಂದ್ರಂ - ೬೯೫ ೦೦೧

ಉತ್ತರದಲ್ಲೆಲ್ಲೂ ನಿಮ್ಮ ಹೆಸರು, ವಿಳಾಸ, ರೋಲ್ ನಂಬರ್ ಇತ್ಯಾದಿಗಳನ್ನು ಬರೆಯಬಾರದು.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಶ್ರಮವಹಿಸಿ ಅಭ್ಯಸಿಸಿದರೆ ನಿಮ್ಮ ಪ್ರಯತ್ನಕ್ಕೆ ಫಲ ಸಿಗುವುದರಲ್ಲಿ ಸಂಶಯವಿಲ್ಲ. ಈ ಲೇಖನದೊಂದಿಗೆ ನೀಡಿರುವ ಉದಾಹರಣೆಗಳನ್ನು (Encl. Xerox copies) ಗಮನಿಸಿ. ಜೊತೆಗೆ ಬಿ.ಎಸ್.ಆರ್.ಬಿ.ಯಿಂದ ನಿಮಗೆ ಬರುವ ಮಾದರಿ ಪ್ರಶ್ನೆಗಳನ್ನು ಅಭ್ಯಾಸ ಮಾಡಿ. ಮಾರುಕಟ್ಟೆಯಲ್ಲೂ ಈ ಬಗ್ಗೆ ಮಾಹಿತಿ ನೀಡುವ ಅನೇಕ ಗೈಡ್‌ಗಳು ದೊರೆಯುತ್ತವೆ.

ಗಣಕೀಕೃತ ಮೌಲ್ಯಮಾಪನ ನಿಯಮ ಪಾಲಿಸಿ

ಮೌಲ್ಯಮಾಪನವು ಸಂಪೂರ್ಣವಾಗಿ ಗಣಕಯಂತ್ರದ ಮೂಲಕ ಆಗುತ್ತದೆ. ಆದುದರಿಂದ ಎಲ್ಲಾ ಸೂಚನೆಗಳನ್ನು ಮತ್ತು ಉತ್ತರಿಸುವ ಕ್ರಮವನ್ನು ಜಾಗರೂಕತೆಯಿಂದ ಓದಿರಿ. ದಯವಿಟ್ಟು ನಿಮ್ಮ ಉತ್ತರ ಪತ್ರಿಕೆಯನ್ನು ಹುಷಾರಾಗಿ ಬಳಸಿ. ಅದನ್ನು ಧೂಳಿನಿಂದ ಮುಕ್ತವಾಗಿಡಿ. ಅದು ಹರಿದಿದ್ದರೆ, ಸುಕ್ಕಾಗಿದ್ದರೆ, ಮಡಿಚಿದ್ದರೆ, ಸುತ್ತಿದ್ದರೆ ಅಥವಾ ಧೂಳಾಗಿದ್ದರೆ ಅದರ ಮೌಲ್ಯಮಾಪನ ಆಗದಿರಬಹುದು. ಉತ್ತರ ಪತ್ರಿಕೆಯಲ್ಲಿ ಬೇಕಾದ ಎಲ್ಲಾ ಮಾಹಿತಿಯನ್ನು ಒದಗಿಸಲು ದಯವಿಟ್ಟು ಗಮನಿಸಿ, ಇಲ್ಲದಿದ್ದಲ್ಲಿ ಮೌಲ್ಯ ಮಾಪನ ಮಾಡಲಾಗುವುದಿಲ್ಲ.

೧. ಉತ್ತರ ಪತ್ರಿಕೆಯ ೧ನೆಯ ಬದಿ ೧೭ನೆಯ ಸಂಖ್ಯೆಯ ಪೆಟ್ಟಿಗೆಯಲ್ಲಿರುವ ಪರೀಕ್ಷೆಯ ನಮೂನೆಯ ಸಂಖ್ಯೆಯನ್ನು ಯಂತ್ರವು ಮೊದಲು ಓದುತ್ತದೆ. ಅನಂತರ ಆ ನಮೂನೆಯಲ್ಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳ ಪ್ರಕಾರ ನಿಮ್ಮ ಉತ್ತರಗಳನ್ನು **ಮೌಲ್ಯೀಕರಿಸುತ್ತದೆ.** ಆದ್ದರಿಂದ, **ಎಚ್.ಬಿ.ಪೆನ್ಸಿಲ್‌ನಿಂದ ಸರಿಯಾದ ಅಂಡಾಕಾರಗಳನ್ನು ತುಂಬಿ, ನಿಮ್ಮ ಪರೀಕ್ಷಾ ನಮೂನೆಯ ಸಂಖ್ಯೆಯನ್ನು ನೀವು ಸರಿಯಾಗಿ ತೋರಿಸಬೇಕು.**

೨. **ಮುಖ್ಯವಾದುದು** : ನೀವು ಹೀಗೆ ಮಾಡಿದರೆ ನಿಮ್ಮ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ....
   - ಅ. **೧೪ನೆಯ ಪೆಟ್ಟಿಗೆಯಲ್ಲಿ ನಿಮ್ಮ ಪರೀಕ್ಷಾ ಕ್ರಮ ಸಂಖ್ಯೆಗೆ ಅನುಗುಣವಾದ ಅಂಡಾಕಾರಗಳನ್ನು ಕಪ್ಪುಗೊಳಿಸದೇ ಇದ್ದಲ್ಲಿ**
   - ಬ. **೧೭ನೆಯ ಪೆಟ್ಟಿಗೆಯಲ್ಲಿ ಪರೀಕ್ಷೆಯ ನಮೂನೆಗೆ ಅನುಗುಣವಾದ ಅಂಡಾಕಾರಗಳನ್ನು ಕಪ್ಪುಗೊಳಿಸದೇ ಇದ್ದಲ್ಲಿ**
   - ಕ. ಬೇಕಾದಾಗ ಎಚ್.ಬಿ. ಪೆನ್ಸಿಲ್ ಬಳಸದೇ ಇದ್ದಲ್ಲಿ
   - ಡ. ಉತ್ತರವನ್ನು ಸೂಚಿಸುವ ಸರಿಯಾದ ವಿಧಾನವನ್ನು - ಅಂದರೆ ಅಂಡಾಕಾರಗಳನ್ನು ಕಪ್ಪುಗೊಳಿಸುವುದನ್ನು ಅನುಸರಿಸದೇ ಇದ್ದಲ್ಲಿ.

೩. ಹೀಗೆ ಮಾಡಿದರೆ ನಿಮ್ಮ ಉತ್ತರ ಪತ್ರಿಕೆಯನ್ನು **ಮೌಲ್ಯಮಾಪನ ಮಾಡಲಾಗುವುದಿಲ್ಲ :**
   - ಅ. ನೀವು ಉತ್ತರ ಪತ್ರಿಕೆಯ ಮೇಲೆ ಕರಡು ಕೆಲಸ ಮಾಡಿದರೆ
   - ಆ. ಉತ್ತರ ಪತ್ರಿಕೆಯಲ್ಲಿ ನಿಮ್ಮ ಪರೀಕ್ಷಾ ಕ್ರಮ ಸಂಖ್ಯೆಯನ್ನು ನೀವು ಬರೆಯದಿದ್ದರೆ
   - ಇ. ಉತ್ತರ ಪತ್ರಿಕೆಯಲ್ಲಿ ಅಗತ್ಯವಿರುವ ಎಲ್ಲ ಮಾಹಿತಿಯನ್ನು ನೀವು ಬರೆಯದಿದ್ದರೆ
   - ಈ. ನಿಮ್ಮ ಉತ್ತರ ಪತ್ರಿಕೆಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳದಿದ್ದರೆ.

BSRB Clerical Test ಬಗ್ಗೆ Postal Tuition Course ನೀಡುವ ಸಂಸ್ಥೆ : **ವಿಶ್ವ ಭಾರತಿ ಇನ್‌ಸ್ಟಿಟ್ಯೂಟ್**

೩೬, ಚರ್ಚ್ ಸ್ಟ್ರೀಟ್, ಬೆಂಗಳೂರು - ೫೬೦ ೦೦೧

ಅಂಚೆ ಕೋರ್ಸ್ ನಂತರ ೩ ದಿನಗಳ Contact Programme ನಡೆಸುವ ಸ್ಥಳಗಳು : ಬೆಂಗಳೂರು, ಮೈಸೂರು, ಗುಲಬರ್ಗಾ, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ ಮತ್ತು ಕಾರವಾರ.

ಬಿ.ಎಸ್.ಆರ್.ಬಿ. ಎರಡು ಪ್ರತ್ಯೇಕ ಪರೀಕ್ಷೆಗಳನ್ನು ನಡೆಸುತ್ತದೆ

೧. ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಸಹವರ್ತಿ ಬ್ಯಾಂಕ್ ಹಾಗೂ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಾಗಿ - ಸೇರಿ ಒಂದೇ ಪರೀಕ್ಷೆ (ಈ ಮುಂಚೆ ಸ್ಟೇಟ್ ಬ್ಯಾಂಕ್ ರಿಕ್ರೂಟ್‌ಮೆಂಟ್ ಬೋರ್ಡ್ ಎಂಬ ಪ್ರತ್ಯೇಕ ಸಂಸ್ಥೆ ಇತ್ತು. ಈಗ ಇಲ್ಲ)

೨. ಎಲ್ಲಾ ಗ್ರಾಮೀಣ ಬ್ಯಾಂಕುಗಳಿಗಾಗಿ - ಪ್ರತ್ಯೇಕ ಪರೀಕ್ಷೆ, ಈ ಪರೀಕ್ಷೆಗೆ ಹಾಜರಾಗುವವರು ಕೃಷಿ ಬಗ್ಗೆ ವಿಶೇಷ ಅಭ್ಯಾಸ ಮಾಡುವುದೊಳಿತು.

ಕನ್ನಡ-ಕನ್ನಡಿಗ-ಕರ್ನಾಟಕ


೧. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಯ ರಚನಕಾರರು ಯಾರು?
೨. 'ಶ್ರೀನಿವಾಸ' ಎಂಬ ಕಾವ್ಯನಾಮ ಯಾವ ಸಾಹಿತಿಯದು?
೩. ಮ್ಯಾಗ್ಸೆಸ್ಸೆ ಪ್ರಶಸ್ತಿಗೆ ಪಾತ್ರರಾದ ಖ್ಯಾತ ವ್ಯಂಗ್ಯಚಿತ್ರಕಾರರು ಯಾರು?
೪. ಕುವೆಂಪು ಅವರ ಮಹಾಕಾವ್ಯದ ಹೆಸರೇನು?
೫. ಕನ್ನಡದ ಎಷ್ಟು ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಸಂದಿದೆ?
೬. ಹೊಸದಾಗಿ ರಚಿತವಾದ ಜಿಲ್ಲೆಗಳು ಎಷ್ಟು? ಅವುಗಳು ಯಾವುವು?
೭. 'ಕರ್ನಾಟಕದ ಮ್ಯಾಂಚೆಸ್ಟರ್'' ಎಂಬ ಖ್ಯಾತಿಯ ನಗರ ಯಾವುದು?
೮. ಕಾವೇರಿ ನದಿಯ ಉಗಮ ಸ್ಥಳ ಎಲ್ಲಿದೆ?
೯. ಕರ್ನಾಟಕದಲ್ಲಿ ಇರುವ ವಿಶ್ವವಿದ್ಯಾಲಯಗಳು ಎಷ್ಟು? (ಕೃಷಿ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ)
೧೦. 'ಭಾರತರತ್ನ' ಪ್ರಶಸ್ತಿ ಪಡೆದ ಖ್ಯಾತ ಇಂಜಿನಿಯರ್ ಹಾಗೂ ಹಿಂದಿನ ಮೈಸೂರಿನ ದಿವಾನರ ಹೆಸರೇನು?

ಉತ್ತರಗಳು

೧. ಹುಯಿಲಗೋಳ ನಾರಾಯಣರಾವ್, ೨. ಮಾಸ್ತಿ ವೆಂಕಟೇಶ ಅಯ್ಯಂಗಾರ್, ೩. ಆರ್.ಕೆ. ಲಕ್ಷ್ಮಣ್, ೪. 'ಶ್ರೀ ರಾಮಾಯಣ ದರ್ಶನಂ', ೫. ಆರು ಸಾಹಿತಿಗಳಿಗೆ ಸಂದಿದೆ (ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಗೋಕಾಕ, ಅನಂತಮೂರ್ತಿ), ೬. ಏಳು (ಚಾಮರಾಜನಗರ, ದಾವಣಗೆರೆ, ಗದಗ, ಬಾಗಲಕೋಟೆ, ಕೊಪ್ಪಳ, ಹಾವೇರಿ, ಉಡುಪಿ), ೭. ದಾವಣಗೆರೆ, ೮. ತಲಕಾವೇರಿ (ಕೊಡಗು ಜಿಲ್ಲೆ), ೯. ಏಳು (ಮೈಸೂರು, ಕರ್ನಾಟಕ, ಮಂಗಳೂರು, ಬೆಂಗಳೂರು, ಗುಲ್ಬರ್ಗಾ, ಕುವೆಂಪು, ಹಂಪಿ ಕವಿವಿ), ೧೦. ಸರ್. ಎಂ. ವಿಶ್ವೇಶ್ವರಯ್ಯ.

○ ಟಿ.ವಿ. ವೆಂಕಟರಮಣಯ್ಯ

ಬ್ಯಾಂಕ್ ಮ್ಯಾನೇಜರ್ ಆಗುವದು ಹೇಗೆ?



ಸುಂದರವಾದ ಗ್ಲಾಸ್ ಚೇಂಬರದಲ್ಲಿ ರಿವಾಲ್ವಿಂಗ್ ಸೋಫಾ ಚೇರ್ ಮೇಲೆ ಕೋಟು ಟೈ ಹಾಕಿಕೊಂಡ ನಗುಮೊಗದ ಗಂಭೀರವಾಗಿ ಕುಳಿತ ಬ್ಯಾಂಕ್ ಮ್ಯಾನೇಜರರನ್ನು ಕಂಡಾಗ ನಾನೂ ಕೂಡಾ ಹಾಗೇ ಆಗಬೇಕೆಂದುಕೊಂಡವರೆಷ್ಟೋ! ನಂತರ ಬ್ಯಾಂಕಿನಿಂದ ಹೊರಗೆ ಬಂದಾಗ ಸಿನಿಮಾ ನಾಯಕಿಯೊಂದಿಗೆ ತಾನೇ ನಾಯಕನಾಗಿ ಕನಸು ಕಂಡವ ಸಿನಿಮಾ ಮುಗಿದೊಡನೆ ಟಾಕೀಸಿನಿಂದ ಹೊರಗೆ ಬಂದಾಗ ರಸಾಭಾಸವಾದಂತೆ ಅನಿಸ ಬಹುದೇನೋ! ಆದರೆ ಪ್ರಯತ್ನ ಪಟ್ಟರೆ ಮಾತ್ರ ಬ್ಯಾಂಕ್ ಮ್ಯಾನೇಜರರಾಗುವದು ಅಸಾಧ್ಯ ನೇನಲ್ಲ.

ಅರ್ಹತೆ ಮತ್ತು ಆಯ್ಕೆ

ವಿದೇಶಗಳಲ್ಲಿಯಂತೆ ಭಾರತದಲ್ಲಿ ಬ್ಯಾಂಕ್ ಮ್ಯಾನೇಜರುಗಳನ್ನು ನೇರವಾಗಿ ನೇಮಕಾತಿ ಮಾಡಿಕೊಳ್ಳುವ ಪದ್ಧತಿ ಇಲ್ಲ. ಆದರೆ ಅಧಿಕಾರಿ ಹುದ್ದೆಗೆ ಮಾತ್ರ ನೇರವಾಗಿ ನೇಮಕಾತಿ ಮಾಡಿ ಕೊಳ್ಳುತ್ತಾರೆ. ಹೀಗೆ ನಿಯಮಿಸಿಕೊಂಡ ಅಧಿಕಾರಿ ಗಳನ್ನು ಸೇವಾ ಜೇಷ್ಠತೆಯ ಮೇಲೆ ಜ್ಯೂನಿಯರ್ ಮ್ಯಾನೇಜ್‌ಮೆಂಟ್, ಮಿಡ್ಲ್ ಮ್ಯಾನೇಜ್‌ಮೆಂಟ್, ಮತ್ತು ಸೀನಿಯರ್ ಮ್ಯಾನೇಜ್‌ಮೆಂಟ್ ಎಂದು ಜೇಷ್ಠತಾ ಪಟ್ಟಿ ಮಾಡಲಾಗುತ್ತದೆ. ಮತ್ತು ಅದರ ಪ್ರಕಾರ ಸೂಕ್ತ ಶಾಖೆಗಳಿಗೆ ಖಾಲಿಯಾದ ಮ್ಯಾನೇಜರ ಹುದ್ದೆಗಳಿಗೆ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಜವಾಬ್ದಾರಿ ವಹಿಸುತ್ತಾರೆ. ಆದ್ದರಿಂದ ಮೊದಲು ಬ್ಯಾಂಕುಗಳಲ್ಲಿ ಅಧಿಕಾರಿ ಗಳಾಗಿ ಸೇರಬೇಕಾಗುತ್ತದೆ. ಹೀಗೆ ಬ್ಯಾಂಕುಗಳಲ್ಲಿ ಖಾಲಿಯಾದ ಸಿಬ್ಬಂದಿ ಸ್ತರಗಳನ್ನು ಆಯಾ ಬ್ಯಾಂಕಗಳ ಬೇಡಿಕೆಗಳಿಗನುಗುಣವಾಗಿ ಆಯ್ಕೆ ಮಾಡಿಕೊಳ್ಳಲೆಂದೇ ಒಂದು ಪ್ರತ್ಯೇಕ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಅದುವೇ ಬಿ.ಎಸ್. ಆರ್.ಬಿ (Banking Service Recruitment Board) ವರು ವಿಭಾಗೀಯ ಮಟ್ಟದಲ್ಲಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣ ರಾಗಬೇಕಾಗುತ್ತದೆ. ಇದಕ್ಕಾಗಿ ಪ್ರಯತ್ನಿಸುವ ಅಭ್ಯರ್ಥಿಯು ಭಾರತದ ಯಾವುದೇ ವಿಶ್ವವಿದ್ಯಾಯದಲ್ಲಿ ಯಾವುದೇ ವಿಷಯದಲ್ಲಿ ಪ್ರತಿಶತ ಐವತ್ತಕ್ಕಿಂತ ಕಡಿಮೆ ಇಲ್ಲದಂತೆ ಅಂಕಗಳನ್ನು ಗಳಿಸಿ ಉತ್ತೀರ್ಣರಾಗಬೇಕು. ಅಂಥವರು ಅಧಿಕಾರಿ (Officer/Accountant) ಹುದ್ದೆಗಾಗಿ ಎಂದು ನಮೂದಿಸಿದ ಪರೀಕ್ಷೆಗೆ

ಆಯಾ ವೃತ್ತಿ, ಹುದ್ದೆಗಳಲ್ಲಿ
ಯಶಸ್ವಿಯಾದವರ ಮೂಲಕವೇ
ವಿದ್ಯಾರ್ಥಿಗಳಿಗೆ ಅಧಿಕೃತವಾಗಿ
ವೃತ್ತಿ ಮಾರ್ಗದರ್ಶನ ಮಾಡಿಸುವ
ವಿನೂತನ ಪ್ರಯೋಗವಿದು.

ಈ ಬಾರಿ ಸಿಂಡಿಕೇಟ್
ಬ್ಯಾಂಕ್ ಉದ್ಯೋಗಿಯಾಗಿರುವ
ಕೇಶವ ಉಮರ್ಜಿ ಅವರು ನಿಮಗೆ
ಈ ಮಾಹಿತಿ ನೀಡಿದ್ದಾರೆ.

ಕುಳಿತುಕೊಳ್ಳಬಹುದು. ಆದರೆ B.S.R.B. ಪರೀಕ್ಷೆಯಲ್ಲಿ ಮಾತ್ರ ಅತಿ ಹೆಚ್ಚಿನ ಅಂಕ ಗಳಿಸುವದು ಅವಶ್ಯ. ಈ ಪರೀಕ್ಷೆಗಳಲ್ಲಿ ಉತ್ತರ ಬರೆಯುವದು ಏನೂ ಇರುವದಿಲ್ಲ. ಅವರೇ ಕೊಟ್ಟ ನಾಲ್ಕು/ಐದು ಉತ್ತರಗಳಲ್ಲಿ ಸರಿಯಾದ ಉತ್ತರ ಸಂಖ್ಯೆಯನ್ನು ಪ್ರತ್ಯೇಕವಾಗಿ ಪೂರೈಸಿದ ಹಾಳೆಯಲ್ಲಿ ಗುರುತು ಮಾಡಬೇಕಾಗುತ್ತದೆ. ಇದನ್ನು ಕಂಪ್ಯೂಟರ್ ಮೂಲಕ ಮೌಲ್ಯಮಾಪನ ಮಾಡಲಾಗುವದರಿಂದ ಅಕ್ರಮಗಳಿಗೆ ಅವಕಾಶವಿರುವದಿಲ್ಲ. ತಪ್ಪು ಉತ್ತರಗಳಿಗೆ, ಪಡೆದ ಅಂಕಗಳಲ್ಲಿ ವಜಾ ಮಾಡುವದರಿಂದ (Negative Marks System) ತನಗೆ ಪರಿಪೂರ್ಣವಾಗಿ ಸರಿ ಎನಿಸಿದ್ದನ್ನು ಮಾತ್ರ ಉತ್ತರಿಸಬೇಕು. ಅನುಮಾನದಿಂದ ಉತ್ತರಿಸಿದರೆ ಪಡೆದ ಅಂಕಗಳನ್ನೂ ಸಹ ಕಳೆದುಕೊಳ್ಳಬೇಕಾಗುವದರಿಂದ ಎಚ್ಚರವಹಿಸುವದು ಉತ್ತಮ. ಸದರಿ ಪರೀಕ್ಷೆಯಲ್ಲಿ ಪಾಸಾದ (ಪ್ರತಿಶತ ಐವತ್ತಕ್ಕಿಂತ ಹೆಚ್ಚು ಅಂಕ ಪಡೆದ) ಅಭ್ಯರ್ಥಿಗಳನ್ನು ಸಂದರ್ಶನಕ್ಕಾಗಿ ಕರೆಯಲಾಗುತ್ತದೆ. ಬ್ಯಾಂಕುಗಳಲ್ಲಿ ಖಾಲಿ ಇರುವ ಹುದ್ದೆಗನುಗುಣವಾಗಿ ಪಾಸಾದ ಅಭ್ಯರ್ಥಿಗಳ ಅತ್ಯುಚ್ಚ

ಅಂಕಗಳನ್ನಾಧರಿಸಿ ಆಯ್ಕೆ ಮಾಡುತ್ತಾರೆ ಮತ್ತು ಅವರಿಗೆ ಆಯಾ ಬ್ಯಾಂಕುಗಳಿಂದ ಜ್ಯೂನಿಯರ್ ಮ್ಯಾನೇಜ್‌ಮೆಂಟ್ ತರಬೇತಿಗಾಗಿ ನೇಮಕಾ ಆಜ್ಞೆಯನ್ನು ಕಳಿಸಲಾಗುತ್ತದೆ. ತರಬೇತಿಂ ನಂತರ ಆಯಾ ಬ್ಯಾಂಕುಗಳು ತಮ್ಮ ಶಾಖೆಗಳ ಖಾಲಿ ಇರುವ ಊರುಗಳಿಗೆ ಆರ್ಡರ್ ಕೊಟ ಕಳಿಸುತ್ತಾರೆ. ಅಲ್ಲಿ ಅವರು ಅಸಿಸ್ಟಂಟ್ ಮ್ಯಾನೇಜರ್ ಅಥವಾ ಅಕೌಂಟೆಂಟ್ ಎಂದ ಕೆಲಸ ಮಾಡಬೇಕಾಗುತ್ತದೆ. ಅಭ್ಯರ್ಥಿಗಳ ಬ್ಯಾಂಕುಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಸ ಬ್ಯಾಂಕುಗಳನ್ನು ಆಯ್ದುಕೊಳ್ಳುವದು ಉತ್ತವ ಏಕೆಂದರೆ ಅವು ತಮ್ಮ ವ್ಯವಹಾರವನ್ನು ಅಭಿವೃ ಪಡಿಸಿಕೊಳ್ಳಲುತ್ಸುಕವಿರುವ ಕಾರಣ ಮೇಲಿಂ ಮೇಲೆ ಶಾಖೆಗಳನ್ನು ವಿಸ್ತರಿಸುತ್ತಾರೆ. ಹಾ ವಿಸ್ತರಿಸಿದ ಶಾಖೆಗಳಿಗೆ ಮ್ಯಾನೇಜರ್‌ಗಳನ ನಿಯಮಿಸುವಾಗ ಈಗಿರುವ ಹಾಲಿ ಅಸಿಸ್ಟಂಟ ಮ್ಯಾನೇಜರುಗಳನ್ನೇ ಹೊಸ ಶಾಖೆಗಳ ಮ್ಯಾನೇಜರುಗಳಾಗಿ ಕಳಿಸುವದರಿಂದ ಅವಕಾ ಹೆಚ್ಚು. ಆದರೆ, ಎಲ್ಲರೂ ದೊಡ್ಡ ದೊಡ್ಡ ಬ್ಯಾಂಕ ಗಳ ಆಕರ್ಷಣೆಗೆ ಒಳಗಾಗಿ ದೊಡ್ಡ ಬ್ಯಾಂಕುಗ ಹೆಸರನ್ನೇ ನಮೂದಿಸುತ್ತಾರೆ. ಅವುಗಳು ತವ ವ್ಯವಹಾರ ವೃದ್ಧಿಸಿಕೊಂಡು ತಟಸ್ಥ (Stagnate ಗೊಂಡು ನಿಂತಿರುತ್ತವೆ. ಹಾಗೆಂದು ಅ ಬೆಳವಣಿಗೆ ಮತ್ತು ಮ್ಯಾನೇಜರ್ ಹುದ್ದೆ ಅಸಂಭ ವೆಂದೇನಲ್ಲ. ಆದರೆ ಸ್ವಲ್ಪ ಮಂದಗತಿ ಅಷ್ಟೆ ಹೀಗಾಗಿ ಅಲ್ಲಿ ಮ್ಯಾನೇಜರ್ ಹುದ್ದೆ ಸಿಗುವದ ವಿಳಂಬವಾಗುತ್ತದೆ. ಮತ್ತು ಒಂದೇ ಶಾಖೆಂ ಬಹಳಷ್ಟು ಕೆಲಸದ ಒತ್ತಡಕ್ಕೆ ಸಿಲುಕಿ ಭ್ರವ ನಿರಸನಗೊಳ್ಳುವ ಸಂಭವವೂ ಇರುತ್ತದೆ. ಆ ರಿಂದ ಜಾಣನಾದವನು 'ಅ' ವರ್ಗದ ಬ್ಯಾಂಕ ಗಳಲ್ಲಿಯೇ ಸಣ್ಣದಾದ್ದನ್ನು ಆಯ್ದುಕೊಳ್ಳಬೇಕು.

ಇನ್ನು ಬ್ಯಾಂಕುಗಳ ಕುರಿತು ಹೇಳುವದಾದ ದೇಶೀಯ ಬ್ಯಾಂಕುಗಳಲ್ಲಿ ಅ, ಬ, ಕ ಎಂದ ಮೂರು ಪ್ರಕಾರಗಳು. ಈ ಮೂರೂ ಪ್ರಕಾರ ಬ್ಯಾಂಕುಗಳ ವೇತನ ಶ್ರೇಣಿಯು ಪ್ರತ್ಯೇಕವಾಗಿ ತ್ತವೆ ಮತ್ತು 'ಕ' ವರ್ಗದ ಸಿಬ್ಬಂದಿಗಳ ನೇಮ ಗಳನ್ನು ಆಯಾ ಬ್ಯಾಂಕುಗಳ ನಿರ್ದೇಶ ಮಂಡಳಿಯೇ ಮಾಡುತ್ತದೆ. ಇನ್ನು ವಿದೇಶಿ ಬ್ಯಾಂಕುಗಳ ನೇಮಕಾತಿಗಳನ್ನು ಸಹ ಅವು ಸ್ವ ಆಯ್ಕೆ ಮಾಡುತ್ತವೆ. ಆದ್ದರಿಂದ IBAನಿಂ



ಕೇಶವ ಉಮರ್ಜಿ

ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿರುವ ಕೇಶವ ಉಮರ್ಜಿಯವರ ಹುಟ್ಟೂರು ಜಮಖಂಡಿ ತಾಲೂಕಿನ ಹುನ್ನೂರು ಗ್ರಾಮ. ಕರ್ನಾಟಕ ವಿಶ್ವವಿದ್ಯಾಲಯದ ಬಿ.ಕಾಂ. ಮತ್ತು ಕನ್ನಡ ಭಾಷಾ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾದ ಇವರು ಕಳೆದ ೨೭ ವರ್ಷಗಳಿಂದ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಒಂದು ಐತಿಹಾಸಿಕ ಕಾದಂಬರಿ, ಎರಡು ಕವನ ಸಂಕಲನ, ಎರಡು ಚರಿತ್ರೆ ಗ್ರಂಥ, ಒಂದು ನಾಟಕ ಕೃತಿ ಇವರ ಸಾಹಿತ್ಯ ಸಾಧನೆ. ಅಲ್ಲದೇ ಜನಪ್ರಿಯ ಪತ್ರಿಕೆಗಳಾದ ಸುಧಾ, ಮಯೂರ, ತುಷಾರ, ಕರ್ಮವೀರಗಳಲ್ಲಿ ಇವರ ಕಥೆ ಪ್ರಕಟಗೊಂಡಿವೆ. ಇವರ ಕಾದಂಬರಿ ಧಾರಾವಾಹಿಯಾಗಿಯೂ ಬೆಳಕು ಕಂಡಿವೆ. ೪೬ ವರ್ಷದ ಇವರು ಒಂದು ಕಾಲಕ್ಕೆ ನಾಟಕಾಭಿನಯದಲ್ಲೂ ಸಾಧನೆ ಮಾಡಿದವರು. ಕೋಮಲೆ ಎಂಬ ಪತ್ನಿ; ಪ್ರತಿಭಾ, ಪ್ರಮೋದ ಪುತ್ರರು - ಇದ್ದು ಇವರ ಸಂಸಾರ ಬಂಡಿ.

ಸದ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ಯುವ ಲೇಖಕರ ವೇದಿಕೆಯ ಗೌರವಾಧ್ಯಕ್ಷರಾಗಿ, ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯದರ್ಶಿಯಾಗಿ, 'ಜಂಬುಕೇಶ್ವರ' ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇಶವ ಉಮರ್ಜಿ
ಸಿಂಡಿಕೇಟ್ ಬ್ಯಾಂಕ್, ಉಮಾರಾಮೇಶ್ವರ ರಸ್ತೆ, ಜಮಖಂಡಿ - ೫೮೭ ೩೦೧
ಜಿಲ್ಲಾ - ಬಾಗಲಕೋಟ

ಅಧಿಕೃತಗೊಂಡ ವಾಣಿಜ್ಯ ಬ್ಯಾಂಕುಗಳ ನೇಮಕಾತಿ ಗಳನ್ನು ಮಾತ್ರ BSRB ಮಾಡುತ್ತದೆ ಮತ್ತು ಬ್ಬಂದಿಗಳಿಗಾಗಿ ಕೋರಿಕೆ ಸಲ್ಲಿಸಿದ ಬ್ಯಾಂಕುಗಳ ಸರುಗಳನ್ನು, ಖಾಲಿ ಇರುವ ಹುದ್ದೆಗಳ ಸಂಖ್ಯೆಗಳ ಸಹಿತ BSRB ಮೊದಲೇ ಪ್ರಕಟಪಡಿಸುತ್ತದೆ. ಕೆಲವು ಸಲ BSRB ಯವರು ಅಗತ್ಯವಿದ್ದ ಬ್ಯಾಂಕಿಗೆ ಕೂಡಲೇ ಆಯ್ಕೆ ಮಾಡಿ ಳಿಸಿಬಿಡುತ್ತಾರೆ. ಆಗ ಅಭ್ಯರ್ಥಿಗಳಿಗೆ ಆಯ್ದುಕೊಳ್ಳುವ ಅವಕಾಶ ಸಿಗುವದಿಲ್ಲ ಅಥವಾ ಅಭ್ಯರ್ಥಿಗಳು ಆಯ್ದು ತಿಳಿಸಿದ ಬ್ಯಾಂಕು ಲಭ್ಯವಾಗದೇ ಹೋಗಬಹುದು.

ಮ್ಯಾನೇಜರನ ಗುಣ ಲಕ್ಷಣಗಳು

ಮ್ಯಾನೇಜರ ಎಂಬುದು ಇಂಗ್ಲೀಷ್ ಪದ. ಹಿಂದಿ ಮತ್ತು ಕನ್ನಡಗಳಲ್ಲಿ ಪ್ರಬಂಧಕ ಎಂದು ಬಳಕೆಗೆ ಬಂದಿದೆ. ಆದರೆ ಇಂಗ್ಲಿಷ್ ಪದವೇ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಏಕೆಂದರೆ ಮ್ಯಾನೇಜ್ ಮಾಡುವವನೇ ಮ್ಯಾನೇಜರ (ವಿಶಾಲ ಅರ್ಥ ವುಳ್ಳದ್ದು). ಇಲ್ಲಿ ಹಣಕಾಸಿನ ವಹಿವಾಟಿನ ಮ್ಯಾನೇಜ್ ಮಾಡಬೇಕಾಗುವದರಿಂದ ಹೆಚ್ಚಿನ ದಕ್ಷತೆ ಬೇಕಾಗುತ್ತದೆ. ಆದ್ದರಿಂದ ಆತ ೧. ದಕ್ಷನಾಗಿರಬೇಕು. ೨. ಪ್ರಾಮಾಣಿಕನಾಗಿರ ಬೇಕು. ದಿನಾಲೂ ಆತನ ಮೂಲಕ ಲಕ್ಷಾಂತರ ರೂಪಾಯಿ ಹಸ್ತಾಂತರವಾಗುವದರಿಂದ ಇಲ್ಲಿ ಪ್ರಾಮಾಣಿಕತೆಗೆ ಹೆಚ್ಚು ಮಹತ್ವ, ಅಲ್ಲದೇ ೩. ನಡೆನುಡಿ ಶುದ್ಧವಾಗಿರಬೇಕು. **೪.** ಹೃದಯ ವೈಶಾಲ್ಯತೆ ಹೊಂದಿರಬೇಕು. **೫.** ಕಾರ್ಯ ನೈಪುಣ್ಯನಾಗಿರ ಬೇಕು. ದಿನದಿಂದ ದಿನಕ್ಕೆ ಬಡ್ಡಿಯ ದರಗಳು ವ್ಯತ್ಯಾಸಗೊಳ್ಳುತ್ತಿರುತ್ತವೆ. ಹಣಕಾಸಿನ ವ್ಯವಹಾರ ದಲ್ಲಿ ಬದಲಾವಣೆಗಳಾಗುತ್ತಿರುತ್ತವೆ. ಪ್ರಧಾನ ಕಾರ್ಯಾಲಯಗಳಿಂದ ಹೊಸ ಹೊಸ ಆದೇಶ (ಸರ್ಕ್ಯುಲರ್‌ಗಳು) ಬರುತ್ತಿರುತ್ತವೆ. ಅವೆಲ್ಲವು ಗಳನ್ನು ಗಮನದಲ್ಲಿಟ್ಟುಕೊಂಡು ಕರ್ತವ್ಯ ನಿರ್ವಹಿಸಬೇಕಾಗತ್ತದೆ. **೬. ದೂರದೃಷ್ಟಿಯುಳ್ಳವ ನಾಗಿರಬೇಕು** : ಸಂದರ್ಭಾನುಸಾರ ಸಿಬ್ಬಂದಿ ಗಳಿಂದ ಕೆಲಸ ತೆಗೆದುಕೊಳ್ಳುವ ಜಾಣ್ಮೆ ಬೇಕಾಗು ತ್ತದೆ. ಎಲ್ಲ ದಿನಗಳಲ್ಲೂ ಕೆಲಸದೊತ್ತಡ ಒಂದೇ ತೆರನಾಗಿರುವದಿಲ್ಲ. ಆದ್ದರಿಂದ ಬಿಡುವಿನ ವೇಳೆಯಲ್ಲಿ ಬಾಕಿ ಇರುವ ಕೆಲಸಗಳನ್ನು ಸಿಬ್ಬಂದಿ ಯಿಂದ ಮಾಡಿಸಿಕೊಳ್ಳಬೇಕಾಗುತ್ತದೆ. ಪ್ರತಿ ತಿಂಗಳು ಮೊದಲಿನ ಹತ್ತು ದಿನಗಳು ಸಂಬಳ, ಪಿಂಚಣಿ ಇತ್ಯಾದಿಗಳಿಗಾಗಿ ಗ್ರಾಹಕ ದಟ್ಟಣೆ ಇರುತ್ತಿದ್ದು ನಂತರದ ಹತ್ತು ದಿನಗಳು ಎಲ್ಲ ಖಾತೆಗಳ ಬ್ಯಾಲನ್ಸಿಂಗ್ ಮತ್ತು ತಾಳೆ ನೋಡುವದ ರಲ್ಲಿ ವ್ಯಯ ಮಾಡಬೇಕು. ತಿಂಗಳಿನ ಕೊನೆಯ ಹತ್ತು ದಿನಗಳು ಮಾತ್ರ ಯಾವುದೇ ಕೆಲಸದೊತ್ತಡ ವಿಲ್ಲದೇ ಇರುವದರಿಂದ ಪ್ರಾಧಾನ್ಯತೆಗನುಗುಣ ವಾಗಿ ವಿವರಣೆ ಪತ್ರಿಕೆ, ನೋಟು ಹೊಂದಾಣಿಕೆ, ಹರಿದ ನೋಟುಗಳನ್ನು ಪಟ್ಟಿ ಮಾಡಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಅಥವಾ ತಮ್ಮದೇ ಆದ ಕರೆನ್ಸಿ ಚೆಸ್ಟಿಗೆ ಕಳಿಸುವದು, ಇತ್ಯಾದಿ ಬಾಕಿ ಇರುವ ಕೆಲಸಗಳನ್ನು ಸೂಕ್ತ ಸಿಬ್ಬಂದಿಗಳಿಂದ ತೆಗೆದು ಕೊಳ್ಳುತ್ತಿರಬೇಕು ಮತ್ತು ಅರ್ಧವಾರ್ಷಿಕ, ಹಣಕಾಸು ಸಂವತ್ಸರಾಂತ್ಯಗಳ ವಿಶೇಷ ವಿವರಣೆ ಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ-

೭. ಆಡಳಿತ ಕೌಶಲ್ಯ: ಬೇಕಾಗುತ್ತದೆ. ಸಿಬ್ಬಂದಿಗಳ ಕಾರ್ಯ ತತ್ಪರತೆಗನುಗುಣವಾಗಿ ಈ ಎಲ್ಲ ಮೇಲಿನ ಕೆಲಸಗಳನ್ನು ಸೂಕ್ತ ಜಾಣ್ಮೆಯಿಂದ ಮಾಡಿಸಿಕೊಳ್ಳಬೇಕು. ವ್ಯಕ್ತಿಯಿಂದ ವ್ಯಕ್ತಿಗೆ ಕಾರ್ಯದಕ್ಷತೆ ವ್ಯತ್ಯಾಸಗೊಳ್ಳುವದರಿಂದ ಸೂಕ್ತ ಸಿಬ್ಬಂದಿಯಿಂದ ಅವರ ಮನ ಒಲಿಸಿ ಕೆಲಸ ಮಾಡಿಸಿಕೊಳ್ಳುವದು ಮ್ಯಾನೇಜರ ಕೌಶಲ್ಯ ವನ್ನವಲಂಬಿಸಿದೆ.

ಜವಾಬ್ದಾರಿ ಮತ್ತು ಕರ್ತವ್ಯ

೧. ಸಮಯ ಪ್ರಜ್ಞೆ : ಸಮಯಕ್ಕೆ ಸರಿಯಾಗಿ ಬ್ಯಾಂಕ್ ವ್ಯವಹಾರ ಪ್ರಾರಂಭ ಮಾಡುವು ಮತ್ತು ಸಮಯಾನುಸಾರ ಕೆಲಸ ಮುಗಿಸುವ ಜವಾಬ್ದಾರಿ ಮ್ಯಾನೇಜರದಾಗಿರುತ್ತದೆ. ಗ್ರಾಹಕರು ಬಂದು ಕೌಂಟರ ಮುಂದೆ ನಿಂತಾಗ ಕೌಂಟರ ಒಳಗೆ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಇರದಿದ್ದರೆ ಮತ್ತು ಸೂಕ್ತ ಫಾರ್ಮುಗಳು ಲಭ್ಯವಿಲ್ಲದೇ ಹೋದರೆ ಗ್ರಾಹಕರ ಕೋಪಕ್ಕೆ ತುತ್ತಾಗಬೇಕಾಗುತ್ತದೆ.

೨. ಚಾಣಾಕ್ಷತನ : ಸಿಬ್ಬಂದಿಗಳಾಗಲಿ, ಗ್ರಾಹಕರಾಗಲಿ, ಒಂದೇ ಮನಃಸ್ಥಿತಿಯಿಂದಬಂದಿ ರುವದಿಲ್ಲ. ಬ್ಯಾಂಕಿಗೆ ಬರುವ ಮೊದಲ ಮನೆ ಯೊಳಗಾಗಲಿ, ಅಥವಾ ಹೊರಗೆಯಾಗಲೀ ಯಾವುದೋ ಒಂದು ಕಾರಣಕ್ಕೆ ಜಗಳವಾಡಿ ಮಾನಸಿಕ ಸ್ಥಿಮಿತ ಕಳೆದುಕೊಂಡು ಅಥವಾ ಉದ್ವೇಗಗೊಂಡು ಬ್ಯಾಂಕಿನೊಳಗೆ ಬದಿರುವ ಪ್ರಸಂಗಗಳೂ ಇರುತ್ತವೆ. ಅಂಥ ಸಂರ್ಭದಲ್ಲಿ ಅವರ ನಡವಳಿಕೆಯಿಂದ ಅಥವಾ ಮಾನಾಡುವ ಪರಿಯಿಂದ ತಿಳಿದುಕೊಂಡು ಅವರನ್ನು ಸೌಮ್ಯಗೊಳಿಸುವ, ಸಮಾಧಾಪಡಿಸುವ ಚಾಣಾಕ್ಷತೆ ಮ್ಯಾನೇಜರರಿಗಿರಬೇಕು. ಇಲ್ಲದಿದ್ದರೆ ಬ್ಯಾಂಕು ರಣರಂಗವಾಗಿ, ಇಡೀ ದಿನದ ಕೆಲಸ (upset minded) ಉದ್ವೇಗ ಮಸ್ಥಿತಿಯಿಂದ ಕೂಡಿ ಒಂದಕ್ಕೆ ನಾಲ್ಕು ತಪ್ಪುಗಳಾ ಸರಿಪಡಿಸ ಲಾಗದ ಬಲೆಯಲ್ಲಿ ಸಿಕ್ಕು ಒದ್ದಾಡೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಮ್ಯಾನೇಜ್ ಮಾನಸಿಕ ಡಾಕ್ಟರರಂತೆ ಕಾರ್ಯ ನಿರ್ವಹಿಸಬೇಕಾಗುತ್ತದೆ.

೩. ಸ್ಥಿತ ಪ್ರಜ್ಞೆ : ಈಗಿನ ದಿನಮಾನಗಳಲ್ಲಿ ಹಣವೆಷ್ಟು ಇದ್ದರೂ ಸಾಲದು. ಕೈತುಂಬ ಸಂಬಳ ಬಂದರೂ ಕೂಡ ವಿಲಾಸೀ ವ್ಯಾಮೋಹಕ್ಕೆ ಮನಸ್ಸೆಳೆದು ತನ್ನ ಕೈಯಲ್ಲೇ ಓಡುವ ಹಣದ

ಕಬಳಿಕೆಗೆ ಈಡಾಗದೇ ನಿಯಂತ್ರಿಸುವ ಸ್ಥಿತಪ್ರಜ್ಞತೆ ಇರಬೇಕು.


೪. ಕಾರ್ಯಕ್ಷಮತೆ : ಸಾಲಕ್ಕಾಗಿ ಬರುವ ಗ್ರಾಹಕರ ಆರ್ಥಿಕ ಪರಿಸ್ಥಿತಿಯನ್ನು ಅರಿಯುವ ಸಾಮರ್ಥ್ಯವಿರಬೇಕು. ಸಾಲ ತೆಗೆದುಕೊಳ್ಳುವವರಲ್ಲಿ ಹೆಚ್ಚಿನವರು ತಮ್ಮ ನೈಜ ಪರಿಸ್ಥಿತಿಯನ್ನು ಮರೆಮಾಚಿ ಭರವಸೆಯ ಭವ್ಯತೆಯ ಮೆರೆಯುವವರೇ ಜಾಸ್ತಿ. ಅವರು ಹೇಳಿದ್ದನ್ನು ನಂಬಿ ನೀವು ಸಾಲ ಕೊಟ್ಟಿರೋ? ಮೇಲಿನವರ ಕೋಪಕ್ಕೆ ತುತ್ತಾಗಿ ನಿಮ್ಮ ವೈಯಕ್ತಿಕ ವರದಿ (ರಿಪೋರ್ಟ್) ಕೆಡಿಸಿಕೊಳ್ಳಬೇಕಾಗುತ್ತದೆ. ಹಾಗೆಂದು ಯಾರಿಗೂ ಸಾಲ ಕೊಡದೆಯೂ ಇರಲಾಗದು. ಬ್ಯಾಂಕಿನ ಲಾಭದಾಯಕ ವ್ಯವಹಾರವೇ ಸಾಲ ಹಂಚಿಕೆ. ನೀವು ಎಷ್ಟು ಹೆಚ್ಚು ಸಾಲ ಕೊಡುತ್ತೀರೋ ಮತ್ತು ಕೊಟ್ಟ ಸಾಲ ಸದುಪಯೋಗವಾಗಿ ಮರಳಿ ಬರುವದೋ ಅದರ ಮೇಲೆ ನಿಮ್ಮ ದಕ್ಷತೆಯನ್ನು ನಿರ್ಣಯಿಸಲ್ಪಡುತ್ತಾರೆ ನಿಮ್ಮ ಮೇಲಾಧಿಕಾರಿಗಳು. ಅದನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವದು ನಿಮ್ಮ ಚಾಣಾಕ್ಷತೆಗೆ ಹಿಡಿದ ಕನ್ನಡಿ ಇದ್ದಂತೆ.

೫. ಸೇವಾ ದಕ್ಷತೆ : ಇಂದಿನ ಪೈಪೋಟಿಯ ದಿನಗಳಲ್ಲಿ ಬಡ್ಡಿಯ ದರಗಳು ಬ್ಯಾಂಕಿನಿಂದ ಬ್ಯಾಂಕಿಗೆ ವ್ಯತ್ಯಾಸವಿರುತ್ತದೆ. ಆಗ ನಿಮ್ಮ ಬ್ಯಾಂಕಿನ ಗ್ರಾಹಕರು ಇತರೆ ಬ್ಯಾಂಕಿನ ಬಡ್ಡಿಯ ಆಕರ್ಷಣೆಗೆ ಒಳಗಾಗಿ ನಿಮ್ಮನ್ನು ತೊರೆಯದಂತೆ ಅವರಿಗೆ ಹೆಚ್ಚಿನ ಸೇವಾ ದಕ್ಷತೆಯನ್ನು ತೋರಿ ಆಕರ್ಷಿಸುವ ಜವಾಬ್ದಾರಿ ಮ್ಯಾನೇಜರರದು.

೬. ವಿಶ್ವಾಸಾರ್ಹತೆ : ಬ್ಯಾಂಕಿನಲ್ಲಿ ಮ್ಯಾನೇಜರ್ ಎಷ್ಟೇ ಒಳ್ಳೆಯವನಿರಲಿ, ಅದರಂತೆ ನಡೆಯದ ಸಿಬ್ಬಂದಿ ಇದ್ದರೆ ನಲ್ಲಿಯಲ್ಲಿ ಸೋಪು ತೊಳೆದಂತೆ. ಮ್ಯಾನೇಜರ ಮಾತಿಗೆ ಬೆಲೆ ಕೊಟ್ಟು ಕೂಡಲೇ ಕೆಲಸ ಮಾಡಿ ಕೊಡಲು ಸಿಬ್ಬಂದಿಯ ವಿಶ್ವಾಸಾರ್ಹತೆ ಗಳಿಸಿಕೊಳ್ಳುವದು ಮ್ಯಾನೇಜರನ ಆದ್ಯ ಕರ್ತವ್ಯ. ಈಗಾಗಲೇ ಹೇಳಿದಂತೆ ಎಲ್ಲ ಸಿಬ್ಬಂದಿಯ ಮನಃಸ್ಥಿತಿ ಮತ್ತು ಕಾರ್ಯದಕ್ಷತೆ ಒಂದೇ ತೆರನಾಗಿರುವದಿಲ್ಲ. ಅದಕ್ಕೆ ತಕ್ಕಂತೆ ಮ್ಯಾನೇಜ್ ಮಾಡುವ ಜವಾಬ್ದಾರಿ ಮ್ಯಾನೇಜರನದು. ವಿಭಿನ್ನ ಜಾತಿ, ವಿಭಿನ್ನ ಪಂಗಡ, ವಿಭಿನ್ನ ಪ್ರದೇಶಗಳಿಂದ ಬಂದಿರುವ ಸಿಬ್ಬಂದಿಗಳಲ್ಲಿ ಸೌಹಾರ್ದತೆಯನ್ನುಂಟು ಮಾಡುವದು ಕೂಡ ಮ್ಯಾನೇಜರನಜವಾಬ್ದಾರಿಗಳಲ್ಲಿ ಒಂದು.

೭. ಕಂಪ್ಯೂಟರ್ ಜ್ಞಾನ : ಗ್ರಾಹಕರ ತತ್‌ಕ್ಷಣದ ಸೇವೆಗೆ ಕಂಪ್ಯೂಟರುಗಳ ಬಳಕೆ ಬ್ಯಾಂಕುಗಳಲ್ಲಿ ಬಂದಿವೆ. ಅವುಗಳ ನಿರ್ವಹಣೆಗೆ ತರಬೇತಿ ಸಿಬ್ಬಂದಿ ಇದ್ದರೂ ಕೂಡ ಮ್ಯಾನೇಜರರಿಗೆ ಪ್ರಾಥಮಿಕ ಜ್ಞಾನವಿರುವದು ಅವಶ್ಯ. ಆದರೆ ಅವು ಕೇವಲ VLB ಗಳಲ್ಲಿ ಅಂದರೆ ದೊಡ್ಡ ನಗರಗಳ ಅತಿ ದೊಡ್ಡ ಶಾಖೆಗಳಲ್ಲಿ ಸ್ಥಾಪನೆಗೊಂಡಿರುವದರಿಂದ ಮತ್ತು ಅಲ್ಲಿಯ ಮ್ಯಾನೇಜರುಗಳು SM-II, III ಗ್ರೇಡದವರಿರುವದರಿಂದ ಅವರಲ್ಲಿ ಅನುಭವ, ಕಂಪ್ಯೂಟರ್ ಜ್ಞಾನ ಇರುತ್ತದೆ.

ಒಟ್ಟಿನಲ್ಲಿ ಬ್ಯಾಂಕ್ ಶಾಖೆ ಎಂದರೆ ಹಣಕಾಸಿನ ಸಾಗರದಲ್ಲಿ ಚಲಿಸುವ ನಾವೆ ಇದ್ದಂತೆ. ಮ್ಯಾನೇಜರ್ ಈ ನಾವೆಯ ನಾವಿಕ. ನಾವಿಕ ನಾವೆಯನ್ನು ಸುರಕ್ಷಿತವಾಗಿ ನಡೆಸಬೇಕಾದರೆ ಸಂಯೋಜನೆ, ನಿಯಂತ್ರಣ, ಸಹಕಾರ ಮನೋಭಾವ, ನಿರ್ದಾಕ್ಷಿಣ್ಯ-ನಿಷ್ಪಕ್ಷಪಾತಿಯೂ, ದೂರದರ್ಶಿಯೂ, ಕಾನೂನಿನ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸುವವನೂ, ತಾಳ್ಮೆಯಿಂದ ಚರ್ಚಿಸಿ, ವಿವೇಕದಿಂದ



ಬಗೆಹರಿಸುವವನೂ ಸತ್ಯ ನುಡಿಯುವ, ಕೀರ್ತಿ ಬಯಸದ ಉದಾತ್ತ ಗುಣದವನಾಗಿರಬೇಕು.

ಒಬ್ಬನೇ ಮ್ಯಾನೇಜರ್ ಇವೆಲ್ಲ ಆಗಿರಲು ಸಾಧ್ಯವೇ? ಎನಿಸಬಹುದು. ಆಗಿರದೇ ಇರುವವರನ್ನು ತಾವು ನೋಡಿರಲೂಬಹುದು. ಆದರೆ ಯಶಸ್ವೀ ಮ್ಯಾನೇಜರ್ ಎಂದು ಕರೆಸಿಕೊಂಡು ಮುಂದಿನ ಉನ್ನತ ಶ್ರೇಣಿಗಳನ್ನೇರಲು ಮಾತ್ರ ಇವು ಅತ್ಯಾವಶ್ಯಕ.

ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯದ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯ ಕಿರುಜಲಾನಯನಗಳಲ್ಲಿ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಪುರುಷ/ಸ್ತ್ರೀ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ. ೨೫೦೦-೦೦ಗಳ ಕ್ರೋಢೀಕೃತ ಶಿಷ್ಯ ವೇತನವನ್ನು ನೀಡಲಾಗುವುದು. ಇದಕ್ಕೆ ಹೊರತು ಬೇರೆ ಯಾವುದೇ ಭತ್ಯೆಗಳು ಲಭ್ಯವಿರುವುದಿಲ್ಲ. ಅಭ್ಯರ್ಥಿಗಳು ನೇಮಕಾತಿ ದಿನಾಂಕದಿಂದ ಒಪ್ಪಂದದ ಮೇರೆಗೆ ಒಂದು ವರ್ಷದ ಕಾಲದವರೆಗೆ ಮಾತ್ರ ತರಬೇತಿ ನೀಡಲಾಗುವುದು ಮತ್ತು ಯಾವುದೇ ಕಾರಣಕ್ಕೆ ಅವಧಿಯನ್ನು ಮುಂದುವರೆಸಲಾಗುವುದಿಲ್ಲ.

ವಿದ್ಯಾರ್ಹತೆ : ಅಭ್ಯರ್ಥಿಗಳು ಕೃಷಿ/ತೋಟಗಾರಿಕೆ/ಅರಣ್ಯ ವಿಜ್ಞಾನಗಳಲ್ಲಿ ಯಾವುದೇ ವಿಭಾಗದಲ್ಲಿ ಮೊದಲನೇಯ ದರ್ಜೆ ಸ್ನಾತಕೊತ್ತರ ಪದವಿಯನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಎರಡನೆಯ ದರ್ಜೆ ಸ್ನಾತಕೋತ್ತರ ಪದವಿಗೆ ಸಡಿಲಿಸಲಾಗಿದೆ.

ವಯೋಮಿತಿ : ದಿನಾಂಕ ೨೫.೨.೧೯೯೮ರಂದು ಕನಿಷ್ಠ ೨೫ ವರ್ಷ ಮತ್ತು ಗರಿಷ್ಠ ೩೦ ವರ್ಷದೊಳಗಿರಬೇಕು. (ಹಿಂದುಳಿದ ವರ್ಗಗಳಿಗೆ ೩೨ ವರ್ಷ, ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ೩೫ ವರ್ಷಗಳವರೆಗೆ ಗರಿಷ್ಠ ಮಿತಿಯನ್ನು ಸಡಿಲಿಸಲಾಗಿದೆ)

ಅರ್ಜಿ ಸಲ್ಲಿಸುವ ವಿಧಾನ : ಈ ಅಧಿಸೂಚನೆ ಜೊತೆಯಲ್ಲಿ ನೀಡಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಬಿಳಿ ಹಾಳೆಯ ಮೇಲೆ ಪೂರ್ಣವಾಗಿ ತುಂಬಿ ಇದರೊಂದಿಗೆ ೨ ಪಾಸ್‌ಪೋರ್ಟ್ ಭಾವಚಿತ್ರ ಮತ್ತು ರೂ.೨೦. ಗಳ ಪೋಸ್ಟಲ್ ಆರ್ಡರನ್ನು (ಮರುಪಾವತಿ ಮಾಡಲಾಗುವುದಿಲ್ಲ) ಕೃಷಿ ನಿರ್ದೇಶಕರು, ಬೆಂಗಳೂರು ಇವರಿಗೆ ಸಂದಾಯವಾಗುವಂತೆ ಪಡೆದು ಲಗತ್ತಿಸಬೇಕು. ಅರ್ಜಿಯನ್ನು ಎಲ್ಲಾ ದಾಖಲೆಗಳೊಂದಿಗೆ ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು-೫೬೦ ೦೦೧ ಇವರಿಗೆ ದಿನಾಂಕ ೨೫.೨.೧೯೯೮ರ ಸಂಜೆ ೫.೦೦ ಗಂಟೆಗೆ ಸೇರುವಂತೆ ಕಳುಹಿಸುವುದು.

ಅಪ್ರೆಂಟಿಸ್ ತರಬೇತಿ ಪಡೆಯುವ ಅರ್ಜಿ ನಮೂನೆ : ೧. ಅಭ್ಯರ್ಥಿಯ ಹೆಸರು ೨. ತಂದೆಯ ಹೆಸರು ೩. ಖಾಯಂ ವಾಸ ಸ್ಥಳದ ವಿಳಾಸ ೪. ಸಂಪರ್ಕ ವಿಳಾಸ ೫. ರಾಷ್ಟ್ರೀಯತೆ ೬. ಜನ್ಮ ದಿನಾಂಕ (ದೃಢೀಕರಣದೊಂದಿಗೆ) ೭. ಜನ್ಮಸ್ಥಳ ೮. ವಿದ್ಯಾರ್ಹತೆ (ದಾಖಲೆಗಳೊಂದಿಗೆ) ೯. ಹೆಚ್ಚುವರಿ ವಿದ್ಯಾರ್ಹತೆ ೧೦. ಅನುಭವ ೧೧. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳು ಇತ್ಯಾದಿ (ದಾಖಲೆಗಳೊಂದಿಗೆ) ೧೨. ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಸಂಖ್ಯೆ ಮತ್ತು ವಿಳಾಸ ೧೩. ಪೋಸ್ಟಲ್ ಆರ್ಡರ್ ಮಾಹಿತಿಗಳು.

ದೃಢೀಕರಣ : ನಾನು ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ. ಸದರಿ ಯಾವುದೇ ಮಾಹಿತಿಗಳು ಸತ್ಯಕ್ಕೆ ದೂರವೆಂದು ಸ್ಥಿರಪಟ್ಟಲ್ಲಿ ಸರ್ಕಾರವು ಗೊತ್ತುಪಡಿಸಿರುವ ಯಾವುದೇ ಕ್ರಮಕ್ಕೆ ನಾನು ಬದ್ಧನಾಗುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ.

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-೪

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

ನಿಯಮ VII

Superlative degree (ತಮ ಅಂದರ ಎಲ್ಲಕ್ಕೂ ಶ್ರೇಷ್ಠವೆನ್ನುವದನ್ನು ತೋರಿಸುವ)ಯನ್ನು ಉಪಯೋಗಿಸಿದಾಗ ಅಲ್ಲಿ "The" ಉಪಪದ ಇರುವದು ಅವಶ್ಯ. ಉದಾ: The best girl. The darkest boy.

ಜಾನಕಿ : Live ಜಾನ್ ಹೌದಲ್ಲೊ?

ಜಾನ್ : ರೈಟ್. The most beautiful girl....?

ನಿಯಮ VIII

ಸಂಗೀತದ ವಾದ್ಯವನ್ನು ಹೇಳುವಾಗ "the" ಬೇಕು. The flute, The harmonium, etc.

ಜಾನಕಿ : The mouth-organ.

ಜಾನ್ : ಓ.ಕೆ. ಈಗ ಹೇಳು ಇಂಗ್ಲಿಷ್ ಡಿಫಿಕಲ್ಟ್?

ಜಾನಕಿ : ನಿನ್ನಂಥ ಗುರು ಸಿಕ್ಕರ ಎಲ್ಲಾ ಸೋವಿ.

ಜಾನ್ : ಗುರುವಿನ ಗುಲಾಮನಾಗುವತನಕ..... ಅನ್ನುದನ್ನು ಕೇಳಿದಿಯಲ್ಲಾ! ಇರಲಿ. ಮುಂದಿನ

ನಿಯಮ IX

ಸಂಖ್ಯಾವಾಚಕ (ಅಂದರ ಗೊತ್ತಾಯಿತಿಲ್ಲೊ) ಇದ್ದಾಗ ಅಲ್ಲಿಯೂ "the" ಉಪಪದ ಬರುತ್ತದೆ.

ಉದಾ: 1. Karna was the first man to come.

2. The sixth episode of this serial is not interesting.

ಜಾನಕಿ : ಇವನ್ನೆಲ್ಲ ನೆನಪಿಡುವದ್ಹೆಂಗ?

ಜಾನ್ : ಇದು ರೂಢಿ ಮಾಡಿಕೊಳ್ಳಬೇಕು. ಓದುವಾಗ, ವಿಶೇಷವಾಗಿ News paper ಓದುವಾಗ ಹೆಚ್ಚು ಗಮನವಿಟ್ಟು ಓದುವದಾಗಬೇಕು. ಆಮೇಲೆ ಕೈಯು ನೇರವಾಗಿ ಬಾಯಿಗೆ ತುತ್ತನ್ನೂ ಒಯ್ಯುವಂತೆ... ಇದು.

ಜಾನಕಿ : ಏನಾದರ ಕೇಳಿದರ ಭಾಷಣ ಸುರು ಮಾಡ್ತಿ. ನೀನು... ಮುಂದ್ಹೇಳು.

ನಿಯಮ X

ಜಾನ್ : ನಾಮಪದ ಗುಪ್ತವಾಗಿದ್ದು (understood) ಅಲ್ಲಿ ವಿಶೇಷಣ ಮಾತ್ರ ಉಪಯೋಗಿಸಿದಾಗಲೂ "the" ಬೇಕು. ಆ ವಿಶೇಷಣ-ಪದವು ನಾಮಪದದ ಅರ್ಥವನ್ನು ಸೂಚಿಸುವದು.

ಉದಾ: i. The poor in India cannot have two meals a day.

ಇಲ್ಲಿ The poor ಇದು The poor Indian ಪದವನ್ನು ಸೂಚಿಸುವದು.

ii. The wise are really modest.

iii. The rich should take care of thier Children.

ಜಾನಕಿ : The dull should work hard?

ಜಾನ್ : ನಿನ್ನ ಉದಾಹರಣೆ ಇದು....?

ಜಾನಕಿ : ಆದ್ದರಿಂದಲೇ ನಾನು ಹೇಳಿದ್ದು. ಇನ್ನೂ ಎಷ್ಟು ನಿಯಮ ಆದಾವು?

ಜಾನ್ : ಕೇವಲ ಎರಡು ಮಾತ್ರ...

ನಿಯಮ XI

ತುಲನಾತ್ಮಕ ಸಂದರ್ಭದಲ್ಲಿ Comparative ಕ್ರಿಯಾ ವಿಶೇಷಣಕ್ಕೂ "the" ಉಪಪದವನ್ನು ಬಳಸುತ್ತಾರೆ.

ಉದಾ: The more you get, the more you want.

ಇಲ್ಲಿ more ಇದು get (verb) ಮತ್ತು want (verb) ಇವುಗಳಿಗೆ ಅನ್ವಯಿಸುತ್ತದೆ. ಇಂಥವುಗಳನ್ನು ವಿಶೇಷ ಗಮನದಲ್ಲಿರಿಸಿಕೊಳ್ಳುವದು ಅವಶ್ಯ.

ಜಾನಕಿ : The more you understand the more you want to learn.

ಜಾನ್ : Right.

ನಿಯಮ XII

ನಾಮಪದಕ್ಕೆ ಹೆಚ್ಚು ಒತ್ತು ಹೇಳುವ ಪ್ರಸಂಗದಲ್ಲಿ "the" ಅವಶ್ಯ "Proper Noun"ಗೆ ಉಪ ಪದ ಬೇಡ.

ಉದಾ: The verb is the word in a sentence. ಇಲ್ಲಿ verb-ದ ಮಹತ್ವ ಹೇಳುವದರ ಸಲುವಾಗಿ word ದ ಹಿಂದೆ "the" ಉಪಯೋಗಿಸಿದೆ.

ಜಾನ್ : ಖಚಿತವಾಗಿರದ ವಸ್ತು, ಪ್ರಾಣಿ ವಿಚಾರ ಕುರಿತು ಹೇಳುವಾಗ ಉಪಯೋಗಿಸುವ ಉಪಪದವನ್ನು ಕುರಿತು ತಿಳಿಯೋಣ. ಏ ಜಾನಕಿ, ಉಪಪದ ಯಾವುದು ಹೇಳು.

ಜಾನಕಿ : A ಮತ್ತು An - ಹೌದಲ್ಲೊ?

ಜಾನ್ : ಕರೆಕ್ಟ್, ನೀನು ಯಾವಾಗಲೂ ರೈಟ್.

ಜಾನಕಿ : ಹಾಗಾದರೆ ನಿನ್ನ ಇಂಗ್ಲಿಷ್ ಇಷ್ಟನ! ಇದೆಂತಹದೊ...

ಜಾನ್ : ಜಾನಕಿ, ಇದು ಪಾಯಾ ಇದ್ದಂತೆ. ಇದು ಗಟ್ಟಿಯಾದರೆ ಕಟ್ಟಡ ಗಟ್ಟಿ ಅಲ್ವಾ?

ಜಾನಕಿ : ಹೌದು, ಮೇಷ್ಟ್ರೇ. ಪಾಠ ಮುಂದುವರಿಸಿರಿ.

ಜಾನ್ : ಖಚಿತವಾಗಿರದ ಉಪಪದಗಳನ್ನು ಅಳವಡಿಸಲು ನಾಕ್ಕೇ-ನಾಲ್ಕು ನಿಯಮಗಳಿವೆ.

ನಿಯಮ I

ಸಂಖ್ಯಾ ಭಾವವನ್ನು ಸೂಚಿಸಲು ಖಚಿತವಾಗಿರದ ಉಪಪದ ಉಪಯೋಗಿಸಲಾಗುವದು. ಉದಾಹರಣೆ

100 centimetres make a meter ಒಂದೇ ಮೀಟರ್ ಸೂಚಿಸಲು ಉಪಯೋಗಿಸಲಾಗಿದೆ.

ಜಾನಕಿ : ನಾನು ಹೇಳಿಲೆ - I said not a word

ಜಾನ್ : ಗುಡ್.

ನಿಯಮ II

ಯಾವದೋ ಒಂದನ್ನು ಅನಿರ್ದಿಷ್ಟವಾಗಿರುವದನ್ನು ಹೇಳುವಾಗಲೂ ಸಹ

ಉದಾ: i. When I was going to office I saw a beggar

ii. Yesterday an elephant had core

ನಿಯಮ III

ಆಯಾ ವರ್ಗದಿಂದ ಬೇರ್ಪಡಿಸಿದರೂ ಆ ವರ್ಗ ಸೂಚಿಸುವ ಶಬ್ದಕ್ಕೆ (Noun) ಸಹ ಉಪಪದ ಅವಶ್ಯ. ಉದಾ:

A cow is useful animal to the Indian farmer

ಏ ಜಾನಕಿ, ಕೇಳು. ಕೊನೆಯ ನಿಯಮ.

ನಿಯಮ IV

ಅಂಕಿತ ನಾಮವನ್ನು ರೂಢನಾಮಕ್ಕೆ ಸಮಾನವಾಗಿ ಬಳಸಿದಾಗಲೂ ಖಚಿತವಾಗಿರದ ಉಪಪದ ಬೇಕು. ಉದಾ -

A Danicl came to judgement (A Danicl ಇದು wise --------- man ಸೂಚಿಸುವದು)

ಜಾನಕಿ : ಮುಗಿಯಿತೆ? ಉಪಪದ ಉಪಯೋಗ....

ಜಾನ್ : ಬೇಸರ ಮಾಡಿಕೊಂಡರೆ ನೀನು ಕಲಿತ ಹಾಗಾಯ್ತು. ಕಲಿಯುವಾಗ ಉತ್ಸಾಹದಿಂದಿರಬೇಕು.

ಜಾನಕಿ : ನೀನು ಹೇಳುವ ಹಾಂಗ ಅದ. A John came to the end of the lesson, ಅಂದರ, ಮೇಷ್ಟ್ರು ಪಾಠ ಮುಗಿಸಿದರು ಅಂತಾ. ಇಲ್ಲಿ A John ಮೇಷ್ಟ್ರ ಪ್ರತೀಕ ಅನ್ನಬಹುದೇ?

ಜಾನ್ : ಅನ್ನಬಹುದು. ಆ ಮೇಷ್ಟ್ರು ಅಷ್ಟು ಪ್ರಸಿದ್ಧರಾಗಿರಬೇಕು.

ಜಾನಕಿ : ನನಗೂ ಮಾತಾಡಲಿಕ್ಕೆ ಸ್ವಲ್ಪ ಸ್ವಲ್ಪ ಅವಕಾಶ ಕೊಡು.

ಜಾನ್ : ಈಗ ಆಯಿತಲ್ಲಾ? ಇನ್ನು ಉಪಪದ ಎಲ್ಲಿ ಉಪಯೋಗಿಸಬಾರದು ಎನ್ನುವದನ್ನು ಕಲಿಯೋಣ. ಇದು Negative aspect ಅಂದರ ನಿಷೇದಾರ್ಥಕ ಮುಖ. ಇಲ್ಲಿಯವರೆಗೆ ಕಲಿತಿದ್ದು Positive aspect ನಿಶ್ಚಿತಾರ್ಥಕ.

ಜಾನಕಿ : Positive aspect ಒಂದು ಉದಾಹರಣೆ. I learn the use of articles. ಹೌದೇನು? I am not a lazy girl ಇದು ನಿಷೇದಾರ್ಥಕ ವಾಕ್ಯ ಹೌದೇನೊ?

ಜಾನ್ : ವೆರಿ ಗುಡ್, ವೆರಿ ಗುಡ್ - ಇದರಲ್ಲಿಯ

ನಿಯಮ I
(Common Noun)

ರೂಢ ನಾಮಪದಕ್ಕೆ- Man, Child etc. ಉಪಪದ ಬೇಡ.

ಉದಾ: i. Child is wiser than man.

ii. Man is mortal.

ನಿಯಮ II

ದೇಶ, ನಗರ, ಗ್ರಾಮ, ಮನುಷ್ಯ ಮುಂತಾದ ಅಂಕಿತನಾಮ (Proper Noun) ಪದಗಳಿಗೆ ಉಪಪದ ಅವಶ್ಯವಿಲ್ಲ.

ಉದಾ : Bangalore is a metropolitan city.

Bombay is on the west coast.

Janaki learns English quickly

Ram will marry Janaki.


ಜಾನಕಿ : ಸಾಕಪ್ಪಾ ಸಾಕು. ಮುಂದಿನ ನಿಯಮ ಹೇಳು.

ಜಾನ್ : ಸರಿ, ಮುಂದಿನ ನಿಯಮ ಈಗ ಬೇಡ.

ಜಾನಕಿ : ಕ್ಲಾಸ್ ಮುಗಿಯಿತೇನು?

ಜಾನ್ : ಇನ್ನೂ ಹತ್ತು ನಿಮಿಷ ಇದೆ. ಹೆಣ್ಣು ಮಕ್ಕಳಿಗೆ ಅಲಂಕಾರ ಅಂದರ ಪ್ರೀತಿ ಅಲ್ಲಾ, ಜಾನಕಿ.

ಜಾನಕಿ : ನಿನಗೆ ಅಲ್ಲಾಕ?



ಜಾನ್ : ಭಾಷೆನೂ ಮಹಿಳೆ ಇದ್ದಾಂಗ... ಅದಕ್ಕೂ ಅಲಂಕಾರ ಇದ್ದ ಚಂದ ಕಾಣ್ತದ. ಸುಂದರವಾಗ್ತದ. ಅದರಿಂದ ಅದನ ಕಲಿಬೇಕು.

ಜಾನಕಿ : ನೀನು ಹಾದಿ ಬಿಡ್ತಾ ಇದ್ದಂಗ ಅದ?

ಜಾನ್ : ಇಲ್ಲಮ್ಮಾ ಇಲ್ಲ. ಈ ತಿಂಗಳ ಪರೀಕ್ಷಾ ಇದೆ. ಅದಕ್ಕೆ ಒಂದೆರ ಅಲಂಕಾರ ಹೇಳ್ತೇನೆ. ಅಲಂಕಾರಗಳಿಗೆ ಇಂಗ್ಲಿಷ್‌ನಲ್ಲಿ Figur of Speech ಅಂತಾರ.

ಜಾನಕಿ : ನನಗಂತೂ ಉಪಯೋಗ ಇಲ್ಲಾ. ಉಳಿದವರಿಗೆ ಉಪಯೋ ಐತಿ ಅಲ್ಲಾ, ಹಾಗಾದರೆ ಹೇಳು.

ಜಾನ್ : ಕವಿ ಕಾಳಿದಾಸನ ಸಿನೇಮಾ ನೋಡಿದಿಯಲ್ಲ? ಆ ಕಾಳಿದಾ ಉಪಮಾ ಅಲಂಕಾರ ಬಳಸುವದರಲ್ಲಿ ಎತ್ತಿದ ಕೈ. ಅವ ಮೀರಿದವರಿಲ್ಲ. ಶಾಕುಂತಲಾ, ಕುಮಾರ ಸಂಭವದಲ್ಲಿ ಪಾರ್ವ ವರ್ಣನೆ ನೀನು ಕೇಳಬೇಕು.

ಜಾನಕಿ : ನೀನು ಯಾರ ಅಲಂಕಾರ ಹೇಳ್ತಿ?

ಜಾನ್ : ಸಾರಿ.

I - ಉಪಮಾ ಅಲಂಕಾರ - Simile

ಬೇರೆ ಬೇರೆ ವಿಧದ ವಸ್ತು, ಪ್ರಾಣಿ, ವಿಚಾರಗಳನ್ನು ಒಂದಕ್ಕೊಂ ಹೋಲಿಸಿ, ಆಗ like, as..........as ಶಬ್ದಗಳನ್ನು ಉಪಯೋಗಿಸಿದಲ್ಲಿ ಅಲಂಕಾರ ಉಪಮಾ ಅಲಂಕಾರವಾಗುವದು. ಇತ್ತೀಚೆಗೆ ಒಂ ವಿಧದವುಗಳು ಹೋಲಿಸಲಾಗುವುದು. (ಮೊದಲು ಇದನ್ನು ಪರಿಗಣ ಲಾಗುತ್ತಿದ್ದಿಲ್ಲ.)

ಉದಾ : 1. You listen like a cat.

2. Usha runs as fast as deer.

3. Bhima eats like a wolf.

4. Janaki is as wise as Gargi.

II ರೂಪಾಲಂಕಾರ

Metaphaor ಇಲ್ಲಿ like, as.......as ಉಪಯೋಗಿಸದೇ ಹೋಲ ಮಾಡಲಾಗುದು.

1. World is a stage.
2. Camel is the ship of desert.

ಕೊನೆಯ ಹನಿ

ಜಾನ್ : 1. Rama Killed ------------ deer.

2. Dronacharya was ---------- teacher of Kouravas and Pandavas.

3. He was ---------- student.

4. ---------- Rose is Sweet.

ಜಾನಕಿ : 1. a 2. the 3. a 4. The

(ಮುಂದುವರಿಯುವದು)

ಟಿ.ವಿ.ಯಲ್ಲಿ ಉದ್ಯೋಗಾವಕಾಶಗಳು

○ ಬಿ.ಎಸ್. ತಿಪ್ಪೇಸ್ವಾಮಿ

ಸುಮಾರು ಐದು ವರ್ಷಗಳ ಹಿಂದೆ ಮೂಹ ಮಾಧ್ಯಮಗಳಲ್ಲಿ ಒಂದಾದ ಟಿ.ವಿ. ಕ್ಷೇತ್ರ ಬಹಳ ಹಿಂದುಳಿದಿತ್ತು. ಜನರು ಬರೀ ದೂರದರ್ಶನದ ಕಳಪೆ ಕಾರ್ಯಕ್ರಮಗಳನ್ನು ನೋಡಿ ಬೈಯ್ದುಕೊಳ್ಳಬಹುದಾಗಿತ್ತೇ ಹೊರತು ಪ್ರೇಕ್ಷಕನಿಗೆ ಆಯ್ಕೆ ಮಾಡಲು ಚಾನಲ್‌ಗಳೇ ಇರಲಿಲ್ಲ. ಆದರೆ ಇಂದು ಟಿ.ವಿ. ಕ್ಷೇತ್ರ ಯಾವ ಮಟ್ಟದಲ್ಲಿ ಮುಂದುವರೆದಿದೆ ಎಂದರೆ ನೀವು ರೇಡಿಯೋ ಸ್ಟೇಷನ್‌ಗಳನ್ನು ಬದಲಿಸಿದಂತೆ ಟಿ.ವಿ.ಚಾನಲ್‌ಗಳನ್ನು ಬದಲಾಯಿಸಬಹುದು. ಇಂದು ಭಾರತದಲ್ಲಿ ಮುಖ್ಯವಾಗಿ ಕಾರ್ಯನಿರ್ವಹಿಸುವ ಚಾನಲ್‌ಗಳ ಸಂಖ್ಯೆ ಕಡಿಮೆ ಎಂದರೂ ೫೦.

ಇದ್ದಕ್ಕಿದ್ದ ಹಾಗೆ ಟಿ.ವಿ. ಕ್ಷೇತ್ರದಲ್ಲಿ ಆದ ಈ ಕ್ರಾಂತಿಯಿಂದ ಕ್ರಿಯಾಶೀಲರಿಗೆ ಮತ್ತು ನುರಿತ ತಂತ್ರಜ್ಞರಿಗೆ ಎಲ್ಲಿಲ್ಲದ ಬೇಡಿಕೆ ಬಂದಿತು. ಕೇವಲ ಕ್ಯಾಮರಾ ಅಸಿಸ್ಟೆಂಟ್‌ಗಳು ದಿನಕ್ಕೆ ಮೂರು ಶಿಫ್ಟ್ ಕೆಲಸ ಮಾಡಿದರೆ ಒಬ್ಬರು ೧೦೦೦೦ ರೂ ವರೆಗೆ ಪಗಾರ ಸಂಪಾದಿಸುವ ಅವಕಾಶ ಬಂದಿತು. ತಿಂಗಳಿನಲ್ಲಿ ಕನಿಷ್ಠವೆಂದರೂ ೧೫ ದಿನವಾದರೂ ಇವರಿಗೆ ಕೆಲಸವಿರುತ್ತದೆ. ಇಷ್ಟೊಂದು ಹಣ ಗಳಿಸಲು ಇವರಿಗೆ ಇರುವ ಅರ್ಹತೆ ಏನೆಂದರೆ, ಸುಮಾರು ಶೇಕಡಾ ೭೫ರಷ್ಟು ಜನರು ಎಸ್ಸೆಸ್ಸೆಲ್ಸಿ, ಪಿ.ಯು.ಸಿ. ಅಥವಾ ಅದನ್ನು ಪಾಸಾಗದವರು ಮನೆ ಬಿಟ್ಟು ಬೆಂಗಳೂರಿನ ಸ್ಟುಡಿಯೋಗಳಲ್ಲಿ ಸ್ಟುಡಿಯೋ ಬಾಯ್‌ಗಳಾಗಿ, ಇಂದು ಕ್ಯಾಮರಾ ಅಸಿಸ್ಟೆಂಟ್‌ಗಳಾಗಿ ಇನ್ನೂ ಬುದ್ಧಿವಂತರು ಎಡಿಟರ್ ಮತ್ತು ಛಾಯಾಗ್ರಾಹಕರಾಗಿದ್ದಾರೆ. ಉಳಿದ ಶೇ. ೨೫ರಷ್ಟು ಜನರು ನಮ್ಮ ಬೆಂಗಳೂರಿನಲ್ಲಿರುವ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಎಸ್ಸೆಸ್ಸೆಲ್ಸಿಯ ನಂತರ ಡಿಪ್ಲೊಮಾ ಪಡೆದು ಬಂದವರು.

ಈ ಇನ್‌ಸ್ಟಿಟ್ಯೂಟ್‌ನಲ್ಲಿ ರಾಷ್ಟ್ರಮಟ್ಟದಲ್ಲಿ ಛಾಯಾಗ್ರಾಹಕ ಮತ್ತು ನಿರ್ದೇಶಕರಾಗಿ ಖ್ಯಾತಿ ಹೊಂದಿರುವ ಗೋವಿಂದ್‌ನಿಲಾನಿಯಿಂದ ಕನ್ನಡದ ಪ್ರಸಿದ್ಧ ಛಾಯಾಗ್ರಾಹಕರಾದ ಗೌರಿಶಂಕರ್ ಕೂಡ ಇಲ್ಲಿ ಡಿಪ್ಲೊಮಾ ಪಡೆದವರು. ಈ ಸಂಸ್ಥೆಯಲ್ಲಿ ಛಾಯಾಗ್ರಹಣ ಡಿಪ್ಲೊಮಾ ಪಡೆದ ಎಷ್ಟೋ ಹುಡುಗರು ಇಂದು ನ್ಯೂಸ್‌ಟ್ರಾಕ್, ಎನ್‌ಡಿ.ಟಿ.ವಿ., ಈ.ಟಿ.ವಿ., ಟಿ.ವಿ.ಐ. ಎ.ಬಿ.ಎನ್. ಟಿ.ವಿ.ಗಳಲ್ಲಿ ಕನಿಷ್ಠ ತಿಂಗಳಿಗೆ ೨೦,೦೦೦ ರೂ ಸಂಬಳ ಪಡೆಯುತ್ತಿದ್ದಾರೆ. ದೂರದರ್ಶನಗಳಲ್ಲಿಯು ಛಾಯಾಗ್ರಾಹಕರಾಗಿದ್ದಾರೆ.

ಪ್ರತಿಭಾವಂತರಿಗೆ ಇನ್ನೊಂದು ಅವಕಾಶವೆಂದರೆ ದೂರದರ್ಶನ ಮಾತ್ರ ಡಿಪ್ಲೊಮಾ ಪಡೆದವರನ್ನೇ ಕೆಲಸಕ್ಕೆ ತೆಗೆದುಕೊಂಡರೆ, ಖಾಸಗಿ ಚಾನಲ್‌ಗಳು ಕೇವಲ ಸಾಮಾನ್ಯ ಜ್ಞಾನವಿದ್ದು ಕೆಲಸದಲ್ಲಿ ನುರಿತ ತಂತ್ರಜ್ಞರಾದರೆ ಯಾವ ಡಿಪ್ಲೊಮಾಗಳನ್ನೂ ಕೇಳದೆ ಕೆಲಸಕ್ಕೆ ತೆಗೆದುಕೊಳ್ಳುತ್ತಿವೆ. ಇದರಿಂದ ನಿಜವಾದ ಪ್ರತಿಭಾವಂತರಿಗೆ ಉತ್ತಮ ಅವಕಾಶ ದೊರೆಯುತ್ತಿದೆ.

ಇನ್ನು ಬೆಂಗಳೂರಿನಲ್ಲಿ ವಿಡಿಯೋ ಕ್ಷೇತ್ರದಲ್ಲಿ ಎಡಿಟರ್‌ಗಳಾಗಿರುವವರಂತೂ ಶೇ.೯೫ರಷ್ಟು ಜನ ಯಾವುದೇ ಕೋರ್ಸ್ ಇಲ್ಲದೆ ಈ ಕ್ಷೇತ್ರಕ್ಕೆ ಬಂದು ಸಂಕಲನಕಾರರಾಗಿ ತಿಂಗಳಿಗೆ ಕನಿಷ್ಟ ೧೦,೦೦೦ ರೂ ಸಂಪಾದಿಸುತ್ತಿದ್ದಾರೆ.

ಇನ್ನು ಸಿನಿಮಾ ಮತ್ತು ಟಿ.ವಿ. ಕ್ಷೇತ್ರದ ಲೈಟ್ ಬಾಯ್‌ಗಳಂತೂ ಒಂದು ಸಿನಿಮಾ ಅಥವಾ ಸೀರಿಯಲ್‌ಗೆಂದು ೧೫ ರಿಂದ ೩೦ ದಿವಸ ಕೆಲಸ ಮಾಡಿ ಹತ್ತು ಸಾವಿರ ರೂಗಳಿಂದ ಹದಿನಾರು ಸಾವಿರ ರೂಗಳಾದರೂ ಸಂಪಾದಿಸುತ್ತಿದ್ದಾರೆ. ಇಲ್ಲಿ ಸೇರ ಬಯಸುವವರಿಗೆ ಯಾವ ಕೋರ್ಸ್ ಇರುವುದಿಲ್ಲ. ಯುನಿಟ್‌ಗಳಲ್ಲಿ ಮೊದಲಿಗೆ ಸಹಾಯಕರಾಗಿದ್ದ ಹುಡುಗರು ಇಂದು ಲೈಟ್‌ಬಾಯ್‌ಗಳಾಗಿದ್ದಾರೆ.

ಮೇಲೆ ವಿವರಿಸಿದ ವಿಷಯಗಳೆಲ್ಲಾ ಬೆಂಗಳೂರಿನ ಸೀಮಿತ ಮಾರುಕಟ್ಟೆಗೆ ಸಂಬಂಧಿಸಿದ್ದು. ಬಾಂಬೆಯಂತಹ ಮಹಾನಗರಗಳಲ್ಲಿ ಟಿ.ವಿ. ಕ್ಷೇತ್ರದ ನುರಿತ ಕೆಲಸಗಾರರೆಲ್ಲರಿಗೂ ತಿಂಗಳ ಎಲ್ಲಾ ದಿನಗಳಲ್ಲೂ ಕೈತುಂಬಾ ಕೆಲಸವಿರುತ್ತದೆ. ಅವರವರ ಪಗಾರ ಮತ್ತು ಸಂಬಳವಂತೂ ಬೆಂಗಳೂರಿನ ಎರಡರಷ್ಟಿದೆ.

ಇಂದಿನ ಪರಿಸ್ಥಿತಿಯಲ್ಲಿ ಕೆಲಸವಿಲ್ಲ ಎಂದು ಹೇಳಿಕೊಂಡು ಓಡಾಡುವ ಹುಡುಗರಿಗೆ ಮಾತ್ರ ಕೆಲಸವಿಲ್ಲ. ಕಷ್ಟಪಟ್ಟು ಕೆಲಸ ಮಾಡುವವರಿಗೆ ಜೀವನೋಪಾಯದ ನೂರಾರು ಮಾರ್ಗಗಳಿವೆ. ಕಷ್ಟಪಟ್ಟು ಕೆಲಸ ಮಾಡುವ ಮನಸ್ಸೊಂದಿದ್ದರೆ ಸಾಕು.

ಓದುಗರಿಗೆ ಅನುಕೂಲವಾಗಲೆಂದು ಭಾರತದಲ್ಲಿ ಟಿ.ವಿ. ಮತ್ತು ಸಿನಿಮಾರಂಗದ ಬಗ್ಗೆ ಇರುವ ಕೋರ್ಸ್‌ಗಳ ವಿವರವನ್ನು ನೀಡಲಾಗಿದೆ.

1. Bombay University
M.G. Road, Fort,
MUMBAI - 400 032

ಕೋರ್ಸ್ :
ಸರ್ಟಿಫಿಕೇಟ್‌ಕೋರ್ಸ್-ಸೌಂಡ್ ರೆಕಾರ್ಡಿಂಗ್ ಮತ್ತು ಚಿತ್ರನಿರ್ಮಾಣ
ಅವಧಿ : ೪ ತಿಂಗಳು

2. Chitrabani
St. Xavier College
CALCUTTA -16

ಕೋರ್ಸ್ : ಡಿಪ್ಲೊಮಾ ಇನ್ ಫಿಲಂ ಸ್ಟಡೀಸ್
ಅವಧಿ : ೧ ವರ್ಷ

3. Film & Television Institute of India
Law College Road
PUNE - 411 004

ಕೋರ್ಸ್ :

೧. ಡಿಪ್ಲೊಮಾ ಇನ್ ಫೋಟೋಗ್ರಫಿ
೨. ಡಿಪ್ಲೊಮಾ ಇನ್ ಸೌಂಡ್ ರೆಕಾರ್ಡಿಂಗ್ ಮತ್ತು ಸೌಂಡ್ ಇಂಜಿನಿಯರಿಂಗ್
೩. ಡಿಪ್ಲೊಮಾ ಇನ್ ಎಡಿಟಿಂಗ್ (ಸಂಕಲನ)
೪. ಡಿಪ್ಲೊಮಾ ಇನ್ ಪ್ರೊಡಕ್ಷನ್
೫. ಡಿಪ್ಲೊಮಾ ಇನ್ ಸೆಟ್‌ಡಿಸೈನ್
೬. ಅಲ್ಪಾವಧಿಯ ಆಕ್ಟಿಂಗ್ ಕೋರ್ಸ
೭. ಅಲ್ಪಾವಧಿಯ ನ್ಯೂಸ್ ರೀಡಿಂಗ್ ಕೋರ್ಸ್ ಇನ್ ಇಂಗ್ಲಿಷ್

ಈ ಮೇಲಿನ ಐದು ಕೋರ್ಸ್‌ಗಳಿಗೆ ಸೇರಬೇಕಾದರೆ ಬೇಕಾದ ವಿದ್ಯಾರ್ಹತೆ ಎಂದರೆ ಯಾವುದೇ ಪದವಿ ಪಡೆದಿರಬೇಕು. (ಫೋಟೋಗ್ರಫಿ ಮತ್ತು ಸೌಡ್ ರೆಕಾರ್ಡಿಂಗ್ ಬಿಟ್ಟು) ಈ ಎರಡು ಕೋರ್ಸ್‌ಗಳಿಗೆ ಪಿ.ಯು.ಸಿ.ಯಲ್ಲಿ ಫಿಜಿಕ್ಸ್ ಮತ್ತು ಕೆಮಿಸ್ಟ್ರಿ (Physics and Chemistry) ತೆಗೆದುಕೊಂಡಿರಬೇಕು.

ಪ್ರೀತಿ

ಪ್ರೇಮ
ಹುಟ್ಟಿಸುವುದೇ
ನನ್ನ
ಕಾವ್ಯ
ಧರ್ಮ

– ಸ್ನೇಹಲತಾ ದೇಶಪಾಂಡೆ

ಹಲವಾರು ಕಾರಣಗಳಿಂದ ಪೂನಾಫಿಲಂ ಇನ್‌ಸ್ಟಿಟ್ಯೂಟ್ ಎರಡು ವರ್ಷಗಳಿಂದಲೂ ಶೈಕ್ಷಣಿಕ ವರ್ಷಕ್ಕೆ ಸರಿಯಾಗಿ ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿತ್ತು. ಆದರೆ ಈ ವರ್ಷ ಅಂದರೆ ೯೮ರ ಜೂನ್‌ನ ವೇಳೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಆಯ್ಕೆ ವಿಧಾನ : ಮೊದಲನೇ ಸುತ್ತಿನ ಸ್ಪರ್ಧಾತ್ಮಕ ಪರೀಕ್ಷೆ ಬೆಂಗಳೂರಿನಲ್ಲೇ ನಡೆಯುತ್ತದೆ. ಈ ಪರೀಕ್ಷೆಯಲ್ಲಿ ಅರ್ಹತೆ ಪಡೆದವರನ್ನು ಪೂನಕ್ಕೆ ಕರೆಯಲಾಗುತ್ತದೆ. ಇಲ್ಲಿ ೮ ದಿನಗಳ ಒಂದು ಶಿಬಿರವನ್ನು ನಡೆಸಲಾಗುತ್ತದೆ. ಅಲ್ಲಿ ಹಲವಾರು ಸಿನಿಮಾಗಳನ್ನು ವಿದ್ಯಾರ್ಥಿಗಳಿಗೆ ತೋರಿಸಲಾಗುತ್ತದೆ. ವಿದ್ಯಾರ್ಥಿಗಳು ಈ ಚಿತ್ರಗಳಿಗೆ ಯಾವ ರೀತಿ ಸ್ಪಂದಿಸುತ್ತಾರೆ ಮತ್ತು ಚಿತ್ರಮಾಧ್ಯಮದ ಬಗ್ಗೆ ಅವರಿಗಿರುವ ಆಸಕ್ತಿಯನ್ನು ತಿಳಿದುಕೊಳ್ಳಲಾಗುತ್ತದೆ. ಕೊನೆಯ ದಿನ ಸಂದರ್ಶನ ನಡೆಸಲಾಗುತ್ತದೆ. ಆ ಸಂದರ್ಶನದಲ್ಲಿ ಒಂದೊಂದು ಕೋರ್ಸ್‌ಗೆ ೧೩ ಜನ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಾರೆ.

ಈ ಕ್ರಮ ಹಲವಾರು ವರ್ಷಗಳಿಂದಲೂ ನಡೆಯುತ್ತಿತ್ತು. ಈ ವರ್ಷ ಸಣ್ಣ ಪುಟ್ಟ ಬದಲಾವಣೆಗಳಾಗಬಹುದು. ಹಿಂದೆ ಕೋರ್ಸ್‌ನ ಅವಧಿ ಕೂಡ ಮೂರು ವರ್ಷ ಇತ್ತು. ಈಗ ಅದನ್ನು ಎರಡು ವರ್ಷಕ್ಕೆ ಇಳಿಸಲಾಗಿದೆ.

ನಿಜವಾಗಿಯೂ ಸಿನಿಮಾ ಮಾಧ್ಯಮದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು ಪೂನ ಇನ್‌ಸ್ಟಿಟ್ಯೂಟ್‌ನಲ್ಲಿ ಓದಬಹುದು. ಇಲ್ಲಿ ಕಾಲೇಜಿನ ಶುಲ್ಕ ಸಹ ತುಂಬಾ ಕಡಿಮೆ ಇದೆ.

Film & Television Institute of Tamil Nadu
CIT Campus,
CHENNAI -600 113


ಕೋರ್ಸ್ ವಿವರ

೧. ನಿರ್ದೇಶನ ಮತ್ತು ಚಿತ್ರಕಥೆ ರಚನೆಯಲ್ಲಿ ಡಿಪ್ಲೊಮಾ
೨. ಡಿಪ್ಲೊಮಾ ಇನ್ ಸಿನಿಮಾಟೋಗ್ರಫಿ
೩. ಸೌಂಡ್ ರೆಕಾರ್ಡಿಂಗ್ ಮತ್ತು ಸೌಂಡ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ
೪. ಡಿಪ್ಲೊಮಾ ಇನ್ ಫಿಲಂ ಪ್ರೋಸಸಿಂಗ್ (Proccessing)
೫. ಡಿಪ್ಲೊಮಾ ಇನ್ ಎಡಿಟಿಂಗ್

ಅರ್ಹತೆ : ಮೇಲಿನ ೪ ಕೋರ್ಸ್‌ಗಳಿಗೆ ಪಿ.ಯು.ಸಿ.ಯಲ್ಲಿ ಕೆಮಿಸ್ಟ್ರಿ ಮತ್ತು ಫಿಜಿಕ್ಸ್ ತೆಗೆದುಕೊಂಡಿರಬೇಕು. ೫ನೇ ಕೋರ್ಸ್‌ಗೆ ಯಾವುದೇ ವಿಷಯದಲ್ಲಿ ಪಿ.ಯು.ಸಿ. ಪಾಸಾದರೆ ಸಾಕು. ವಯಸ್ಸು ೨೫ ಮೀರಿರಬಾರದು.

ಬೆಂಗಳೂರಿನ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಛಾಯಾಗ್ರಹಣ ಡಿಪ್ಲೊಮಾ ಇದೆ. ಈ ಕೋರ್ಸ್‌ಗೆ ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿಯಲ್ಲಿ ಪಾಸ್ ಆದರೆ ಸಾಕಾಗಿತ್ತು. ಆದರೆ ಈಗ ಇದನ್ನು ಪಿ.ಯು.ಸಿ.ಯಲ್ಲಿ ವಿಜ್ಞಾನದಲ್ಲಿ ಪಾಸಾಗಿರಬೇಕು.

ಬೆಂಗಳೂರಿನ ಹೆಸರಘಟ್ಟದಲ್ಲಿ ದೊಡ್ಡ ಫಿಲಂ ಇನ್‌ಸ್ಟಿಟ್ಯೂಟ್ ಕಟ್ಟಬೇಕೆಂದು ಕರ್ನಾಟಕ ಸರ್ಕಾರ ಮೂರು ವರ್ಷದಿಂದಲೂ ಪ್ರಯತ್ನಿಸುತ್ತಿದೆ. ಆದರೆ ಯಾವುದೇ ಕಾರ್ಯಗಳು ಸಮರ್ಪ ವಾಗಿ ನಡೆಯುತ್ತಿಲ್ಲ. ಮುಂದಿನ ಶೈಕ್ಷಣ ವರ್ಷದಲ್ಲಿ ಪ್ರಾರಂಭವಾಗುವ ವದಂತಿಗಳಿವೆ.



ನಾಲ್ಕು ತಿಂಗಳ ಗ್ರಂಥಾಲಯ ತರಬೇತಿಗೆ ಅರ್ಜಿ ಹಾಕಿ

ರಾಜ್ಯದಲ್ಲಿಯೇ ಏಕೈಕ ಗ್ರಂಥಾಲಯ ತರಬೇತಿ ಶಾಲೆ ಬೆಂಗಳೂರಿನಲ್ಲಿದ್ದು ನಾಲ್ಕು ತಿಂಗ ಗ್ರಂಥಾಲಯ ವಿಜ್ಞಾನ ತರಬೇತಿ ಕೋರ್ಸಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ

ಈ ತರಬೇತಿ ಕೋರ್ಸಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ.ಪರೀಕ್ಷೆಯ ಉತ್ತೀರ್ಣರಾಗಿದ್ದು, ಸಾಮಾನ್ಯ ವರ್ಗದ ಅಭ್ಯರ್ಥಿಗಳು ಶೇ.೪೫ರಷ್ಟು ಅಂಕಗಳನ್ನು ಪರಿಶಿಷ್ಟ ಜಾ ಹಾಗೂ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಶೇ.೪೦ರಷ್ಟು ಅಂಕಗಳನ್ನು ಪಡೆದಿರಬೇಕು.

ಇಲಾಖಾ ವತಿಯಿಂದ ಬರಲಿಚ್ಛಿಸುವ ಅಭ್ಯರ್ಥಿಗಳು ತಮ್ಮ ಸಂಸ್ಥೆಯ ಮುಖ್ಯಸ್ಥರ ಮೂಲಕವ ಅರ್ಜಿ ಸಲ್ಲಿಸಬೇಕು.

ಅಭ್ಯರ್ಥಿಗಳು ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೂ ಮುಖ್ಯವಾಗಿ ಆಯ್ಕೆಯಲ್ಲಿ ಎಸ್ಸೆಸ್ಸೆ ಅಂಕಪಟ್ಟಿಯನ್ನು ಮಾತ್ರವೇ ಗಣನೆಗೆ ತೆಗೆದುಕೊಳ್ಳಲಾಗುವುದು.

ತರಬೇತಿಗೆ ಆಯ್ಕೆ ವಿಧಾನ

ಸಾಮಾನ್ಯವಾಗಿ ಈ ತರಬೇತಿಗೆ ಒಮ್ಮೆ ೪೦ ರಿಂದ ೫೦ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ತರಬೇತಿಗೆ ಆಯ್ಕೆ ಆಗುವ ಅಭ್ಯರ್ಥಿಗಳಲ್ಲಿ ಶೇ. ೫೦ರಷ್ಟು ಅಭ್ಯರ್ಥಿಗಳು ಇಲಾಖಾ ವತಿಯಿಂ ಬಂದವರಾಗಿರುತ್ತಾರೆ. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ಶಾಲೆ ನಡೆಸುವ ೫೦೦ ಅಂಕಗಳ ಲಿಖಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೋರ್ಸ್ ಸರ್ಟಿಫಿಕೇಟ್ ಪಡೆಯಬಹುದು.

ವರ್ಷಕ್ಕೆ ಕನಿಷ್ಟ ಎರಡು ತಂಡಗಳು ಈ ತರಬೇತಿ ಪಡೆಯಲಿದ್ದು ತರಬೇತಿಯ ಅವಧಿಯ ಅಭ್ಯರ್ಥಿಗೆ ಯಾವುದೇ ಸ್ಟೈಫಂಡ್ ನೀಡಲಾಗುವುದಿಲ್ಲ. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗೆ ಶಾಲೆಯ ವತಿಯಿಂದ ಯಾವುದೇ ವಿದ್ಯಾರ್ಥಿ ನಿಲಯದ ಸೌಲಭ್ಯವೂ ಇರುವುದಿಲ್ಲ.

ಉದ್ಯೋಗಾವಕಾಶಗಳು

ಗ್ರಂಥಾಲಯ ವಿಜ್ಞಾನ ತರಬೇತಿ ಪಡೆದ ಅಭ್ಯರ್ಥಿಗಳನ್ನು ಶಾಲಾ, ಕಾಲೇಜುಗಳ ಗ್ರಂಥಾಲಯಗಳ ಲೈಬ್ರರಿ ಅಸಿಸ್ಟೆಂಟ್‌ಗಳಾಗಿ ಹಾಗೂ ಮಂಡಲ ಕೇಂದ್ರ ಗ್ರಂಥಾಲಯದ ಮೇಲ್ವಿಚಾರಕರಾ ನೇಮಕಗೊಳ್ಳುವ ಅವಕಾಶವಿರುತ್ತದೆ. ತರಬೇತಿ ಪಡೆದ ಅಭ್ಯರ್ಥಿಗಳು ಖಾಸಗಿಯಾಗಿಯ ಲೈಬ್ರರಿಗಳನ್ನು ತೆರೆಯಬಹುದಾಗಿರುತ್ತದೆ.

ವಿಪುಲ ಉದ್ಯೋಗಾವಕಾಶ ಕಲ್ಪಿಸಲಿರುವ ಈ ತರಬೇತಿಯ ಪ್ರಯೋಜನವನ್ನು ಯೋ ಅಭ್ಯರ್ಥಿಗಳು ಪಡೆಯಬೇಕೆಂದು ಇಲಾಖೆಯ ನಿರ್ದೇಶಕರಾದ ಟಿ.ಮಲ್ಲೇಶಪ್ಪನವರು ಕೋರಿದ್ದಾರೆ.

ಅಂತಿಮ ದಿನಾಂಕ

ಅಭ್ಯರ್ಥಿಗಳು ನಿರ್ದೇಶಕರ ಕಛೇರಿಯಲ್ಲಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ ಅಗತ್ಯ ದಾಖಲೆಗಳೊಂದಿಗೆ ೨೮.೨.೯೮ರ ಒಳಗೆ ತಲುಪುವಂತೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ

ವಿಶ್ವೇಶ್ವರಯ್ಯ ಗೋಪುರ, ೪ನೇ ಮಹಡಿ, ಡಾ. ಅಂಬೇಡ್ಕರ ವೀಧಿ, ಬೆಂಗಳೂರು -೫೬೦ ೦೦೧

ವಿಶ್ವನಾಥ ದೇಶಪಾಂಡೆ, ದಾಂಡೇಲಿ

ನಾನು ಡಿಪ್ಲೋಮಾ ಇನ್ ಮೆಷಿನ್ ಟೂಲ್ ಟೆಕ್ನಾಲಜಿ ಅಂತಿಮ ವರ್ಷದ ವಿದ್ಯಾರ್ಥಿ. ಮುಂದೆ 'ಮೆಷಿನ್ ಟೂಲ್ ಡಿಸೈನರ್' ಆಗಬೇಕೆಂಬ ಆಕಾಂಕ್ಷೆ ಇದೆ. ಅದಕ್ಕಾಗಿ ಸರಿಯಾದ ಮತ್ತು ಸೂಕ್ತ ಮಾರ್ಗದರ್ಶನ ಮಾಡಿ ಮತ್ತು ಕೆಲವು ಅನುಮಾನಗಳನ್ನು ಪರಿಹರಿಸಿ.

1. Central Machine Tool Institute, Bangaloreನಲ್ಲಿ B.E. (Machine Tool Design) ಮಾಡಲು ಡಿಪ್ಲೋಮಾ ಆಧಾರದ ಮೇಲೆ ಅವಕಾಶವಿದೆಯೇ?

2. Professional Diploma ಆದ D.I.I.T. ಮತ್ತು A.M.I. Mech. E.ಯನ್ನು ಮಾಡಬೇಕಾದಲ್ಲಿ ಯಾರನ್ನು ಮತ್ತು ಯಾವ ಸಂಸ್ಥೆಯನ್ನು ಸಂಪರ್ಕಿಸಬೇಕು?

3. CAD/CAM, CNC, Robotics, Micro Robotics ಈ ಮುಂದುವರೆದ ತಂತ್ರಜ್ಞಾನದಲ್ಲಿ ಉನ್ನತ ವ್ಯಾಸಂಗಕ್ಕೆ ಡಿಪ್ಲೋಮಾ ಆದವರು ಯಾವ ಸಂಸ್ಥೆಯಲ್ಲಿ ತಮ್ಮ part time education ಮುಂದುವರೆಸಬಹುದು?

ನೀವು P.G. Diploma in Machine Tools Courseನ್ನು ಪದವಿ ಆಧಾರದ ಮೇಲೆ ಮಾಡಬಹುದು. ಆದುದರಿಂದ ನೀವು ಯಾವುದಾದರೂ (AMIE or BE) ಪದವಿಯನ್ನು ಮಾಡಿದ್ದಲ್ಲಿ ನೀವು GTTCರವರು ನಡೆಸುವ P.G. Diploma Courseನ್ನು ಮುಂದುವರಿಸಬಹುದು.



ಮಾರ್ಗದರ್ಶಿ

○ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು

ಆರ್.ವಿ. ಇಂಜಿನಿಯರಿಂಗ್ ಕಾಲೇಜು,

ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ರಾಜಕುಮಾರ ಚಲವಾ, ಬೀದರ್

ನಾನು ೧೮ ವರ್ಷದ ಯುವಕ. ತುಂಬಾ ಜಾಣನಾಗಿದ್ದೆ. ಆವಾಗ ಶೇ. ೭೩% ಅಂಕಗಳಿದ್ದವು. ಅನಂತರ ೧೦ನೇ ತರಗತಿಗೆ ೬೦% ಬಂದವು. P.U.C.ಯಲ್ಲಿ ೫೦% ಅಂಕಗಳು ಬಂದಿವೆ. ಹೀಗೆ ನಾನು ಬೆಳೆದ ಹಾಗೇ ನನ್ನ ಅಂಕಗಳು ಇಳಿಯುತ್ತಿವೆ. ಏಕೆ? ಅದಕ್ಕೆ ಏನು ಕಾರಣ? ನನಗೆ ಮೊದಲಿನ ಹಾಗೆಯೇ ಓದುವ ಹವ್ಯಾಸ ಮತ್ತು ಆಸಕ್ತಿ ಇದೆ. ಆದರೆ ಏಕೆ ಹೀಗಾಗುತ್ತಿದೆ ಎಂದು ತಿಳಿಯುತ್ತಿಲ್ಲಾ.

P.U.C. (ವಿಜ್ಞಾನ) ಮುಗಿದ ಮೇಲೆ ಮುಂದೆ ಓದುವ ಆಸೆ ಇದೆ. ಆದರೆ ಹಣದ ಕೊರತೆಯಿಂದ ನನಗೆ ಓದಲು ಆಗುತ್ತಿಲ್ಲ. ಅಭ್ಯಾಸ ಬಿಟ್ಟು ಕೆಲಸ ಹುಡುಕುತ್ತಿದ್ದೇನೆ. ಬೇಗ ಕೆಲಸ ಸಿಗುವ ಯಾವುದಾದರೂ ಕೋರ್ಸ್ ಇದ್ದರೆ ತಿಳಿಸಿ.

ನೀವು ಹೆಚ್ಚಿನ ಅಂಕಗಳನ್ನು ಪಡೆಯಲು ಇನ್ನು ಸ್ವಲ್ಪ ಕಷ್ಟಪಡಬೇಕಾಗುವುದು. ಕೋರ್ಸಿಗೆ ತಕ್ಕ ಹಾಗೆ ನಿಮ್ಮ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪಿ.ಯು.ಸಿ. ಆದ ನಂತರ ನೀವು T.C.H., Computer education Diploma Courseಗಳನ್ನು ಓದಿ. ಇವು ಒಳ್ಳೆಯ ಉದ್ಯೋಗವಕಾಶಗಳನ್ನು ಹೊಂದಿರುತ್ತವೆ.

ಜಿ.ಎಂ. ಸುರೇಶ ಬಾಬು, ಶಹಾಪೂರ

ನಾನು ಕೃಷಿ ಮಾರಾಟ ಇಲಾಖೆಯಲ್ಲಿ ಲೆಕ್ಕಿಗ III ಎಂದು ಕಾರ್ಯನಿರ್ವಹಿಸುತ್ತಿದ್ದೇನೆ. ನಾನು P.U.C. ತೇರ್ಗಡೆಯಾಗಿ ಈ ಉದ್ಯೋಗದಲ್ಲಿ ಸೇರಿದ್ದೇನೆ. ಕೃಷಿ ಮಾರಾಟ ಇಲಾಖೆಗೆ ಸಂಬಂಧಿಸಿದಂತೆ ಯಾವ ಪದವಿ ಇದೆ ಎಂಬ ಬಗ್ಗೆ ನಾನು ನಮ್ಮ ಇಲಾಖೆಯ ತರಬೇತಿ ಕೇಂದ್ರಗಳಿಗೆ ವಿಚಾರಿಸಿದ್ದೇನೆ. ಆದರೆ ಅವರಿಂದ ಯಾವುದೇ ಸರಿಯಾದ ಮಾಹಿತಿ ಲಭ್ಯವಾಗಿಲ್ಲವಾದ ಕಾರಣ ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಈ ಇಲಾಖೆಗೆ ಸಂಬಂಧಿಸಿದಂತೆ ಯಾವುದಾದರೂ ಪದವಿ ಇದೆಯೆ? ಇದ್ದರೆ ಯಾವ ವಿಶ್ವವಿದ್ಯಾಲಯದಲ್ಲಿದೆ ಮತ್ತು ಯಾವ ಊರಲ್ಲಿದೆ? ಈ ಪದವಿಗೆ ಸಂಬಂಧಿಸಿದಂತೆ ಏನು ವಿದ್ಯಾರ್ಹತೆ ಇರಬೇಕು? ಇದಕ್ಕೆ ಯಾವ ರೀತಿ ಸಿದ್ಧತೆ ನಡೆಸಬೇಕು? ಮತ್ತು ಇದಕ್ಕೆ ಪ್ರವೇಶಪೂರ್ವ ಪರೀಕ್ಷೆಗಳು ನಡೆಯುತ್ತವೆಯೇ? ನಡೆಯುತ್ತಿದ್ದರೆ ಯಾವಾಗ ಎಲ್ಲಿ, ಯಾವ ತಿಂಗಳಲ್ಲಿ ಎಂಬುದನ್ನು ಮತ್ತು ಯಾರನ್ನು ಸಂಪರ್ಕಿಸಬೇಕು ಎಂಬುದನ್ನು ತಿಳಿಸಿರಿ.

ನೀವು ಅವಶ್ಯವಾಗಿ PUC ಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದಲ್ಲಿ ನೇರವಾಗಿ B.Sc. in Agriculture Courseನ್ನು ಮಾಡಬಹುದು. ಇದು ೪ ವರ್ಷದ ಕೋರ್ಸ್ ಆಗಿರುತ್ತದೆ. ಇದಕ್ಕೆ ಯಾವ ರೀತಿಯ ಪ್ರವೇಶ ಪರೀಕ್ಷೆಗಳು ಇಲ್ಲಾ. ನೀವು ಯಾವುದೇ ಹತ್ತಿರದ ಕೃಷಿ ಕಾಲೇಜನ್ನು ಸಂಪರ್ಕಿಸಬಹುದು.

ನಳಿನ ಪವಾರ್, ದಾವಣಗೆರೆ

ನಾನು B.E. in Computer Science (೫ನೇ ಸೆಮಿಸ್ಟಾರ್) ಓದುತ್ತಿದ್ದೇನೆ. ನನಗೆ ಮನೆಯಲ್ಲಿ ಗೈಡೆನ್ಸ್ ಕೊಡುವವರು ಇಲ್ಲ. ನಾನು ಇಂಜಿನಿಯರಿಂಗ್ ಮುಗಿಸಿದ ಮೇಲೆ ಯಾವ ಕೆಲಸ ಮಾಡುವುದು? ಕೆಲಸಕ್ಕಾಗಿ ಎಲ್ಲಿ ಹುಡುಕುವುದು ತಿಳಿದಿಲ್ಲ. ನಾನು ಎಲ್ಲಾ ಸೆಮಿಸ್ಟಾರ್‌ನಲ್ಲಿ Distinctionನಲ್ಲಿ ಪಾಸಾಗಿದ್ದೇನೆ. ನಮ್ಮ ತಂದೆ ವ್ಯಾಪಾರಿ, ತಾಯಿ ಟೀಚರ್. ನಮ್ಮ ಮನೆಯಲ್ಲಿ ನನಗೆ T.C.H.ಗೆ ಸೇರಿಸುತ್ತಿದ್ದರು. ಆದರೆ ನಾನು ಹಠಮಾಡಿ B.E. ಓದುತ್ತಿದ್ದೇನೆ.

ನನಗೆ ಒಂದೊಂದು ಸೆಮ್ ಮುಗಿಸಿದಂತೆ ಅಂಕಗಳು ೭೦% ಮೇಲೆ ಇದ್ದರೂ ಸಹ ಕೆಲಸದ ಚಿಂತೆ ಬಹಳ ಆಗಿದೆ. ದಯಮಾಡಿ ತಾವು ನನಗೆ ಇದರ ಬಗ್ಗೆ ಮಾಹಿತಿಯನ್ನು ಕಳಿಸಿಕೊಡಿ.

ನೀವು ಒಳ್ಳೆಯ ಅಂಕಗಳೊಂದಿಗೆ ತೇರ್ಗಡೆಯಾದಲ್ಲಿ ನಿಮಗೆ ಕೆಲಸ ಸಿಗುವದರಲ್ಲಿ ಯಾವ ಸಂದೇಹ ಬೇಡಾ. ದಿನಾಲು ನೂರಾರು Optionಗಳು ದಿನಪತ್ರಿಕೆಗಳಲ್ಲಿ ಎಂಜಿನಿಯರ್‌ಗಳಿಗಾಗಿ ಇರುತ್ತವೆ. ನೀವು ಇದಕ್ಕಾಗಿ ಹೆದರುವ ಅವಶ್ಯಕತೆ ಇಲ್ಲ. ಮೊದಲು ನಿಮ್ಮ ಕೋರ್ಸನ್ನು Successfully ಮುಗಿಸಿ.

ರಮೇಶ್, ಮದ್ದೂರು

ನಾನು ಪಿ.ಯು.ಸಿ.ಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿ (ವಯಸ್ಸು ೨೪ ವರ್ಷ) ಪಾಸಾಗಿರುತ್ತೇನೆ. ನನಗೆ ಅರಣ್ಯ ಅಧಿಕಾರಿಯಾಗಬೇಕೆಂಬ ಹಂಬಲ. ಇದಕ್ಕೆ ಯಾವ ಸ್ಕೂಲಲ್ಲಿ ಸೇರಬೇಕು? ಏನು ಪರೀಕ್ಷೆ ತಕೋಬೇಕು? ಇದರ ಕಾಲೇಜು ಕರ್ನಾಟಕದಲ್ಲಿದೆಯೇ ಎಂಬ ವಿವರ ತಿಳಿಸುತ್ತೀರಾ?

ನೀವು ಅರಣ್ಯಾಧಿಕಾರಿ ಆಗಬೇಕಾದಲ್ಲಿ UPSCರವರು ನಡೆಸುವ ಲಿಖಿತ ಪರೀಕ್ಷೆಯನ್ನು ಬರೆಯಬೇಕಾಗುವುದು. ಇದಕ್ಕೆ ಅರ್ಹತೆ ಎಂದರೆ ಪದವಿಯನ್ನು ವಿಜ್ಞಾನ ವಿಷಯದಲ್ಲಿ ಅಥವಾ ಅಗ್ರಿಕಲ್ಚರ್ ಪದವಿ, Forestery/Engineeringಯಲ್ಲಿ ಮುಗಿಸಿದ್ದು ವಯೋಮಿತಿ ೨೧-೨೮. ಈ ಪರೀಕ್ಷೆಯು

July/August ತಿಂಗಳಲ್ಲಿ ನಡೆಯುತ್ತದೆ. ನೀವು ಪಿ.ಯು. ಆಧಾರದ ಮೇಲೆ ಯಾವುದಾದರೂ ವಿಜ್ಞಾನ ಪದವಿಯನ್ನು ಮಾಡುವುದು ಉತ್ತಮ.

ರಾಘವೇಂದ್ರ ಚೌಧರಿ, ಸಾಗರ

೨-೧೧-೯೭ರ ಕರ್ನಾಟಕ ಲೋಕ ಸೇವಾ ಆಯೋಗದ ಪರೀಕ್ಷೆಯ ಫಲಿತಾಂಶ ಪ್ರಕಟಿಸಲು ಇನ್ನೂ ಎಷ್ಟು ಸಮಯ ಬೇಕು? ಏಕೆಂದರೆ, ಪ್ರಥಮ ದರ್ಜೆಯ ಸಹಾಯಕ ಪರೀಕ್ಷೆಯು ಪುನಃ ನಡೆಯುತ್ತದೆ ಎಂಬ ಸುದ್ದಿ ಪತ್ರಿಕೆಗಳ ಮೂಲಕ ನಮಗೆ ತಲುಪಿತು. ಅದಕ್ಕಾಗಿ ಈ ಪ್ರಶ್ನೆ ಕೇಳಿದೆ.

ಹಾಗೂ ದ್ವಿತೀಯ ದರ್ಜೆ ಸಹಾಯಕರ ಪರೀಕ್ಷೆಗಳು ಎಂದು ನಡೆಯುತ್ತವೆ ಎಂಬುದನ್ನು ಸ್ವಲ್ಪ ತಿಳಿಸಿ.

ಇದಕ್ಕಾಗಿ ನೀವು ಸಂಬಂಧಪಟ್ಟ ಕಚೇರಿಯಲ್ಲಿ ವಿಚಾರಿಸುವುದು ಉತ್ತಮ. ಏಕೆಂದರೆ ಇದು Internal ವಿಷಯವಾಗಿದ್ದು, ಅವರು ಪ್ರಕಟಿಸುವ ದಿನವೇ ಫಲಿತಾಂಶದ ದಿನ ಎಂದು ಹೇಳಬಹುದು. ದ್ವಿತೀಯ ದರ್ಜೆ ಪರೀಕ್ಷೆಗಳ ಬಗ್ಗೆ ಪತ್ರಿಕೆಗಳನ್ನು ವೀಕ್ಷಿಸುವುದು ಉತ್ತಮ.

ರವಿಕುಮಾರ, ದೇವನಹಳ್ಳಿ

ನಾನು ನಾಲ್ಕನೇ ವರ್ಷದ ಬಿ.ಎಫ್.ಎ. ಅಂದರೆ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ ಓದುತ್ತಿದ್ದೇನೆ. ಒಟ್ಟು ೫ ವರ್ಷಗಳ ಕೋರ್ಸ್ ಇದು. ಎರಡು ವರ್ಷ ಫೌಂಡೇಶನ್ ಮಾಡಿ ಮೂರು ವರ್ಷ ಡಿಗ್ರಿ ಮಾಡಬೇಕು. ನಾನು ಪರಿಶಿಷ್ಟ ವರ್ಗಕ್ಕೆ ಸೇರಿರುತ್ತೇನೆ. ನನಗೆ ಈಗ ೩೦ ವರ್ಷ ವಯಸ್ಸು. ನಾನು ನನ್ನ ಫೈನ್ ಆರ್ಟ್ಸ್ ಡಿಗ್ರಿ ಮೇಲೆ ಐ.ಎ.ಎಸ್. ಪರೀಕ್ಷೆ ತೆಗೆದುಕೊಳ್ಳಬೇಕೆಂದಿದ್ದೇನೆ. ಈ ಪರೀಕ್ಷೆಗೆ ಕುಳಿತುಕೊಳ್ಳಬಹುದಾ ಇಲ್ಲವಾ ದಯವಿಟ್ಟು ತಿಳಿಸಿ.

ನೀವು ಅವಶ್ಯವಾಗಿ ಬಿ.ಎಫ್.ಎ. ಕೋರ್ಸ್ ಆದ ನಂತರ ಸ್ಪರ್ಧಾತ್ಮಕ ಪರೀಕ್ಷೆಯಾದ ಐ.ಎ.ಎಸ್. ಪರೀಕ್ಷೆಯನ್ನು ಬರೆಯಬಹುದು. ಜಾಹೀರಾತಿಗಾಗಿ ಪತ್ರಿಕೆಗಳನ್ನು ವೀಕ್ಷಿಸಿ. ಒಳ್ಳೆಯದಾಗಲಿ.

ಸುಬ್ರಾಯ ನಾರಾಯಣ ದೇವಾಡಿಗ, ಹೆಬಳೆ

ನಾನು ಬಿ.ಎ.ಯನ್ನು ದ್ವಿತೀಯ ದರ್ಜೆ (೫೩%)ಯಲ್ಲಿ ೧೯೯೫ರಲ್ಲಿ ಪಾಸು ಮಾಡಿದ್ದು, ಕಾರಣಾಂತರಗಳಿಂದ B.Ed.ಗೆ ಅರ್ಜಿ ಹಾಕಲು ಆಗಲಿಲ್ಲ. ಈಗ B.Ed.ಯನ್ನು ಅಂಚೆ ತೆರಪಿನ ಮೂಲಕ ಕನ್ನಡದಲ್ಲಿ ಮಾಡಬೇಕೆಂದಿರುವೆ. ಹೀಗೆ ಕನ್ನಡದಲ್ಲಿ ಶಿಕ್ಷಣ ನೀಡುವ, ಮಂಡಳಿಯ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವಿಳಾಸಗಳನ್ನು ಮಾತ್ರ ತಿಳಿಸಿ.

ಹೀಗೆ ಪಡೆದ ಅಂಚೆತೆರಪಿನ B.Ed. ಸರ್ಟಿಫಿಕೇಟನಿಂದ ಉದ್ಯೋಗ ದೊರಕಿಸಿಕೊಳ್ಳುವುದರಲ್ಲೇನಾದರೂ ತೊಂದರೆ ಆಗುವುದೇ? ಹೀಗೆ ಪಡೆದ ಪದವಿಯಿಂದ ಶಿಕ್ಷಕರ ಹುದ್ದೆಗೆ ಯಾರಾದರೂ ಆಯ್ಕೆಯಾಗಿದ್ದಾರೆಯೇ?

ನೀವು ಅವಶ್ಯವಾಗಿ ಅಂಚೆ ತೆರಪಿನ ಮೂಲಕ B.Ed. Courseನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಮುಂದುವರಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು-೫ ಇವರನ್ನು ಸಂಪರ್ಕಿಸಬಹುದು. ನೀವು ಇದಾದ ನಂತರ ಉದ್ಯೋಗಕ್ಕಾಗಿ ಅವಶ್ಯವಾಗಿ ಪ್ರಯತ್ನಿಸಬಹುದು. ಮುಂದುವರಿಸಿ.

ರವಿಚಂದ್ರ ವೈ.ಕೆ., ಬೆಂಗಳೂರು

ನಾನು ಬಿ.ಎಸ್.ಸಿ. (ಎಲೆಕ್ಟ್ರಾನಿಕ್ಸ್) ಮಾಡಿ ಮೆಡಿಕಲ್ ರಿಪ್ರೆಸೆಂಟೇಟಿವ್ ಆಗಿ ಕೆಲಸ ಮಾಡುತ್ತಿದ್ದೇನೆ. ಈಗ ಡಿ.ಫಾರ್ಮಾ ಅಥವಾ ಬಿ.ಫಾರ್ಮಾ ಮಾಡುವ ಆಸೆಯಾಗಿದೆ. (ಪಿ.ಯು.ಸಿ.ಯಲ್ಲಿ ಪಿ.ಸಿ.ಎಂ. ಓದಿದ್ದೇನೆ.) ಈ ಕೋರ್ಸು ಸೇರಲು ಸಂಜೆ ಕಾಲೇಜುಗಳಿವೆಯೋ ಕರೆಸ್ಪಾಂಡೆನ್ಸ್‌ನಲ್ಲಿ ಇದನ್ನು ಮಾಡಬಹುದೇ?

ನೀವು ಡಿ.ಫಾರ್ಮಾ ಕೋರ್ಸನ್ನು ಮುಂದುವರಿಸಬಹುದು. ಆ ಇದಕ್ಕೆ ಯಾವ ಸಂಜೆ ಕಾಲೇಜುಗಳು ಇರುವದಿಲ್ಲ, ಇದನ್ನು ನೀವು ಅ ತೆರಪಿನ ಮೂಲಕ ಕೂಡಾ ಮಾಡಲೂ ಬರುವುದಿಲ್ಲಾ. ನೀವು ರೆಗ್ಯುಲರ್ ಮುಂದುವರಿಸಿ. ಅದರ ಆಧಾರದ ಮೇಲೆ ನೀವು ಸ್ವಂತ ಮೆಡಿಕಲ್ ಸ್ಟೋ ಇಡಬಹುದು, ಇಲ್ಲವೆ ಉದ್ಯೋಗಕ್ಕೆ ಪ್ರಯತ್ನಿಸಬಹುದು.

ಶಾಮಲಾ ಎಸ್., ಬಾಗಲಕೋಟೆ

ನಾನು ಎಷ್ಟು ಸಲ ಓದುತ್ತೇನೆ, ಬರೆಯುತ್ತೇನೆ. ಆದರೂ ವಿಷಯವ ನೆನಪಿನಲ್ಲಿಡಲು ಆಗುತ್ತಿಲ್ಲ. ನೆನಪಿನ ಶಕ್ತಿಗೆ ಯಾವುದಾದರೂ ಮದ್ದು ಇ ತಿಳಿಸಿ.

ನೀವು ಓದಿದ್ದನ್ನು ಮನನ ಮಾಡಿಕೊಳ್ಳಿ, ಒಂದು ವಿಷಯವನ್ನು ಕ ಮೂರು ಸಲ ಅಭ್ಯಾಸಿಸಿ ನಂತರ ಬರೆದು ತೆಗೆಯಬೇಕು. ಹ ಮಾಡುವದರಿಂದ ಜ್ಞಾಪಕ ಉಳಿಯುತ್ತದೆ. ನೀವು ಮಾಡುವ ಕೆಲಸವನ ಗಮನವಿಟ್ಟು ಮಾಡಿ.

ಸಿ.ಡಿ. ಮುಕುಂದಪ್ಪ, ಗೊರಕೊಡು

ವಯಸ್ಸಿನ ಆಧಾರದಲ್ಲಿ ನೇರವಾಗಿ ಎಂ.ಎ. ಮಾಡುತ್ತಿದ್ದೇನೆ. ಇದ ನಂತರ ಎಲ್.ಎಲ್.ಬಿ. ಮಾಡಬಹುದೇ? ಐ.ಎ.ಎಸ್.ನಂತಹ ಪರಿ ತೆಗೆದುಕೊಳ್ಳಬಹುದೇ?

ನೀವು ಎಂ.ಎ. ಆಧಾರದ ಮೇಲೆ ಎಲ್.ಎಲ್.ಬಿ.ಯ ಮಾಡಬಹುದು ಹಾಗೂ ಐ.ಎ.ಎಸ್. ಪರೀಕ್ಷೆಯನ್ನೂ ಕೂಡಾ ಯಾವು ಸಂದೇಹವಿಲ್ಲದೇ ಬರೆಯಬಹುದು, ಮುಂದುವರಿಸಿ.

ಮಾಲಿನಿ ವಜ್ರಳ್ಳಿ, ಯಲ್ಲಾಪುರ

ನಾನು "ಕಮರ್ಷಿಯಲ್ ಪ್ರಾಕ್ಟೀಸ್"ನಲ್ಲಿ ಮೂರು ವರ್ಷ ಡಿಪ್ಲೋಮಾ ಕೋರ್ಸನ್ನು ಮುಗಿಸಿರುತ್ತೇನೆ. ನನಗೆ ಈಗ ೨೧ ವ ಆಗಿರುತ್ತದೆ. ಮುಂದೆ ಡಿಗ್ರಿಯನ್ನು ಮಾಡದೇ ಲೈಬ್ರರಿ ಸೈನ್ಸ್ ಮಾಡಲು ಅ ಅದನ್ನು ಮಾಡಲು ಸಾಧ್ಯವೇ? ಅಥವಾ ಡೈರೆಕ್ಟಾಗಿ ಡಿಗ್ರಿ Final Year external ಆಗಿ ಕಟ್ಟಲು ಸಾಧ್ಯವೇ?

ನೀವು ಲೈಬ್ರರಿ ಸೈನ್ಸ್ ಮಾಡಬೇಕಾದಲ್ಲಿ ಪದವಿ ಪೂರ್ಣ ಆಗಿರಬೇ ಇಲ್ಲವೆ, ನೀವು ಲೈಬ್ರರಿ ಸೈನ್ಸ್ ಸರ್ಟಿಫಿಕೇಟ್ ಕೋರ್ಸನ್ನು ಮಾಡಬಹು ಇಲ್ಲವೆ, ಅಂಚೆ ತೆರಪಿನ ಮೂಲಕ ಯಾವುದಾದರೂ ಪದವಿಯ ಮುಂದುವರಿಸಿ. ಹೆಚ್ಚಿನ ವಿವರಗಳಿಗಾಗಿ ಅಣ್ಣಾಮಲೈ ವಿಶ್ವವಿದ್ಯಾಲಯವ ಸಂಪರ್ಕಿಸಿರಿ.

ಮಾರ್ಗದರ್ಶಿ ವಿಭಾಗಕ್ಕೆ ಕಳುಹಿಸುವ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ :

ವಿಳಾಸ:

ಬಿಸಿಲ ಬದುಕು ಮಾಸಪತ್ರಿಕೆ

ಮಾರ್ಗದರ್ಶಿ ವಿಭಾಗ, ಅಂಚೆ ಪೆಟ್ಟಿಗೆ ೭೯೫೧

ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

ಎಂ.ಬಿ.ಎ. : ಇನ್ನಷ್ಟು ವಿವರ

○ ಮಹಾದೇವಪ್ಪ ಆವಿನ
ಎ-೩. ನಿಶಾನ್ ಮ್ಯಾನರ್
೧೯, ಎನ್.ಹೆಚ್.ಸಿ.ಎಸ್. ಲೇಔಟ್,
ಪ್ಲಾನ್-೨, ಗೋವಿಂದರಾಜ್ ನಗರ,
ಪ್ರಶಾಂತ ನಗರ,
ಬೆಂಗಳೂರು - ೫೬೦ ೦೭೯.

MBA ಪ್ರೋಗ್ರಾಮ್‌ನಲ್ಲಿ ಏನನ್ನು ...ಲಿಸುತ್ತಾರೆ?

ಈ ಪ್ರಶ್ನೆಗೆ ಉತ್ತರ ಪಡೆಯಲು ನಾವು ಈ ...ಳಗಿನ ಮೂರು ಕ್ಷೇತ್ರಗಳತ್ತ ಗಮನ ...ರಿಸಬೇಕು.

1. ಪಠ್ಯಕ್ರಮ (Curriculam)
2. ಕೋರ್ಸ್ ರಚನೆ (Course Structure)
3. ಬೋಧನ ಪದ್ಧತಿಗಳು (Teaching Methods)

೧. ಪಠ್ಯಕ್ರಮ

ಬಹುಪಾಲು ಎಂ.ಬಿ.ಎ. ಪ್ರೋಗ್ರಾಮ್‌ಗಳು ...ಂದೇ ತರವಾದ, ಕೆಲವು ವ್ಯತ್ಯಾಸಗಳೊಡನೆ, ...ಠ್ಯಕ್ರಮಗಳನ್ನು ಹೊಂದಿರುತ್ತವೆ. ಇದರಲ್ಲಿ ...ಲ್ಕು ಅಂಗ ಭಾಗಗಳಿವೆ.

- ಫೌಂಡೇಶನ್ ಕೋರ್ಸುಗಳು (Foundation Courses)
- ಆಚಾರಾರ್ಥಕ ನೈಪುಣ್ಯಗಳು (Functional Skills)
- ಪರಿಸರ ವಿಶ್ಲೇಷಣೆ (Environment Analysis)
- ಸಮಗ್ರತೆಯ ಕೋರ್ಸುಗಳು (Integrative Courses)

ಫೌಂಡೇಶನ್ ಕೋರ್ಸುಗಳು (Founda-...on Courses): ಸ್ಥಾಪನಾ ವಿಷಯಗಳಲ್ಲಿ ...ರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ಗಣಿತ, ಮನೋ...ಜ್ಞಾನ, ಸಮಾಜಶಾಸ್ತ್ರ ಆಧಾರಾಂಶಗಳ ...ರಿಷ್ಕರಣೆ ಮುಂತಾದವುಗಳನ್ನೊಳಗೊಂಡಿರು...ವೆ. ಈ ವಿಷಯಗಳ ನೈಪುಣ್ಯತೆಯು ವೃತ್ತಿಪರ ...ರ್ವಹಣ ಶಿಕ್ಷಣದ ಮೂಲ ಸಾಧನೆಗಳ ...ಂಟಾಗಿದೆ. ಈ ಮೂಲ ಸಾಧನಗಳಲ್ಲಿ ಗಣಿತ ...ರಿಹಾರ ಮಾರ್ಗಗಳು ಹಾಗೂ ಮಾನವ ...ರ್ವರ್ತನ ಮಾರ್ಗಗಳು ವ್ಯವಹಾರದಲ್ಲಿ ಮತ್ತು ...ೇರೆ ಜನರೊಡನೆ ಕೆಲಸ ಮಾಡುವಾಗ ಹೇಗೆ ...ವಹರಿಸಬೇಕೆಂಬುದನ್ನು ಕೇಂದ್ರೀಕರಿಸುತ್ತವೆ. ... ನೈಪುಣ್ಯಗಳು ಬೇರೆ ಬೇರೆ ರೂಪಗಳಲ್ಲಿ ...ೋರ್ಸ್‌ನ ಉದ್ದಕ್ಕೂ ಉಪಯೋಗಿಸ...ಡುತ್ತವೆ.

ಆಚಾರಾರ್ಥಕ ನೈಪುಣ್ಯಗಳು : ಆಚಾರಾರ್ಥಕ ನೈಪುಣ್ಯಗಳು ನಿರ್ವಹಣ ಶಿಕ್ಷಣದ ಅಭ್ಯಾಸದೊಡನೆ ಪದೇ ಪದೇ ಸಂಯೋಜನೆ ಹೊಂದಿರುವ ನೈಪುಣ್ಯಗಳಾಗಿವೆ. ಅವುಗಳಲ್ಲಿ ಒಳಗೊಂಡಿರುವ ವಿಷಯಗಳೆಂದರೆ ಲೆಕ್ಕಾಚಾರ, ಹಣಕಾಸಿನ ನಿರ್ವಹಣೆ, ಮಾರುಕಟ್ಟೆ ನಿರ್ವಹಣೆ, ಉತ್ಪಾದನಾ ನಿರ್ವಹಣೆ, ಕಾರ್ಯಾಚರಣೆ ಸಂಶೋಧನೆ (Operation Research), ಬ್ಯಾಂಕಿಂಗ್ ಹಾಗೂ ಮಾನವ ಸಂಪನ್ಮೂಲ ನಿರ್ವಹಣೆ ಮುಂತಾದವು. ಈ ವಿಷಯಗಳು ಸಂಸ್ಥೆಗಳ ನಿರ್ವಹಣೆಯ ಆಚಾರಾರ್ಥಕ ಕ್ಷೇತ್ರಗಳಲ್ಲಿ ಬಹುಮಟ್ಟಿಗೆ ಜೋಡಿಗೊಂಡಿವೆ. ಎಂ.ಬಿ.ಎ. ಕಾರ್ಯಕ್ರಮದಲ್ಲಿ ಸಾಮಾನ್ಯವಾಗಿ ಪ್ರತಿ ವಿದ್ಯಾರ್ಥಿಯು ಈ ಕ್ಷೇತ್ರವನ್ನು ಚೆನ್ನಾಗಿ ತಿಳಿದಿರಬೇಕಾಗುತ್ತದೆ. ವಿದ್ಯಾರ್ಥಿಯ ಅಭಿರುಚಿ ಹಾಗೂ ಸಾಮರ್ಥ್ಯದ ಆಧಾರದ ಮೇಲೆ ಸಾಮಾನ್ಯವಾಗಿ ಬಹಳ ಮಟ್ಟಿನವರು ಎರಡನೇ ವರ್ಷದ ಶಿಕ್ಷಣ ಪಥದಲ್ಲಿ ಒಂದು ಅಥವಾ ಎರಡು ಕ್ಷೇತ್ರಗಳನ್ನು ಆರಿಸಿಕೊಂಡು ನೈಪುಣ್ಯತೆ ಪಡೆಯಬೇಕಾಗುತ್ತದೆ.

ಪರಿಸರ ವಿಶ್ಲೇಷಣೆ : ವ್ಯವಹಾರವು ಮುಖತಃ ಭಾರತದಲ್ಲಿ ಸರಕಾರದೊಡನೆ ನಿಕಟ ಸಂಬಂಧ ಹೊಂದಿದೆ. ಹಾಗೆಯೇ ಸಂಸ್ಥೆಗಳ ಇರುವುಗಳು ಕಾನೂನು ವ್ಯವಸ್ಥೆ, ಸಾಮಾಜಿಕ ಕಟ್ಟಳೆಗಳು ಮತ್ತು ಸಂಸ್ಕೃತಿ ಸನ್ನಿವೇಶಗಳನ್ನು ಅವಲಂಬಿಸಿರುತ್ತವೆ. ಆದುದರಿಂದ ಶಿಕ್ಷಣ ಪಥಗಳು ವಿದ್ಯಾರ್ಥಿಗಳಿಗೆ ಈ ಕ್ಷೇತ್ರಗಳು ವ್ಯವಹಾರದೊಡನೆ ಹೊಂದಿರುವ ಒಳ ಸಂಬಂಧಗಳನ್ನು ತಿಳಿಯುವಂತೆ ಯೋಜಿಸಿರುತ್ತಾರೆ. ಕಾರಣ ಅಭ್ಯಾಸದ ಪಥಗಳಲ್ಲಿ ಸರಕಾರದ ಕಾನೂನು ನಿಬಂಧನೆಗಳು, ನೀತಿಶಾಸ್ತ್ರ ಮತ್ತು ವ್ಯವಹಾರದ ಸಾಮಾಜಿಕ ಜವಾಬ್ದಾರಿಗಳು ಮುಂತಾದವುಗಳನ್ನು ಒಳಗೂಡಿಸಿರುತ್ತಾರೆ.

ಸಮಗ್ರತೆಯ ಕೋರ್ಸುಗಳು : ಈ ನೈಪುಣ್ಯಗಳ ಕಟ್ಟುಗಳನ್ನು ಹಾಗೂ ತತ್ವಗಳನ್ನು ನಿರ್ವಹಣೆಯ ನಿಜ ಸನ್ನಿವೇಶಗಳಲ್ಲಿ ಒಂದಕ್ಕೊಂದು ಹೊಂದಾಣಿಕೆ ಬರುವಂತೆ ಮಾಡಿ ಪ್ರಯೋಗಿಸಬೇಕಾಗುತ್ತದೆ. ಈ ಉದ್ದೇಶವನ್ನು ಬಹುಮಟ್ಟಿಗೆ ಸಾಧಿಸಲು ವಿಶೇಷವಾಗಿ ವಿನ್ಯಾಸಗೊಳಿಸಿರುವ ವ್ಯವಹಾರ ಕಾರ್ಯನೀತಿ ಅಥವಾ ಯುಕ್ತಿಗಳನ್ನು ತಯಾರು ಮಾಡುವುದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವುದು ಮುಂತಾದ ಶಿಕ್ಷಣ ಪಥಗಳನ್ನು ಅಳವಡಿಸಿರುತ್ತಾರೆ. ಇವುಗಳಿಂದ ವಿದ್ಯಾರ್ಥಿಗಳು ಸಂಸ್ಥೆಗಳ ಸಮಗ್ರ ರೂಪರೇಶೆಗಳ ಯಥಾದೃಷ್ಟಿಯನ್ನು ಪಡೆಯುತ್ತಾರೆ.

೨. ಕೋರ್ಸುಗಳ ರಚನೆ (Course Structure)

ಪ್ರಪಂಚದ ಸುತ್ತ ಬಹುಮಟ್ಟಿಗೆ ಎಲ್ಲಾ ಎರಡು ವರ್ಷದ ಎಂ.ಬಿ.ಎ. ಕಾರ್ಯಕ್ರಮವು ಒಂದೇ ತೆರನಾದ ಮೂಲ ರಚನೆಯನ್ನು ಹೊಂದಿರುತ್ತವೆ. ಕಾರ್ಯಕ್ರಮವನ್ನು ೩ ವಿಭಾಗಗಳನ್ನಾಗಿ ವಿಂಗಡಿಸಿ ಮೂರು ಕಾಲಾವಧಿಗೆ ಹೊಂದಿಕೆಯಾಗುವಂತೆ ಮಾಡಲಾಗಿದೆ.

ಮೊದಲನೆ ವರ್ಷದ ಪಠ್ಯಕ್ರಮದಲ್ಲಿ ವಿದ್ಯಾರ್ಥಿಯು ವೃತ್ತಿಪರ ನಿರ್ವಹಣೆ ಶಿಕ್ಷಣದ ಮೂಲಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾನೆ. ಇಲ್ಲಿ ವಿಷಯಗಳ ಆಳವಾದ ಅಭ್ಯಾಸಕ್ಕಿಂತ ವ್ಯಾಪಕವಾದ ಅಭ್ಯಾಸಕ್ಕೆ ಮಹತ್ವ ಕೊಡಲಾಗಿರುತ್ತದೆ. ಈ ಸಮಯದಲ್ಲಿ ಕಲಿಸುವ ವಿಷಯಗಳ ಬಹುಪಾಲು ಹೆಸರುಗಳನ್ನು ಮೇಲೆ ತಿಳಿಸಿದೆ.

ಮೊದಲನೇ ವರ್ಷದ ಕೊನೆ ಭಾಗ ಹಾಗೂ ಎರಡನೇ ವರ್ಷ ಮೊದಲಲ್ಲಿ ೨-೩ ತಿಂಗಳ ಪ್ರಯೋಗ ತರಬೇತಿಯನ್ನು ಯಾವುದಾದರೊಂದು ಸಂಸ್ಥೆಯಲ್ಲಿ ನಿರ್ವಹಿಸಬೇಕಾಗುತ್ತದೆ. ಇದಕ್ಕೆ Project work ಎಂದು ಕರೆಯುತ್ತಾರೆ. ಇದರ ಉದ್ದೇಶವೆಂದರೆ ವಿದ್ಯಾರ್ಥಿಗಳಿಗೆ ಸಂಸ್ಥೆಗಳಲ್ಲಿ ನಿಜವಾದ ಸ್ವತಃ ಅನುಭವ ಕೊಡಿಸುವುದು ಹಾಗೂ ತಾವು ಕಲಿತ ಪಾಠಗಳನ್ನು ಪ್ರಯೋಗಿಸಲು ಅವಕಾಶ ಒದಗಿಸುವುದು.

ಎರಡನೇ ವರ್ಷದಲ್ಲಿ ವಿದ್ಯಾರ್ಥಿಯು ತನ್ನಲ್ಲಿ ನಿರ್ದಿಷ್ಟ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳುತ್ತಾನೆ. ಇದನ್ನು ಸಾಧಿಸಲು ವಿಶೇಷ ನೈಪುಣ್ಯಪಡೆಯಬೇಕಾಗಿರುವ ವಿಷಯ

ಗಳ ಪಠ್ಯಕ್ರಮವಿರುತ್ತದೆ. ವಿದ್ಯಾರ್ಥಿಗಳು ಒಂದು ಅಥವಾ ಎರಡು ವಿಷಯಗಳನ್ನು ವಿಶೇಷ ನೈಪುಣ್ಯ ಪಡೆಯಲು ಆರಿಸಿಕೊಳ್ಳಬೇಕಾಗುತ್ತದೆ. ಆ ವಿಷಯಗಳಲ್ಲಿ ತುಂಬಾ ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ವಿಶೇಷ ಪರಿಜ್ಞಾನ ಪಡೆಯಲು ಮಾರುಕಟ್ಟೆ, ಹಣಕಾಸು ಮುಂತಾದ ಆಚಾರಾರ್ಥಕ ಕ್ಷೇತ್ರದ ವಿಷಯವನ್ನಾಗಲಿ ಅಥವಾ ಕೃಷಿ, ಶಕ್ತಿ ಮುಂತಾದ ಆರ್ಥಿಕ ಕ್ಷೇತ್ರದ ಮೂಲಕ್ರಿಯೆಗಳ ನಿರ್ವಹಣೆಯನ್ನಾಗಲಿ ಅಥವಾ ನಿರ್ದಿಷ್ಟ ಉದ್ಯಮವನ್ನಾಗಲಿ ಅಥವಾ ಉದ್ಯಮಗಳ ಯೋಜನಾ ಕೌಶಲ್ಯವನ್ನಾಗಲಿ ಆರಿಸಿಕೊಳ್ಳಬಹುದು.

೩. ಬೋಧಿಸುವ ಪದ್ಧತಿ

ಎಂ.ಬಿ.ಎ. ಪದವೀಧರರಿಂದ ನಿರೀಕ್ಷಿಸುವ ಮಾರುಕಟ್ಟೆ ಅಪೇಕ್ಷೆಯು ಬೇರೆ ಪದವೀಧರರಿಗಿಂತ ಭಿನ್ನವಾಗಿರುತ್ತದೆ. ಎಂ.ಬಿ.ಎ. ಪದವೀಧರರು ಕಷ್ಟಕರ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಅವರ ಭಾವನ ರೂಪ ತಿಳುವಳಿಕೆಗಳು ಉಪಯೋಗಕ್ಕೆ ಬಾರವು. ಅವರು ಪ್ರಪಂಚದಲ್ಲಿ ಸ್ವತಃ ಕೆಲಸ ನಿಭಾಯಿಸಲು ಶಕ್ತರಾಗಿರಬೇಕು. ಅವರು ಬರೀ ತಾತ್ವಿಕ ಮಾರ್ಗಗಳಲ್ಲೇ ಕಳೆದು ಹೋಗುವಂತಿಲ್ಲ. ಆದರೂ ಮ್ಯಾನೇಜ್‌ಮೆಂಟ್ ಶಾಲೆಗಳಲ್ಲಿ ತಾತ್ವಿಕ ಪರಿಹಾರ ನೈಪುಣ್ಯಗಳನ್ನು ವ್ಯವಹಾರ ಸಮಸ್ಯೆಗಳಿಗೆ ತಕ್ಕ ಪರಿಹಾರಗಳನ್ನು ಕಂಡುಹಿಡಿಯಲು ಕಲಿಸಿಕೊಡುತ್ತಾರೆ. ಆದುದರಿಂದ ಒಳ್ಳೇ ತರಬೇತಿ ಪಡೆದ ನಿರ್ವಾಹಕರನ್ನು ತಯಾರು ಮಾಡಲು ನಿಸ್ಸಂಶಯವಾಗಿ ತತ್ವ ಮತ್ತು ಆಚರಣೆ ಮಧ್ಯೆ ಸಮತೋಲವನ್ನು ಕಲ್ಪಿಸಬೇಕಾಗುತ್ತದೆ. ಈ ಎರಡರ ಸಮನ್ವಯ ಪಡೆಯಲು ಎರಡು ವಿಧವಾದ ಬೋಧನ ಪದ್ಧತಿಗಳನ್ನು ಅನುಸರಿಸುತ್ತಾರೆ.

- ಅನುಭವಾತ್ಮಕ (Experiential)
- ತಾತ್ವಿಕ (Theoretical)


ಅನುಭವಾತ್ಮಕ (Experiential): MBA ಬೋಧನ ಕ್ರಮದಲ್ಲಿ ಎಲ್ಲರಿಗೂ ಚಿರಪರಿಚಿತ ಪದ್ಧತಿ ಎಂದರೆ ''ಘಟನಾಭ್ಯಾಸ (case study) ಪದ್ಧತಿ. ಇದು ಎಂ.ಬಿ.ಎ. ಶಿಕ್ಷಣದ ಬೋಧನೆಗೆ ಅಳವಡಿಸಿರುವ ಒಂದು ಪರಿಣಾಮಕಾರಿ ಪದ್ಧತಿ. ಈ ಪದ್ಧತಿಯ ಕೇಂದ್ರವು ''ಘಟನೆ'' ಅಂದರೆ ವ್ಯವಹಾರದ ಒಂದು ಸಂದರ್ಭ ಅಥವಾ ಸನ್ನಿವೇಶ. ಆ ಘಟನೆಯನ್ನು ವಿಸ್ತಾರವಾಗಿ ವಿವರಿಸಿರುತ್ತಾರೆ. ಇದನ್ನು ಅಭ್ಯಾಸ ಮಾಡಿ ವಿದ್ಯಾರ್ಥಿಗಳು ವ್ಯವಹಾರ ಸಮಸ್ಯೆಗೆ ಪರಿಹಾರ ಹಾಗೂ ನಿರ್ಣಯವನ್ನು ಪರಿಶೋಧಿಸಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವೆಂದರೆ ನಿಜ ಜೀವನದ ಸಮಸ್ಯೆಯ ಅನುಭವ ಆಗುತ್ತದೆ ಅಲ್ಲದೆ, ಬೇರೆ ಬೇರೆ ಉದ್ಯಮಗಳ ತಿಳಿವಳಿಕೆಯು ಬೆಳೆಯುತ್ತದೆ. ಈ ಪದ್ಧತಿಯ ನ್ಯೂನತೆ ಎಂದರೆ ಭಾರತೀಯ ಉದ್ಯಮಗಳಲ್ಲಿ ನಡೆಯುವ ಘಟನೆಗಳು, ಅಂಕಿ ಅಂಶಗಳು ಅಷ್ಟು ಸುಲಭವಾಗಿ ದೊರೆಯುವುದಿಲ್ಲ. ಹಾಗೆಯೇ ಸಾಂಪ್ರದಾಯಿಕ ಪದ್ಧತಿಯಲ್ಲೇ ಕಲಿತು ಹಾಗೂ ತರಬೇತಿ ಪಡೆದು ಬಂದಿರುವ ವಿದ್ಯಾರ್ಥಿಗಳಿಗೂ ಹಾಗು ಬೋಧಕರಿಗೂ ಹೊಂದಿಕೊಳ್ಳಲು ಹಾಗು ಬೋಧಿಸಲು ಕಷ್ಟವಾಗುತ್ತದೆ.

ಇನ್ನೊಂದು ಮುಖ್ಯ ಅನುಭವಾತ್ಮಕ ಬೋಧನ ಕ್ರಮವೆಂದರೆ ಬೇಸಿಗೆ ತರಬೇತಿ. ಬಹಳಷ್ಟು ಸಂಸ್ಥೆಗಳು ಈ ತರಬೇತಿಯನ್ನು ತಮ್ಮ ಬೋಧನಾ ಕ್ರಮದಲ್ಲಿ ಅಳವಡಿಸಿರುತ್ತಾರೆ. ಇದರಲ್ಲಿ ವಿದ್ಯಾರ್ಥಿಗಳು ತಾವು ಕಲಿತ ಮೂಲ ನೈಪುಣ್ಯಗಳನ್ನು ನಿಜ ವ್ಯವಹಾರದ ಸನ್ನಿವೇಶಗಳಲ್ಲಿ ಪ್ರಯೋಗಿಸಲು ಅವಕಾಶ, ಇದಲ್ಲದೆ ಬೇರೆ ವಿಧಾನಗಳಾದ ಪ್ರವಾಸಗಳು, ಪ್ರಯೋಗ ಶಾಲಾ ಸಭೆಗಳು, ವ್ಯವಹಾರ ಆಟಗಳು, ಇನ್‌ಬ್ಯಾಸ್ಕೆಟ್ ಸ್ಟಡಿಗಳು ಹಾಗೂ ಪ್ರಾಜೆಕ್ಟ್‌ಗಳನ್ನು ಮಾಡುವುದು ಮುಂತಾದವುಗಳನ್ನು ಅಳವಡಿಸಿರುತ್ತಾರೆ.

ತಿದ್ದುಪಡಿ

ಕಳೆದ ಸಂಚಿಕೆಯ ೩೭ನೇ ಪುಟದಲ್ಲಿ ದೆಹಲಿ ವಿ.ವಿ.ದ Faculty of Management Studies (FMS) ಸಂಸ್ಥೆಗೆ ಪ್ರವೇಶ ಪಡೆಯಲು ವಿಜ್ಞಾನ ಅಥವಾ ಆರ್ಟ್ಸ್ ಪದವಿಯಲ್ಲಿ ಶೇ. ೫೫ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು ಎಂದು ಪ್ರಕಟವಾಗಿದೆ. ವಾಸ್ತವವಾಗಿ ವಾಣಿಜ್ಯ ಪದವೀಧರರು ಕೂಡಾ ಇಲ್ಲಿ ಸೇರಲು ಅರ್ಹರು.

ತಾತ್ವಿಕ (Theoretical) : ಇದರಲ್ಲಿ ಸಾಮಾನ್ಯವಾಗಿ ತರಗತಿಗಳಲ್ಲಿಯ ಉಪನ್ಯಾಸ ಪದ್ಧತಿಯನ್ನು ಒಳಗೊಂಡಿರುತ್ತದೆ. ಇದಲ್ಲದೆ ಸೆಮಿನಾರುಗಳು, ಅತಿಥಿ ಉಪನ್ಯಾಸಗಳು ಮತ್ತು ಪ್ರತಿಪಾದನೆ ಹಾಗೂ ನಿರೂಪಣೆಗಳನ್ನು ಅಳವಡಿಸಿರುತ್ತಾರೆ. ಈ ತರಹದ ತಂತ್ರಗಳನ್ನು ನಿರ್ದಿಷ್ಟ ನೈಪುಣ್ಯ ಅಥವಾ ಜ್ಞಾನವನ್ನು ಬೋಧಿಸಲು ಉಪಯೋಗಿಸುತ್ತಾರೆ. ಈ ಪದ್ಧತಿಯನ್ನು ಸಾಮಾನ್ಯವಾಗಿ ಎಲ್ಲಾ ಭಾರತೀಯ



ವಿದ್ಯಾ ಸಂಸ್ಥೆಗಳಲ್ಲಿ ಬಳಸುತ್ತಾರೆ. ಇವ
ಬೋಧನೆಗೆ ಸಹಾಯವಾಗಲೆಂದು ಅನೇಕ
ಶ್ರವಣ ಸಾಧನಗಳನ್ನು ಬಳಸಲಾಗುತ್ತದೆ.

ಎಲ್ಲಾ ಸಂಸ್ಥೆಗಳು ಮೇಲೆ ತಿಳಿಸಿದ ಎ
ತಂತ್ರಗಳ ಮಿಶ್ರಣವನ್ನು ವಿದ್ಯಾರ್ಥಿಗಳಿಗೆ ಸಾಕ
ಫಲಕಾರಿಯಾಗುವಂತೆ ತಮ್ಮ ತಮ್ಮ ಶಕ್ತ್ಯಾನುಸ
ಪ್ರಯೋಗಿಸಿ ಬಳಸುತ್ತಾರೆ.

ವೃತ್ತಿಯ ಅವಕಾಶಗಳು

ಎಂ.ಬಿ.ಎ. ಪದವೀಧರರ ವೃತ್ತಿಗಳ ಮ
ಮೂರು ಮುಖ್ಯ ವಿಷಯಗಳನ್ನು ಅವಲ
ಸಿರುತ್ತದೆ.

- ಓದಿದ ವಿದ್ಯಾಸಂಸ್ಥೆ
- ವಿಶೇಷ ಪರಿಣತಿ ಪಡೆದ ವಿಷಯಗಳು
- ಉದ್ಯೋಗಕ್ಕೆ ಸೇರಿದ ಉದ್ಯಮ/ಸಂಸ್ಥೆ

ಓದಿದ ವಿದ್ಯಾಸಂಸ್ಥೆ

ಎಂ.ಬಿ.ಎ.ಯು ಜೀವನೋಪಾಯ ವೃತ್ತಿ
ಗುರಿ ಇಟ್ಟು ಓದಿದ ಒಂದು ಓದು. ಈ
ಸಾಧಿಸಲು ಬಹುಪಾಲು ನಿರ್ವಹಣಾ ವಿ
ಸಂಸ್ಥೆಗಳು ಉದ್ಯೋಗ ಗೊತ್ತುಮಾಡುವ ಕೇ
ಗಳನ್ನು (Placement Cells) ಹೊಂದಿರುತ್ತ
ಅವುಗಳ ಉದ್ದೇಶವೆಂದರೆ ಬೇರೆ ಬ
ಉದ್ಯಮಗಳನ್ನು ಸಂಸ್ಥೆಗಳನ್ನು ಸಂಪರ್ಕಿಸಿ ಅ
ಗಳು ತಮ್ಮ ವಿದ್ಯಾರ್ಥಿಗಳಿಗೆ ಕೆಲಸದ ಅವ
ಗಳನ್ನು ನೀಡುವಂತೆ ಮಾಡುವುದು. ಆದರೆ
ಕೇಂದ್ರಗಳ ಫಲಕಾರಿ ಪರಿಣಾಮವು ವ
ಸಂಸ್ಥೆಯಿಂದ ವಿದ್ಯಾಸಂಸ್ಥೆಗೆ ಬೇರೆ ಬ
ಯಾಗಿರುತ್ತದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಚಿರಪರಿ
ಪ್ರಸಿದ್ಧ ಮ್ಯಾನೇಜ್‌ಮೆಂಟ್ ವಿದ್ಯಾಸಂಸ್ಥೆ
ಅಂದರೆ IIMಗಳು, XLRI, JBIMS, RM
TISS ಮುಂತಾದವುಗಳಿಂದ ಹೊರಬ
ವಿದ್ಯಾರ್ಥಿಗಳನ್ನು ವಿದೇಶಿ ಬ್ಯಾಂಕು
ಬಹುದೇಶಿ ಕಂಪನಿಗಳು, ಭಾರತೀಯ ದ
ಕಂಪನಿಗಳು ಮುಂತಾದವು ಆರಿಸಿಕೊ
ಮುಂದೆ ಬರುತ್ತಾರೆ. IIMಗಳಿಂದ ಹೊರಬ
ವಿದ್ಯಾರ್ಥಿಗಳು ದೊರಕದೆ ಸುಮಾರು ಕಂಪನಿ
ಪ್ರತಿವರ್ಷ ವಾಪಾಸು ಹೋಗುತ್ತವೆ.

ಅಷ್ಟು ಪ್ರಸಿದ್ಧವಲ್ಲದ ಎಂ.ಬಿ.ಎ. ವಿದ್ಯಾಸಂಸ್ಥೆ ಳಿಂದ ಹೊರಬಂದ ವಿದ್ಯಾರ್ಥಿಗಳಿಗೆ ಸಾಮಾನ್ಯ ಾಗಿ ಸ್ಥಳೀಯ ಕಂಪನಿಗಳಿಂದ ಪ್ರಸ್ತಾಪಗಳು ರುತ್ತವೆ. ಆದರೆ ಅಂತಹ ಪ್ರಸ್ತಾಪಗಳು ಷ್ಟೊಂದು ಒಳ್ಳೆಯ ಸಂಭಾವನೆ ೊಡುವಂತಹವು ಅಲ್ಲ.

ಶೇಷ ಪರಿಣತಿ

ಇದೂ ಒಂದು ಪ್ರಮುಖವಾದ ಕಾರಣ ಾಗಿದೆ. ಇದು ವಿದ್ಯಾರ್ಥಿಗಳ ಅಭಿರುಚಿ ಹಾಗೂ ಾಮರ್ಥ್ಯಗಳ ಮೇಲೆ ಮತ್ತು ಎಂ.ಬಿ.ಎ. ದ್ಯಾಸಂಸ್ಥೆಯಲ್ಲಿ ದೊರೆಯುವ ಸಾಧನೋ ಾಯಗಳ ಆಧಾರದ ಮೇಲೆ ವ್ಯತ್ಯಾಸ ೊಂದುವಂತಹದ್ದು. ಈಗ ನಾವು ಪ್ರತಿಯೊಂದು ಶೇಷ ಪರಿಣತಿ ವಿಷಯದ ಬಗ್ಗೆ ವಿವರಗಳನ್ನು ಳಿಯಲು ಪ್ರಯತ್ನಿಸುವ. ಇದರಿಂದ ಚಾರರ್ಥಕ ಕ್ಷೇತ್ರಗಳ ಬಗ್ಗೆ ಸ್ವಲ್ಪ ಮಾಹಿತಿ ೊರೆತಂತಾಗುತ್ತದೆ.

ಎಂ.ಬಿ.ಎ. ವಿದ್ಯಾರ್ಥಿಯು ಈ ಕೆಳಗಿನ ಾವುದಾದರೊಂದು ವಿಷಯವನ್ನು ಆರಿಸಿ ಾಂಡು ವಿಶೇಷ ಪರಿಣತಿ ಪಡೆಯಬಹುದು.

ಮಾರುಕಟ್ಟೆ ನಿರ್ವಹಣೆ
(Marketing Management)
ಹಣಕಾಸು ನಿರ್ವಹಣೆ
(Finance Management)
ಮಾನವ ಸಂಪನ್ಮೂಲ ನಿರ್ವಹಣೆ
(Human Resource Management)
ಮಂಡಲಗಳ ನಿರ್ವಹಣೆ
(Systems Management)
ಉತ್ಪಾದನಾ ನಿರ್ವಹಣೆ
(Production Management)

ಮಾರುಕಟ್ಟೆ ನಿರ್ವಹಣೆ : ಮಾರುಕಟ್ಟೆ ರ್ವಹಣೆ ಎಂದರೆ ವಿಶಾಲಾರ್ಥದಲ್ಲಿ ರಕುಗಳನ್ನು ಹಾಗೂ ಜನರನ್ನು ಗ್ಗೂಡಿಸುವುದು. ಈ ಕ್ಷೇತ್ರವು ಬಹಳಷ್ಟು ಂ.ಬಿ.ಎ. ವಿದ್ಯಾರ್ಥಿಗಳಿಗೆ ಪ್ರಿಯವಾದದ್ದು. ಈ ೇತ್ರದಲ್ಲಿ ನಾಲ್ಕು ವಿಶಿಷ್ಟ ಕ್ರಿಯೆಗಳಿವೆ.

ಮಾರಾಟ ಮತ್ತು ವಿತರಣೆ
(Sales & Distribution)
ಸರಕು ಮತ್ತು ಬ್ರ್ಯಾಂಡ್ ನಿರ್ವಹಣೆ
(Product/Brand Management)
ಜಾಹೀರಾತುಗಳು
(Advertisements)
ಮಾರುಕಟ್ಟೆ ಸಂಶೋಧನೆ
(Marketing Research)

ಮಾರಾಟ ಮತ್ತು ಸರಕು ನಿರ್ವಹಣೆಯಲ್ಲಿ ಅವಕಾಶಗಳು ವಿಶಾಲ. ಆದರೆ ಕಂಪನಿಗಳವರು ಇಚ್ಛಿಸುವುದೇನೆಂದರೆ ತರಬೇತು ಪಡೆಯುವವರು ಸರಕು ನಿರ್ವಹಣೆ ಜವಾಬ್ದಾರಿ ವಹಿಸಿಕೊಳ್ಳುವ ಮುಂಚೆ ಮಾರಾಟದಲ್ಲಿ ಅವರು ಅನುಭವ ಪಡೆದಿರಬೇಕೆಂದು. ಈ ಕ್ಷೇತ್ರದಲ್ಲಿಯ ಕಂಪನಿಗಳ ಶ್ರೇಣಿಯು ವಿಶಾಲ ಹಾಗೂ ಎಲ್ಲಾ ತರಹದ ಸಂಸ್ಥೆಗಳನ್ನು ಒಳಗೊಂಡಿದೆ.

ಜಾಹೀರಾತು ಮತ್ತು ಮಾರುಕಟ್ಟೆ ಸಂಶೋಧನೆಗಳು ಸೇವಾ ಕ್ಷೇತ್ರದ ಚಟುವಟಿಕೆಗಳು. ಈ ಕ್ಷೇತ್ರದಲ್ಲಿ ಬರುವ ಕಂಪನಿಗಳು ತುಂಬಾ ವಿಶೇಷ ಪರಿಣತಿ ಪಡೆದ ಸಲಹಾ ಸಂಸ್ಥೆಗಳು. ನಮ್ಮ ದೇಶದಲ್ಲಿ ಬಹಳಮಟ್ಟಿಗೆ ಚಿಕ್ಕ ಚಿಕ್ಕ ನಿಯೋಗಗಳು ಈ ಕ್ಷೇತ್ರದಲ್ಲಿವೆ. ಹಾಗೆಯೇ ಸ್ವಲ್ಪ ಮಟ್ಟಿಗೆ ದೊಡ್ಡ ದೊಡ್ಡ ನಿಯೋಗಗಳಿವೆ. ಕೆಲವು ಸಾರಿ ಈ ನಿಯೋಗಗಳು ವಿದೇಶಿ ಸಂಸ್ಥೆಗಳೊಡನೆ ಒಡಂಬಡಿಕೆ ಹೊಂದಿರುತ್ತಾರೆ. ಸಾಮಾನ್ಯವಾಗಿ ವೃತ್ತಿಪರ ಮಾರುಕಟ್ಟೆ ಸಂಶೋಧನಾ ನಿಯೋಗವು ಜಾಹೀರಾತು ನಿಯೋಗದ ಉಪಸಂಸ್ಥೆ ಅಥವಾ ಅಂಗಸಂಸ್ಥೆಗಳಾಗಿರುತ್ತವೆ. ಸಾಧಾರಣವಾಗಿ ಉತ್ಪಾದನ ಸಂಸ್ಥೆಗಳು ಜಾಹೀರಾತು ಮತ್ತು ಮಾರುಕಟ್ಟೆ ಸಂಶೋಧನೆಗಳಿಗಾಗಿಯೇ ಸುಸಜ್ಜಿತವಾದ ಒಳ್ಳೇ ಅಭಿವೃದ್ಧಿ ಹೊಂದಿದ ವಿಭಾಗವನ್ನು ಹೊಂದಿರುವುದಿಲ್ಲ.

ಹಣಕಾಸು ನಿರ್ವಹಣೆ : ಈ ಕಸುಬು ಹಣವನ್ನು ವ್ಯವಹಾರದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸುವ ಬಗ್ಗೆ ಸಂಬಂಧಿಸಿದೆ. ಈ ವೃತ್ತಿಯಲ್ಲಿ ಎಂ.ಬಿ.ಎ.ಗಳು ಸಿ.ಎ.ಗಳ ಜೊತೆ ಸ್ಪರ್ಧಿಸಬೇಕಾಗುತ್ತದೆ. ಆದರೆ ಸಾಧಾರಣ ಸಿ.ಎ.ಗಳಿಗಿಂತ ಹೆಚ್ಚಿನದನ್ನು ಕಲಿಯುತ್ತಾರೆ. ಆದ ಕಾರಣ ಮಧ್ಯಮ ಕಾಲದಲ್ಲಿ ಸರಿಸಮಾನವಾಗಿ ವರ್ಚಸ್ಸುಳ್ಳ ಎಂ.ಬಿ.ಎ.ಗಳು ತಮ್ಮ ಸಿ.ಎ. ಸಹೋದ್ಯೋಗಿಗಳಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತಾರೆ. ಈ ಕಸುಬಿನಲ್ಲಿ ಏಳು ವಿಧದ ವೃತ್ತಿ ಪಥಗಳಿವೆ.

ಬಳಕೆದಾರರ ಬ್ಯಾಂಕಿಂಗ್
(Consumers Banking)
ಹೂಡಿಕೆ ಬ್ಯಾಂಕಿಂಗ್
(Investment Banking)
ಸಂಸ್ಥೆಗಳ ಬ್ಯಾಂಕಿಂಗ್
(Institutional Banking)
ಅಭಿವೃದ್ಧಿ ಬ್ಯಾಂಕಿಂಗ್
(Development Banking)
ಬ್ಯಾಂಕೇತರ ಹಣಕಾಸು
(Non-Banking Finance)
ಸಂಸ್ಥಾ ಹಣಕಾಸು
(Corporate Finance)

ಬಳಕೆದಾರರ, ಬಂಡವಾಳ ಹಾಗೂ ಸಂಸ್ಥೆಗಳ ಬ್ಯಾಂಕಿಂಗ್‌ಗಳು ಸಾಮಾನ್ಯವಾಗಿ ಒಂದೇ ಸಂಸ್ಥೆಯು ನಡೆಸುತ್ತದೆ. ಇದರಲ್ಲಿ ವೈಯಕ್ತಿಕ ಖಾತೆಗಳು, ಸೆಕ್ಯುರಿಟಿಗಳ ನಿರ್ವಹಣೆ, ವಿದೇಶಿ ಹಣ ಪರಿವರ್ತನೆಗಳು ಮತ್ತು ಸಂಸ್ಥಾ ಗ್ರಾಹಕರಿಗೆ ಸಾಲ ಕೊಡುವುದನ್ನು ಒಳಗೊಂಡಿರುತ್ತದೆ. ಈ ಕಾರ್ಯಗಳು ತುಂಬಾ ಪರಿಣತಿ ಪಡೆದಿರುವಂತಹದ್ದು ಆಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಬಹುಮಟ್ಟಿನ ಬ್ಯಾಂಕುಗಳು ತಮ್ಮದೇ ಆದ ವ್ಯಾಪಾರಿ ಬ್ಯಾಂಕಿನ ಆಶ್ರಿತ ಸಂಸ್ಥೆ ಅಥವಾ ವಿಭಾಗವನ್ನು ಹೊಂದಿರುತ್ತವೆ. ಇವು ಕಂಪೆನಿಗಳಿಗೆ ಸಾರ್ವಜನಿಕರಿಂದ ಬಂಡವಾಳ ಹೂಡಿಕೆ ಎತ್ತುವ ಕಾರ್ಯವನ್ನು ನಿರ್ವಹಿಸುತ್ತವೆ. ಈ ಕ್ಷೇತ್ರದಲ್ಲಿ ಇತ್ತೀಚಿಗೆ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಕೂಡ ಕಾರ್ಯಾರಂಭ ಮಾಡಿವೆ. ಆದರೆ, ಅವುಗಳ ಸಫಲತೆಯು ಅನುಮಾನಾಸ್ಪದ ವಿದೇಶಿ ಬ್ಯಾಂಕುಗಳು ಮೇಲೆ ತಿಳಿಸಿದ ಕಾರ್ಯ ಕ್ಷೇತ್ರದಲ್ಲಿ ತುಂಬಾ ಆಕ್ರಮಣಕಾರಿಯಾಗಿಯೂ ಹಾಗೂ ರಚನಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಲಿವೆ. ಒಟ್ಟಿನ ಮೇಲೆ ನಮ್ಮ ದೇಶದ ವ್ಯಾಪಾರಿ ಬ್ಯಾಂಕಿಂಗ್ ವಿಭಾಗಗಳ ಕಾರ್ಯ ತತ್ಪರತೆಯು ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟಿದೆ.

ಅಭಿವೃದ್ಧಿ ಬ್ಯಾಂಕಿನ ವ್ಯವಹಾರವು ಮುಖ್ಯವಾಗಿ ಅದಕ್ಕಾಗಿಯೇ ಸ್ಥಾಪಿಸಿರುವ ವಿಶೇಷ ಸಂಸ್ಥೆಗಳಿಂದ, ಅಂದರೆ ICICI, IDBI, IFCI ಮುಂತಾದವುಗಳ ಮೂಲಕ ನಡೆಯುತ್ತದೆ. ಇವುಗಳ ಧ್ಯೇಯೋದ್ದೇಶವೆಂದರೆ ಔದ್ಯೋಗಿಕರಣದ ಬೆಳವಣಿಗೆಗೆ ಸಹಾಯ ಮಾಡಿ ದೇಶದ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡುವುದು. ಇವುಗಳ ಉದ್ದೇಶಗಳು ಸಾಂಪ್ರಾದಾಯಿಕ ಬ್ಯಾಂಕಿಂಗ್‌ಗಿಂತ ಬೇರೆಯಾಗಿದ್ದು ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸುವಂತಹದ್ದಾಗಿರುತ್ತದೆ.

ಬ್ಯಾಂಕೇತರ ಹಣಕಾಸಿನಲ್ಲಿ ಎರಡು ವಿಧಗಳಿವೆ. ಒಂದು-ಗುತ್ತಿಗೆ, Hire Purchasing, ವೈಯಕ್ತಿಕ ಬ್ಯಾಂಕಿಂಗ್ ಮುಂತಾದ ಹಣಕಾಸು ವ್ಯವಹಾರವನ್ನೊಳಗೊಂಡಿರುತ್ತದೆ. ಇನ್ನೊಂದು-ವಿಶೇಷ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಮೂಲಕ ನಡೆಸುವ Shipping Finance, Housing finance, Venture Capital ಮುಂತಾದವುಗಳಾಗಿರುತ್ತದೆ.

ಸಂಸ್ಥಾ ಹಣಕಾಸು ಮಾರ್ಗ ಎಲ್ಲರಿಗೂ ತಿಳಿದದ್ದೇ. ಕಂಪನಿಗಳು ತಮ್ಮಲ್ಲಿಯ ಸಿಬ್ಬಂದಿಯಿಂದಲೇ ಈ ಕ್ಷೇತ್ರದ ಪರಿಣತಿಯನ್ನು

ನಿರೀಕ್ಷಿಸಬೇಕಾಗುತ್ತದೆ. ಅವುಗಳು ಖರ್ಚು ಉಳಿಸುವಿಕೆಗೆ, ಹಣಕಾಸು ಯೋಜನೆಗೆ, ಹಾಗೂ ಲೆಕ್ಕಪತ್ರವ್ಯವಹಾರ ನೋಡಿಕೊಳ್ಳಲು ದೊಡ್ಡ ವಿಭಾಗಗಳನ್ನು ಹೊಂದಿರುತ್ತವೆ. ಇವು ಕೂಡ ಸಾಹಸಕರ ವೃತ್ತಿ ಅವಕಾಶಗಳನ್ನು ಒದಗಿಸುತ್ತದೆ.

ಮಾನವ ಸಂಪನ್ಮೂಲ ನಿರ್ವಹಣೆ : ಈ ಕ್ಷೇತ್ರದಲ್ಲಿ ಮೂರು ಮುಖ್ಯ ವಿಶಾಲವಾದ ವೃತ್ತಿ ಅವಕಾಶಗಳಿವೆ. ನಾವು ಮಹತ್ವವಾಗಿ ಗಮನಿಸಬೇಕಾದದ್ದೇನೆಂದರೆ ನಮ್ಮ ದೇಶದಲ್ಲಿ ಈಗ ತುಂಬಾ ತ್ವರಿತವಾಗಿ ಬೆಳೆಯುತ್ತಿರುವ ವಿಶೇಷ ಪರಿಣತಿ ಕ್ಷೇತ್ರ ಇದಾಗಿದೆ. ಮೂರು ಅವಕಾಶಗಳೆಂದರೆ

ಮಾನವ ಸಂಪನ್ಮೂಲ ನಿರ್ವಹಣೆ (HRD)


ಸಿಬ್ಬಂದಿ ನಿರ್ವಹಣೆ

(Personnel Management)

ಉದ್ಯಮ ಸಂಬಂಧ

(Industrial Relations)

HRD ಅಧಿಕಾರಿಯ ವೃತ್ತಿಕ್ರಿಯೆಯು, ಕೆಲಸ ನಿರ್ವಹಣೆಯ ಗುಣವಿಮರ್ಶೆ ಮಾಡುವುದು (Performance Appraisal), ನೌಕರರಿಗೆ ಸಲಹೆಗಳು, ಸಿಬ್ಬಂದಿ ತರಬೇತಿ, ನೌಕರರನ್ನು



ಪ್ರೇರೇಪಿಸುವುದು ಮುಂತಾದ ಕೆಲಸಗಳನ್ನು ಗೊಂಡಿರುತ್ತದೆ. ಆತನ ಕೆಲಸಗಳು ಸಾಧಾ ವಾಗಿ ಕಂಪೆನಿಗಳಲ್ಲಿಯ ಉದ್ಯೋಗಿ ಅಭಿವೃದ್ಧಿಯನ್ನು ನೋಡಿಕೊಳ್ಳುವುದಾಗಿರುತ್ತ

ಸಿಬ್ಬಂದಿ ಅಧಿಕಾರಿಯ ಕಾರ್ಯಕ್ಷೇತ್ರ

ಸಂಸ್ಥೆಯನ್ನು ಹೇಗೆ ಆರಿಸಬೇಕು?

ನೀವು ಎಂ.ಬಿ.ಎ.ಯನ್ನು ಯಾವ ಸಂಸ್ಥೆಯಲ್ಲಿ ಮಾಡಬೇಕು ಎಂದು ಆರಿಸುವಾಗ ಮೊದಲ ಗಮನವು ಆ ಸಂಸ್ಥೆಯ ನ್ಯಾಯಸಮ್ಮತವಾದ ಅಧಿಕಾರ (Compatant Authority)ದಿಂದ ಮಾನ್ಯತೆ ಪಡೆದಿದೆಯೇ ಎಂದು ತಿಳಿಯುವ ಕಡೆಗೆ ಹೋಗಬೇಕು. ಮಾರುಕಟ್ಟೆಯಲ್ಲಿ ಕೆಲವಾರು ಕಾರ್ಯಕ್ರಮಗಳು ರಾತ್ರಿಯೇ ಹಾರಿ ಹೋಗುವಂತಹ ಸಂಸ್ಥೆಗಳಿಂದ ನಡೆಯುತ್ತವೆ. ಅವು ಒಳ್ಳೇ ಭಾವೋತ್ಪಾದಕ ಶಬ್ದಗಳಿಂದೊಡಗೂಡಿದ ಪದವಿಗಳನ್ನು ನೀಡುತ್ತಾರೆ. ಅಂತಹ ಪದವಿಗಳು ಮುದ್ರಿಸಿದ ಕಾಗದದ ಬೆಲೆಗೂ ಸರಿಸಮವಲ್ಲ. ಅಂತಹ ಜಾಹೀರಾತುಗಳಿಗೆ ಹಾಗೂ ಪ್ರಚಾರಗಳಿಗೆ ಬೇಸ್ತು ಬೀಳದಂತೆ ಜಾಗ್ರತೆ ವಹಿಸಬೇಕು. ಯಾವ ಯಾವ ಸಂಸ್ಥೆಗಳು ಮಾನ್ಯತೆ ಪಡೆದಿವೆ ಯಾವುವು ಪಡೆದಿಲ್ಲ ಎಂಬುದನ್ನು ಪತ್ತೆ ಹಚ್ಚುವುದು ವಿದ್ಯಾರ್ಥಿಗಳಿಗೆ ಕಷ್ಟಕರ. ಈಗ ಸದ್ಯಕ್ಕೆ ಅಂತಹ ಮಾಹಿತಿ ಒದಗಿಸುವ ಅಂಗೀಕರಿಸಿದ ಸಂಸ್ಥೆಯಾಗಲೀ ಮಂಡಳಿಯಾಗಲೀ ಇಲ್ಲ. ಆದ ಕಾರಣ ವಿದ್ಯಾರ್ಥಿಗಳು ಸದ್ಯಕ್ಕೆ ಬಹಳ ಮಟ್ಟಿಗೆ ಪ್ರಸಿದ್ಧಿ ಪಡೆದ ಸಂಸ್ಥೆಗಳನ್ನು ಮಾತ್ರ ಆರಿಸಿಕೊಳ್ಳಬೇಕು. ಹಿಂದಿನ ಸಂಚಿಕೆಯಲ್ಲಿ ಕೆಲವು ಪ್ರಮುಖ ಸಂಸ್ಥೆಗಳ ಪರಿಚಯ ಹಾಗೂ ವಿಳಾಸಗಳನ್ನು ತಿಳಿಸಿದ್ದೇವೆ. ಅವಲ್ಲದೆ ಬೇರೆ ಕಡಿಮೆಯಾಗಿ ತಿಳಿದ ಸಂಸ್ಥೆಗಳಲ್ಲಾದರೆ - ಮೊದಲು ಪ್ರವೇಶ ಪಡೆಯುವುದಕ್ಕೆ ಮುಂಚೆ ಆ ಸಂಸ್ಥೆ ಬಗ್ಗೆ ಇರುವ ಮಾಹಿತಿ ಪತ್ರವನ್ನು ಚೆನ್ನಾಗಿ ಓದಬೇಕು. ಅಲ್ಲಿ ಏನನ್ನು ಕಲಿಸುತ್ತಾರೆ, ಯಾರು ಯಾರು ಕಲಿಸುತ್ತಾರೆ, ಈ ಹಿಂದೆ ಅಲ್ಲಿ ಓದಿದ ವಿದ್ಯಾರ್ಥಿಗಳಿಗೆ ಯಾವ ತರಹದ ಉದ್ಯೋಗಗಳು ದೊರೆತಿವೆ ಮತ್ತು ಯಾವ ಯಾವ ಕಂಪನಿಗಳಲ್ಲಿ ದೊರೆತಿವೆ ಮುಂತಾದ ವಿಷಯಗಳನ್ನು ಸಂಗ್ರಹಿಸಿ ನಂತರ ನಿರ್ಣಯ ತೆಗೆದುಕೊಳ್ಳಬೇಕು.

ಎರಡನೇಯದಾಗಿ, ನೀವು ಸಂಸ್ಥೆಯನ್ನು ಆರಿಸುವಾಗ ಗಮನಿಸಬೇಕಾದ ಅಂಶವೆಂದರೆ - ನೀವು ಅಲ್ಲಿ ಅಭ್ಯಾಸ ಮಾಡುವ ವಿಷಯದ ಆಧಾರದ ಮೇಲೆ ನಿಮ್ಮ ಜೀವನದ ವೃತ್ತಿಮಾರ್ಗ (Career)ವನ್ನು ಆರಿಸುತ್ತೀರಿ. ಬರೀ ಯಾವುದೋ ಒಂದು ಕೆಲಸವಲ್ಲ. ಕೆಲವು ಸಂಸ್ಥೆಗಳಲ್ಲಿ ಕೆಲವೇ ಸೀಮಿತ ವಿಷಯಗಳಲ್ಲಿ ವಿಶೇಷ ಪರಿಣತಿ ನೀಡುತ್ತಾರೆ. ಅಂತಹ ಕ್ಷೇತ್ರದಲ್ಲಿ ನೀವು ನಿಮ್ಮ ವೃತ್ತಿ ಮಾರ್ಗವನ್ನು ಪ್ರಾರಂಭಿಸಲು ಇಷ್ಟಪಡದಿದ್ದರೆ ಅಥವಾ ಅಭಿರುಚಿ ಇಲ್ಲದಿದ್ದರೆ ಅಂತಹ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಪ್ರಯತ್ನಿಸದಿರುವುದೇ ಒಳ್ಳೆಯದು. ಇನ್ನೊಂದು ಅಂಶವೆಂದರೆ ಎಂ.ಬಿ.ಎ.ನಲ್ಲಿ ಒಂದು ಕ್ಷೇತ್ರದಲ್ಲಿ ವಿಶೇಷ ಪರಿಣತಿ (Specialisation) ಅಭ್ಯಾಸ ಮಾಡಿದರೆ ಆ ಕ್ಷೇತ್ರದಲ್ಲಿಯೇ ಉದ್ಯೋಗ ದೊರಕಿಸಿಕೊಳ್ಳುವುದು ಅಷ್ಟು ಸುಲಭ ಸಾಧ್ಯವಲ್ಲ. ಉದ್ಯೋಗ ಕ್ಷೇತ್ರದಲ್ಲಿ ನಿಮ್ಮ ಚಲಾವಣೆಯೇ ಸೀಮಿತಗೊಳ್ಳುವುದು. ಕಾರಣ ಕೋರ್ಸನ್ನು ಆರಿಸುವಾಗ ಹಾಗೂ ಸಂಸ್ಥೆಯನ್ನು ಆರಿಸುವಾಗ ತುಂಬಾ ಜಾಗ್ರತೆ ವಹಿಸಬೇಕಾಗುವುದು.

ಕೊನೆಯದಾಗಿ, ಬರೀ ಪ್ರಸಿದ್ಧವಾದ ಸಂಸ್ಥೆಗಳಲ್ಲಿ ಮಾತ್ರವೇ ಪ್ರಯತ್ನಿಸಬೇಕು ಎಂಬ ಹೇಳಿಕೆಗಳಿಗೆ ಹೆಚ್ಚಿನ ಗಮನ ಕೊಡಬೇಡಿ. ಏಕೆಂದರೆ ಬರೀ ಪ್ರಸಿದ್ಧ ಸಂಸ್ಥೆಗಳಿಗೆ ಪ್ರಯತ್ನಿಸುತ್ತಾ ಕೂತರೆ ನಿಮಗೆ ಆ ಸಂಸ್ಥೆಗಳಲ್ಲಿ ಪ್ರವೇಶ ದೊರೆಯದೇ ಹೋಗಬಹುದು. ನಿಮ್ಮ ಪ್ರಯತ್ನದಲ್ಲೇ ವೇಳೆ ನಷ್ಟವಾಗಬಹುದು. ಇತ್ತೀಚೆಗೆ ಎರಡನೆ ಶ್ರೇಣಿಯಲ್ಲಿ ಬರತಕ್ಕಂತಹ ಸಂಸ್ಥೆಗಳಿಗೂ ಕೂಡ ಪೈಪೋಟಿ ಭಾರಿಯಾಗಿದೆ. ಆದಕಾರಣ ಬುದ್ಧಿವಂತರ ಲಕ್ಷಣವೆಂದರೆ ಎಷ್ಟು ಸಂಸ್ಥೆಗಳಿಗೆ ಅನುಕೂಲವಾಗುತ್ತೋ ಅಷ್ಟಕ್ಕೆ ಅರ್ಜಿ ಸಲ್ಲಿಸಬೇಕು ಮತ್ತು ಅವರು ನಿರ್ವಹಿಸುವ ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು. ಒಂದು ವೇಳೆ ಎಲ್ಲಾ ಸಂಸ್ಥೆಗಳಲ್ಲಿ ನಿಮಗೆ ಸ್ಥಳ ದೊರೆತರೆ ಆಗ ನೀವು ನಿಮಗೆ ಒಳ್ಳೆಯದು ಎಂದು ತೋರಿದ ಸಂಸ್ಥೆಯನ್ನು ಆರಿಸಿಕೊಳ್ಳಬಹುದು. ಬುದ್ಧಿವಂತರ ಲಕ್ಷಣವೆಂದರೆ ನಿಮಗಿರುವ ಎಲ್ಲಾ ಅವಕಾಶಗಳನ್ನು ತೆರೆದಿಟ್ಟುಕೊಂಡಿರುವುದು.

ಅಷ್ಟೊಂದು ಪ್ರಸಿದ್ಧವಲ್ಲದ ಕೆಲವು ಸಂಸ್ಥೆಗಳು ಮಾನ್ಯತೆ ಪಡೆದಿರಬಹುದು. ಅವುಗಳ ಬಗ್ಗೆ ಒಂದು ಮಾತು ಹೇಳಬೇಕಾಗುತ್ತದೆ. ನಿಮಗೆ ತಿಳಿದಂತೆ ಗಳಿಸಿದ ಖ್ಯಾತಿಯು ಸ್ಥಿರವಲ್ಲ. ಕಡಿಮೆ ಖ್ಯಾತಿಯ ಸಂಸ್ಥೆಯಲ್ಲಿ ಪದವಿ ಪಡೆದವರೂ ಈಗ ಉದ್ಯಮಗಳಲ್ಲಿ ಸ್ವೀಕರಿಸಲ್ಪಡುತ್ತಲಿದ್ದಾರೆ. ನಮ್ಮ ದೇಶ ದೊಡ್ಡದು. ಆರ್ಥಿಕ ಮುನ್ನಡೆ ಬಹಳವಾಗಿ ಆಗುತ್ತಲಿದೆ. ಕಾರಣ, ನಿರ್ವಹಣಾ ಕಾರ್ಯಕ್ಕೆ ಬೇಕಾಗುವ ಮಾನವ ಸಂಪನ್ಮೂಲ ಜಾಸ್ತಿ. ಅಷ್ಟೊಂದು ಬೇಡಿಕೆಯನ್ನು ಕೆಲವೇ ಮುಷ್ಟಿಭರಿತ ಪ್ರಥಮ ಶ್ರೇಣಿಯ ಸಂಸ್ಥೆಗಳು ತರುಣ ಮೇಧಾಶಕ್ತಿಯ ಪಡೆಯನ್ನು ತರಬೇತು ಮಾಡಿ ಒದಗಿಸುವುದು ಸಾಧ್ಯವಿಲ್ಲ. ಈ ಸತ್ಯವು ಕೆಲಸ ಕೊಡುವವರಿಗೆ ಗೊತ್ತು. ಅಲ್ಲದೇ, ಕಡಿಮೆ ಪ್ರಸಿದ್ಧಿ ಪಡೆದ ಸಂಸ್ಥೆಗಳಲ್ಲಿಯೂ ಸಹ ಕೆಲವು ಒಳ್ಳೆಯ ವಿದ್ಯಾರ್ಥಿಗಳು ಓದಿ ಹೊರಬರುವರೆಂದೂ ಅವರಿಗೆ ಗೊತ್ತು. ಮತ್ತೆ ಸಂಸ್ಥೆಯ Placement Cellನಿಂದ ಮೊದಲ ಸಾರಿ ನೌಕರಿ ದೊರಕಿಸಿಕೊಳ್ಳುವಾಗ ಸಂಸ್ಥೆಯ ಖ್ಯಾತಿ ನಿಜವಾಗಲೂ ಸಹಾಯಕವಾಗುತ್ತದೆ. ಆದರೆ, ಮುಂದಿನ ನೌಕರಿಗಳು ನೀವು ಯಾವ ಖ್ಯಾತಿವಂತ ಸಂಸ್ಥೆಯಲ್ಲಿ ಓದಿ ಹೊರಬಂದಿದ್ದೀರಿ ಎನ್ನುವುದರ ಮೇಲಲ್ಲ. ನೀವು, ನಿಮ್ಮ ಹಿಂದಿನ ವೃತ್ತಿಯಲ್ಲಿ ಹೇಗೆ ಕಾರ್ಯನಿರ್ವಹಿಸಿದ್ದೀರಿ ಎನ್ನುವುದರ ಮೇಲೆ ನಿರ್ಧರಿಸಿರುತ್ತದೆ.

ೇರೆ ವಿಧದ್ದು. ಆತನು ದೈನಂದಿನ ಕ್ರಿಯೆಗಳನ್ನು, ಂದರೆ, ಸಿಬ್ಬಂದಿ ನಿಯೋಜನೆ, ಭರ್ತಿ ಾಡುವುದು, ಕೆಲಸಗಳ ವ್ಯಾಖ್ಯಾನ, ವೇತನ ರ್ವಹಣೆ, ಸಿಬ್ಬಂದಿ ಯೋಗಕ್ಷೇಮ ುಂತಾದವುಗಳನ್ನು ನೋಡಿಕೊಳ್ಳುವುದು. ಹಳಷ್ಟು ಸಂಸ್ಥೆಗಳು ಇತ್ತೀಚೆಗೆ HRD ಮತ್ತು ಬ್ಬಂದಿ ನಿರ್ವಹಣೆ ಬೇರೆ ಬೇರೆ ಾರ್ಯಕ್ಷೇತ್ರಗಳಾಗಿ ವಿಂಗಡಿಸಿವೆ.

ಉದ್ಯಮ ಸಂಬಂಧದಲ್ಲಿ ಕೆಲಸಗಾರರ ರ್ವಹಣೆ ನಡೆಯುತ್ತದೆ. ನೌಕರರ ಸಂಘಗಳ ಾರ್ಯಾಚರಣೆಯು ರಾಜಕೀಯ ಪಕ್ಷಗಳ ಂಬಲದೊಡನೆ ನಡೆಸುವುದು ಬೆಳೆಯುತ್ತಲಿದೆ. ವಾತಾವರಣದಲ್ಲಿ ಸಿಬ್ಬಂದಿ ಸಂಬಂಧ ೋಡಿಕೊಳ್ಳುವ ಕೆಲಸವು ವಿಶೇಷ ಪರಿಣತಿಯ ವಶ್ಯಕತೆ ಹೆಚ್ಚುತ್ತಲಿದೆ. ಸಾಮಾನ್ಯವಾಗಿ ಾನೂನು ಜ್ಞಾನವಿರುವ ವಿದ್ಯಾರ್ಥಿಗಳನ್ನು ಈ ಾರ್ಯಕ್ಷೇತ್ರಕ್ಕೆ ಭರ್ತಿ ಮಾಡಲು ಷ್ಟಪಡುತ್ತಾರೆ.

ಮಂಡಲಗಳ ನಿರ್ವಹಣೆ (Systems lanagement) : ಈ ಕ್ಷೇತ್ರದಲ್ಲಿ ವಿಶೇಷ ರಿಣತಿ ಪಡೆದ ಎಂ.ಬಿ.ಎ. ವಿದ್ಯಾರ್ಥಿಗಳಿಗೆ ುದ್ಯೋಗ ಅವಕಾಶಗಳ ಮಾರುಕಟ್ಟೆಯು ರುತ್ತಲಿದೆ. ಈ ಕ್ಷೇತ್ರದಲ್ಲಿ ಮೂರು ವಿಧದ ಂಸ್ಥೆಗಳಲ್ಲಿ ವೃತ್ತಿ ಅವಕಾಶಗಳಿವೆ.

- ಕಂಪ್ಯೂಟರ್ ಉತ್ಪಾದನೆ/ಮಾರಾಟ ಸಂಸ್ಥೆಗಳು
- ಮಂಡಲಗಳ ಸಲಹಾ ಸಂಸ್ಥೆಗಳು
- ಸಂಸ್ಥೆಯ ಮಂಡಲ ವಿಭಾಗಗಳು

ಇಲ್ಲಿ ಕಂಪ್ಯೂಟರ್ ವ್ಯಕ್ತಿಗೂ ಮಂಡಲ ರಿಣತನಿಗೂ ಇರುವ ವ್ಯತ್ಯಾಸ ತಿಳಿದುಕೊಳ್ಳ ೇಕು. ಮಂಡಲ ಪರಿಣತನು ಸಮಸ್ಯೆಗಳನ್ನು ಿದು ಅರ್ಥ ಮಾಡಿಕೊಂಡು ಅವನ್ನು ಛಾಯಿಸುವ ಕೆಲಸ ಮಾಡುತ್ತಾನೆ. ಆದರೆ ಂಪ್ಯೂಟರ್ ಪರಿಣತನ ಕಾರ್ಯಕ್ಷೇತ್ರವು ದಕ್ಕಿಂತ ಕಿರಿದು ಮತ್ತು ಮುಖ್ಯವಾಗಿ ಂತ್ರಿಕವಾದದ್ದು. ಕಂಪ್ಯೂಟರ್ ಪರಿಣತನು ಂಪ್ಯೂಟರ್‌ನ software ಮತ್ತು ardwareಗಳ ಬಗ್ಗೆ ಹಾಗೂ ಅವುಗಳ ವಿಧ್ಯತೆಯನ್ನು ಮಾತ್ರ ತಿಳಿದಿರುತ್ತಾನೆ. ಂ.ಬಿ.ಎ. ವಿದ್ಯಾರ್ಥಿಯು ತನ್ನ ಅಭ್ಯಾಸದ ಥದಲ್ಲಿ ಕಂಪ್ಯೂಟರ್ ಜ್ಞಾನದ ಜೊತೆಗೆ ಂಸ್ಥೆಯ ಎಲ್ಲಾ ಕಾರ್ಯಕ್ಷೇತ್ರಗಳ ಬಗ್ಗೆ ಅಭ್ಯಾಸ ಾಡಿರುತ್ತಾನೆ. ಆದುದರಿಂದ ಮಂಡಲ ೇತ್ರದಲ್ಲಿ ವಿಶೇಷ ಪರಿಣತಿ ಪಡೆದ ಎಂ.ಬಿ.ಎ. ದ್ಯಾರ್ಥಿಯು ಕಂಪ್ಯೂಟರ್ ತಂತ್ರಜ್ಞನಿಗಿಂತ ಅನೇಕ ವಿಧದ ಸಂಸ್ಥೆಗಳಿಗೆ ಮಂಡಲಗಳನ್ನು ರಚಿಸಲು ಸುಸಜ್ಜಿತನಾಗಿರುತ್ತಾನೆ.

ಮಂಡಲ ನಿರ್ವಹಣೆಯಲ್ಲಿ ವಿಶೇಷ ಪರಿಣತಿ ಪಡೆಯಲು ವಿದ್ಯಾರ್ಥಿಗೆ ಕಂಪ್ಯೂಟರ್‌ನಲ್ಲಾಗಲಿ ಅಥವಾ ಇಂಜಿನಿಯರಿಂಗ್‌ನಲ್ಲಾಗಲಿ ಮುಂಚೆಯ ಅನುಭವ ಬೇಕಾಗಿಲ್ಲ. ಆದರೆ ಚಿಕ್ಕ ಸಂಸ್ಥೆಯಲ್ಲಿ ಎಂ.ಬಿ.ಎ. ಮಾಡಿದ್ದರೆ ನೌಕರಿ ದೊರಕಿಸಿ ಕೊಳ್ಳಲು ಮುಂಚೆ ಇರುವ ಅನುಭವ ಬೇಕಾಗಬಹುದು.

ಉತ್ಪಾದನಾ ನಿರ್ವಹಣೆ : ಕೈಗಾರಿಕೆಗಳಲ್ಲಿ ತಯಾರಿಕೆಯು ಉತ್ಪಾದನಾ ವ್ಯವಹಾರದಲ್ಲಿ ಒಂದು ಮುಖ್ಯ ಕ್ಷೇತ್ರ. ನಿರ್ವಹಣಾ ಶಾಲೆಗಳಲ್ಲಿ ಉತ್ಪಾದನೆ ಹೆಚ್ಚಿಸಲು ಗುಣಮಟ್ಟ ಹೆಚ್ಚಿಸಲು, ನಿಯಂತ್ರಿಸಲು, ನಿರ್ವಹಿಸಲು ಮುಂತಾದ ಅಭಿವೃದ್ಧಿಗೆ ಅನೇಕ ತಂತ್ರಗಳನ್ನು ಹಾಗೂ ತತ್ವಗಳನ್ನು ಪ್ರಚಲಿತಪಡಿಸಿದ್ದಾರೆ. ಈ ನೈಪುಣ್ಯಗಳು ಇಂಜನೀಯರ್ ಪದವೀಧರ ವಿದ್ಯಾರ್ಥಿಗಳಿಗೆ ತುಂಬಾ ಉಪಯೋಗ. ಈ ಕ್ಷೇತ್ರದಲ್ಲಿ ನಾಲ್ಕು ವಿಧದ ಅವಕಾಶಗಳಿವೆ.

- ಉತ್ಪನ್ನ ಅಭಿವೃದ್ಧಿ (Productivity Improvement)
- ಗುಣಮಟ್ಟ ನಿಯಂತ್ರಣ (Quality Control)
- ಸರಕು ಆಸ್ತಿ ನಿಯಂತ್ರಣ (Inventory Control)
- ಉತ್ಪಾದನಾ ಯೋಜನೆ (Production Planning)

ಉತ್ಪಾದನ ಪರಿಣಿತನ ದೃಷ್ಟಿಕೋನವು ತಾಂತ್ರಿಕ ಸಮಸ್ಯೆಗಳ ಬಗ್ಗೆ ಕೇಂದ್ರಿಕೃತ ವಾಗಿರುವುದಿಲ್ಲ. ಆದರೆ ಆ ಸಮಸ್ಯೆಯು ನಿರ್ವಹಣೆಯ ಮೇಲೆ ಉಂಟುಮಾಡುವ ಪರಿಣಾಮಗಳ ಕಡೆಗೆ ಕೇಂದ್ರಿಕೃತವಾಗಿರುತ್ತದೆ. ಈ ಕ್ಷೇತ್ರದಲ್ಲಿ ವಿದ್ಯಾರ್ಥಿಯು ಯಶಸ್ವಿಯಾಗಲು ಕೆಲವು ವಿಶಿಷ್ಟ ನೈಪುಣ್ಯಗಳು ಬೇಕಾಗುತ್ತವೆ. ಅವುಗಳೆಂದರೆ ನಡವಳಿಕೆ ಅರ್ಥಮಾಡಿ ಕೊಳ್ಳುವ ನೈಪುಣ್ಯ, ತಾಂತ್ರಿಕ ನೈಪುಣ್ಯ ಮತ್ತು ಸಂಖ್ಯಾಶಾಸ್ತ್ರದ ನೈಪುಣ್ಯಗಳು.

ಈ ತಂತ್ರಗಳನ್ನು ಬಹುಮಟ್ಟಿಗೆ ಸರಕು ಉತ್ಪಾದನಾ ಸಂಸ್ಥೆಗಳಲ್ಲಿ ಪ್ರಯೋಗಿಸಲಾಗು ತ್ತದೆ. ಈ ಕ್ಷೇತ್ರದಲ್ಲಿ ಕೆಲವು ಸಲಹಾ ಸಂಸ್ಥೆಗಳು ಕೂಡ ಇವೆ. ಬಹಳ ಮಟ್ಟಿನವು MBAಗಳಿಗೆ ಆಕರ್ಷಣೀಯವಾದ ವೃತ್ತಿ ಒದಗಿಸುವುದಿಲ್ಲ.

ಉಪಸಂಹಾರ

ಮೇಲೆ ತಿಳಿಸಿದ ಅವಕಾಶಗಳಿಗಿಂತ ಎಂ.ಬಿ.ಎ. ಪದವೀಧರರಿಗೆ ವೃತ್ತಿ ಶ್ರೇಣಿಯಲ್ಲಿ ದೊರೆಯುವ ಅವಕಾಶಗಳು ಅನೇಕ ಹಾಗೂ ಅಪಾರ.

ವಾಸ್ತವಿಕವಾಗಿ ಅವಕಾಶಗಳು ನಿಮ್ಮಗಳ ಕಲ್ಪನೆ ಹಾಗೂ ಧೈರ್ಯಕ್ಕೆ ಪರಿಮಿತವಾಗಿವೆ. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ಸಂಪಾದಿಸಲು ಆಯಾ ಕ್ಷೇತ್ರದಲ್ಲಿರುವ ಯಾರಾದರೂ ಅನುಭವಿ ಹಾಗೂ ನಿಪುಣರನ್ನು ಸಂಪರ್ಕಿಸಿರಿ. ಅವರಿಂದ ಆಯಾ ಕ್ಷೇತ್ರಗಳ ಬಗ್ಗೆ ಇನ್ನೂ ಆಳವಾದ ಚಿತ್ರಣವನ್ನು ಪಡೆಯಬಹುದು. ಮೇಲೆ ತಿಳಿಸಿರುವ ವಿವರಗಳು ಹಾಗೂ ಅವುಗಳ ವರ್ಗೀಕರಣವು ಎಲ್ಲಾ ವಿಷಯಗಳ ಹಾಗೂ ವಿವರಗಳ ಸಮಗ್ರ ಜೋಡಣೆ ಅಲ್ಲ ಹಾಗೂ ಅವು ತುಂಬಾ ಅನ್ಯೋನ್ಯವೂ ಆಗಿಲ್ಲ. ನೀಡಿರುವ ವಿವರಣೆಗಳು ಸೀಮಿತ ಉದ್ದೇಶವುಳ್ಳವು. ಮಾರುಕಟ್ಟೆಯಲ್ಲಿ ದೊರಕುವ ಅವಕಾಶಗಳ ಬಗ್ಗೆ ತಿಳಿಸುವ ಸ್ಥೂಲ ವಿವರಣೆಯಷ್ಟೆ. ಪೂರ್ಣ ವಿವರಣೆ ಅಲ್ಲ. ●


ಕವನ ಸಂಕಲನದ ಹಸ್ತಪ್ರತಿಗೆ ಬಹುಮಾನ

ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವು ಇದುವರೆಗೆ ಪ್ರಕಟವಾದ ಹಸ್ತಪ್ರತಿ ರೂಪದಲ್ಲಿರುವ ಕನ್ನಡ ಕಾವ್ಯ ಸಂಕಲನಕ್ಕೆ ೧೯೯೮ನೇ ಸಾಲಿನಲ್ಲಿ ಕಡಂಗೋಡ್ಲು ಸ್ಮಾರಕ ಬಹುಮಾನ ನೀಡಲಿದೆ.

ಹಸ್ತಪ್ರತಿ ಹಂತದಲ್ಲಿರುವ ೪೦ಕ್ಕೆ ಕಡಿಮೆಯಿಲ್ಲದ ಕವಿತೆಗಳ ಸಂಗ್ರಹಕ್ಕೆ ಈ ಬಹುಮಾನ ನೀಡಲಾಗುವುದು. ಈ ಕವಿತೆಗಳು ಕಳೆದ ಐದು ವರ್ಷಗಳ ಒಳಗೆ ಬರೆದಿರಬೇಕು. ಬಿಡಿಯಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅಥವಾ ಹೊಸದಾಗಿ ರಚಿಸಿದ ಕವನಗಳು ಈ ಸಂಕಲನದಲ್ಲಿ ಇರಬಹುದು.

ಲೇಖಕರು ತಮ್ಮ ಸಂಗ್ರಹದ ಒಂದು ಪ್ರತಿಯನ್ನು ೧೯೯೮ರ ಫೆಬ್ರವರಿ ೨೮ರೊಳಗೆ ಗೌರವ ನಿರ್ದೇಶಕರು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ-೫೭೬ ೧೦೨ ಈ ವಿಳಾಸಕ್ಕೆ ಕಳುಹಿಸಬಹುದು. ಈ ವಿಷಯದ ಕುರಿತು ಹೆಚ್ಚಿನ ವಿವರಕ್ಕೆ ಮೇಲಿನ ವಿಳಾಸವನ್ನು ಸಂಪರ್ಕಿಸಬಹುದು.

ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಬಹುಆಯ್ಕೆ ರೂಪದ ಪ್ರಶ್ನೆಗಳು



ಭೂಗೋಳ ಶಾಸ್ತ್ರ

೧. ದೇಶದಲ್ಲಿ ಅಧಿಕ ಬೆಳ್ಳಿ ತಯಾರಿಸುವ ರಾಜ್ಯ ಯಾವುದು?
ಅ. ಅಸ್ಸಾಂ ಬ. ಬಿಹಾರ
ಕ. ತಮಿಳುನಾಡು ಡ. ರಾಜಸ್ಥಾನ

೨. ಭಾರತದಲ್ಲಿ 'ಮಸಾಲೆ ತೋಟ' ಎಂದು ಯಾವ ರಾಜ್ಯಕ್ಕೆ ಕರೆಯಲಾಗುತ್ತದೆ?
ಅ. ಪಶ್ಚಿಮ ಬಂಗಾಲ
ಬ. ಆಂಧ್ರಪ್ರದೇಶ
ಕ. ಕೇರಳ
ಡ. ಜಮ್ಮು ಮತ್ತು ಕಾಶ್ಮೀರ

೩. ಜಮ್ಮು ಮತ್ತು ಕಾಶ್ಮೀರದಲ್ಲಿ ಹರಿಯುವ ನದಿ ಯಾವುದು?
ಅ. ಬ್ರಹ್ಮಪುತ್ರ ಬ. ಝೀಲಂ
ಕ. ಯಮುನಾ ಡ. ಗಂಗಾ

೪. ಬಂಗಾಳದ ದುಃಖದ ನದಿಯೆಂದು ಯಾವುದಕ್ಕೆ ಕರೆಯಲಾಗುತ್ತದೆ?
ಅ. ಗಂಗಾ ಬ. ತಪತಿ
ಕ. ಸಿಂಧು ಡ. ದಾಮೋದರ

೫. ಪ್ರಪಂಚದ ಅತಿ ಉದ್ದವಾದ ಅಣೆಕಟ್ಟು
ಅ. ನಾಗಾರ್ಜುನ ಸಾಗರ
ಬ. ಭಾಕ್ರಾನಂಗಲ್
ಕ. ಹಿರಾಕುಡ್
ಡ. ಕೃಷ್ಣರಾಜ ಸಾಗರ

೬. ಸಿಂಗ್ರಾಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಯಾವ ರಾಜ್ಯದಲ್ಲಿದೆ?
ಅ. ತಮಿಳುನಾಡು
ಬ. ಆಂಧ್ರಪ್ರದೇಶ
ಕ. ಬಿಹಾರ
ಡ. ಉತ್ತರ ಪ್ರದೇಶ

೭. 'ಎಲ್ಲೋ ರಿವರ್' ಎಂದು ಯಾವುದಕ್ಕೆ ಕರೆಯಲಾಗುತ್ತದೆ?
ಅ. ನೈಲ್‌ನದಿ ಬ. ಗಂಗಾ ನದಿ
ಕ. ಹೊಯಾಂಗ್ ಡ. ಅಮೇಜಾನ್ ನದಿ

೮. ಕೈರೊ ಯಾವ ದೇಶದ ರಾಜಧಾನಿ?
ಅ. ಇರಾಕ್ ಬ. ದ.ಕೋರಿಯಾ
ಕ. ಇಸ್ರೇಲ್ ಡ. ಈಜಿಪ್ತ

೯. ಮೀನುಗಾರಿಕೆ ಕೃಷಿಯಲ್ಲಿ ಅಭಿವೃದ್ಧಿ ಸಾಧಿಸಿದ ದೇಶ ಯಾವುದು?
ಅ. ಅಮೆರಿಕಾ ಬ. ಜಪಾನ್
ಕ. ದ.ಕೋರಿಯಾ ಡ. ಶ್ರೀಲಂಕಾ

೧೦. ಹಿರಾಕುಡ್ ಅಣೆಕಟ್ಟೆ ಯಾವ ನದಿಗೆ ಕಟ್ಟಲಾಗಿದೆ?
ಅ. ಮಹಾನದಿ ಬ. ದಾಮೋದರ ನದಿ
ಕ. ಬ್ರಹ್ಮಪುತ್ರ ಡ. ಯಮುನಾ

ರಾಜ್ಯಶಾಸ್ತ್ರ

೧೧. ಸಂವಿಧಾನ ರಚನಾ ಸಭೆ ಮೊದಲ ಬಾರಿ ಸಮಾವೇಶಗೊಂಡಿದ್ದು ಯಾವ ವರ್ಷ?
ಅ. ೧೯೪೭ ಬ. ೧೯೪೫
ಕ. ೧೯೪೮ ಡ. ೧೯೪೬

೧೨. ರಾಜ್ಯಸಭೆ ಸದಸ್ಯನಾಗಲು ಕನಿಷ್ಟ ವಯಸ್ಸು ಎಷ್ಟು?
ಅ. ೩೦ ಬ. ೩೫
ಕ. ೨೫ ಡ. ೪೦

೧೩. ರಾಷ್ಟ್ರಪತಿಯಾಗಲು ಕನಿಷ್ಟ ವಯೋಮಿತಿ ಎಷ್ಟಿರಬೇಕು?
ಅ. ೪೦ ಬ. ೪೫
ಕ. ೫೦ ಡ. ೩೫

೧೪. ಸಂವಿಧಾನ ಎಷ್ಟು ಪ್ರಕಾರಗಳಲ್ಲಿ ತುರ್ತು ಪರಿಸ್ಥಿತಿ ವಿಧಿಸಲು ಅವಕಾಶ ಕಲ್ಪಿಸುತ್ತದೆ?
ಅ. ೨ ಬ. ೩
ಕ. ೧ ಡ. ೪

೧೫. ಭಾರತ ದೇಶದಲ್ಲಿ ಆಹಾರ ಕಲ್ಮಶ ನಿರೋಧಕ ಕಾನೂನು ಯಾವ ವರ್ಷ ಮಾಡಲಾಗಿದೆ?
ಅ. ೧೯೫೪ ಬ. ೧೯೫೮
ಕ. ೧೯೬೦ ಡ. ೧೯೬೫

೧೬. ರಾಷ್ಟ್ರಪತಿ ಹುದ್ದೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದವರು ಯಾರು?
ಅ. ನೀಲಂ ಸಂಜೀವರೆಡ್ಡಿ
ಬ. ವಿ.ವಿ.ಗಿರಿ
ಕ. ಜೇಲ್‌ಸಿಂಗ್
ಡ. ವೆಂಕಟರಾಮನ್

೧೭. ಸಂವಿಧಾನದಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಒದಗಿಸುವ ವಿಧಿ ಎಷ್ಟನೇಯದು?
ಅ. ೩೭೦ ಬ. ೩೭೪
ಕ. ೩೫೬ ಡ. ೩೬೦

೧೮. ಪಾರ್ಲಿಮೆಂಟರಿ ಸಮಿತಿಯಲ್ಲಿ ಹೆಚ್ಚು ಜ ಸದಸ್ಯರನ್ನು ಹೊಂದಿದ ಸಮಿತಿ ಯಾವುದು
ಅ. ಲೆಕ್ಕಪತ್ರ ಸಮಿತಿ ಬ. ಶಿಸ್ತು ಸಮಿತಿ
ಕ. ಅಂದಾಜು ಸಮಿತಿ ಡ. ಸಾಂಸ್ಕೃತಿಕ ಸಮಿ

೧೯. ಲೋಕಸಭೆಯ ಮೊದಲ ಅಧ್ಯಕ್ಷ ಯಾರು?
ಅ. ಕೆ.ಎಸ್. ಹೆಗಡೆ
ಬ. ಜಿ.ವಿ. ಮಾವಲಂಕರ್
ಕ. ಅನಂತಶಯನಂ ಅಯ್ಯಂಗಾರ
ಡ. ರಬಿ ರೇ

೨೦. ಎರಡು ರಾಜ್ಯಗಳ ಒಂದೇ ರಾಜಧಾ ಯಾವುದು?
ಅ. ಕಲಕತ್ತಾ ಬ. ಕೊಹಿಮಾ
ಕ. ಇಟಾನಗರ ಡ. ಚಂಡಿಗಡ

೨೧. ೧೯೯೬ರ ಉತ್ತಮ ಪಾರ್ಲಿಮೆಂಟೇರಿಯನ ಪ್ರಶಸ್ತಿ ಪಡೆದುಕೊಂಡ ರಾಜಕಾರ ಯಾರು?
ಅ. ಇಂದ್ರಜಿತ್ ಗುಪ್ತ
ಬ. ಅಟಲ್ ಬಿಹಾರಿ ವಾಜಪೇಯಿ
ಕ. ಸೋಮನಾಥ ಚಟರ್ಜಿ
ಡ. ಮನ್‌ಮೋಹನ್ ಸಿಂಗ್

೨೨. ಬಹುಕೋಟಿ ಮೇವು ಹಗರಣ ಯಾ ರಾಜ್ಯಕ್ಕೆ ಸಂಬಂಧಿಸಿದ್ದು?
ಅ. ಹರಿಯಾಣಾ ಬ. ಬಿಹಾರ
ಕ. ಉತ್ತರಪ್ರದೇಶ ಡ. ಹಿಮಾಚಲ ಪ್ರದೇ

೨೩. 'ಕಿಸಾನ್ ಘಾಟ್' ಇದು ಯಾರ ಸಮಾಧಿ
ಅ. ಲಾಲ್‌ಬಹದ್ದೂರ ಶಾಸ್ತ್ರಿ
ಬ. ನೆಹರು
ಕ. ಚರಣಸಿಂಗ್
ಡ. ರಾಜೀವ್ ಗಾಂಧಿ

೨೪. ಕರ್ನಾಟಕದ ೨೮ ಲೋಕಸಭಾ ಸ್ಥಾನಗಳ ಮೀಸಲುಗೊಳಪಟ್ಟ ಸಂಖ್ಯೆ ಎಷ್ಟು?
ಅ. ೬ ಬ. ೨
ಕ. ೩ ಡ. ೪

೨೫. ಕರ್ನಾಟಕದ ಮೊದಲ ಮುಖ್ಯಮಂ ಯಾರು?
ಅ. ಕೆಂಗಲ್ ಹನುಮಂತಯ್ಯ
ಬ. ಎಸ್. ನಿಜಲಿಂಗಪ್ಪ
ಕ. ಕೆ.ಸಿ. ರೆಡ್ಡಿ
ಡ. ಎಸ್.ಆರ್. ಕಂಠಿ

ಕಲೆ, ಸಾಹಿತ್ಯ, ಪತ್ರಿಕೋದ್ಯಮ

೨೬. ಪುಲಿಟ್ಜರ್ ಪ್ರಶಸ್ತಿ ಯಾವ ದೇಶಕ್ಕೆ ಸೇರಿದ್ದು?
ಅ. ಇಂಗ್ಲೆಂಡ್ ಬ. ಅಮೆರಿಕಾ
ಕ. ಭಾರತ ಡ. ಜಪಾನ್

೨೭. ದೇಶದಲ್ಲಿ ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿ ಪಡೆದವರ ಹೆಸರೇನು?
ಅ. ಕುವೆಂಪು
ಬ. ವಿಶ್ವನಾಥ ಸತ್ಯನಾರಾಯಣ
ಕ. ಶಂಕರ ಕುರುಪ್
ಡ. ಆಶಾಪೂರ್ಣ ದೇವಿ

೨೮. "ಲವ್ಸ್ ಲೇಟರ್ ಲಾಸ್ಟ್" ಈ ಪುಸ್ತಕದ ಲೇಖಕರು ಯಾರು?
ಅ. ಟಾಲ್‌ಸ್ಟಾಯ್
ಬ. ಜಾರ್ಜ್ ಬರ್ನಾರ್ಡ್ ಷಾ
ಕ. ಬಂಕೀಮಚಂದ್ರ ಚಟರ್ಜಿ
ಡ. ಷೇಕ್ಸ್‌ಪಿಯರ್

೨೯. 'ಗೋದಾನ' ಈ ಪುಸ್ತಕದ ಕರ್ತೃ
ಅ. ಮುನ್ಷಿ ಪ್ರೇಮಚಂದ
ಬ. ಕುಷ್ವಂತ ಸಿಂಗ್
ಕ. ಯು.ಆರ್. ಅನಂತ ಮೂರ್ತಿ
ಡ. ಶ್ರೀ ಶ್ರೀ

೩೦. 'ವಂದೇಮಾತರಂ' ಗೀತೆಯನ್ನು ಯಾವ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ?
ಅ. ಆನಂದಮಠ ಬ. ಗೋದಾನ
ಕ. ಶಿಕಾರಿ ಡ. ಜರತಾರಿ ಜಗದ್ಗುರು

೩೧. 'ಆಧುನಿಕ ಮೀರಾ' ಎಂದು ಪ್ರಸಿದ್ಧಿ ಪಡೆದ ಖ್ಯಾತ ಹಿಂದಿ ಲೇಖಕಿ
ಅ. ಮಹಾದೇವಿ ವರ್ಮ
ಬ. ಅಮೃತ ಪ್ರೀತಂ
ಕ. ಆಶಾಪೂರ್ಣ ದೇವಿ
ಡ. ಮಹಾಶ್ವೇತಾ ದೇವಿ

೩೨. 'ಇಂಟರ್‌ನ್ಯಾಷನಲ್ ನ್ಯೂಸ್ ಸರ್ವಿಸ್' ಯಾವ ದೇಶದಲ್ಲಿದೆ?
ಅ. ರಷಿಯಾ ಬ. ಬ್ರಿಟನ್
ಕ. ಚೀನಾ ಡ. ಅಮೆರಿಕಾ

೩೩. "ದಿ ಡೈಲಿ ಮಿರರ್" ಪತ್ರಿಕೆ ಯಾವ ನಗರದಿಂದ ಹೊರಡುತ್ತದೆ?
ಅ. ದೆಹಲಿ ಬ. ನ್ಯೂಯಾರ್ಕ್
ಕ. ಮಾಸ್ಕೊ ಡ. ಲಂಡನ್

೩೪. ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಮುಖ್ಯ ಕಛೇರಿ ಎಲ್ಲಿದೆ?
ಅ. ಮುಂಬಯಿ ಬ. ಬೆಂಗಳೂರು
ಕ. ಕಲ್ಕತ್ತ ಡ. ಚಂಡಿಗಡ

೩೫. ಜಮ್ನಾಲಾಲ್ ಪ್ರಶಸ್ತಿ ಹೊಂದಿದ ಮೊದಲ ಕನ್ನಡಿಗ
ಅ. ತಗಡೂರು ರಾಮಚಂದ್ರರಾಯ
ಬ. ನಾ.ಸು. ಹರ್ಡೇಕರ್
ಕ. ಗೋರೂರು ರಾಮಸ್ವಾಮಿ ಅಯ್ಯಂಗಾರ್.
ಡ. ಕಡಿದಾಳ ಮಂಜಪ್ಪ

೩೬. ೧೯೬ರ ಕಳಿಂಗ ಪ್ರಶಸ್ತಿ ಪಡೆದುಕೊಂಡ ವಿಜ್ಞಾನಿ
ಅ. ಜಯಂತ್ ವಿ. ನಾರ್ಲೀಕರ್
ಬ. ಸಿ.ಎನ್.ಆರ್. ರಾವ್
ಕ. ಪದ್ಮನಾಭನ್
ಡ. ರಾಜಾರಾಮಣ್ಣ

೩೭. ಸುಪ್ರೀಂ ಕೋರ್ಟ್ ಯಾರಿಗೆ ಪ್ರಕಟಿಸಿದ 'ಭಾರತ ರತ್ನ' ಪ್ರಶಸ್ತಿ ರದ್ದು ಮಾಡಿದೆ?
ಅ. ರಾಜೀವ್ ಗಾಂಧಿ
ಬ. ರಾಜಾಜಿ
ಕ. ಸುಭಾಸಚಂದ್ರ ಬೋಸ್
ಡ. ಗುಲ್ಜಾರಿಲಾಲ್‌ನಂದಾ

೩೮. 'ವಂಶವೃಕ್ಷ' ಎಂಬ ಪ್ರಸಿದ್ಧ ಕಾದಂಬರಿ ಬರೆದವರು ಯಾರು?
ಅ. ಶಿವರಾಮ ಕಾರಂತ
ಬ. ಎಸ್.ಎಲ್. ಭೈರಪ್ಪ
ಕ. ಎನ್. ನರಸಿಂಹಯ್ಯ
ಡ. ಪಿ. ಲಂಕೇಶ್

೩೯. "ಮೇಕಿಂಗ್ ಆಫ್ ದಿ ಮಹಾತ್ಮಾ" ಚಿತ್ರದ ನಿರ್ದೇಶಕರು ಯಾರು?
ಅ. ಶ್ಯಾಂ ಬೆನಗಲ್ ಬ. ಮಣಿರತ್ನಂ
ಕ. ಗಿರೀಶ್ ಕಾರ್ನಾಡ್ ಡ. ವಿಶ್ವನಾಥ

೪೦. ಭಾರತದ ಮೊದಲ ದಿನಪತ್ರಿಕೆ ಯಾವುದು?
ಅ. ಫ್ರಿ ಪ್ರೆಸ್ ಜರ್ನಲ್
ಬ. ಬಾಂಬೆ ಸಮಾಚಾರ
ಕ. ಬಂಗಾಲ ಗೆಜೆಟ್
ಡ. ಮಲಯಾಳಂ ಮನೋರಮಾ

ಅರ್ಥಶಾಸ್ತ್ರ

೪೧. 'ನಬಾರ್ಡ್' ಬ್ಯಾಂಕ್ ಸ್ಥಾಪನೆಯ ವರ್ಷ ಯಾವುದು?
ಅ. ೧೯೮೦ ಬ. ೧೯೮೫
ಕ. ೧೯೮೯ ಡ. ೧೯೮೨

೪೨. ೧೯೫೧ರಲ್ಲಿ ಭಾರತದ ಸಾಕ್ಷರತೆ ಪ್ರಾಮಾಣ ಎಷ್ಟು ಇತ್ತು?
ಅ. ೨೦% ಬ. ೧೮.೩೩%
ಕ. ೧೫% ಡ. ೨೧.೩೦%

೪೩. ಚೀನಾ ದೇಶದ ಕರೆನ್ಸಿಯ ಹೆಸರೇನು?
ಅ. ರೋಬಲ್ ಬ. ಪೌಂಡ್
ಕ. ಯೆನ್ ಡ. ಡಾಲರ್

೪೪. ಭಾರತದಲ್ಲಿ ಅರಣ್ಯ ಸಂಶೋಧನಾ ಸಂಸ್ಥೆ ಎಲ್ಲಿದೆ?
ಅ. ಚಂಡಿಗಡ ಬ. ಡೆಹ್ರಾಡೂನ್
ಕ. ಕಲಕತ್ತಾ ಡ. ಹೈದ್ರಾಬಾದ್

೪೫. ರಾಜಾ ಚಲ್ಲಯ್ಯಾ ಸಮಿತಿ ಯಾವುದಕ್ಕೆ ಸಂಬಂಧಿಸಿದ್ದು?
ಅ. ತೆರಿಗೆ ಪದ್ಧತಿ ಬ. ವೇತನ ಪರಿಷ್ಕರಣ
ಕ. ಆದಾಯ ತೆರಿಗೆ ಡ. ಸಂಪತ್ತು ತೆರಿಗೆ

೪೬. ಅಂತಾರಾಷ್ಟ್ರೀಯ ಕುಟುಂಬ ವರ್ಷವನ್ನು ಯಾವ ದಿನಾಂಕದಂದು ಆಚರಿಸುತ್ತಾರೆ?
ಅ. ಮೇ. ೧೫ ಬ. ಎಪ್ರಿಲ್ ೧೦
ಕ. ಅಕ್ಟೋಬರ್ ೫ ಡ. ಮೇ ೨೦.

೪೭. ದೇಶದಲ್ಲಿಯೇ ಅಧಿಕ ಸಾಂಬಾರು ಪದಾರ್ಥಗಳನ್ನು ಬೆಳೆಯುವ ರಾಜ್ಯ ಯಾವುದು?
ಅ. ಕರ್ನಾಟಕ ಬ. ಜಮ್ಮು ಮತ್ತು ಕಾಶ್ಮೀರ
ಕ. ಕೇರಳ ಡ. ಬಿಹಾರ

೪೮) ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳನ್ನು ಯಾವಾಗ ಸ್ಥಾಪಿಸಲಾಗಿದೆ?
ಅ. ೧೯೭೫ ಬ. ೧೯೭೮
ಕ. ೧೯೭೨ ಡ. ೧೯೮೦


೪೯. ಭಾರತದಲ್ಲಿ ಹೆಚ್ಚು ಶಾಖೆಗಳನ್ನು ಹೊಂದಿದ ವಿದೇಶಿ ಬ್ಯಾಂಕ್ ಯಾವುದು?
ಅ. ಸ್ವಿಸ್ ಬ್ಯಾಂಕ್
ಬ. ಗ್ರಿಂಡ್ಲೆಸ್ ಬ್ಯಾಂಕ್
ಕ. ಸಿಂಗಪುರ ಬ್ಯಾಂಕ್
ಡ. ಬ್ಯಾಂಕ್ ಆಫ್ ಲಂಡನ್

೫೦. ರಿಸರ್ವ್ ಬ್ಯಾಂಕ್ ಯಾವಾಗ ಸ್ಥಾಪಿಸಲಾಯಿತು?
ಅ. ೧೯೪೦ ಬ. ೧೯೪೫
ಕ. ೧೯೩೫ ಡ. ೧೯೫೦

ಉತ್ತರಗಳು

೧. ಡ, ೨. ಡ, ೩. ಬ, ೪. ಡ, ೫. ಕ, ೬. ಡ, ೭. ಕ, ೮. ಡ, ೯. ಕ, ೧೦. ಅ, ೧೧. ಡ, ೧೨. ಅ, ೧೩. ಡ, ೧೪. ಬ, ೧೫. ಅ, ೧೬. ಬ, ೧೭. ಅ, ೧೮. ಕ, ೧೯. ಬ, ೨೦. ಡ, ೨೧. ಕ, ೨೨. ಬ, ೨೩. ಕ, ೨೪. ಡ, ೨೫. ಕ, ೨೬. ಬ, ೨೭. ಕ, ೨೮. ಡ, ೨೯. ಅ, ೩೦. ಅ, ೩೧. ಅ, ೩೨. ಡ, ೩೩. ಡ, ೩೪. ಅ, ೩೫. ಅ, ೩೬. ಅ, ೩೭. ಕ, ೩೮. ಬ, ೩೯. ಅ, ೪೦. ಕ, ೪೧. ಡ, ೪೨. ಬ, ೪೩. ಕ, ೪೪. ಬ, ೪೫. ಅ, ೪೬. ಅ, ೪೭. ಕ, ೪೮. ಅ, ೪೯. ಬ, ೫೦. ಕ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಿ



೧. ಭಾರತದಲ್ಲಿ ಕ್ಷಿಪಣಿಗಳನ್ನು ಪ್ರಯೋಗಿಸುವ ಕೇಂದ್ರ ಎಲ್ಲಿದೆ?

೨. 'ಉರ್ದು' ಆಡಳಿತ ಭಾಷೆಯಾಗಿಸಿಕೊಂಡ ರಾಜ್ಯ ಯಾವುದು?

೩. ಸಂವಿಧಾನದ ಪ್ರಕಾರ ಭಾರತ ದೇಶವನ್ನು ಹೇಗೆ ಕರೆಯುತ್ತಾರೆ?

೪. ರಾಜ್ಯ ಸಭೆಯನ್ನು ರದ್ದು ಮಾಡುವ ಅಧಿಕಾರ ರಾಷ್ಟ್ರಪತಿಗೆ ಇದೆಯೆ?

೫. ಭಾರತದ ಸಂವಿಧಾನ ಮೊದಲ ಬಾರಿ ತಿದ್ದುಪಡಿಗೊಳಗಾಗಿದ್ದು ಯಾವಾಗ?

೬. ಭಾರತ-ಶ್ರೀಲಂಕ ದೇಶವನ್ನು ಬೇರ್ಪಡಿಸುವ ಜಲಸಂಧಿ ಹೆಸರು

೭. ಭಾರತ ದೇಶದ ದಕ್ಷಿಣ ಭಾಗದ ಕೊನೆಯ ಸ್ಥಳಕ್ಕೆ ಏನೆಂದು ಕರೆಯುತ್ತಾರೆ?

೮. ಗಂಗಾನದಿ ಉದ್ದವೆಷ್ಟು?

೯. ಕುಂಕುಮ ಹೂ ಅಧಿಕವಾಗಿ ಬೆಳೆಯುವ ರಾಜ್ಯ ಯಾವುದು?

೧೦. ಪ್ರಪಂಚದಲ್ಲಿ ತಂಬಾಕು ಉತ್ಪಾದನೆಯಲ್ಲಿ ಮೊದಲ ಸ್ಥಾನ ಪಡೆದ ದೇಶ?

೧೧. ೧೯೬೧ರಲ್ಲಿ ಭಾರತ ಒಕ್ಕೂಟಕ್ಕೆ ಸೇರಿದ ರಾಜ್ಯ ಯಾವುದು?

೧೨. ಅಧಿಕ ಖನಿಜ ಸಂಪತ್ತು ಹೊಂದಿದ ದೇಶದ ಏಕೈಕ ರಾಜ್ಯ

೧೩. ರಿಜರ್ವ್ ಬ್ಯಾಂಕ್ ಸ್ಥಾಪಿಸಿದ ವರ್ಷ ಯಾವುದು?

೧೪. ರಿಜರ್ವ್ ಬ್ಯಾಂಕ್‌ನ್ನು ರಾಷ್ಟ್ರೀಕರಣಗೊಳಿಸಿದ್ದು ಯಾವಾಗ?

೧೫. ಡ್ಯೂರಾಂಡ್ ಕಪ್ ಯಾವುದಕ್ಕೆ ಸಂಬಂಧಿಸಿದ್ದು?

೧೬. 'ರೂಬಲ್' ಯಾವ ದೇಶಕ್ಕೆ ಸೇರಿದ ಕರೆನ್ಸಿ?

೧೭. ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF) ಯಾವಾಗ ಸ್ಥಾಪಿಸಲಾಯಿತು?

೧೮. ಅಮೆರಿಕಾದಲ್ಲಿ ಕೃಷಿಯಲ್ಲಿ ತೊಡಗಿದ ಶೇಕಡಾವಾರು ಪ್ರಮಾಣವೆಷ್ಟು?

೧೯. ಆಪರೇಶನ್ ಫ್ಲಡ್‌ಲೈಟ್ ಎನ್ನುವುದು

೨೦. 'ಏಷಿಯನ್ ಡ್ರಾಮಾ' ಎನ್ನುವ ಪುಸ್ತಕ ಬರೆದ ಅರ್ಥಶಾಸ್ತ್ರಜ್ಞರ ಹೆಸರು?

೨೧. ದೇಶ ರಕ್ಷಣಾ ದಳಕ್ಕೆ ಮಹಾ ದಂಡನಾಯಕ ಯಾರು?

೨೨. ರಾಷ್ಟ್ರಪತಿ ರಾಜ್ಯಸಭೆಗೆ ಎಷ್ಟು ಜನರನ್ನು ನೇಮಕ ಮಾಡುತ್ತಾರೆ?

೨೩. ಭಾರತ ಸಂವಿಧಾನ ಅಂಗೀಕಾರಗೊಂಡಿದ್ದು ಯಾವಾಗ?

೨೪. ಜಮ್ಮು-ಕಾಶ್ಮೀರದ ಸಂವಿಧಾನ ಜಾರಿಗೊಂಡಿದ್ದು ಎಂದಿನಿಂದ?

೨೫. ಅರಣ್ಯ ಕಡಿಮೆ ಇರುವ ರಾಜ್ಯ ಯಾವುದು?

೨೬. ಆಮ್ಲಜನಕ ಕಂಡು ಹಿಡಿದವರು ಯಾರು?

೨೭. ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಭಾರತೀಯ ವಿಜ್ಞಾನಿ ಯಾರು?

೨೮. ಭಾರತ ದೇಶದಲ್ಲಿ ಪೆನ್ಸಿಲಿನ್ ತಯಾರಿಸುವುದು ಎಲ್ಲಿ?

೨೯. 'ಅನಾಫಿಲಸ್' ಹೆಣ್ಣು ಸೊಳ್ಳೆಯಿಂದ ಉಂಟಾಗುವ ಕಾಯಿಲೆ ಯಾವುದು?

೩೦. ಕ್ರಯೋಜನಿಕ್ ಇಂಜನ್‌ಗಳು ಯಾವುದಕ್ಕೆ ಬಳಸುತ್ತಾರೆ

೩೧. ಪಾರ್ಲಿಮೆಂಟರಿ ಸಮಿತಿಯಲ್ಲಿ ಹೆಚ್ಚು ಸದಸ್ಯರನ್ನು ಹೊಂದಿದ ಸಮಿತಿ ಯಾವುದು?

೩೨. ಭಾರತ ಸ್ವಾತಂತ್ರ ಸ್ವರ್ಣೋತ್ಸವ ಸಂದರ್ಭಕ್ಕೆ ಶತ ಜಯಂತಿ ಆಚರಿಸಬೇಕಾದ ವ್ಯಕ್ತಿ ಯಾರು?

೩೩. ಖನಿಜ ಉತ್ಪಾದನೆಯಲ್ಲಿ ಭಾರತದ ಸ್ಥಾನ ಎಷ್ಟು?

೩೪. ಹೆಚ್ಚು ಮತದಾರರನ್ನು ಹೊಂದಿದ ರಾಜ್ಯ ಯಾವುದು?

೩೫. ಲೋಕಸಭೆ ಅಧ್ಯಕ್ಷರನ್ನು ಯಾರು ಆಯ್ಕೆ ಮಾಡುತ್ತಾರೆ?

೩೬. ಈ ವರ್ಷ ಜಮ್ನಾಲಾಲ್ ಪ್ರಶಸ್ತಿ ಪಡೆದ ಕನ್ನಡಿಗನಾರು?

೩೭. ನೂತನವಾಗಿ ಅಸ್ತಿತ್ವಕ್ಕೆ ಬಂದ ಪ್ರಸಾರ ಭಾರತಿ-ಮಂಡಳಿಯ ಅಧ್ಯಕ್ಷರಾರು?

೩೮. ಪ್ರಸ್ತುತ ಅಣುಶಕ್ತಿ ಆಯೋಗದ ಅಧ್ಯಕ್ಷರು ಯಾರು?

೩೯. ವಿಜ್ಞಾನ ವಿಭಾಗದಲ್ಲಿ ಪ್ರಥಮ ಬಾರಿ ಭಾರತ ರತ್ನ ಪ್ರಶಸ್ತಿ ಪಡೆದವರು ಯಾರು?

೪೦. ೧೯೯೭ರಲ್ಲಿ ಭಾರತ ರತ್ನ ಪ್ರಶಸ್ತಿ ಪುರಸ್ಕೃತರಾದ ವಿಜ್ಞಾನಿಯ ಹೆಸರೇನು?

೪೧. ೧೯೯೭ರ ಗಾಂಧಿ ಶಾಂತಿ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾದ ವಿದೇಶಿ ಯಾರು?

೪೨. ೧೯೯೭ರ ರಾಜೀವ್‌ಗಾಂಧಿ ಮಾನವ ಸೇವಾ ಪ್ರಶಸ್ತಿ ಪಡೆದ ಕರ್ನಾಟಕದ ಮಹಿಳೆ ಹೆಸರೇನು?

೪೩. ಭಾರತ ಕಾನೂನು ಆಯೋಗದ ಅಧ್ಯಕ್ಷರು ಯಾರು?

೪೪. ಸೆಪ್ಟೆಂಬರ್ ತಿಂಗಳ ೨೨ರಂದು ರಾಜ್ಯ ಸಚಿವ ಸಂಪುಟ ಸಭೆ ಎಲ್ಲಿ ನಡೆಯಿತು?

೪೫. ಹನ್ನೊಂದನೆ ಲೋಕಸಭೆ ವಿಸರ್ಜನೆಯಾ... ದಿನಾಂಕ ಯಾವುದು?

೪೬. ಇತ್ತೀಚೆಗೆ ಪಾಕಿಸ್ತಾನ ಅಧ್ಯಕ್ಷ ಸ್ಥಾನ... ರಾಜೀನಾಮೆ ನೀಡಿದವರು ಯಾರು?

೪೭. ಬೆಂಗಳೂರಲ್ಲಿ ನಡೆದ ೪ನೇ ರಾಷ್ಟ್ರೀಯ... ಕ್ರೀಡಾಕೂಟದ ಲಾಂಛನದ ಹೆಸರೇನು?

೪೮. ಅಮೆರಿಕಾದ ಸಂವಿಧಾನದ ಪ್ರಕಾರ... ಅಧ್ಯಕ್ಷರು ಎಷ್ಟು ಬಾ... ಆಯ್ಕೆಯಾಗಬಹುದು?

೪೯. ಈ ಬಾರಿ 'ಟ್ವಂಟಿಯತ್ ಸೆಂಚುರಿ' ಪ್ರಶ... ಪಡೆದ ಭಾರತೀಯನಾರು?

೫೦. ಹತ್ತನೆ ವಿಶ್ವ ಸಂಸ್ಕೃತ ಸಮ್ಮೇಳನ ನಡೆದದ್ದು ಎಲ್ಲಿ?

ಉತ್ತರಗಳು :

೧.ಚಂಡಿಪುರ (ಒರಿಸ್ಸಾ), ೨.ಜಮ್ಮು ಮತ್ತು ಕಾಶ್ಮೀರ, ೩.ಯೂನಿಯನ್ ಆಫ್ ಸ್ಟೇಟ್ಸ್, ೪.ಇಲ್ಲ, ೫.೧೯೫೧ರಲ್ಲಿ, ೬.ಪಾಕ್ ಜಲಸಂಧಿ, ೭.ಇಂದಿರಾ ಪಾಯಿಂಟ್, ೮.೨೦೭೧ ಕಿ.ಮೀ., ೯.ಜಮ್ಮು ಮತ್ತು ಕಾಶ್ಮೀರ, ೧೦.ಭಾರತ, ೧೧.ಗೋವಾ, ೧೨.ಬಿಹಾರ, ೧೩.೧೯೩೫, ೧೪.೧೯೪೯, ೧೫.ಪುಟ್‌ಬಾಲ್, ೧೬.ರಷ್ಯಾ, ೧೭.೧೯೫೫, ೧೮.ಶೇಕಡಾ ೨, ೧೯.ಸಾಕ್ಷರತೆ... ಸಂಬಂಧಿಸಿದ್ದು, ೨೦.ಗುನ್ನಾರ ಮಿರ್ಡಾಲ್, ೨೧.ರಾಷ್ಟ್ರಪತಿ, ೨೨.೧೨, ೨೩.೧೯೪೯ ನವಂಬ... ೨೬, ೨೪.೧೯೫೭ ಜನವರಿ ೨೬, ೨೫.ಹರಿಯಾ... ೨೬.ಪ್ರಿಸ್ಟಲಿ, ೨೭.ಸಿ.ವಿ. ರಾಮನ್, ೨೮.ಪಿಂಪ್ರಿ... ೨೯.ಮಲೇರಿಯಾ, ೩೦.ಉಪಗ್ರಹ ಪ್ರಯೋ... ಸುವ ರಾಕೆಟ್‌ಗಳಲ್ಲಿ, ೩೧.ಅಂದಾಜು ಸಮಿತಿ, ೩೨.ಸುಭಾಷ್ ಚಂದ್ರಬೋಸ್, ೩೩.ಮೂರ... ಯದು, ೩೪.ಉತ್ತರ ಪ್ರದೇಶ, ೩೫.ಲೋಕಸ... ಸದಸ್ಯರು, ೩೬.ಪ್ರೊ. ಕಟಗಿಹಳ್ಳಿಮಠ... ೩೭.ನಿಖಿಲ್ ಚಕ್ರವರ್ತಿ, ೩೮.ಆರ್. ಚಿದಂಬರ... ೩೯.ಡಾ. ಹೋಮಿ ಜಹಾಂಗಿರ್ ಬಾಬಾ... ೪೦.ಎ.ಪಿ.ಜೆ. ಅಬ್ದುಲ್ ಕಲಾಂ, ೪೧.ಗೆರಾಲ... ಫಿಷರ್, ೪೨.ಪುಟ್ಟವೀರಮ್ಮ, ೪೩.ನಾ... ಜೀವನರೆಡ್ಡಿ, ೪೪.ಹುಬ್ಬಳ್ಳಿ, ೪೫.ಡಿಸೆಂಬರ್ ೪... ೪೬.ಫಾರುಖ್ ಅಹಮದ್ ಲೆಘಾರಿ, ೪೭.ನಂದು... ೪೮.ಎರಡುಬಾರಿ, ೪೯.ಡಿ.ಸ್ವಾಮಿನಾಥನ್... ೫೦.ಬೆಂಗಳೂರು



○ ಉಷಾ ನವರತ್ನರಾಮ್

ಮುಖದ ತುಂಬಾ ಗುಳ್ಳೆ

ನನಗೀಗ ೧೫ ವರ್ಷ ವಯಸ್ಸು. ೯ನೇ ತರಗತಿಯಲ್ಲಿ ಓದುತ್ತಿದ್ದೇನೆ. ನನ್ನ ಮುಖದ ತುಂಬ ಗುಳ್ಳೆಗಳಾಗಿವೆ. ಏನು ಮಾಡಿದರೂ ಹೋಗುತ್ತಿಲ್ಲ. ಸಲಹೆ ನೀಡಿ.

- ಎಸ್ ಕೊಟ್ರೇಶ್, ಜಿ.ಕೋಡಿಹಳ್ಳಿ

ಸಲಹೆ

ನಿಮಗೆ ಅಲರ್ಜಿಯಿಂದಲೋ, ಚರ್ಮದ ಸೋಂಕಿನಿಂದಲೋ ಗುಳ್ಳೆಗಳು ಬಂದಿರಬಹುದು. ಅಲ್ಲದೇ ತಲೆಯಲ್ಲಿ ಹೊಟ್ಟು, ಹಗರು ಇದ್ದರೂ ಅದು ಮುಖದ ಮೇಲೆ ಉದುರಿದಾಗ ಗುಳ್ಳೆಗಳು ಬರುವುದುಂಟು. ಚರ್ಮದ ಆರೋಗ್ಯಕ್ಕೆ ದೇಹದ ಆರೋಗ್ಯ, ತಿನ್ನುವ ಆಹಾರ ಕೂಡ ಬಹು ಮುಖ್ಯ. ಮುಖವನ್ನು ಯಾವುದೇ ರಾಸಾಯನಿಕವಿರುವ ಸೋಪು ಬಳಸಿ ತೊಳೆಯಬೇಡಿ. ನೀರಿಗೆ ಒಂದಿಷ್ಟು ಬೇಕಿಂಗ್ ಪೌಡರ್ ಸೇರಿಸಿ ಆ ನೀರಿನಲ್ಲಿ ಮುಖ ತೊಳೆಯಿರಿ. ಸ್ನಾನ ಮಾಡಲು, ಮುಖ ತೊಳೆಯಲು ಕಡಲೆಹಿಟ್ಟು ಅಥವಾ ಹೆಸರುಹಿಟ್ಟು ಬಳಸಿ. ಮುಖಕ್ಕೆ ಯಾವುದೇ ಕ್ರೀಂ ಬಳಸಬೇಡಿ. ಆಹಾರದಲ್ಲಿ ಕೊಬ್ಬಿನಾಂಶ ಕಡಿಮೆ ಮಾಡಿ. ಕರಿದ ತಿಂಡಿ ತಿನಿಸು ವರ್ಜಿಸಿ. ಹಸಿ ತರಕಾರಿ, ಹಣ್ಣುಗಳು, ಕಾಳುಗಳನ್ನು ಹೆಚ್ಚಾಗಿ ಸೇವಿಸಿ. ಚರ್ಮ ಶುಷ್ಕವಾಗದಂತೆ ತಡೆಯಲು ಸಾಕಷ್ಟು ಮಜ್ಜಿಗೆ, ನೀರು, ಲಿಂಬೆ ಪಾನಕ ಮುಂತಾದವನ್ನು ಯಥೇಚ್ಛವಾಗಿ ಸೇವಿಸಿ ಮಲಬದ್ಧತೆ ಆಗದಂತೆ ತಡೆಯಿರಿ. ದೇಹಕ್ಕೆ ಸಾಕಷ್ಟು ವ್ಯಾಯಾಮ ಮಾಡಿ. ಇನ್ನೂ ಹೋಗದಿದ್ದಲ್ಲಿ ಚರ್ಮ ತಜ್ಞರನ್ನು ಸಂಪರ್ಕಿಸಿರಿ.

ಉದುರುವ ತಲೆಗೂದಲು

ನಾನು ೨೧ ವರ್ಷದ ತರುಣ. ನನ್ನ ತಲೆಗೂದಲು ಬಹಳ ಉದುರುತ್ತಿವೆ. ಈಗಾಗಲೇ ನೆತ್ತಿ ಖಾಲಿ ಆಗಿದೆ. ನನ್ನ ಸ್ನೇಹಿತರ ಅಣಕಿಸುವ ಮಾತುಗಳಿಂದ ಜೀವನದಲ್ಲಿ ಜುಗುಪ್ಸೆ ಉಂಟಾಗಿದೆ. ನಾನು ಸೀಗೆಕಾಯಿ ಬಳಸುತ್ತೇನೆ. ಪತ್ರಿಕೆಗಳಲ್ಲಿ ಬರುವ ಜಾಹೀರಾತು ನಂಬಿ ಹಲವಾರು ತೈಲಗಳನ್ನು ಬಳಸಿ ಸಾಕಷ್ಟು ಹಣ ಕಳೆದುಕೊಂಡಿದ್ದೇನೆ. ಇದನ್ನು ತಡೆಗಟ್ಟುವುದು ಹೇಗೆ? ಉದುರಿದ ಜಾಗೆಯಲ್ಲಿ ಮತ್ತೆ ಕೂದಲು ಬೆಳೆಯಲು ಏನು ಮಾಡಬೇಕು?

- ಹೆಸರು ಬೇಡ, ಶ್ರೀನಿವಾಸಪುರ

ಸಲಹೆ

ದೇಹಕ್ಕೆ ಸಾಕಷ್ಟು ಪೌಷ್ಟಿಕತೆಯಿಲ್ಲದಿದ್ದಲ್ಲಿ, ತಲೆಯ ಸೋಂಕುಗಳಿದ್ದಲ್ಲಿ, ಅನುವಂಶಿಕತೆಯಿದ್ದಲ್ಲಿ ಕೂದಲುದುರಿಬಿಟ್ಟ ತಲೆಯಾಗುವುದುಂಟು. ಯಾವ ತೈಲ ಹಚ್ಚಿದರೂ ಪ್ರಯೋಜನವಿಲ್ಲ. ಮೊದಲು ನಿಮ್ಮ ತಲೆ ಗೂದಲನ್ನು ಸ್ವಚ್ಛವಾಗಿಡಿ. ಹೊಟ್ಟು, ಹಗರು, ಹೇನು ಬಾರದಂತೆ ಎಚ್ಚರ ವಹಿಸಿ. ನಿಮ್ಮ ಹಿರಿಯರಲ್ಲಿ ಚಿಕ್ಕವಯಸ್ಸಿನಲ್ಲಿಯೇ ಕೂದಲುದುರಿ ಬಿಟ್ಟ ತಲೆಯಾಗುವುದು ಇದ್ದಲ್ಲಿ ಅನುವಂಶಿಕತೆಯಿರಬಹುದು. ಈಗ 'ಹೇರ್ ವೀವಿಂಗ್'ನಲ್ಲಿ ಪಾಶ್ಚಾತ್ಯ ದೇಶಗಳಿಂದ ಪರಿಣತಿಗೊಂಡವರು ಅನೇಕ ಮಂದಿಯಿದ್ದಾರೆ. ಹಣ ಧಾರಾಳವಾಗಿ ಖರ್ಚು ಮಾಡಿದ್ದಲ್ಲಿ ಇದು ಸಾಧ್ಯ.

ತಾಯಿಯ ಆಸೆ V/s ಮನದ ಮಾತು

ನಾಲ್ಕು ವರ್ಷಗಳ ಹಿಂದೆ ಒಬ್ಬ ಹುಡುಗಿಯನ್ನು ಬಲೆಗೆ ಬೀಳಿಸಿಕೊಂಡೆ. ಈಗ ನಮ್ಮ ಪ್ರೀತಿ ಬಲಿತಿದೆ. ಮದುವೆ ಹಂತಕ್ಕೆ ಬಂದಿದೆ. ನಾನು ಟಿ.ಸಿ.ಎಚ್. ಓದುತ್ತಿದ್ದೇನೆ. ಆ ಹುಡುಗಿ ಕೀಳು ಜಾತಿಯವಳು, ಸಭ್ಯಸ್ಥೆ. ನನ್ನ ತಾಯಿ ಮದುವೆಗೆ ಒಪ್ಪುತ್ತಿಲ್ಲ. ತಾಯಿಯ ಆಸೆ ಈಡೇರಿಸಲೋ, ಮನದ ಮಾತು ಕೇಳಿ ಮದುವೆಯಾಗಲೋ?

- ಹೆಸರು, ಊರು ಬೇಡ

ಸಲಹೆ

ನೀವು ಬಲೆಗೆ ಬೀಳಿಸಿಕೊಂಡಿರುವ ಹುಡುಗಿ 'ಕೀಳು ಜಾತಿ' ಎಂದು ಸಂಬೋಧಿಸಲೇಬೇಡಿ. ಕೀಳು ಜಾತಿ ಮೇಲು ಜಾತಿಯೆಂಬುದೇ ಇಲ್ಲ. ಅವರವರ ನಡತೆಯೇ ಜಾತಿಯನ್ನು ಹೇಳುತ್ತದೆ. ನೀವಿನ್ನೂ ನಿಮ್ಮ ಕಾಲಿನ ಮೇಲೆ ನಿಂತಿಲ್ಲ, ಒಬ್ಬ ಹೆಂಡತಿಯನ್ನು ಸಾಕುವ ಚೈತನ್ಯವಿಲ್ಲ. ಸಭ್ಯಸ್ಥೆಯಾದ ಹುಡುಗಿಯನ್ನು ಅನಾವಶ್ಯಕವಾಗಿ ತೊಂದರೆ ಸಮಸ್ಯೆಗಳಿಗೆ ಸಿಲುಕಿಸಬೇಡಿ. ಪ್ರೀತಿ ಮಾಡಿ. ಬಲೆಗೆ ಬೀಳಿಸಿಕೊಂಡು, ಪ್ರೀತಿ ಬಲಿಯುವವರೆಗೆ ಬಿಟ್ಟರುವ ನಿಮಗೆ ವಿವೇಚನೆ ಸಾಕಷ್ಟಿರಬೇಕಲ್ಲವೇ? ನಿಮ್ಮ ಪ್ರೀತಿ ನಿಜವಾದುದ್ದೇ ಆದಲ್ಲಿ ನಿಮ್ಮ ತಾಯಿಯ ಮನಸ್ಸು ಮಾರ್ಪಡಿಸಲು ಯತ್ನಿಸಿ. ಮಾನವೀಯ ಮೌಲ್ಯಗಳನ್ನು ತಿಳಿಸಿ, ನೀವು ಒಲಿದಿರುವ ಹುಡುಗಿಯ ಬಗ್ಗೆ ಅನುಕಂಪ, ಪ್ರೀತಿ, ವಿಶ್ವಾಸ ಬೆಳೆಯುವಂತೆ ಮಾಡಿ. ಯಾವ ತಾಯಿಯೂ ಮಗನ ಸುಖ, ಸಂತೋಷಕ್ಕೆ ಅಡ್ಡಿ ಬರುವುದಿಲ್ಲ.

ಅವನ ಮನೆಯವರು ಒಪ್ಪುತ್ತಿಲ್ಲ

ನಾನು ೧೬ ವರ್ಷದ ಯುವತಿ. ಎಸ್.ಎಸ್.ಎಲ್.ಸಿ. ಮುಗಿಸಿದ್ದೇನೆ. ೨ ವರ್ಷದಿಂದ ಒಬ್ಬ ಹುಡುಗನನ್ನು ಪ್ರೀತಿಸುತ್ತಿದ್ದೇನೆ. ಅವನು ಸಿ.ಪಿ.ಎಡ್. ಮಾಡಿ ಕೆಲಸದಲ್ಲಿದ್ದಾನೆ. ನಮ್ಮ ಮನೆಯವರ ಒಪ್ಪಿಗೆಯೂ ಇದೆ. ಆದರೆ ಅವನ ಮನೆಯವರು ಒಪ್ಪುತ್ತಿಲ್ಲ. ನಾನು ಚಿಕ್ಕವಳಿದ್ದಾಗ ಹುಡುಗನ ಮನೆಗೆ ಹೋಗುತ್ತಿದ್ದೆ. ಅವನ ತಂದೆ ತಾಯಿಯರು, "ನಮ್ಮ ಮಗನಿಗೆ ಇವಳನ್ನೇ ತಂದುಕೊಳ್ಳೋಣ" ಎನ್ನುತ್ತಿದ್ದರು. ನಮ್ಮ ಪ್ರೀತಿ ಮೊಳೆಯಲು ಅವರ ಆಗಿನ ಈ ಧೋರಣೆಯೂ ಕಾರಣ. ಸಲಹೆ ಕೊಡಿ.

- ಹೆಸರು, ಊರು ಬೇಡ

ಸಲಹೆ

ಹುಡುಗನ ತಂದೆತಾಯಿಯ ಈ ಧೋರಣೆಗೆ ನಾನೇನು ಹೇಳುವುದು, ಆ ಯುವಕನನ್ನೇ ಕೇಳಿ. ಅವನ ತಂದೆ, ತಾಯಿಯ ಧೋರಣೆ ಅವನಿಗಿಂತ ಬೇರೆ ಯಾರಿಗೂ ತಿಳಿಯದು. ಅವನ ತಂದೆ, ತಾಯಿ, ಅವನೂ, ನೀವು ಎಲ್ಲಾ ಒಂದು ಕಡೆ ಕುಳಿತು ಬಿಚ್ಚು ಮನಸ್ಸಿನಿಂದ ಮಾತಾಡಿ ಸಮಸ್ಯೆ ಪರಿಹರಿಸಿಕೊಳ್ಳಿ. ಮದುವೆ ಮಾಡಿಕೊಳ್ಳುವುದಕ್ಕೆ ಮುಂಚೆಯೇ ಇಂತಹ ಸಮಸ್ಯೆಗಳನ್ನು ಪರಿಹರಿಸಿಕೊಂಡು ಬಿಡುವುದು ಒಳ್ಳೆಯದು. ಅನಂತರ ಪಶ್ಚಾತ್ತಾಪ ಬೇಡ. ನಿಮ್ಮಿಬ್ಬರ ನಡುವಿನ ಪ್ರೀತಿ ಪರಿಶುದ್ಧವಾಗಿ, ಆಳವಾದುದ್ದೇ ಆದರೆ ಯಾವುದಕ್ಕೂ ಧೈರ್ಯವಾಗಿರಿ.

ಅನಪೇಕ್ಷಿತ ಕೂದಲು

ನನಗೆ ಮುಖದ ಮೇಲೆ ತುಂಬಾ ಕೂದಲು ಬೆಳೆದಿವೆ. ಈ ಅನಪೇಕ್ಷಿತ ಕೂದಲನ್ನು ನಿವಾರಿಸುವುದು ಹೇಗೆ? ಇವು ಮತ್ತೆ ಬೆಳೆಯದಂತೆ ತಡೆಗಟ್ಟುವ ಬಗೆ ತಿಳಿಸಿರಿ.

- ಸುಮ, ಊರು ಬೇಡ

ಸಲಹೆ

ಅನಾವಶ್ಯಕ ರೋಮ ನಿವಾರಣೆಗೆ ಅನೇಕ ವಿಧಗಳುಂಟು. ೧. ಬ್ಲೀಚಿಂಗ್ - ಆ ಕೂದಲು ಕಾಣದಂತೆ ಚರ್ಮದ ಬಣ್ಣಕ್ಕೆ ಬಿಳುಪೇಳುವ ವಿಧಾನ. ಬ್ಲೀಚಿಂಗ್ ಕ್ರೀಂ ಅಂಗಡಿಗಳಲ್ಲಿ ಸಿಗುತ್ತದೆ. ಆದರೆ ಇದನ್ನು ಪದೇ ಪದೇ ಮಾಡುತ್ತಲೇ ಇರಬೇಕಾದ್ದರಿಂದ ಚರ್ಮಕ್ಕೆ ಒಳ್ಳೆಯದಲ್ಲ. ೨. ವ್ಯಾಕ್ಸಿಂಗ್ - ವ್ಯಾಕ್ಸ್ ಅಥವಾ ಮೇಣದ ಸಹಾಯದಿಂದ ಈ ಕೂದಲನ್ನು ತೆಗೆಯಬಹುದು. ಇದು ಪದೇ ಪದೇ ಮಾಡಬೇಕಾದ್ದರಿಂದ, ಮುಖದ ಚರ್ಮದ ಆರೋಗ್ಯದ ದೃಷ್ಟಿಯಿಂದ ಉಚಿತವಲ್ಲ. ೩. ಥ್ರೆಡ್ಡಿಂಗ್ - ಬ್ಯೂಟಿ ಪಾರ್ಲರ್‌ಗಳಲ್ಲಿ ದಾರದ ಸಹಾಯದಿಂದ ಈ ಕೂದಲನ್ನು ತೆಗೆಯಬಹುದು. ೪. ಎಲೆಕ್ಟ್ರಾನಿಸ್ - ಇದು ಪರ್ಮನೆಂಟ್ ಚಿಕಿತ್ಸೆ. ಆದರೆ ದುಬಾರಿ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಲಭ್ಯ. ೫. ಈಗ ಅನೇಕ ಡೆಪಿಲೇಟಿಂಗ್ ಹೇರ್ ರಿಮೂವರ್ ಕೂದಲು ನಿವಾರಕ ಲೋಶನ್, ಕ್ರೀಂ ಬಂದಿದೆ. ಆದರೆ ಮುಖದ ಮೇಲೆ ಉಪಯೋಗಿಸಬಾರದು. ಕೊನೆಯದಾಗಿ ನೀವು ಬಳಸಬಹುದಾದ ಸುಲಭ ವಿಧಾನ. ಕಸ್ತೂರಿ ಅರಸಿನದ ಪುಡಿಯನ್ನು ನೀರಿನಲ್ಲಿ ಕಲಸಿ ಮುಖಕ್ಕೆ ಹಚ್ಚಿ ನಯವಾಗಿ ಉಜ್ಜಿ ಪ್ರತಿದಿನ ಸ್ನಾನ ಮಾಡಿ. ವಾರಕ್ಕೊಮ್ಮೆ ಕೂದಲಿರುವ ಸ್ಥಳಕ್ಕೆ ಉಪ್ಪಿನ ಪುಡಿ ನಯವಾಗಿ ಉಜ್ಜಿ ಸ್ನಾನ ಮಾಡಿ. ಪ್ರತಿವಾರ ಅಭ್ಯಂಜನ ಮಾಡುವಾಗ ಸೀಗೇಪುಡಿ ಹಾಕಿ ಉಜ್ಜುವುದರಿಂದಲೇ ಎಷ್ಟೋ ರೋಮಗಳು ಉದುರಿಹೋಗುತ್ತವೆ. ನಮ್ಮಲ್ಲಿ ಪುರಾತನ ಕಾಲದಿಂದಲೂ ಹೆಣ್ಣು ಮಕ್ಕಳಿಗೆ ಕೆನ್ನೆಗೆ, ಮುಖಕ್ಕೆ ಕಾಲು ಕೈಗಳಿಗೆ ಅರಸಿನ ಹಚ್ಚುತ್ತಿದ್ದುದು ಇದಕ್ಕಾಗಿಯೇ!

ನನ್ನ ತಂಗಿ ಪ್ರೀತಿಸುತ್ತಿದ್ದಾಳೆ!

ನನ್ನನ್ನು ಬಹಳ ದಿನಗಳಿಂದ ಒಬ್ಬ ಹುಡುಗ ಪ್ರೀತಿಸುತ್ತಿದ್ದಾನೆ. ನಮ್ಮ ಜಾತಿ ಬೇರೆ ಬೇರೆ. ನಮ್ಮ ಮನೆಗೆ ಬರುತ್ತಿರುತ್ತಾನೆ. ನಾನೇನಾದರೂ ನಿರಾಕರಿಸಿದರೆ ಅವನು ಸಾಯಲೂ ತಯಾರು. ಆದರೆ ಅವನನ್ನು ನನ್ನ ತಂಗಿ ಪ್ರೀತಿಸುತ್ತಿದ್ದಾಳೆ. ಇದು ಅವನಿಗೆ ಗೊತ್ತಿಲ್ಲ. ಈಗ ನಾನು ಏನು ಮಾಡಲಿ?

- ಕಲಾವತಿ, ಊರು ಬೇಡ

ಸಲಹೆ

ನಿಮಗೆ ಅವನು ಬೇರೆ ಜಾತಿಯವನೆಂದು ತಿಳಿದಿದ್ದೂ ಪ್ರೀತಿಸಿದ್ದೀರಿ. ಅಂದ ಮೇಲೆ ನೀವು ಅವನ ನಂಬಿಕೆಗೆ ದ್ರೋಹ ಬಗೆಯಬಾರದು. ಅವನೂ ನಿಮ್ಮನ್ನು ಪ್ರೀತಿಸುತ್ತಿರುವುದರಿಂದ ನಿಮ್ಮ ತಂಗಿ ಅವನನ್ನು ಪ್ರೀತಿಸುತ್ತಿರುವುದು ಆಶ್ಚರ್ಯ. ಅವಳಿಗೆ ನಿಮ್ಮಿಬ್ಬರ ಪ್ರೀತಿ ತಿಳಿಯದೇ? ಅವನಿಗೆ, ಅವಳು ಪ್ರೀತಿಸುತ್ತಿರುವುದು ತಿಳಿದಿಲ್ಲ ಎನ್ನುತ್ತೀರಿ. ನೀವು ನಿರಾಕರಿಸಿದರೆ ಅವನು ಸಾಯಲು ಸಿದ್ಧ ಎಂದು ತಿಳಿದ ಮೇಲೂ ನೀವು ಯಾರಿಗಾಗಿ ಯಾರನ್ನು ಏತಕ್ಕೆ ಬಲಿಕೊಡಬೇಕೆಂದಿದ್ದೀರಿ? ನೀವು ಒಂದೆಡೆ ಕುಳಿತು ಶಾಂತಚಿತ್ತರಾಗಿ ಆಳವಾಗಿ ಯೋಚಿಸಿ. ನಿಮ್ಮ ತಂಗಿಗೆ ನೀವು ಅವನು ಪರಸ್ಪರ ಪ್ರೀತಿಸುತ್ತಿರುವುದನ್ನು ತಿಳಿಸಿ. ಪ್ರೀತಿ, ಪ್ರೇಮದಲ್ಲಿ ಒನ್‌ವೇ ಟ್ರ್ಯಾಫಿಕ್ ಇಲ್ಲ. ನೀವು, ನಿಮ್ಮಂತಹವರು ಪ್ರೀತಿಯ ವಿಷಯದಲ್ಲಿ ಮಾಡುತ್ತಿರುವ, ಬರೆದು ಕೇಳುತ್ತಿರುವ ಪ್ರಶ್ನೆಗಳನ್ನು ಓದಿದಾಗ ನನಗೇ ಅಚ್ಚರಿಯಾಗುತ್ತಿದೆ. ಪ್ರೀತಿ, ಪ್ರೇಮ ಮಕ್ಕಳಾಡುವ ಆಟವೇ? ನೀವು ಯೋಚಿಸುತ್ತಿರುವ ರೀತಿಯೇ ಸರಿಯಿಲ್ಲ. ತಂಗಿಯ ಮೇಲಿನ ಪ್ರೀತಿಯೇ ಬೇರೆ, ತಾಯಿ ತಂದೆಯರ ಪ್ರೀತಿ ಬೇರೆ, ಪ್ರಿಯಕರನ ಪ್ರೀತಿ ಬೇರೆ ಎಂದು ತಿಳಿಯುವಷ್ಟು ಅಮಾಯಕರು ನೀವಲ್ಲ ಅಂದುಕೊಂಡಿದ್ದೇನೆ.


ಗಂಡನೊಂದಿಗೆ ಮಲಗಲೂ ಅನುಮತಿ

ನಾನು ವಿವಾಹಿತ ತರುಣಿ. ಮದುವೆಯಾಗಿ ನಾಲ್ಕು ವರ್ಷವಾಯಿತ ನನ್ನ ಪತಿ ಹಿಂದೆ ಒಬ್ಬ ಶ್ರೀಮಂತರ ಮನೆಯಲ್ಲಿ ಕೆಲಸಕ್ಕಿದ್ದರು. ನನ್ನ ಅತ್ತೆಯ ಅವರ ಮನೆಗೆಲಸ ಮಾಡುತ್ತಿದ್ದಳು. ಆ ಶ್ರೀಮಂತರ ಮಗಳು ಹಾಗೂ ನ ಪತಿ ಒಂದೇ ಶಾಲೆಯಲ್ಲಿ ಓದುತ್ತ ತೀರಾ ಆತ್ಮೀಯರಾಗಿದ್ದರಂತೆ. ಇದನ ಸಹಿಸದ ಆ ಶ್ರೀಮಂತರು ನನ್ನ ಪತಿಗೆ ಬೇರೆಡೆ ಮದುವೆ ಮಾಡುವಂತೆ ಒತ್ತ ತಂದರು. ನನ್ನ ಪತಿ ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ನನ್ನನ್ನು ಕ ಕೊಂಡಿದ್ದಾರೆ. ಹೋಮಿಯೋಪತಿ ವೈದ್ಯರಾದ ನನ್ನ ಪತಿ ಮೊದಲ ಮೂ ತಿಂಗಳು ಸರಿಯಾಗಿದ್ದರು. ನಂತರ ನನ್ನ ಪತಿ, ಅತ್ತಿಗೆ ಭಾವ ನನ್ನನ್ನು ನಿಕೃ ವಾಗಿ ಕಾಣುತ್ತ ತವರಿಗೆ ಅಟ್ಟಲು ನೋಡಿದರು. ನಾನು ಒಪ್ಪದಿದ್ದಾಗ ನ ಮಂಚದಲ್ಲಿ ನನಗೆ ಮಲಗಲೂ ಬಿಡಲಿಲ್ಲ. ನನ್ನ ಪತಿ ಕೂಡ ನನ್ನ ಹತ್ತಿ ಬರಬೇಕಾದರೆ ಅಣ್ಣ, ಅತ್ತಿಗೆ, ತಾಯಿಯರ ಒಪ್ಪಿಗೆ ಪಡೆಯುತ್ತಿದ್ದರು. ನಾನ ಈ ಬಗ್ಗೆ ಅತ್ತಿಗೆಗೆ ಪರಿಪರಿಯಾಗಿ ಬೇಡಿಕೊಂಡರೂ ಆಕೆಯ ಮನಸ್ಸು ಕರ ಲಿಲ್ಲ. ಕೊನೆಗೊಂದು ದಿನ ಎಲ್ಲರೂ ಸೇರಿಕೊಂಡು ನನ್ನನ್ನು ಮನೆಯಿಂ ಹೊರಗೆ ಹಾಕಿದರು. ನನ್ನ ನೋವು ಒಂದು ಕಾದಂಬರಿಗೆ ಸಾಕಾಗುವಷ್ಟು ಇದ ದಯವಿಟ್ಟು ಸಲಹೆ ಸೂಚಿಸಿ.

- ಗಾಯತ್ರಿ, ಊರು ಬೇ

ಸಲಹೆ

ನಿಮ್ಮ ಕರುಣಾಜನಕ ಬದುಕು ನಮ್ಮ ದೇಶದ ಶೋಷಿತ, ದೌರ್ಜನ್ಯ ಬಲಿಯಾಗಿರುವ ಎಲ್ಲಾ ಹೆಣ್ಣುಗಳ ಕತೆಯೇ ಹೆಣ್ಣಿಗೆ ಯಾವಾಗ ವಿದ್ಯೆ, ಆರ್ಥಿಕ ಸ್ವಾತಂತ್ರ ವಿರುವುದಿಲ್ಲವೋ ಅಲ್ಲಿಯವರೆಗೆ ಅವಳ ಏನನ್ನೂ ಧೈರ್ಯವಾಗಿ ಸಾಧಿಸಲಾರಳು. ನೀ ನಿಮ್ಮ ತವರಿನ ಬಗ್ಗೆ ಏನೂ ಬರೆದಿಲ್ ತವರಿನಿಂದ ನಿಮಗೆ ಯಾವ ರೀತಿಯ ಸಹಾಯವೂ ದೊರೆಯಲಿಲ್ಲವೇ ಎಂದ ತಿಳಿಸಿಲ್ಲ. ಏನಾದರಾಗಲೀ ಅನಿವಾಯ ಕಾರಣಗಳಿಂದ ಒತ್ತಡಕ್ಕೆ ಮಣಿದು ನಿಮ್ಮನ ಮದುವೆಯಾದುದು ಕಾನೂನು ಬದ್ಧವಾ



ಅದು ವಿವಾಹವೇ. ನೀವಿಬ್ಬರೂ ಪತಿ-ಪತ್ನಿಯರೇ, ಯಾರೇ ನಿವ ಸಂಬಂಧಕ್ಕೆ ಅಡ್ಡಿ ಬರುವಂತಿಲ್ಲ. ದೇಹದ ಕಾಮನೆಗಳಿಗೆ ಮೂರು ತಿಂಗಳ ನಿಮ್ಮ ಪತಿ ಸಹಕರಿಸಿದ್ದು ಅನಂತರ ದೂರ ಮಾಡಿದುದು ತಪ್ಪು. ನಿಮ್ಮ ಅತ್ತಿಗ ಭಾವನವರು ನಿಮ್ಮನ್ನು ನಿಕೃಷ್ಟವಾಗಿ ಕಂಡುದ್ದೂ ತಪ್ಪು. ಅವರು ನಿಮ್ಮನ ಬಲವಂತವಾಗಿ ಹೊರಹಾಕುವುದಕ್ಕೆ ನಿಮ್ಮ ತಂದೆ, ತಾಯಿ, ಬಂಧು-ಬಳಗ ಸ್ನೇಹಿತರು ಯಾರೂ ನಿಮ್ಮ ಸಹಾಯಕ್ಕೆ ಬರಲಿಲ್ಲವೇ? ಅಥವಾ ನೀವ ಯಾರ ಬಳಿಯೂ ಹೇಳಲಿಲ್ಲವೇ? ಏನಾದರಾಗಲೀ ನೀವು ವಕೀಲರನ ಸಂಪರ್ಕಿಸಿ. ನಿಮ್ಮ ಯಜಮಾನರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಬಹುದು. ನಿಮಗೆ ನಿಮ್ಮ ಪತಿ ಮೈನ್ಟೆನೆನ್ಸ್ ಕೊಡಲು ಅನು ಮಾಡಿಕೊಡಬಹುದು. ಏನಾದರಾಗಲೀ, ಧೈರ್ಯ ತಂದುಕೊಂಡು ನೀ ಹೊಸ ಬಾಳು ರೂಪಿಸಿಕೊಳ್ಳಿ, ಆರ್ಥಿಕವಾಗಿ ಸ್ವತಂತ್ರರಾಗಬಯಸಿ ನಿವ ಬಗ್ಗೆ ನೀವು ನೆನೆದು ಕಷ್ಟಗಳನ್ನು ಎದುರಿಸುವಾಗ ಈ ಸಮಾಜದ ನೀವೊಬ್ಬರೇ ಅಲ್ಲ ನಿಮ್ಮಂತಹವರು ಲಕ್ಷಾಂತರ ಮಹಿಳೆಯರಿದ್ದಾ ಎಂದುಕೊಂಡಾಗ ಧೈರ್ಯ ಸಮಾಧಾನ ಎರಡೂ ತಾನೇ ಬರುತ್ತದೆ. ನೀ ಎದೆಗುಂದಬೇಕಾಗಿಲ್ಲ. ಧೈರ್ಯಂ ಸರ್ವತ್ರ ಸಾಧನಂ.

ನಾಯಕರಾಗುವುದು ನಿಮ್ಮ ಕೈಯಲ್ಲೇ ಇದೆ!

ಯಾರೂ ಹುಟ್ಟಿನಿಂದ ನಾಯಕರಲ್ಲ. ಸುತ್ತಲಿನ ಸಮಾಜ ಹಾಗೂ ವ್ಯಕ್ತಿಯೊಬ್ಬನಲ್ಲಿರುವ ಕ್ರಿಯಾಶೀಲತೆ, ಪ್ರತಿಭೆ ಜೊತೆಗೆ ನಿರಂತರ ಪ್ರಯತ್ನ ಹಾಗೂ ಸಾಧನೆ ಇವು ಅವನನ್ನು ನಾಯಕನನ್ನಾಗಿ ರೂಪಿಸುತ್ತವೆ.



ನಾಯಕತ್ವ ಎನ್ನುವುದು ಒಂದು ಹುದ್ದೆ ಅಥವಾ ಸ್ಥಾನ ಅಲ್ಲ. ಅದೊಂದು ಕ್ರಿಯಾಶೀಲ ವ್ಯಕ್ತಿತ್ವ, ಯಾವುದೇ ಒಂದು ನಿರ್ದಿಷ್ಟವಾದ ಕೆಲಸವನ್ನು, ಹಮ್ಮಿಕೊಂಡ ಯೋಜನೆಯನ್ನು ಪರಿಪೂರ್ಣಗೊಳಿಸುವುದಕ್ಕೆ ಅಗತ್ಯವಾದ ಸ್ವಯಂ ಪ್ರೇರಣೆ ಮತ್ತು ಇತರರನ್ನು ಆ ದಿಸೆಯಲ್ಲಿ ಪ್ರೇರಣೆಗೊಳಿಸುವ, ಪ್ರಭಾವ ಬೀರುವಂತಹ ವ್ಯಕ್ತಿತ್ವವೇ ನಾಯಕತ್ವ ಎನಿಸಿಕೊಳ್ಳುತ್ತದೆ. ಒಂದು ಗುಂಪಿನಲ್ಲಿ ತನಗೆ ಬೇಕಾದ ಬೆಂಬಲ, ಹೆಚ್ಚಿನ ಸಹಕಾರ ಪಡೆಯಬಲ್ಲಂತಹ ಸಾಮರ್ಥ್ಯವೇ ನಾಯಕತ್ವ, ಯಾವುದೋ ಒಂದು ನಿರ್ದಿಷ್ಟ ಗುರಿಯನ್ನು ತಲುಪಲು ತನ್ನ ಹಾಗೂ ತನ್ನ ಗುಂಪಿನ ಅಥವಾ ತಂಡದ ಕಾರ್ಯಕ್ಷಮತೆಯನ್ನು ಉನ್ನತ ದರ್ಜೆಗೆ ಏರಿಸುವಂತಹ ವ್ಯಕ್ತಿತ್ವವೇ ನಾಯಕತ್ವ

ಕಪಿಲ್‌ದೇವ್, ಸಚಿನ್ ತೆಂಡೂಲ್ಕರ್, ಕ್ರಿಕೆಟ್ ಆಟದಲ್ಲಿ ನಾಯಕತ್ವದ ಲಕ್ಷಣಗಳನ್ನು ತಮ್ಮಲ್ಲಿ ಒಗ್ಗೂಡಿಸಿಕೊಂಡು ಲಕ್ಷಾಂತರ ಕ್ರಿಕೆಟ್ ಪ್ರೇಮಿಗಳ, ಅಭಿಮಾನಿಗಳ ನಾಯಕ ಎನಿಸಿಕೊಂಡಿರುತ್ತಾರೆ. ರಿಲೆಯನ್ಸ್ ಸಂಸ್ಥೆಯ ಧೀರುಬಾಯಿ ಅಂಬಾನಿ ಜೈಲಿನ ಖೈದಿಗಳ ಬಗ್ಗೆ ಪ್ರೀತಿ-ಮಮತೆ ತೋರಿ ಅವರ ಹೃದಯವನ್ನು ಗೆದ್ದ ದಕ್ಷ ಪೊಲೀಸ್ ಅಧಿಕಾರಿ. ಕಿರಣ್‌ಬೇಡಿ, ದಕ್ಷಿಣ ಆಫ್ರಿಕಾದ ಕರಿಯ ಜನಾಂಗದ ನಾಯಕ ನೆಲ್ಸನ್ ಮಂಡೇಲಾ ಇವರೆಲ್ಲರಲ್ಲಿರುವ ನಾಯಕತ್ವದ ಗುಣಲಕ್ಷಣಗಳೇ ಅವರ ವ್ಯಕ್ತಿತ್ವ ಬೆಳಗಲು ಕಾರಣವಾಗಿದೆ. ಹೀಗೆ ಅನೇಕ ಜನರು ಸಾಮಾಜಿಕ, ರಾಜಕೀಯ, ಕ್ರೀಡೆ, ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ತಮ್ಮ ವ್ಯಕ್ತಿತ್ವದಿಂದಾಗಿ ಅದ್ವಿತೀಯ ನಾಯಕರೆನಿಸಿಕೊಂಡಿರುತ್ತಾರೆ.

ಯಾರೂ ಹುಟ್ಟಿನಿಂದ ನಾಯಕರಲ್ಲ. ಸುತ್ತಲಿನ ಸಮಾಜ ಹಾಗೂ ವ್ಯಕ್ತಿಯೊಬ್ಬನಲ್ಲಿರುವ ಕ್ರಿಯಾಶೀಲತೆ, ಪ್ರತಿಭೆ ಜೊತೆಗೆ ನಿರಂತರ ಪ್ರಯತ್ನ ಹಾಗೂ ಸಾಧನೆ ಇವು ಅವನನ್ನು ನಾಯಕನನ್ನಾಗಿ ರೂಪಿಸುತ್ತವೆ. ರೋಮ್ ನಗರವನ್ನು ಒಂದೇ ದಿನದಲ್ಲಿ ನಿರ್ಮಿಸಲಿಲ್ಲ ಎಂಬುದೊಂದು ಹೇಳಿಕೆಯಿದೆ. ರೋಮ್ ನಂತರ ಸುಂದರ ನಗರವನ್ನು ರೂಪಿಸುವಲ್ಲಿ ಹಲವಾರು ವರ್ಷಗಳ, ಸಾವಿರಾರು ಕೈಗಳ ಶ್ರಮ, ಪ್ರಯತ್ನ ಇದೆ. ಹಾಗೆಯೇ ಒಬ್ಬನ ವ್ಯಕ್ತಿತ್ವ ವಿಕಸನಕ್ಕೆ ನಿರಂತರ ಸಾಧನೆ ಸಮರ್ಪಣಾ ಮನೋಭಾವ, ನಿಷ್ಠೆ ಇವು ಅತೀ ಅಗತ್ಯವೆನಿಸುತ್ತವೆ. ಗ್ರಾಮೋಫೋನ್, ವಿದ್ಯುತ್ ಬಲ್ಬ್, ಮೊದಲಾದ ಆವಿಷ್ಕಾರಗಳನ್ನು ಮಾಡಿದ ವಿಜ್ಞಾನಿ ಥಾಮಸ್ ಆಲ್ವ ಎಡಿಸನ್ ಸಾಧನೆಗಳ ಬಗ್ಗೆ ಹೀಗೆ ಹೇಳಿರುತ್ತಾರೆ.

''ಸಂಶೋಧನೆಗಳು ಆಕಸ್ಮಿಕವಾಗಿ ದೊರಕಿರುವುದಿಲ್ಲ. ಅವು ನಿರಂತರ ಸಾಧನೆಗೆ ಪರಿಶ್ರಮಕ್ಕೆ ಒಲಿದ ವರಗಳು. ಆವಿಷ್ಕಾರಗಳಲ್ಲಿ, ಯಶಸ್ಸಿನಲ್ಲಿ ಸ್ಫೂರ್ತಿಯ ಪಾಲು ಒಂದಾದರೆ ಉಳಿದ ತೊಂಭತ್ತೊಂಬತ್ತು ಪಾಲು ಪರಿಶ್ರಮದ ಫಲ'' ಯಾವುದೇ ಕ್ಷೇತ್ರದಲ್ಲಿ ಪರಿಣತಿ ಸಾಧಿಸಬೇಕಾದರೆ ಸತತ ಪ್ರಯತ್ನ ಅತಿ ಅಗತ್ಯ. ಬೆಳಗಾಗುವುದರಲ್ಲಿ ಮಹಾನ್ ಸಂಗೀತಗಾರನಾಗಲಿಕ್ಕೆ ಸಾಧ್ಯವೇ? ಡಾ. ಬಾಲಮುರುಳೀ ಕೃಷ್ಣನ್, ಭೀಮಸೇನ ಜೋಶಿ, ಬಿಸ್ಮಿಲ್ಲಾಖಾನ್ ಇವರೆಲ್ಲಾ ಉತ್ತಮ ಸಂಗೀತಗಾರರು ಎನಿಸಿಕೊಳ್ಳಲು ಅವರು ಮಾಡಿರುವ ಹಲವಾರು ವರುಷಗಳ ಸಾಧನೆ, ತಪಸ್ಸು ಪರಿಶ್ರಮ ಇವುಗಳೇ ಕಾರಣ. ಇಂದು ಕಲ್ಪವೃಕ್ಷವೊಂದನ್ನು ನೆಟ್ಟು ಪೋಷಿಸಿದಲ್ಲಿ ಮುಂದೆ ಫಲ ನಮ್ಮದಾಗುತ್ತದೆ ಎಂಬುದನ್ನು ನೆನಪಿಡಬೇಕು. ಪ್ರಸಿದ್ಧ ಜಾದೂಗಾರ ಪ್ರೊ. ಶಂಕರ್‌ರವರನ್ನು ಭೇಟಿಯಾಗಿ ನಿಮ್ಮ ಯಶಸ್ಸಿನ ಗುಟ್ಟೇನು? ಎಂದು ಕೇಳಿದ್ದಕ್ಕೆ ''ಯಾವುದೇ ಕ್ಷೇತ್ರದಲ್ಲಿ ಅದ್ವಿತೀಯ ಎನಿಸಿಕೊಳ್ಳಲು ಮೂರು ಅಂಶಗಳು ಮುಖ್ಯ. ಅವು ಯಾವುವೆಂದರೆ, PRACTICE, PRACTICE AND PRACTICE ಎಂದು ಹೇಳಿದರಂತೆ.

ಗುರಿ

ನಿಮಗೊಂದು ನಿರ್ದಿಷ್ಟವಾದ, ಆದರ್ಶ ಗುರಿಯನ್ನು ನೀವೇ ರೂಪಿಸಿಕೊಳ್ಳಬೇಕು. ಅದನ್ನು ಸಾಧಿಸಲು ಸದಾ ಚಿಂತನೆ ನಡೆಸಬೇಕು. ಆ ನಿಟ್ಟಿನಲ್ಲಿ ಕಾರ್ಯತತ್ಪರರಾಗಬೇಕು. ಆ ಗುರಿಯನ್ನು ತಲುಪಲು ಇರುವ ಸಾಧಕ-ಭಾದಕಗಳ ಬಗ್ಗೆ ಚಿಂತಿಸಿ, ಒಂದು ಕಾರ್ಯ ಯೋಜನೆ ರೂಪಿಸಿ ಅದರಂತೆ ಮುನ್ನಡೆಯಿರಿ. ನೀವೊಬ್ಬರೇ ಅದನ್ನು ಸಾಧಿಸಬೇಕೆಂದೇನೂ ಇಲ್ಲ. ನಿಮ್ಮ ನಾಯಕತ್ವದಲ್ಲಿ ಬೇರೆಯವರ ಸಹಕಾರ ಅಗತ್ಯವೆಂದಾದರೆ ಅದನ್ನೂ ಬಳಸಿಕೊಳ್ಳಿ, ಆಗ ನೀವೊಬ್ಬ ಸಮರ್ಥ ನಾಯಕರಾಗುವಿರಿ.

ಇದಲ್ಲದೆ ನಾಯಕತ್ವದ ಯಶಸ್ಸಿಗೆ ಧೈರ್ಯ, ದೃಢಚಿತ್ತ, ಕಾರ್ಯ ತತ್ಪರತೆ, ಉತ್ತಮವಾದ ಜ್ಞಾನ ತಾಳ್ಮೆ, ಸಂವಹನ ಕಲೆ ಇಂತಹ ಗುಣಗಳನ್ನು ಮೈಗೂಡಿಸಿಕೊಂಡಿರಬೇಕು. ಉತ್ತಮ ನಾಯಕರಾಗಲು ನಿಮ್ಮ ಸಾಮಾಜಿಕ ಕಳಕಳಿ, ಕೌಟುಂಬಿಕ ಜವಾಬ್ದಾರಿಗಳನ್ನು ಹೇಗೆ ಸಮರ್ಥವಾಗಿ ನಿರ್ವಹಿಸಬಲ್ಲಿರಿ, ನಿಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯ, ಹಣಕಾಸು ನಿರ್ವಹಣೆ ಇವುಗಳು ಕೂಡ ಬಹಳಷ್ಟು ಪ್ರಭಾವ ಬೀರುತ್ತವೆ. ಆರ್ಥಿಕ ಸಮಸ್ಯೆಗಳು ಕೌಟುಂಬಿಕ ಕಲಹಗಳು ಇವುಗಳನ್ನು ನೀವು ಎಷ್ಟರಮಟ್ಟಿಗೆ ಸಮರ್ಥವಾಗಿ ಪರಿಹರಿಸಿಕೊಳ್ಳಬಲ್ಲಿರಿ ಎಂಬುದು ನಿಮ್ಮಲ್ಲಿರುವ ನಾಯಕತ್ವದ ಗುಣಗಳನ್ನು ತೋರಿಸುತ್ತದೆ. ಇತರರು ನಿಮ್ಮ ಬಗ್ಗೆ ಹೇಗಿರಬೇಕೆಂದು ನೀವು ಬಯಸುತ್ತಿರೋ ಆ ರೀತಿಯಲ್ಲೇ ನೀವು ಬೇರೆಯವರೊಂದಿಗೆ ವ್ಯವಹರಿಸಿರಿ. ಕುಟುಂಬವು ಒಂದು ಚಿಕ್ಕ ಸಮುದಾಯ, ಒಂದು ಕುಟುಂಬದ ಸದಸ್ಯನಾಗಿ ಅಥವಾ ಯಜಮಾನನಾಗಿ ನೀವು


ನಿಮ್ಮನ್ನು ಹೇಗೆ ತೊಡಗಿಸಿಕೊಳ್ಳುವಿರಿ ಎಂಬುದು ನಿಮ್ಮ ನಾಯಕತ್ವದ ಗುಣಗಳಿಗೆ ಹಿಡಿದ ಕನ್ನಡಿಯಾಗಿದೆ.

ನಾಯಕನಾದವನು ಮೊದಲು ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಇದು ಬರೀ ಶಾರೀರಕವಾಗಲ್ಲ, ಮಾನಸಿಕ, ನೈತಿಕವಾಗಿಯೂ ಆಗಬೇಕು. ನಾಯಕತ್ವ ಗುಣವನ್ನು ಬೆಳೆಸಿಕೊಳ್ಳಲು ಅನೇಕ ಅಂಶಗಳು ಅಗತ್ಯ. ಸಾರ್ವಜನಿಕ ಸಂಪರ್ಕ, ಸ್ನೇಹಪರತೆ, ವಿವಿಧ ವಿಷಯಗಳ ಬಗೆಗೆ ಜ್ಞಾನ, ಭಾಷಣಕಲೆ ಇವುಗಳು ಅತೀ ಅಗತ್ಯ. ಸಮಾಜದ ವಿವಿಧ ವರ್ಗದ ಜನರೊಂದಿಗೆ ಆತ್ಮೀಯವಾಗಿ ವ್ಯವಹರಿಸುವ ನೈಪುಣ್ಯತೆ ಇರಬೇಕು. ಇಂತಹ ಗುಣಗಳನ್ನು ಸಾರ್ವಜನಿಕ ಸಂಪರ್ಕಗಳಿಂದ ಗಳಿಸಿಕೊಳ್ಳಬಹುದು. ಅವಕಾಶಗಳು ಒದಗಿಬಂದಾಗ ಅದನ್ನು ಸಮರ್ಥವಾಗಿ ಬಳಸಿಕೊಂಡು, ತನ್ನ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗುವಂತೆ ಮಾಡಿಕೊಳ್ಳುವವನೇ ನಾಯಕನೆನಿಸಿಕೊಳ್ಳುತ್ತಾನೆ. ಅವರ ನಡೆ-ನುಡಿ, ವ್ಯವಹಾರಗಳು ಶುದ್ಧವಾಗಿರಬೇಕು, ಪ್ರಾಮಾಣಿಕವಾಗಿರಬೇಕು, ಸಮಯಪಾಲನೆ ಕರ್ತವ್ಯದಲ್ಲಿ ಶ್ರದ್ಧೆ ಇವುಗಳೂ ನಾಯಕತ್ವದ ಮೆಟ್ಟಿಲುಗಳು.

ಇತ್ತೀಚಿನ ದಿನಗಳಲ್ಲಿ ನಾಯಕತ್ವದ ಬಗ್ಗೆ ಹೆಚ್ಚು ಕೇಳುತ್ತಿದ್ದೇವೆ. ವಿವಿಧ ಸಂಘ ಸಂಸ್ಥೆಗಳು ತಮ್ಮ ಸದಸ್ಯರಿಗೆ ನಾಯಕತ್ವದ ಬಗ್ಗೆ ಪರಿಣತರಿಂದ ತರಬೇತಿ, ಉಪನ್ಯಾಸ ಮಾರ್ಗದರ್ಶನ ತರಗತಿಗಳನ್ನು ನಡೆಸುತ್ತಾರೆ. ಈ ನಾಯಕತ್ವದ ಮಹತ್ವವನ್ನು ಅರಿತ ಅನೇಕ ಕಂಪನಿಗಳು ತಮ್ಮ ಕೆಲಸಗಾರರಿಗೆ, ನಿರ್ದೇಶಕರುಗಳಿಗೆ ಸೇವಾವಧಿಯಲ್ಲೇ ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿ ತರಬೇತಿಗೆ ವ್ಯವಸ್ಥೆ ಮಾಡುತ್ತಾರೆ. ಇಂತಹ ತರಬೇತಿಗಳಿಂದ ಕಂಪನಿಯು ತನ್ನ ಮಿತಿಯಲ್ಲೇ ಹೆಚ್ಚು ಸಮರ್ಥವಾಗಿ ಕೆಲಸ ನಿರ್ವಹಣೆ ಮಾಡಿ ಅಧಿಕ ಲಾಭ ಗಳಿಸುವುದು ಸಾಧ್ಯವಾಗುತ್ತದೆ. ಬರೀ ಕಂಪನಿ ಉದ್ಯೋಗಿಗಳು ಮಾತ್ರವಲ್ಲ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಬಯಸುವ ಪ್ರತಿಯೊಬ್ಬನೂ ನಾಯಕತ್ವದ ಬಗ್ಗೆ ಅರಿತುಕೊಳ್ಳುವುದು ಅತೀ ಅವಶ್ಯ. ಕುಟುಂಬದ ಯಜಮಾನನಾಗಿ ಒಂದು ಸಂಸ್ಥೆಯ, ಸಂಘದ ಮುಖ್ಯಸ್ಥನಾಗಿ ಒಂದು ಗುಂಪಿನ ಅಥವಾ ತಂಡದ ನಾಯಕನಾಗಿ ತನ್ನ ಕೆಲಸವನ್ನು ಸಮರ್ಥವಾಗಿ ಅತ್ಯುತ್ತಮ ರೀತಿಯಲ್ಲಿ ಯಶಸ್ವಿಯಾಗಿ ನಿರ್ವಹಿಸಲು ನಾಯಕತ್ವದ ಕಲ್ಪನೆಯಿದ್ದಲ್ಲಿ ಹೆಚ್ಚು ಸುಲಭ ಸಾಧ್ಯ. ಜೊತೆಗೆ ಯಶಸ್ಸು ಖಂಡಿತ. ಅದರಲ್ಲೂ ಇಂದಿನ ಯುವ ಜನಾಂಗಕ್ಕೆ ನಾಯಕತ್ವದ ಅಗತ್ಯ ಬಹಳ ಇದೆ.

○ ನವಿಲೂರು ಪ್ರಕಾಶ್

ಅಪೂರ್ವ ಶಿಲ್ಪಿ ಗುರಪ್ಪ ಮೇಲಿನಮನಿ



ಧಾರವಾಡ ತಾಲ್ಲೂಕು ಹೆಬ್ಬಳ್ಳಿ ಗ್ರಾಮ ನಿವಾಸಿಯಾದ ಗುರಪ್ಪ ಕಳೆದ ೨೦ ವರ್ಷಗಳಿಂದ ಶಿಲ್ಪಕಲೆಯಲ್ಲಿ ಮೂರ್ತಿ ಕೆತ್ತನೆಯ ಕಾರ್ಯದಲ್ಲಿ ನಿರತರಾದ ಅಪೂರ್ವ ಪ್ರತಿಭಾವಂತ.

ನಮ್ಮ ರಾಜ್ಯದ ಸಂಸ್ಕೃತಿ ಎಲ್ಲೆಡೆ ಬೆಳಗಿ ಮನೆ ಮಾತಾಗಿರಲು, ನಮ್ಮಲ್ಲಿನ ಸುಂದರ ಅಪೂರ್ವ ಶಿಲ್ಪಕಲೆ-ಚಿತ್ರಕಲೆಗಳೂ ಸಹ ಕಾರಣವೆಂದರೆ ತಪ್ಪಾಗಲಾರದು. ಅಂತೆಯೇ ಅಮರ ಶಿಲ್ಪಿ ಜಕಣಾಚಾರಿ ಬಾಳಿದ ಹೆಮ್ಮೆಯ ನಾಡು ನಮ್ಮದು. ಧಾರವಾಡ ಜಿಲ್ಲೆ ನಮ್ಮ ನಾಡಿನ ಸಂಸ್ಕೃತಿಗೆ ಸೇರುವ ಅನೇಕ ಸುಸಂಸ್ಕೃತರನ್ನು, ಕಲಾವಿದರನ್ನು, ಕವಿಗಳನ್ನು ನೀಡಿ ಅಗ್ರಸ್ಥಾನದಲ್ಲಿದೆ. ಅಂತಹುದೇ ಒಂದು ಪ್ರತಿಭೆ ಶಿಲ್ಪಿ-ಕಲಾವಿದ ಗುರಪ್ಪ ನಿಂಗಪ್ಪ ಮೇಲಿನಮನಿ.

ಧಾರವಾಡ ತಾಲ್ಲೂಕು ಹೆಬ್ಬಳ್ಳಿ ಗ್ರಾಮ ನಿವಾಸಿಯಾದ ಗುರಪ್ಪ ಕಳೆದ ೨೦ ವರ್ಷಗಳಿಂದ ಶಿಲ್ಪಕಲೆಯಲ್ಲಿ ಮೂರ್ತಿ ಕೆತ್ತನೆಯ ಕಾರ್ಯದಲ್ಲಿ ನಿರತರಾದ ಅಪೂರ್ವ ಪ್ರತಿಭಾವಂತ. ಇವರ ಕಲ್ಪನೆಯಲ್ಲಿ ಅರಳಿ, ಶಿಲೆಯಲ್ಲಿ ನಳನಳಿಸುವ ಮೂರ್ತಿಗಳನ್ನು ನೋಡುವುದೇ ಆನಂದ. "ಬೇಕಾದಷ್ಟು ಸೃಜನ ಮೂರ್ತಿಯನ್ನಾದರೂ ಕೆತ್ತಬಲ್ಲೆ" ಎಂದು ಎದೆತಟ್ಟಿಕೊಂಡಂತೆ ಹೇಳುವ ಗುರಪ್ಪನವರಿಗೆ ಚಿತ್ರಕಲೆಯಲ್ಲೂ ಅಷ್ಟೇ ಪರಿಣತಿಯಿದೆ.

ಚಿಕ್ಕವರಿದ್ದಾಗಲೇ ಚಿತ್ರಕಲಾಸಕ್ತಿಯನ್ನು ಬೆಳೆಸಿಕೊಂಡ ರೀತಿ ಅವರೇ ಹೇಳುವಂತೆ, "ನಾನು ಒಂದನೇತ್ತ ಹೋಗೂವಾಗ ಚಿತ್ರ ಬರೀತಿದ್ದೆ, ಮಾಸ್ತರ ಪಾಠ ಮಾಡತಿದ್ರ, ನಾನು ಚಿತ್ರ ಬಿಡಿಸಿಕೊಂಡ ಕುಂತಿರತಿದ್ದೆ. ಮನಸ್ಸೆಲ್ಲಾ ಚಿತ್ರದ ಕಡೀಗೇ ವಾಲಿದ್ದಕ್ಕ, ಶಾಲಿ ಬ್ಯಾಡನ್ನಸ್ತೀ ಅದಕ್ಕ ನಾಕನೇತ್ತಕ್ಕ ಬಿಟ್ಟ ಬಿಟ್ಟೆ" ಇವರ ಕೈಯಲ್ಲರಳಿದ ಮೂರ್ತಿಗಳು ಆಂಧ್ರದ ಗುಂಟೂರು, ಬಾಂಬೆ ಮತ್ತು ದೆಹಲಿಯವರೆಗೂ ಪ್ರಚಾರ ಪಡೆದಿವೆ.

ಇದುವರೆಗೆ ಸುಮಾರು 500 ವಿಗ್ರಹಗಳನ್ನು ಕೆತ್ತಿರುವ ಗುರಪ್ಪನವರಿಗೆ ಶಿಲೆಯಲ್ಲಿ ದೈವ ಗುಣವೇ ಪ್ರತ್ಯಕ್ಷವಾಗಿದೆಯೆಂದರೆ ಖಂಡಿತ ಅತಿಶಯೋಕ್ತಿಯೇನಲ್ಲ! ಆಂಜನೇಯ, ಬಸವಣ್ಣ, ಗಣಪತಿ, ಅಂಬಾಭವಾನಿ, ಈಶ್ವರ, ಬನಶಂಕರಿ, ಸಂತ ಶರೀಫ ಸಾಹೇಬ, ಗುರು ಗೋವಿಂದ, ಶನಿಪ್ರಭು, ಶ್ರೀದೇವಿ, ಬಾಹುಬಲಿ, ನಂದಿ, ಮಹಿಷಾಸುರ ಮರ್ಧಿನಿ, ವಿಠಲ-ರುಕ್ಮಿಣಿ ಮುಂತಾದ ದೇವಾನು ದೇವತೆಗಳಿಗೆ ಶಿಲೆಯಲ್ಲಿ ಇವರು ರೂಪ ನೀಡಿದ್ದಾರೆ! "ನನಗ ಅತೀ ಬಿಕ್ಕಟ್ಟಿನ ಮೂರ್ತಿ ಕೆತ್ತೂ ಆಶೆ ಐತಿ. ಆದರ ನನಗ ಸವಾಲ್ ಆಗುವಂತಾ ಮೂರ್ತಿ ಕೆತ್ತನೆ ಬೇಡಿಕೆ ಬಂದಿಲ್ಲ. ಹಂಗೇನರ ಅಂತಾದ್ದನ್ನ ಕೆತ್ತೂದ ನನ್ನಿಂದ ಅಸಾಧ್ಯ ಅನ್ನಿಸಿದರ, ನನ್ನ ಎರಡೂ ಮುಂಗೈಗಳನ್ನ ಕತ್ತರಿಸಿಗೊಂಡು ಬಿಡತೇನ್ರಿ" ಎಂದು ಗುರಪ್ಪ, ಶಿಲ್ಪಕಲೆಯ ಬಗ್ಗೆ ತಮ್ಮ ಪರಿಣತಿಯ ಬಗ್ಗೆ ದೃಢವಾದ ವಿಶ್ವಾಸ ವ್ಯಕ್ತಪಡಿಸುತ್ತಾರೆ. ಅವರಲ್ಲಿ ಅಂತಹ ಆತ್ಮವಿಶ್ವಾಸವಿದೆ ಎಂದು ಧಾರವಾಡ, ಕಿತ್ತೂರು, ಹಲಗತ್ತಿ, ಬೋಗೂರು, ಶಿವಳ್ಳಿ, ಯರಗುಪ್ಪಿ, ನವಿಲೂರು, ದಾಂಡೇಲಿ, ತಲವಾಯಿ, ಹುನಗುಂದ, ಹಾರಿಬಿಡಿ, ನುಗ್ಗಿಕೇರಿ, ಯಾದವಾಡ ಮತ್ತು ಹುಬ್ಬಳ್ಳಿಯಲ್ಲಿ ಪ್ರತಿಷ್ಠಾಪಿತಗೊಂಡಿರುವ, ಅವರ ಕೆತ್ತನೆಯ ಮೂರ್ತಿಗಳೇ ಸಾರಿ ಹೇಳುತ್ತವೆ.

"ಚಿತ್ರಕಲೆ ಬಲ್ಲವನಿಗೆ ಮೂರ್ತಿ ಕಲೆ ಅಸಾಧ್ಯವೇನಲ್ಲ" ಎನ್ನುವ ಗುರಪ್ಪನವರನ್ನು ಅನೇಕ ಸಂಘ-ಸಂಸ್ಥೆಗಳು ಪ್ರಶಸ್ತಿ ಪತ್ರ ನೀಡಿ ಗೌರವಿಸಿವೆ. ಆದರೆ, 'ಶಿಲ್ಪಕಲಾ ಅಕಾಡೆಮಿ'ಯವರು ಇಂತಹ ಗ್ರಾಮೀಣ ಪ್ರತಿಭೆಯತ್ತ ಗಮನಹರಿಸಿ ಪುರಸ್ಕರಿಸಬೇಕಾಗಿದೆ. ಈ ಮೂಲಕ, ಆರ್ಥಿಕವಾಗಿ ಅಧೀರನಾದ ಗುರಪ್ಪನ ಕುಟುಂಬಕ್ಕೆ ಜೀವ ನೀಡಿದಂತಾಗುತ್ತದೆ. ಗುರಪ್ಪನ ಹಿರಿಯ ಮಗ ಶಂಕರ್ ಮೇಲಿನ ಮನಿ ಇದುವರೆಗೆ ೨೫ ಮೂರ್ತಿಗಳನ್ನು ಕೆತ್ತಿದ್ದರೆ, ಕಿರಿಯ ಮಗ ಮಂಜುನಾಥ ಮೇಲಿನ ಮನಿ ಚಿತ್ರಕಲೆಯಲ್ಲಿ ತೊಡಗಿದ್ದಾನೆ.

○ ಪರಮೇಶ್ವರ ಎಸ್. ಕುದರಿ

ಚಳ್ಳಕೆರೆ

ಬೋರಿಸ್ ಪಾಸ್ತರ್ ನಾಕ್

(ವಾಚಿಕೆ)

ಆಯ್ಕೆ / ಅನುವಾದ : **ಕೇಶವ ಮಳಗಿ**
ಪ್ರ : ಕನ್ನಡ ಪುಸ್ತಕ ಪ್ರಾಧಿಕಾರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮ ಮುದ್ರಣ : ೧೯೯೭ ಪುಟ : ೨೫೫ ಬೆಲೆ : ರೂ. .೪/-

ಬೋರಿಸ್ ಪಾಸ್ತರ್‌ನಾಕ್ ಆಧುನಿಕ ರಷಿಯಾದ ಪ್ರಮುಖ ಕವಿ, ಕಾದಂಬರಿಕಾರ ಹಾಗೂ ಅನುವಾದಕ. ಮಾಸ್ಕೋ ವಿಶ್ವ ವಿದ್ಯಾಲಯದಿಂದ ಪದವಿ ಪಡೆದ ಪಾಸ್ತರ್‌ನಾಕ್ ತತ್ವಶಾಸ್ತ್ರದ ಅಧ್ಯಯನವನ್ನು ಮಾಡಿದ್ದವನು. ಮುಂದೆ ತನ್ನ ಕವನ ಸಂಕಲನಗಳಿಂದ ಗಮನಾರ್ಹ ಕವಿಯೆಂದು ಗುರುತಿಸಿಕೊಂಡ. ಷೇಕ್ಸ್‌ಪಿಯರ್, ಗೋಥೆ ಅವರ ನಾಟಕಗಳನ್ನು ರಷ್ಯನ್ ಭಾಷೆಗೆ ತುಂಬ ಸಮರ್ಥವಾಗಿ ಅನುವಾದಿಸಿ ಉತ್ತಮ ಅನುವಾದಕನಾಗಿಯೂ ಹೆಸರು ಗಳಿಸಿದ. 'ಡಾಕ್ಟರ್ ಜೀವಾಗೋ' ಕಾದಂಬರಿ ಇಟಲಿಯಲ್ಲಿ ಮೊದಲು ಪ್ರಕಟವಾದಾಗ ಪಾಸ್ತರ್‌ನಾಕ್‌ನ ಹೆಸರು ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆಯಿತು. ಈ ವಾಚಿಕೆ ಆತನ ಸಾಹಿತ್ಯದ ಬಗೆಗೆ ಒಂದು ಹೋರ್ಬೆರಳಿನಂತಿದೆ.

ಕೀರ್ತಿ ನಾರಾಯಣ

(ಚಾರಿತ್ರಿಕ ಕಾದಂಬರಿ)

ಲೇ : **ತ.ರಾ.ಸು.**
ಪ್ರ : ರಾಜರಾಜೇಶ್ವರಿ ಪ್ರಕಾಶನ, ೭ನೇ ಬ್ಲಾಕ್, ಜಯನಗರ, ಬೆಂಗಳೂರು. ದ್ವಿತೀಯ ಮುದ್ರಣ : ೧೯೯೭ ಪುಟ : ೧೮೦ ಬೆಲೆ : ರೂ. ೬೦/-

ಈ ಕಾದಂಬರಿಯಲ್ಲಿ ನೀನು ಬಳಸಿರುವ ಭಾಷೆ, ಸೃಷ್ಟಿಸಿರುವ ಸನ್ನಿವೇಶಗಳು, ಚಿತ್ರಿಸಿರುವ ವಿಷ್ಣುವರ್ಧನ, ಶಾಂತಲಾದೇವಿ, ದಂಡನಾಯಕ ಗಂಗರಾಜ, ಕುಮಾರ ವಿಷ್ಣು, ಸಂಶೋಧಕ ಗೌರಾಚಾರಿ ಮೊದಲಾದ ಪಾತ್ರಗಳು, ಹೃದಯಂಗಮವಾಗಿರುವುದಷ್ಟೇ ಅಲ್ಲ, ಕನ್ನಡ ಸಾಹಿತ್ಯದಲ್ಲಿ ಬಹುಕಾಲ ಜೀವಂತವಾಗಿ ಉಳಿಯುತ್ತವೆ ಎಂದು ನನಗೆ ಅನಿಸುತ್ತದೆ.

- ಎಸ್. ನಿಜಲಿಂಗಪ್ಪ

ಸೀಳು ನಾಲಗೆ

(ಸಣ್ಣ ಕಥೆ)

ಲೇ : **ಜೋಗಿ**
ಪ್ರ : ನೆಮ್ಮದಿ ಪ್ರಕಾಶನ, ೧೯೦ (ಮಹಡಿ ಮೇಲೆ), ೩ನೇ ಅಡ್ಡ ರಸ್ತೆ, ೨ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು-೫೬೦ ೦೧೯ ಮುದ್ರಣ : ೧೯೯೭ ಪುಟ : ೧೫೨
ಬೆಲೆ : ರೂ.೬೦/-

ಜೋಗಿ ಅವರ ಕತೆಗಳನ್ನು ಮೆಚ್ಚುವ ನನಗೆ, ಅವರ ಪ್ರಥಮ ಕಥಾಸಂಕಲನದ ಬಗ್ಗೆ ಕೆಲವು ಮಾತು ಹೇಳುವುದು ಬಹಳ ಸುಲಭದ, ಸಂತೋಷದ ವಿಷಯ. ಅವರ ಕೃತಿಗಳಿಗೆ ಒಂದು ವಿಶಿಷ್ಟತೆ ಇದೆ. ಅವರ ಸ್ವಂತಿಕೆಗೆ ಈ ಕತೆಗಳು ಸಾಕ್ಷಿ. ಬದುಕಿನ ಮೇಲ್ಪದರಗಳನ್ನು ಭೇದಿಸಿ, ಒಳಗಿನ ಪ್ರೇರಕ ಶಕ್ತಿಗಳನ್ನು ಸ್ಪಷ್ಟ ಮಾಡುವ ಅವರ ಸೂಕ್ಷ್ಮದೃಷ್ಟಿ ಗಮನಾರ್ಹ. ಅವರ ಮನುಷ್ಯ ಸಂಬಂಧಗಳ ಗ್ರಹಿಕೆ ಶ್ಲಾಘನೀಯ ಹಾಗೂ ಅವರ ವಯಸ್ಸನ್ನು ಮೀರಿದ್ದು.

- ಪಿ. ಶ್ರೀನಿವಾಸ ರಾವ್



ಮುನ್ನುಡಿಯಿಂದ

ಒಡನಾಟ

(ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ)


ಲೇ : **ಕಾವೆಂಶ್ರೀ**
ಪ್ರ : ಕಲಾ ಚೇತನ ಪ್ರಕಾಶನ, ಅಂಚೆ ಪೆಟ್ಟಿಗೆ ನಂ. ೭೬, ಗದಗ - ೫೮೨ ೧೦೧ ಮುದ್ರಣ : ೧೯೯೭ ಪುಟ : ೧೨೨ ಬೆಲೆ : ರೂ. ೫೦/-


ಕಲೆ ಜೀವನದ ಅವಿನಾಭಾವ ಅಂಗ. ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅದು ಅನಂತ. ಬದುಕಿನೊಂದಿಗೆ ಅದು ಹಾಸು ಹೊಕ್ಕಾದರೆ, ಸಂಸಾರವು ಸಂಸ್ಕಾರಯುಕ್ತವಾಗುತ್ತದೆ. ರಸಋಷಿ ಡಿ.ವ್ಹಿ.ಜಿ.ಯವರೇ ಹೇಳಿದಂತೆ ''ಕಲೆಗಳಲ್ಲಿ ಪರಮ ಕಲೆ ಜೀವನದ ಲಲಿತಕಲೆ'' ಎಂಬುದು ಸಾರ್ಥಕವಾಗುತ್ತದೆ. ಅಂಥ ಪ್ರಯತ್ನ ''ಒಡನಾಟ''ದಲ್ಲಿದೆ

- ಸಂತೋಷಕುಮಾರ ಗುಲ್ವಾಡಿ









ಲೇಖಕರ/ಪ್ರಕಾಶಕರ ಗಮನಕ್ಕೆ

ಈ ಅಂಕಣದಲ್ಲಿ ಹೊಸ ಪ್ರಕಟಣೆಗಳ ವಿವರ ಪ್ರಕಟಿಸಲಾಗುವುದು. ಇದಕ್ಕಾಗಿ ತಮ್ಮ ಇತ್ತೀಚಿನ ಪ್ರಕಟಣೆಗಳ ಒಂದು ಪ್ರತಿ ಕಳಿಸಿ.

ಹೂವು ತಾರೆ ಚಂದ್ರ

(ಮಕ್ಕಳ ಗೀತೆಗಳು)

ಲೇ: **ಡಾ. ವಿಜಯದೇವಿ**

ಪ್ರ : ಪ್ರಭುದೇವ ಗ್ರಂಥಮಾಲೆ ಪ್ರಕಾಶನ, ೧೫೧೧, ಶಾಂತಿನಿವಾಸ, ರೇವಣಸಿದ್ಧ ಬಡಾವಣೆ, ಸರ್ಕಾರಿ ಆಸ್ಪತ್ರೆ ಹಿಂಭಾಗ, ಹಳೆನಗರ, ಭದ್ರಾವತಿ - ೫೭೭ ೩೦೩. ಮುದ್ರಣ: ೧೯೯೭ ಪುಟ: ೩೬ ಬೆಲೆ: ರೂ. ೩೦/-

ಎಲ್ಲ ಕವನಗಳೂ ಮಕ್ಕಳ ಭಾಷೆಯಲ್ಲಿಯೇ ಇವೆ. ಈ ಪುಟ್ಟ ಪದ್ಯಗಳನ್ನು ಮಕ್ಕಳು ಹಾಡಿ ನಲಿಯುತ್ತವೆ. ಎಲ್ಲ ಪದ್ಯಗಳು ತುಂಬ ಸರಳವಾಗಿವೆ. ಅರ್ಥವತ್ತಾಗಿವೆ. ಲಲಿತವಾದ ಲಯ, ಸರಳಭಾಷೆ, ನೇರವಾಗಿ ತಿಳಿಯುವ ಅರ್ಥ ಇಲ್ಲಿನ ಪುಟ್ಟಪುಟ್ಟ ಪದ್ಯಗಳಲ್ಲಿವೆ.

- ಡಾ. ವಿಜಯಕುಮಾರ ಮಹಾನುಭಾವಿಗಳು

ಅಮೃತಮಯಿ

(ಕಾದಂಬರಿ ರೂಪದಲ್ಲಿ ಶ್ರೀಮಾತೆ ಶಾರದಾದೇವಿ ಅವರ ಜೀವನ ದರ್ಶನ)

ಲೇ: **ಪ್ರೇಮಾಭಟ್**

ಪ್ರ : ಶ್ರೀ ಪ್ರೇಮಸಾಯಿ ಪ್ರಕಾಶನ, 'ಶ್ರೀ ಗುರುಪ್ರಸಾದ', ೮೪೫, ೪ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು-೫೬೦ ೦೪೦. ಮುದ್ರಣ: ೧೯೯೭ ಪುಟ: ೨೨೦ ಬೆಲೆ: ರೂ. ೪೦/-

ನಮ್ಮ ಪರಿಕಲ್ಪನೆಗೆ ಸಿಗದ ಅದ್ಭುತ ಶಕ್ತಿ ಶ್ರೀಮಾತೆ ಶ್ರೀ ಶಾರದಾದೇವಿಯರು. ಅವರ ಜೀವನ ಶೈಲಿ, ಸರಳತೆ, ಆದರ್ಶ, ಸಿದ್ಧಾಂತ ಎಲ್ಲವೂ ಗಹನವಾದ್ದು, ಅಗಾಧವಾದ್ದು. ತನ್ನ ಅಂತಃಶಕ್ತಿಯಿಂದ ಆಧ್ಯಾತ್ಮಿಕ ಪರಂಪರೆಯನ್ನು ಬೆಳಗಿದಂತಹ ಒಂದು ಮಹಾನ್ ಚೇತನ. ಆದಿ ಪರಾಶಕ್ತಿಯ ಪ್ರತಿರೂಪ, ಲೌಕಿಕ ಬದುಕಿನಿಂದ ಮುಕ್ತರಾಗಲು ಬಯಸಿದ ಶ್ರೀರಾಮಕೃಷ್ಣರನ್ನು ಲೌಕಿಕದಿಂದ ಪದ ಮುಕ್ತರನ್ನಾಗಿಸಿ, ಪರಮಹಂಸ ಪದವಿ ಪಡೆಯಲು ನೆರವಾದ ಧೀಮಂತ ಶಕ್ತಿ. ಭಾರತದಲ್ಲಿ ಆವಿರ್ಭವಿಸಿದ ಬೆಳಕು, ಇಡೀ ಜಗತ್ತನ್ನು ಬೆಳಗಿತು. ಇಂಥ ಒಂದು ಮಹಾಶಕ್ತಿಯನ್ನು ಕುರಿತು ನನ್ನದೇ ಆದ ಭಾಷೆ-ಭಾವಗಳಲ್ಲಿ, ಜನಸಾಮಾನ್ಯರನ್ನು ತಲುಪುವಂತೆ ಈ ಕೃತಿಯನ್ನು ಬರೆದುಕೊಟ್ಟಿದ್ದೇನೆ.

- ಪ್ರೇಮಾಭಟ್

ತಿಂಮ ರಸಾಯನ

(ಸಚಿತ್ರ - ವಿಚಿತ್ರ)

ಲೇ: **ಬೀ Chi**

ಪ್ರ : ರಾಜೇಶ್ವರಿ ಪ್ರಕಾಶನ, ೧ 'ಇ' ಮೈನ್, ಅನಂತ ನಿಲಯ, ಬನಶಂಕರಿ ೩ನೇ ಘಟ್ಟ, ಬೆಂಗಳೂರು - ೫೬೦ ೦೮೫. ದ್ವಿತೀಯ ಮುದ್ರಣ : ೧೯೯೭ ಪುಟ: ೨೧೧ ಬೆಲೆ: ರೂ. ೭೫/-

ಇದು ನಿಘಂಟೆ? ರೂಪು ಅಹುದು - ಜಾತಿ ಅಲ್ಲ. 'ಕಥೆಯೇ? ಕಾದಂಬರಿಯೇ? ನಾಟಕವೇ? ಹರಟೆಯೇ?' ಹ್ಹೂಂ - ಅಲ್ಲ. ಇದು, ತಿಂಮ ರಸಾಯನ. ಕೊಲ್ಲುವ ವಿಷವಿದೆ-ಬದುಕಿಸುವ, ಸಂಜೀವಿನಿ ಇದೆ

''ಅಗಣಿತ, ಕಾಯೇಚ, ಗಂಡ, ತುಪ್ಪ, ಸ್ತ್ರೀ, ಸುಖ, ಹೆಂಣು ದೇವರು'' ಮುಂತಾದ ಸಾವಿ ರಾರು ಶಬ್ದಗಳ ಜೊತೆ ಕಪಿಯಾಟವಾಡಿದ್ದಾರೆ ಬೀ Chi.

ಈಗಲೇ ಕೊಂಡುಬಿಡಿ - ನಿಧಾನವಾಗಿ ಓದಿ ನಿಮ್ಮ ಹತ್ತಿರದ ಅಂಗಡಿಯಲ್ಲಿ ವಿಚಾರಿಸಿರಿ : ಅಥವಾ ನೇರವಾಗಿ ನಮಗೇ ಬರೆಯಿರಿ, ಅಂದರೆ ಪ್ರಕಾಶಕರಿಗೆ.

ಎದೆಹಾಲು


('ಕಾಈಶ'ರ ತ್ರಿಪದಿಗಳು)


ಲೇ: **ಈಶ್ವರ ಕಾಪಸೆ**


ಪ್ರ : ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ-೫೯೧ ೩೦೪ ಬೆಳಗಾವಿ ಜಿ. ಪುಟ: ೪೬, ಬೆಲೆ: ರೂ. ೨೦


ಮೂಲತಃ ಕವಿ ಮನೋಭಾವದ ಶ್ರೀ ಕಾಪಸೆಯವರು 'ಕಾಈಶ' ಕಾವ್ಯನಾಮದೊಂದಿಗೆ ತಮ್ಮ 'ಎದೆ ಹಾಲನ್ನು' ಸಹೃದಯರಿಗೆ ಈ ಮೂಲಕ ಉಣಬಡಿಸಿದ್ದಾರೆ. ಅಧ್ಯಾಪಕರಾಗಿದ್ದು ಕೊಂಡು ಸಾಹಿತ್ಯ ಸೇವೆ ಗೈಯುವುದರ ಜೊತೆಗೆ ಅನೇಕ ಸಂಘಟನೆಗಳೊಂದಿಗೆ ಒಳ್ಳೆಯ ಹಾಗೂ ನಿಕಟ ಸಂಬಂಧಗಳನ್ನಿಟ್ಟುಕೊಂಡಿದ್ದಾರೆ. ಕಾವ್ಯ ಕಮ್ಮಟಗಳಲ್ಲಿ ಭಾಗವಹಿಸಿ ಹಿರಿಯರಿಂದ ಮೆಚ್ಚುಗೆಯನ್ನು ಗಳಿಸಿದ್ದಾರೆ.

- ಡಾ. ಎಂ.ಬಿ. ಹೂಗಾರ










ಮತ-ಮತಿಗಳ ಹೊಂದಾಣಿಕೆ




○ ಎಸ್. ಕೆ. ಕುಲಕರ್ಣಿ
''ಪರಿಮಳ''
ರೇಲ್ವೆಗೂಡ್ಸ್ ಶೆಡ್ ಬಳಿ,
ಧಾರವಾಡ - ೭

ಮಹಾಚುನಾವಣೆಗಾಗಿ ವಿವಿಧ ರಾಜಕೀಯ ಪಕ್ಷಗಳ ಹೊಂದಾಣಿಕೆಗಳು ಆಯಾ like mindedness, ಅರ್ಥಾತ್ ಆಯಾ ಪಕ್ಷಗಳ ಫಾಯಿದೆ, ಸ್ವಾರ್ಥಲಾಭ, ಗಿಟ್ಟಿಸಬಹುದಾದ ಕುರ್ಚಿಗಳೆಷ್ಟು ಎಂಬೆಲ್ಲ ಅಂಶಗಳ ಮೇಲೆ ಆಧರಿಸಿ-ನಡೆಯುತ್ತಿರುವ ಕಾಲವಿದು. ಈ ಲೇಖನ ಪ್ರಕಟನೆಯ ಹೊತ್ತಿಗೆ ದಿಲ್ಲಿಯ ಕೆಂಪುಕೋಟೆಯ ಮೇಲೆ ಮುಂದೆ ಬರುವ ಆಗಸ್ಟ್ ೧೫ಕ್ಕೆ ಅರ್ಥಾತ್ ಸ್ವಾತಂತ್ರ್ಯ ಸುವರ್ಣೋತ್ಸವಾಂತ್ಯದಲ್ಲಿ, ತ್ರಿವರ್ಣ ಧ್ವಜವನ್ನು ಹಾರಾಡಿಸುವ ಹೀರೋ ಯಾರು ಎಂಬುದು ನಿಶ್ಚಿತವಾಗುವುದರಲ್ಲಿರುತ್ತದೆ.

ಅಂತೂ ಒಂದು ಮಹಾಚುನಾವಣೆ ಎಂದರೆ ದೇಶದ ಒಂದು ಮಹಾಯಜ್ಞ! ಈ ಮಹಾಯಜ್ಞದಲ್ಲಿ ಆಹುತಿಯಾಗುವ ಪಶುಗಳೆಷ್ಟು, ಪೂರ್ಣಾಹುತಿಯ ಕಾಲಕ್ಕೆ ಅರ್ಪಿಸಲ್ಪಡುವ ಹವ್ಯ-ಕವ್ಯಗಳೆಷ್ಟು, ಎಷ್ಟು ಸ್ವಾಹಾಗಳು! ಹ-ತ್ರಯಗಳೆಷ್ಟು (ಅರ್ಥವಾಯ್ತೆ? ಹ-ತ್ರಯ ಎಂದರೆ ಮೂರು ಹಕಾರಗಳು ಹಣ, ಹೆಂಡ, ಹೆಣ್ಣು!)

Election Ethics ಎಂಬುದೊಂದಿದೆಯಂತೆ! ಕ್ರಿಮಿನಲ್ಸ್‌ಗಳು kings ಆಗುವಂತಿಲ್ಲ, King makers ಆಗಬಹುದೇನೊ! ಅಭ್ಯರ್ಥಿಗಳು ಕ್ರಿಮಿನಲ್ಸ್ ಇರಕೂಡದೆಂದರೇನು? ಸಿ.ಬಿ.ಐ. ಚಾರ್ಜ್‌ಶೀಟ್ ಇದ್ದರೇನು ಅದು ಕ್ರಿಮಿನಲ್‌ಎ? ಈ ಕ್ರಿಮಿನಲ್ ಯಾರು-ಎಂಬ definition ಗಿಂತ ನಾವು ಮತದಾರರೇ ಆ ನಿರ್ಣಯ ತೆಗೆದುಕೊಂಡು ನಮ್ಮ ನೈತಿಕ ನಿರ್ಣಯವನ್ನು ಕೊಡಬಹುದಲ್ಲ?

ಹಾ! ಶೆಕ್ಸ್‌ಪೀಯರ್ ಹೇಳುವ ಹಾಗೆ- 'There is the rub!' ಮತದಾರರಿಗೆ ಮತಿ ಇರಬೇಕಲ್ಲ ಸ್ವಾಮಿ? ಇರಬೇಕೆಂಬ ನೇಮವೆಲ್ಲಿದೆ? Adult Franchise, ಪ್ರೌಢ ಮತದಾನ ಎಂದರೇನು ಮತ್ತೆ? ಪ್ರೌಢರು ಇರಬೇಕು ಅಷ್ಟೇ. ಬುದ್ಧಿವಂತರೂ ಇರಬೇಕು ಎಂದೇನೂ ಸಂವಿಧಾನದ ಶಾಸನವಿಲ್ಲವಲ್ಲ! ಇದು ನಮ್ಮ ಪೂರ್ವಿಕ ಆಡಳಿತ ಅಜ್ಜಂದಿರು ನೆಟ್ಟ ಆಲದ ಮರ! ಮತಿ ಇಲ್ಲದ ಮೇಲೆ ಮತದ ಮೌಲ್ಯವೇನು? ಬರಿ ಕತ್ರಿ! ಕತ್ರಿ ಹಾಕಲಿಕ್ಕೆ ಮತಿಯ ಕಸರತ್ತೇಕೆ ಬೇಕು? ನಮ್ಮ ಮನೆ ಕೆಲಸದವಳು ಬಹಳ ಅಮಾಯಕ ಪ್ರಾಮಾಣಿಕ ಹೆಣ್ಣು ಮಗಳು. ''ಯಾರಿಗೆ ಮತ ಹಾಕಿದೇ ಬೂಬು?'' ಎಂದು ನಮ್ಮ ಮನೆಯ ಹೆಣ್ಣು ಮಕ್ಕಳು ಕೇಳಿದಾಗ, ತನ್ನ ತರ್ಜನೆಯ ಬೆರಳಿನ ಮೇಲಿನ ಮತ ಗುರುತನ್ನು ತೋರಿಸುತ್ತ, ''ನಿನ್ನೆ ಏಜಂಟರು ಬಂದು ಒಂದು ಸೀರಿ ಐದು ರೂಪಾಯಿ ಎಲೆ-ಅಡಿಕೆ ಜೋಡಿ ಇಷ್ಟು ಉಡಿ ತುಂಬಿ-ಇಂತಿಂತಾ ಗುರುತಿನ ಮುಂದ ಕತ್ರಿ ಹಾಕಬೇಕು ಅಂತ ಹೇಳಿ ಹ್ವಾದರು. ಮತ್ತ ಎಲಿ ಅಡಿಕೆ ಸತ್ಕರಿಸಿದ ಮ್ಯಾಲೆ ಅವರು ಹೇಳಿದ ಚಿತ್ರದ ಮುಂದ್ಯ ಹಾಕಾಕಬೇಕಲ್ರಿ'' ಎಂದಳು.



ನನಗೆ ನೀರಡಿಕೆಯಾದರೂ ನಾನಾಗಿಯೆ ನೀರು ಕುಡಿಯಲಾರೆ. ನಾನು ಚುನಾಯಿಸಿದ ಪ್ರತಿನಿಧಿಯೆ ನನಗೆ ನೀರು ಕುಡಿಸಬೇಕು!

ನಮ್ಮದು ಜಗತ್ತಿನಲ್ಲೇ ದೊಡ್ಡದಾದ ಡೆಮಾಕ್ರಸಿ! 'ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ'. ಹೌದು ವರಕವಿಗಳ ಈ ಮಾತು ನಮ್ಮ ದೊಡ್ಡ-ದ್ಯಾಮವ್ವನ-ಡೆಮಾಕ್ರಸಿಗೂ ಅನ್ವಯಿಸುತ್ತದೆ! ವರುವರುಷವೂ ಒಂದು ಕೋಟಿಯಷ್ಟಾದರೂ ಪ್ರಜಾಸ್ಫೋಟ ತತ್ವದ ಮೇರೆಗೆ ಪ್ರೌಢ ಮತದಾರರ ಸಂಖ್ಯೆ ಹೆಚ್ಚುತ್ತಿರಬೇಕು. ಈ ಮತದಾರರಿಗೆಲ್ಲಾ ಗಂಡಸರಿಗೆ ಹ-ತ್ರಿ; ಹೆಂಗಸರಿಗೆ ಸೀರೆ-ರವಕೆ ಮೇಲೆ ಮುತ್ತೈದೆಯರ ದಕ್ಷಿಣೆ! ಇಷ್ಟೆಲ್ಲ ಈಡು ಮಾಡಬೇಕಲ್ಲ! ಅದಕ್ಕೆಲ್ಲ ಕಾಂಚಾಣ ಬೇಡವೆ?


'ಕುರುಡು ಕಾಂಚಾಣಾ ಕುಣಿಯುತಲಿತ್ತು, ಕಾಲಿಗೆ ಬಿದ್ದವರ ತುಳಿಯುತಲಿತ್ತು'!

ಇರಲಿ ಸಾರ್, ನಮ್ಮದು ಜಾಗತಿಕ ಮಹಾ ದೇಶದ ಮಹಾ ಡೆಮಾಕ್ರಸಿಯ ಇರಲಿ ಸಂತೋಷ! ಪ್ರೌಢ ಮತದಾರರು ಚಿಗುರು ಮೀಸೆ ಮೊಳೆತ ಕೂಡಲೆ ಮತದಾನದ ಅಧಿಕಾರ (ಇನ್ನು ಸ್ತ್ರೀ-ಪ್ರೌಢಮತದಾರರಿಗೇನು ಗುರುತು ಹೇಳಬೇಕೊ ತಿಳಿಯುತ್ತಿಲ್ಲ). ಅದೂ ಸಂತೋಷ. ಆದರೆ ಸ್ವಾಮಿ, ಆ ಮತದಾರರಿಗೆ ಮತಿ ಇರಬೇಕೆಂದು ಮಾತ್ರ ಹೇಳಬೇಡವೆ? ಅದು "taken for granted' ಎಂದು ಹೇಗೆ ಹೇಳ್ತೀರಿ? ಮುನಿಸಿಪಲ್ ರಸ್ತೆಯ ಮೇಲೆ ಸಾರ್ವಜನಿಕ ಮೂತ್ರಾಲಯ (ಮಂತ್ರಿಗಳ 'ಮಂತ್ರಾಲಯ' ಅಲ್ಲ ಮತ್ತೆ!)ಗಳಲ್ಲಿ ಮೂತ್ರ ವಿಸರ್ಜನೆ ಮಾಡುವುದು ಬಿಟ್ಟು ಅವನ್ನು ಶೌಚಾಲಯಗಳಂತೆ ಬಳಸುವ ಪ್ರೌಢ ಮತದಾರರಿಗೆ ಏನಂತೀರಿ?

ಒಳ್ಳೇದು. ಮತವಿದ್ದಲ್ಲಿ ಮತಿ ಇದೆ ಎಂದೇ ತಿಳಿಯಿರಿ. 'ಆಗೇನು ಮಹಾಕಾರ್ಯ ಮಾಡ್ತೀಪಾ?' ಅಂತೀರಾ? ಕ್ರಿಮಿನಲ್‌ಗಳಿಗೆ ಅಭ್ಯರ್ಥಿಗಳಾಗಲು, ಮುಂದೆ ಮಂತ್ರಿ-ಮುಖ್ಯಮಂತ್ರಿ, ಪ್ರಧಾನ ಮಂತ್ರಿಗಳಾಗಲು ಸಕ್ತಮನಾಮ ವಿಧಿಸುತ್ತೀರಾ, ನೀವು ಮತಿವಂತ ಮತದಾರರು ಎಂದು ಕೇಳಿದರೆ ನನ್ನ ಉತ್ತರ ಇಷ್ಟೇ. 'ಅಲ್ರೀ, ಇಲೆಕ್ಷನ್ ಆಯೋಗದ ವಿಧಿ ನಿಷೇಧಗಳು ಏನೇ ಇರಲಿ ಮತದಾರ ಮತಿವಂತನಾಗಿದ್ದರೆ ಆತನ ಕೈಯಲ್ಲಿ ಎಂತಹ ಒಂದು ಬ್ರಹ್ಮಾಸ್ತ್ರ! ಕ್ರಿಮಿನಲ್ ಅಲ್ಲದ, ಚರಿತ್ರಹೀನನಲ್ಲದ, ಲಂಚ ರಾಕ್ಷಸನಲ್ಲದ, ಸುಶಿಕ್ಷಿತನಾಗಿ three R's. ಎಂದರೆ ರೀಡಿಂಗ್, ರೈಟಿಂಗ್, ಆ್ಯಂಡ (ಅ) ರಿಥ್‌ಮೆಟಿಕ್ ಇಲ್ಲದೆ ಅದರ ಬದಲು ಕಾಲೇಜ್ ಮಟ್ಟದಲ್ಲಿ ರ್‍ಯಾಗಿಂಗ್, ಚುನಾವಣೆ ಮಟ್ಟದಲ್ಲಿ ರಿಗ್ಗಿಂಗ್, ಚುನಾಯಿತ ಅಧಿಕಾರ ಪಟ್ಟದಲ್ಲಿ ರೇಪಿಂಗ್ ಎಂಬ ಈ three R.ಗಳಿಗೆ ವಶವಾಗದ ಶುಚಿರ್ಭೂತ ಅಭ್ಯರ್ಥಿಯನ್ನು ಈ ಮತಿವಂತ ಮತದಾರ ಚುನಾಯಿಸಬಲ್ಲ ಎಂದು ಹೇಳಿದರೆ ನೀವು ನಂಬುತ್ತೀರೆಂದು ನಂಬುತ್ತೇನೆ.


ಪಾರ್ಟಿ ಪಾರ್ಟಿಗಳಲ್ಲಿ ಹೊಂದಾಣಿಕೆಗಳಿರುವಂತೆ ಮತದಾರ ಮತದಾರರಲ್ಲಿ ಹೊಂದಾಣಿಕೆ ಇದ್ದು ಬಿಟ್ಟರೆ ಆಗದೆ? ಯಾರನ್ನು, ಎಂಥವರನ್ನು, ಯಾವ ಪಾರ್ಟಿಯವರನ್ನು; ಯಾರ ಪೂರ್ವಾಪರಗಳು ನಿಷ್ಕಲಂಕವಾಗಿರುತ್ತವೊ ಅಂಥವರನ್ನು ಆರಿಸಲು ಸಾಧ್ಯವಾಗದೆ?

ಅಭ್ಯರ್ಥಿಗಳು, ಮತದಾರರು-ಇವರಲ್ಲಿ ಯಾಚಕರಾರು? ದಾನಿಗಳು ಯಾರು? ಅರ್ಥಾತ್ ಮನೆ ಮನೆಯ ಬಾಗಿಲು ಬಡೆದು ತಮ್ಮ ಮತಗಳ ಜೋಳಿಗೆ ಹಿಡಿದು, 'ಅಮ್ಮಾ ನಿಮ್ಮಲ್ಲಿ ಕಾಸು ಬೇಡಲು ಬಂದಿಲ್ಲ, ಕಾಶಿಗೆ ಹೋಗಲು ದೇಶಾವರಿ ಕೇಳಲು ಬಂದಿಲ್ಲ, ಜೋಳಿಗೆಯಲ್ಲಿ ಹೋಳಿಗೆ ನೀಡಿರೆಂದು ಬಂದಿಲ್ಲ, ದೂರ್ವಾಸರ ಹಾಗೆ ಹಪಹಪಿಗೊಂಡು ಅನ್ನಾಶನಾರ್ಥಿಯಾಗಿ ಬಂದಿಲ್ಲ! (ಈ ದೂರ್ವಾಸರಿಗೊ ಹೊಟ್ಟೆ ತುಂಬಿ ಹಸಿವೆ ಇಲ್ಲವಾದರೂ ತಿನಿಸಿನ ಹಪಹಪಿ ಹೋಗಿಲ್ಲ. ಹಾಗಾದರೆ ಈ ಮುನಿಯ ಹಸಿವು ಅಡಗುವ ಉಪಾಯ? ... 'ನಿನ್ನನೇ ನೀತಿಂದು ಬಿಡು ಎಲೈ ದೂರ್ವಾಸನೇ' ಎಂದು ನಮ್ಮ ಜ್ಞಾನಪೀಠದ ವರಕವಿಗೆ ಸಲ್ಲುವ ಶಾಪ ಕೊಟ್ಟಿದ್ದಾರೆ.) ಕಾಶಿಗೆ ಹೋಗುವವನು ವಿಶ್ವೇಶ್ವರ ಭಕ್ತನಲ್ಲ ಕಾಶೀಮನಲ್ಲ. ಕಾಶಿಯಲ್ಲಿ ಕಾಶೀಮನ ದೇನು ಕೆಲಸ? ಹಾಗೆಯೇ ಅಯೋಧ್ಯೆಯಲ್ಲಿ-ಹೋಗಲಿ ಬಿಡಿ ರಾಮರಾಜ್ಯ ರೋಮ ರಾಜ್ಯಗಳಲ್ಲಿ ಈ ಮಾತೇಕೆ? ನನ್ನೊಬ್ಬನ ಮತದಿಂದೇನಾಗಬೇಕಾಗಿದೆ? ಯಾರೂ ಕೈತುಂಬ ಕಾಣಿಕೆಯನ್ನು ಕೊಡದೆ ನಾನೇಕೆ ಮತಕೊಟ್ಟು ಮಸಿ ಹಚ್ಚಿಸಿಕೊಳ್ಳಬೇಕು?- ಎಂದು ಆಲೋಚಿಸುವವರೇ ಮತಿ ಇಲ್ಲ ಎನ್ನುವುದು. ತನ್ನಂತೆ ಪರರು ಎಂದು ಭಾವಿಸಬೇಕೆಂದು ಸರ್ವಜ್ಞ ಹೇಳಿಲ್ಲವೆ? ದೇವರು ನಮಗೆ ಸ್ಮೃತಿಕೊಟ್ಟಿದ್ದಾನೆ, ಆ ಕೋಶದಲ್ಲಿ ನಿನ್ನಿನ ಭೂತವನ್ನೆಲ್ಲಾ ತುರುಕುತ್ತೇವೆ; ಬುದ್ಧಿ ಎಂಬ ಅಷ್ಟಾಭರಣದ ಪೆಟ್ಟಿಗೆಯಲ್ಲಿ discretion ಎಂಬ ಮತಿಯ ಮೌಲಿಕ ಮಣಿ ಇರುತ್ತದೆ. ಹಾವಿನ ಹೆಡೆಯಲ್ಲಿಯ ಮಣಿಯಂತೆ; ನಾಳಿನ ಭವಿಷ್ಯದ ಗರ್ಭದಲ್ಲಿ ಪ್ರಜ್ಞೆಯೆಂಬ ದಿವ್ಯಶಕ್ತಿ ಇರುತ್ತದೆ. ಮತಿಯೊಡನೆ ಇವೆಲ್ಲ ಮಾನಸಿಕ, ಅತಿ ಮಾನಸಿಕ ಶಕ್ತಿಗಳೂ ಮತಿವಂತನಲ್ಲಿ ದೈವದತ್ತ. ದೈವೀ ಸಾಕ್ಷಾತ್ಕಾರದವರೆಗೂ ಪ್ರಜ್ಞೆಯ ಸಾಧನ ಸಹಾಯ ಮಾಡುತ್ತದೆನ್ನುತ್ತಾರೆ.



ನಿನ್ನ 'ಬೇಡಿಕೆ ಪಟ್ಟಿ' ನೋಡಿಯೇ ಅಂದ್ಕೊಂಡೆ...
ನಿನಗೂ ಈ ಸುದ್ದಿ ಗೊತ್ತಾಗಿಬಿಟ್ಟಿದೆ ಅಂತ....!

ಸ್ವರ್ಣ ವರ್ಷದಲ್ಲಿರುವ ಸ್ವತಂತ್ರ ಭಾರತದ ಪ್ರಜೆ, ಈ ಶತಮಾನದ ತನ್ನ ಕೊನೆಯ ಮತದ ಬಳಕೆಯನ್ನು ಮಾಡಿಕೊಳ್ಳಲಿದ್ದಾನೆ. ಮಹಾ ಚುನಾವಣೆ ಮುಗಿದ ಮೇಲೂ ಮತಹಾಕಿ ಆಯಿತಲ್ಲ ಎಂದರೂ ಮತಿಯ ಕಾರ್ಯ ಮುಗಿಯುವುದಿಲ್ಲ. ವಿನೋಬಾಜಿಯ ಈ ವ್ಯಂಗ್ಯ ವಾಕ್ಯ ಕೇಳಿ: ಅದರ ಅರ್ಥ ಎಷ್ಟು; ಸ್ವಾರಸ್ಯವಿದು: ಚುನಾಯಿತರು ಭಾವಿಸುತ್ತಾರೆ-'ನಾವು ಯಜಮಾನರು ನಾವು ಆಳುವವರು' ಎಂಬ ದಿಮಾಕಿನಿಂದ. ಆದರೆ ಚುನಾಯಿಸಿದ ಮತದಾರ ಭಾವಿಸಬೇಕು-ನಾನು ಸಾರ್ವಜನಿಕ ಸಾರ್ವಭೌಮ, ಚುನಾಯಿತ ಪ್ರತಿನಿಧಿಗಳು ಸಾರ್ವಜನಿಕರ ಸೇವಕರು. ನನಗೆ ನೀರಡಿಕೆಯಾದರೂ ನಾನಾಗಿಯೆ ನೀರು ಕುಡಿಯಲಾರೆ. ನಾನು ಚುನಾಯಿಸಿದ ಪ್ರತಿನಿಧಿಯೆ ನನಗೆ ನೀರು ಕುಡಿಸಬೇಕು! (ನೀರು ಕುಡಿಸುವುದೆ ನಿಜ). ಇಲ್ಲದಿದ್ದರೆ ಐದು ವರ್ಷದ ನಂತರ ಮತ್ತೆ ಇದೆಯಲ್ಲ ಕತ್ತರೀ ಪ್ರಯೋಗ! ಈ ಭೀತಿ ಚುನಾಯಿತ ಪ್ರತಿನಿಧಿಗಿರಬೇಕು. ಆದರೇನು? ಈಗ ನಡೆದ ಪ್ರಜಾತಂತ್ರದ ಯಂತ್ರ ನಡೆಯುವ ರೀತಿಯೆ ಬೇರೆ. ಚುನಾಯಿತರೇ ಹಡಗದ ಚುಕ್ಕಾಣಿ ಹಿಡಿದ ಯಜಮಾನರು, ಪ್ರಜೆಗಳು ಹಡಗ ಬುಡ ಮೇಲಾದರೆ ಮುಳುಗುವ ಗುಲಾಮರು! ಈ ಮನೋಭಾವವಳಿಯಲು ನಮ್ಮ ನಮ್ಮ 'ಮತಿಯಿಂದ ಮತ' ಚಲಾಯಿಸಬೇಕು! ಆಗ ಚುನಾಯಿತ ಚಾಲಕರು ಗಾಡಿಯನ್ನು ಹಳಿಯ ಮೇಲೆ ಓಡಿಸಬಹುದು.



ಹೆಜ್ಜೆ - ೮

ಆಸಕ್ತಿಗಳು ಕರೆದುಕೊಂಡು ಹೋಗುವ ದಾರಿ

○ 'ಕೃಶಾಂಗ'

ಮಧ್ಯ ವಯಸ್ಸಿನ ನಿಮ್ಮ ನೆರೆಮನೆಯವಳನ್ನು ಕಲ್ಪಿಸಿಕೊಳ್ಳಿ, ಅವಳಿಗೊಂದು ದುರಭ್ಯಾಸ. ತನ್ನ ಮನವನ್ನುದ್ರೇಕಿಸಿದ ಘಟನೆಗಳನ್ನು ಎಲ್ಲರೆದುರು ಮೆಲುಕು ಹಾಕುವುದು. ಸಮಯ, ಸಂದರ್ಭಗಳ ಚಿಂತೆ ಅವಳಿಗಿಲ್ಲ.

ಅಭ್ಯಾಸಗಳ ಕುರಿತಾದ ಮೂರು ಘಟ್ಟಗಳ ಪಯಣದ ಅತ್ಯಂತ ರೋಚಕ ಘಟ್ಟದ ಪ್ರಯಾಣವನ್ನು ಈಗ ಪೂರೈಸಬೇಕಿದೆ. ಈ ಅಂತಿಮ ಘಟ್ಟ ಮಾನಸಿಕ ಅಭ್ಯಾಸಗಳ ತಿಳಿವಳಿಕೆಗೆ ಸಂಬಂಧಿಸಿದೆ. ಬನ್ನಿ, ನನ್ನೊಡನೆ.

ಸಾಮಾನ್ಯವಾಗಿ ಅಭ್ಯಾಸಗಳ ಬಗೆಗೆ ಯೋಚಿಸುವಾಗ ನಾನು ಮಾನಸಿಕ ಅಭ್ಯಾಸಗಳನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳುವದಿಲ್ಲ. ಆದರೆ ವ್ಯಕ್ತಿತ್ವ ನಿರ್ಮಾಣದಲ್ಲಿ ಇವುಗಳ ಪಾತ್ರ ಗೌಣವಲ್ಲ. ನಮ್ಮ ಯೋಚನಾ ವೈಖರಿ, ದೃಷ್ಟಿಕೋನ ಹಾಗೂ ಅಭಿರುಚಿಗಳನ್ನು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅಭ್ಯಾಸ ಬಲದಿಂದ ರೂಪಿಸುವದು ಸಾಧ್ಯವೆಂಬುದು ನಮ್ಮಲ್ಲಿ ಅನೇಕರಿಗೆ ತಿಳಿದಿಲ್ಲ. ಪರಿಸರದ ಉತ್ತೇಜನಕ್ಕೆ ಅಭ್ಯಾಸ ಬಲದಿಂದ ನಾವು ನೀಡುವ ಪ್ರತಿಕ್ರಿಯೆ ನಮ್ಮ ವಿಚಾರಗಳನ್ನು ರೂಪಿಸುತ್ತವೆ; ಆ ವಿಚಾರಗಳು ನಮ್ಮ ಭಾವನೆಗಳನ್ನು ನಿರ್ದಿಷ್ಟಪಡಿಸುತ್ತವೆ.

ಆಸಕ್ತಿ, ಆಸ್ಥೆ.....

ಆಸಕ್ತಿಗಳು ಸಾಧನೆಗಳತ್ತ ನಮ್ಮನ್ನು ಕರೆದೊಯ್ಯುತ್ತವೆ. ಕೆಲವರಲ್ಲಿ ಕೆಲವೇ ಆಸಕ್ತಿಗಳು ನಿರಂತರವಾಗಿ ಮುಂದುವರೆದರೆ ಇನ್ನು ಹಲವರಲ್ಲಿ ಅವು ಬದಲಾಗುತ್ತಿರುತ್ತವೆ. ಬಹುಕಾಲದ ಬದಲಾಗದ ಆಸಕ್ತಿಗಳು ಕಾಲಾಂತರದಲ್ಲಿ ಅಭ್ಯಾಸಗಳ ರೂಪ ತಾಳುತ್ತವೆ. ಆದರೆ ಕೆಲವು ವೃತ್ತಿಮಾರ್ಗಗಳಲ್ಲಿ ಆಸಕ್ತಿಗಳ ಲಗುಬಗೆಯ ಬದಲಾವಣೆ ಯಶಸ್ಸಿಗೆ ಅನಿವಾರ್ಯ. ಉದಾಹರಣೆಗೆ, ವೈದ್ಯನೆಡೆಗೆ ಅನೇಕ ಬಗೆಯ ರೋಗಿಗಳು ಉಪಚಾರಕ್ಕಾಗಿ ಬರುತ್ತಾರೆ. ಪ್ರತಿಯೊಬ್ಬ ರೋಗಿಯ ಸಮಸ್ಯೆ ವಿಶಿಷ್ಟವಾದುದಾಗಿರುತ್ತದೆ. ಭಿನ್ನ ಭಿನ್ನವಾದ, ಒಮ್ಮೊಮ್ಮೆ ತದ್ವಿರುದ್ಧವಾದ ಇಂಥ ಪ್ರತಿಯೊಂದು ಸಮಸ್ಯೆಯಲ್ಲಿಯೂ ವೈದ್ಯ ತನ್ನ ಆಸಕ್ತಿಯನ್ನು ಬದಲಾಯಿಸುತ್ತಿರಲು ಸಮರ್ಥನಾಗಬೇಕು. ನ್ಯಾಯವಾದಿಯದೂ ಸಹ ಇದೇ ಕಥೆ! ಕಕ್ಷಿದಾರರ ವಿವಿಧ ಸಮಸ್ಯೆಗಳನ್ನು ತನ್ನ ಆಸಕ್ತಿಯನ್ನು ಬದಲಿಸುವ ಮೂಲಕವೇ ಆತ ಪರಿಣಾಮಕಾರಿಯಾಗಿ ಬಗೆಹರಿಸಬಲ್ಲ. ವೃತ್ತಿಯ ಅವಶ್ಯಕತೆಗನುಗುಣವಾಗಿ ಹೀಗೆ ತಮ್ಮ ಆಸಕ್ತಿಯನ್ನು ಯಾರಿಗೆ ಬದಲಿಸಲಾಗುವುದಿಲ್ಲವೋ ಅವರು ತಮ್ಮ ಕಾರ್ಯಕ್ಷಮತೆಯನ್ನು ಕ್ಷೀಣಿಸಿಕೊಳ್ಳುತ್ತಾರೆ. ಅಷ್ಟರ ಮಟ್ಟಿಗೆ ಅವರ ವ್ಯಕ್ತಿತ್ವ ಲೋಪ ಸಹಿತವಾಗುವದು ಖಚಿತ. 'ಏನು ಮಾಡಿದರೂ ಆ ವಿಚಾರವನ್ನು (ಒಳ್ಳೆಯದು ಅಥವಾ ಕೆಟ್ಟದ್ದು) ನನ್ನ ಮನಸ್ಸಿನಿಂದ ತೆಗೆದು ಹಾಕುವದು ನನ್ನಿಂದ ಆಗಲೊಲ್ಲದು' ಎಂಬ ಕೊರಗಿನವರು ಈ ವರ್ಗಕ್ಕೆ ಸೇರುವವರು.

ಸಮಾಜ ಜೀವಿಗಳಿಗೆ ಮತ್ತು ಸಮಾಜ ಪೋಷಿತರಿಗೆ ತಮ್ಮ ಆಸಕ್ತಿಗಳನ್ನು ಬದಲಿಸುವ ಕೌಶಲ್ಯ ಕರಗತವಾಗಿರುವದು ಹಾಗೂ ಅದು ಅಭ್ಯಾಸವಾಗಿ ಮಾರ್ಪಟ್ಟಿರುವದು ಅತ್ಯಗತ್ಯ. ಒಂದೆರಡು ದೃಷ್ಟಾಂತಗಳನ್ನು ನೋಡೋಣ.

ದೀಪಾವಳಿಯ ರಾತ್ರಿ ಕುಟುಂಬದ ಸದಸ್ಯರೆಲ್ಲರೂ ಸ್ವಾದಿಷ್ಟ ಭೋಜನದ ಊಹೆಯಲ್ಲಿ ಅನೇಕ ಭಕ್ಷ್ಯ-ಭೋಜ್ಯಗಳೆದುರು ಕುಳಿತಿರುವದಾಗಿ ಕಲ್ಪಿಸಿಕೊಳ್ಳಿ, ಕಲ್ಪನೆಯಿಂದಲೇ ಬಾಯಿ ನೀರೂರುತ್ತಿದೆ! ಅದೇ ದಿನ ನಿಮ್ಮ ತಂದೆಗೆ ಅವರ ಅಪ್ರತಿಮ ಸಾಧನೆಗಾಗಿ ಪ್ರಶಸ್ತಿಯೊಂದು ಘೋಷಿತವಾಗಿದೆಯೆಂದೂ ಕಲ್ಪಿಸಿ. ಅವರು ಭೋಜನದ ಪ್ರಾರಂಭದಿಂದಲೂ ಅದರ ಬಗೆಗೇ ಮಾತನಾಡುತ್ತಾ ಹೊರಟರೆ ಸ್ವಲ್ಪ ಸಮಯದ ನಂತರ 'ಈ ಕೊರೆತ'ವನ್ನು ಸಹಿಸುವದಕ್ಕಿಂತ ಮೇಜವಾನಿಯನ್ನು ಬಲಿಗೊಡುವದು ಉತ್ತಮ ತರವೆನ್ನಿಸ ತೊಡಗುತ್ತದೆ. ಅಲ್ಲಿ ಕುಳಿತಿರುವ ಎಲ್ಲರಿಗೂ ನಿಮ್ಮ ತಂದೆಯ ಅರ್ಹತೆ, ಖ್ಯಾತಿಯ ಬಗೆಗೆ ಗೊತ್ತಲ್ಲವೇ? ಖಂಡಿತ. ಆದರೆ ಅವರಿಗೆ ತಮ್ಮ ಲೋಪದ ಅರಿವಿಲ್ಲವಲ್ಲ! ಅದೇ ಅಲ್ಲಿಯ ಸದಸ್ಯರ ದುರಾದೃಷ್ಟ!

ಹಾಗೆಯೇ ಮಧ್ಯ ವಯಸ್ಸಿನ ನಿಮ್ಮ ನೆರೆಮನೆಯವಳನ್ನು ಕಲ್ಪಿಸಿಕೊಳ್ಳಿ, ಅವಳಿಗೊಂದು ದುರಭ್ಯಾಸ. ತನ್ನ ಮನವನ್ನುದ್ರೇಕಿಸಿದ ಘಟನೆಗಳನ್ನು ಎಲ್ಲರೆದುರು ಮೆಲುಕು ಹಾಕುವದು. ಸಮಯ, ಸಂದರ್ಭಗಳ ಚಿಂತೆ ಅವಳಿಗಿಲ್ಲ. ಇದರಿಂದ ಪಾರಾಗಲು ಚತುರರು ಅವಳ ಗಮನವನ್ನು ಬೇರೆಡೆಗೆ ತಿರುಗಿಸಿದಷ್ಟೂ ಅಷ್ಟೇ ವೇಗವಾಗಿ, ಗೋಡೆಗೆ ಜಜ್ಜಿದ ಚೆಂಡಿನಂತೆ, ತನ್ನ ಮೊದಲ ವಿಷಯಕ್ಕೇ ಹಿಂತಿರುಗುತ್ತಾಳೆ! ತನ್ನ ದೋಷ ಆಕೆಗೆ ಗೊತ್ತಿದೆ; ಎಲ್ಲರೆದುರೂ ಒಪ್ಪಿಕೊಳ್ಳುತ್ತಾಳೆ; ಆದರೆ ಅವಳೊಬ್ಬ ಅಭಿಮನ್ಯು! ಬೇರೆಯವರಿಗೆ ತಾನು 'ಪೀಡೆ' ಎಂಬ ಅರಿವೂ ಅವಳಿಗಿಲ್ಲ. ಕನಿಕರಕ್ಕೆ ಅರ್ಹಳು, ಅಲ್ಲವೇ?

ನಮ್ಮ ಆಸಕ್ತಿಗಳನ್ನು ಸಾಂದರ್ಭಿಕವಾಗಿ ಬದಲಿಸಲು ನಮಗೆ ಸಾಧ್ಯವಾಗದಿದ್ದರೆ ನಾವು ನಿರುಪಯುಕ್ತವಷ್ಟೇ ಅಲ್ಲ, ಜುಗುಪ್ಸೆ ಮೂಡಿಸುವ ವ್ಯಕ್ತಿಗಳೂ ಆಗಬಹುದೆಂಬುದು ಈಗಲಾದರೂ ತಿಳಿಯಿತಲ್ಲ? ಈ ಮಾನಸಿಕ ಅಭ್ಯಾಸಗಳನ್ನು ದೂರ ಮಾಡೋಣ.

ಎಲ್ಲೆಡೆಗೂ ಕಾಣಸಿಗುವ ವ್ಯಕ್ತಿಗಳಿವರು

ಪರೀಕ್ಷೆಯಲ್ಲಿ ತನ್ನ ಕೆಟ್ಟ ಪ್ರದರ್ಶನಕ್ಕಾಗಿ

ವ್ಯಕ್ತಿತ್ವ ವಿಕಾಸ

ವೃತ್ತಿಯ ಅವಶ್ಯಕತೆಗೆ ಅನುಗುಣವಾಗಿ ತಮ್ಮ ಆಸಕ್ತಿಯನ್ನು ಯಾರಿಗೆ ಬದಲಿಸಲಾಗುವುದಿಲ್ಲವೋ ಅವರು ತಮ್ಮ ಕಾರ್ಯಕ್ಷಮತೆಯನ್ನು ಕ್ಷೀಣಿಸಿಕೊಳ್ಳುತ್ತಾರೆ.

'ಶಿಕ್ಷಕರ ಪಕ್ಷಪಾತತನ, ಯೋಗ್ಯ ಮಾರ್ಗದರ್ಶನದ ಅಭಾವ, ಅನಿರೀಕ್ಷಿತ ಅನಾರೋಗ್ಯ ಇತ್ಯಾದಿಗಳನ್ನು ಪಟ್ಟಿ ಮಾಡುವ ವಿದ್ಯಾರ್ಥಿ; ತನ್ನ ವ್ಯಾಪಾರೋದ್ದಿಮೆಯ ಕಳಪೆ ಗುಣಮಟ್ಟಕ್ಕಾಗಿ 'ಬೇಡಿಕೆಯ ಕುಸಿತ, ಅನಾರೋಗ್ಯಕರ ಪೈಪೋಟಿ, ಅಪ್ರಾಮಾಣಿಕ ಸಿಬ್ಬಂದಿ' ಮುಂತಾದವುಗಳೆಡೆಗೆ ಬೆರಳು ತೋರುವ ಉದ್ದಿಮೆದಾರ; ತನ್ನ ಕೃಷಿ ವಿಫಲತೆಗೆ 'ಹವಾಗುಣ, ನೀರಾವರಿಯ ತೊಂದರೆ, ಮಣ್ಣಿನ ಗುಣ, ಕೂಲಿಕಾರರ ಸಮಸ್ಯೆ' ಮುಂತಾದವುಗಳನ್ನು ಗುರಿ ಮಾಡುವ ಕೃಷಿಕ; ತನ್ನ ನಿರುದ್ಯೋಗಕ್ಕೆ 'ಸರಕಾರದ ನೀತಿ, ವಶೀಲಿ, ಲಂಚ-ರುಸುವತ್ತು' ಇತ್ಯಾದಿಗಳನ್ನು ದೂರುವ

> **ಪೋಲಿಗಳು**
>
> ಕವಿಗಳು
> ನಿಜವಾಗಲೂ
> ಪೋಲಿಗಳು
> ಬಾಚುವರು
> ಪ್ರಕೃತಿಯ
> ನಿಜವಾದ
> ಸೌಂದರ್ಯವನ್ನು
> ಕಲ್ಪನೆ
> ಕರಗಳಿಂದ
>
> **– ಆರ್. ಸುನೀಲ್**, ತರೀಕೆರೆ

ಯುವಕ-ಇವರೆಲ್ಲರೂ ತಮ್ಮ ಲೋಪಗಳಿಗೆ ಬೇರೆಯವರನ್ನು ಹೊಣೆಗಾರರನ್ನಾಗಿ ಮಾಡುವ ನಿಜವಾದ ಹೊಣೆಗೇಡಿಗಳು. ತಮ್ಮ ನಡಾವಳಿಯನ್ನು ಪುನರ್‌ವಿಮರ್ಶಿಸುವ, ತಮ್ಮ ಲೋಪಗಳನ್ನು ಕಂಡು ಹಿಡಿಯುವ ಸದವಕಾಶವನ್ನು ಕಳೆದುಕೊಂಡು ತಮ್ಮ ವ್ಯಕ್ತಿತ್ವದ ಸುಧಾರಣೆಯಿಂದ ವಂಚಿತರಾಗುವವರಿವರು. ಸೆರೆಗುಡುಕತನಕ್ಕಾಗಿ ಮನೆಯಿಂದ ಹೊರದೂಡಿಸಿಕೊಂಡು ಸೆರೆಯ ಅಂಗಡಿಗೇ ಹಿಂದಿರುಗಿ ಈ ಚಟ ತನ್ನ ಪತ್ನಿಯ ಕ್ರೌರ್ಯದ ಫಲವೆಂದು ದೂರುವವ ತನ್ನ ಹಾಗೂ ತನ್ನ ಕುಟುಂಬದ ದುರ್ದೆಶೆಗಾಗಿ ತನ್ನ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳಲು ಹೆಣಗಾಡುತ್ತಾನೆ. ಇಂಥವನಿಂದ ಸ್ವಸುಧಾರಣೆ ಸಾಧ್ಯವೇ? ಯೋಚಿಸಿ.

ಇನ್ನು ಕೆಲವರು ಸಕಲ ವಿದ್ಯಾರಂಭ ಶೂರರು. ಎಲ್ಲ ಪ್ರಯತ್ನಗಳನ್ನೂ ಅರೆಮನಸ್ಸಿನಿಂದ ಮಾಡುತ್ತ, ಪ್ರಾರಂಭಿಸಿದ ಕೆಲಸಗಳನ್ನು ಅರ್ಧಕ್ಕೇ ನಿಲ್ಲಿಸಿ, 'ದ್ರಾಕ್ಷಿ ಹುಳಿಯಾಗಿದೆ, ಅದಕ್ಕೇಕೆ ಪ್ರಯತ್ನಿಸುವದು?' ಎಂದ ನರಿಯಂತೆ, ಸಶಕ್ತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅಸಮರ್ಥರು. ವ್ಯಕ್ತಿತ್ವದ ಒಳ್ಳೆಯ ಬೆಳವಣಿಗೆಯನ್ನು ತಡೆಯುವ ಇನ್ನೊಂದು ಗುಣವಿದೆ. ಅದೂ ಸಹ 'ಹುಳಿ ದ್ರಾಕ್ಷಿ ದೃಷ್ಟಿ'ಯ ಸಮೀಪದ ಸಂಬಂಧಿ. ನಿಮಗೆ ಬೆಲೆಯುಳ್ಳ ಆಭರಣ ಧರಿಸಲು ಇಷ್ಟ. ಆದರೆ ನಿಮಗದು ಎಟಕದು. ನಿಮ್ಮ ಪಕ್ಕದ ಮನೆಯ ಗೆಳತಿ ಶ್ರೀಮಂತೆ. ದಿನಾಲು ಬಗೆಬಗೆಯ ಬೆಲೆಯುಳ್ಳ ಆಭರಣಗಳಿಂದ ಸಿಂಗರಿಸಿಕೊಳ್ಳುತ್ತಾಳೆ. ನೀವು ಆ ಆಭರಣಗಳು ಮತ್ತು ಅವುಗಳೊಡತಿ ಇಬ್ಬರನ್ನೂ ಮೊದಲು ಟೀಕಿಸುತ್ತೀರಿ. ನಂತರ ದ್ವೇಷಿಸಲು ಪ್ರಾರಂಭಿಸುವಿರಿ. ಈ ಸಮಾಜ ವಿರೋಧಿ ನಡತೆಯನ್ನು ತಿದ್ದಿಕೊಳ್ಳಲು ಪ್ರಯತ್ನಿಸಬಲ್ಲಿರಾ?

ಅಶಕ್ತ ವ್ಯಕ್ತಿತ್ವದ ಇನ್ನೊಂದು ಮುಖವೂ ಇದೆ. ನಮಗೆಲ್ಲ ಗೊತ್ತು-ಅತೃಪ್ತಿ ಬೆಚ್ಚಗಿನ ಗಾಳಿಯಂತೆ ಮೇಲೇರಲು ಪ್ರೇರೇಪಿಸುತ್ತದೆ; ತೃಪ್ತಿ ಏಳ್ಗೆಯ ಕೊನೆಯ ನಿಲ್ದಾಣ, ಅದು ನಿಮ್ಮನ್ನು ತಂಗಾಳಿಯಂತೆ ಕೆಳಸ್ತರದಲ್ಲಿರಿಸುತ್ತದೆ-ಎಂಬುದು. ಒಮ್ಮೊಮ್ಮೆ ಇಂಥ ತೃಪ್ತಿಯನ್ನೂ ರೂಢಿಸಿಕೊಂಡಿರುತ್ತೇವೆ. ಆದುದರಿಂದ ಜೀವನದಲ್ಲಿ ಹೆಚ್ಚಿನದನ್ನು ಸಾಧಿಸಲು ನಮಗಾಗದು. ಒಂದು ಉದಾಹರಣೆ: ಮುರಾರಿಯ ತಂದೆ, ಆತನ ಪ್ರಗತಿ ಪುಸ್ತಕ ಪರಿಶೀಲಿಸಿ ಗದರಿದರು, 'ಯಾಕಪ್ಪ, ರಾಯರ ಕುದುರೆ ಬರಬರುತ್ತ ಕತ್ತೆಯಾಗ ತೊಡಗಿದೆಯಲ್ಲ? ಏನಿದು ಶೇಕಡಾ ೬೦ ಗುಣಗಳ ಸರಾಸರಿ ಎಂದರೆ?' ಮುರಾರಿಯ ಉತ್ತರ ತಂದೆಯ ಕ್ಷಮೆಕೋರುವಂತಹದೂ ತಾನಿನ್ನೂ ಚೆನ್ನಾಗಿ ಅಂಕಗಳನ್ನು ಗಳಿಸಬಹುದಿತ್ತೆಂಬುದನ್ನು ಒಪ್ಪಿ, ಅಂಥ ಆಶ್ವಾಸನೆ ಕೊಡುವಂತಹದೂ ಆಗಿರಬೇಕು ತಾನೇ? ಹಾಗಿರದೆ 'ಅಲ್ಲ, ಅಪ್ಪ, ಕಡೆಯ ಮನೆಯ ಮಾಲತಿ ಫೇಲ್ ಆಗಿದ್ದಾಳೆ. ನಡುವಿನ ಮನೆಯ ಶಂಕರನಿಗೆ ಶೇಕಡಾ ೩೫ ಬಂದಿದೆ. ಸದ್ಯ ನನಗೆ ಹಾಗಾಗಲಿಲ್ಲವಲ್ಲ!' ಎಂದಾದರೆ ಆತನ ಬೆಳವಣಿಗೆ ಹೇಗೆ ಸಾಧ್ಯ? ದಡ್ಡರಲ್ಲಿ ಜಾಣನೆನ್ನಿಸಿಕೊಳ್ಳಬಯಸುವ, ಅಲ್ಪ ತೃಪ್ತಿಯ, ಮಹಾ ಹೊಂದಾಣಿಕೆಯ ದಾಸನೀತ!

ನಮ್ಮ ದೃಷ್ಟಿಕೋನ

ಶ್ರಮ ಮತ್ತು ಶ್ರಮಿಕರ ಬಗೆಗಿನ ನಮ್ಮ ದೃಷ್ಟಿಕೋನಕ್ಕೆ ಅಭ್ಯಾಸಗಳೇ ಕಾರಣ. ಶ್ರಮವನ್ನು ಅನಿವಾರ್ಯವಾದ, ದೈವದತ್ತವಾದ ಶಾಪವೆಂದಾಗಲೀ ಅಥವಾ ವ್ಯಕ್ತಿತ್ವ ಸುಧಾರಣೆಗೆ ಅವಕಾಶವಾಗುವ ಕೊಡುಗೆ ಎಂದಾಗಲೀ ನಮ್ಮ ಅಭ್ಯಾಸಕ್ಕನುಗುಣವಾಗಿ ತಿಳಿಯಬಹುದು. ಶ್ರಮಿಕರನ್ನು ನಿರ್ಭಾಗ್ಯರೆಂದು ಕೀಳ್ತರಗತಿಯವರೆಂದೂ ತಿಳಿಯುವವರು ತಮ್ಮ ಮಕ್ಕಳು ಆ ವರ್ಗಕ್ಕೆ ಸೇರಬಾರದೆಂದು ಯಾವ ತ್ಯಾಗಕ್ಕೂ ಸಿದ್ಧರಾದಾರು. ಇನ್ನು ಕೆಲವರು ಈ ಶ್ರಮದಿಂದ ತಮ್ಮ ಮಕ್ಕಳನ್ನು ಪಾರು ಮಾಡಿ ಅವರನ್ನು ವೃತ್ತಿಪರರನ್ನಾಗಿ ರೂಪಿಸಲು ಅವರಿಗೆ ಶಿಕ್ಷಣ ಕೊಡಿಸಬಹುದು. ಇನ್ನು ಕೆಲವರು 'ಶ್ರಮಿಕರು ಮಾತ್ರ ಸಾರ್ಥಕ ಜೀವಿಗಳು; ಏಕೆಂದರೆ ಉಳಿದೆಲ್ಲರೂ ಅವರನ್ನವಲಂಬಿಸಿದ್ದಾರೆ' ಎಂಬ ಅಭಿಪ್ರಾಯ ಬೆಳೆಸಿಕೊಂಡಿರಬಹುದು. ಇವೆಲ್ಲವೂ ಭಿನ್ನ ಭಿನ್ನ ಮಾನಸಿಕ ಅಭ್ಯಾಸಗಳನ್ನವಲಂಬಿಸಿವೆ.

ಬಾಲ್ಯದಲ್ಲಿಯೇ ರೂಪುಗೊಂಡ ಅಭ್ಯಾಸಗಳ ಮುಖ್ಯ ಲಕ್ಷಣವೆಂದರೆ ಅವು ಬದಲಾವಣೆಗೆ ಒಡ್ಡುವ ವಿರೋಧ. ಅಭ್ಯಾಸಗಳು ತರ್ಕಶುದ್ಧವಾಗಿರಬೇಕಿಲ್ಲ; ಆದರೆ ಅವು ನಮ್ಮ ವಿಚಾರಗಳ ದಿಕ್ಕನ್ನು ರೂಪಿಸಬೇಕು. ಪರದೇಶೀಯರು, ಸ್ವದೇಶ ಮತ್ತು ರಾಷ್ಟ್ರಧ್ವಜ, ಬೇರೆ ಜನಾಂಗಗಳು, ರಾಜಕೀಯ ಪಕ್ಷಗಳು, ವಿವಾಹ ಬಂಧನ ಮತ್ತು ವಿಚ್ಛೇದನ, ಪಾನನಿರೋಧ, ಕಾಯ್ದೆ ಮತ್ತು ಆರಕ್ಷಕರು, ಮರಣದಂಡನೆ ಇತ್ಯಾದಿಗಳ ಬಗೆಗಿನ ನಮ್ಮ ದೃಷ್ಟಿಕೋನ ನಾವೀಗಾಗಲೇ ರೂಢಿಸಿಕೊಂಡು ಬೇರೂರಿದ ನಮ್ಮ ಮಾನಸಿಕ ಅಭ್ಯಾಸಗಳನ್ನಾಧರಿಸಿವೆ. ಇದು ನಮ್ಮ ವ್ಯಕ್ತಿತ್ವದ ಮಾನಸಿಕಸ್ತರ.

ಯೋಚನಾ ವಿಧಾನಗಳು

ನಮ್ಮ ಯೋಚನಾ ವಿಧಾನಕ್ಕೂ ತರ್ಕಿಸುವ

ರೀತಿಗೂ ಅನ್ಯೋನ್ಯ ಸಂಬಂಧವಿದೆ. ಮೂರು ಬಗೆಯ ಆಲೋಚಕರನ್ನೂ ಗುರುತಿಸಬಹುದು. ತಮ್ಮ ವಿಚಾರಗಳನ್ನು ವ್ಯಕ್ತಪಡಿಸದೇ, ಯಾರನ್ನೂ ಅವರು ತಜ್ಞರು, ಅಧಿಕಾರಯುತವಾಗಿ ಮಾತನಾಡಬಲ್ಲವರು ಎಂದು ತಿಳಿದಿರುತ್ತಾರೋ ಅಂಥವರು ಹೇಳಿದುದನ್ನೇ ತಮ್ಮ ಅಭಿಪ್ರಾಯವನ್ನಾಗಿ ಮಾಡಿಕೊಂಡು ಅವುಗಳನ್ನೇ ಮಂಡಿಸುವವರು. ಮೊದಲನೆಯ ವರ್ಗದವರು. ಯಾವದೇ ವಿಷಯದ ಬಗೆಗಿನ ಇತರರ ಅಭಿಪ್ರಾಯಗಳನ್ನು ಗಮನಿಸದೆ, ನಿರ್ಲಕ್ಷಿಸಿ, ಕೇವಲ ತಮ್ಮ ಅನಿಸಿಕೆಗಳನ್ನು ಧೈರ್ಯ, ಆತ್ಮವಿಶ್ವಾಸಗಳಿಂದ ಸಾದರ ಪಡಿಸುವವರು ಎರಡನೆಯ ವರ್ಗದವರು. ತಮ್ಮ ಅಭಿಪ್ರಾಯಗಳನ್ನು ಮೊದಲು ಪ್ರಸ್ತುತಪಡಿಸಿ ಅವುಗಳನ್ನು ಪ್ರಾಜ್ಞರ ಅನುಭವ, ಅಭಿಪ್ರಾಯಗಳೊಂದಿಗೆ ಪುಷ್ಟೀಕರಿಸುವವರು ಮೂರನೆಯ ವರ್ಗದವರು.

ಮೊದಲ ವರ್ಗದವರನ್ನು ರಚನಾತ್ಮಕ ವೈಚಾರಿಕರೆಂದೆನ್ನಲು ಸಾಧ್ಯವಿಲ್ಲ. ಏಕೆಂದರೆ ಅವರಲ್ಲಿ 'ತಮ್ಮತನ'ವೇ ಇಲ್ಲ. ಎರಡನೆಯ ವರ್ಗದವರಲ್ಲಿ ವೈಚಾರಿಕತೆಯ ಆಳ, ವಿಸ್ತಾರಗಳಿಲ್ಲ. ಏಕೆಂದರೆ ಬೇರೆಯವರ ದೃಷ್ಟಿಯಗೊಡವೆಯೇ ಅವರಿಗಿಲ್ಲ. ಅವರು ಹೀಗಾಗಿ ಸಮಾಜಾಸಕ್ತರಲ್ಲ. ತಮ್ಮ ಗಂಭೀರ ವಿಚಾರ ವೈಖರಿಯಿಂದ ಮಹತ್ವದ ನಿರ್ಣಯಗಳಿಗೆ ಸಿಲುಕಿ ಇದೇ ವಿಷಯಕ್ಕೆ ಇತರರ ಅಭಿಪ್ರಾಯಗಳನ್ನೂ ಗಮನಿಸುವವರು ಮಾತ್ರ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಸಿದ್ಧರಿರುವರು. ಅವರ ವ್ಯಕ್ತಿತ್ವ ಸಮತೋಲನದ್ದು. ಆದುದರಿಂದ ಮೂರನೆಯ ವರ್ಗದವರ ಯೋಚನಾ ವಿಧಾನದ ಅಳವಡಿಕೆ ವ್ಯಕ್ತಿತ್ವ ಸಾಫಲ್ಯಕ್ಕೊಂದು ಕೊಡುಗೆ.

ಏಕಾಗ್ರತೆಯ ಶತ್ರುಗಳು

ನೀವು ಪೇಟೆಯಲ್ಲಿ ಹೊರಟದ್ದೀರೆಂದು ಭಾವಿಸಿ. ನಿಮಗೆ ಶಾಸ್ತ್ರೀಯ ಸಂಗೀತ ರುಚಿಸುತ್ತದೆ. ಹತ್ತಿರದ ಉಪಾಹಾರ ಗೃಹವೊಂದರಿಂದ ಸುಶ್ರಾವ್ಯ ಶಹನಾಯಿವಾದನ ಹೊಮ್ಮುತ್ತಲಿದೆ. ಆದರೇನು? ನಿಮ್ಮ ಹತ್ತಿರದಲ್ಲಿಯೇ ಜನಜಂಗುಳಿ ಕಿಸೆಗಳ್ಳನೊಬ್ಬನನ್ನು ಥಳಿಸುತ್ತಿದೆ. ಎದುರಿನಿಂದ ನಿಮ್ಮೆಡೆಗೆ ಬರುತ್ತಿದ್ದ ವಿವಾಹದ ಮೆರವಣಿಗೆಯಲ್ಲಿ ಅಪಶ್ರುತಿಯ ನಾದಸ್ವರ ವಾದನ ಜಾರಿಯಲ್ಲಿದೆ. ಪರಿಸರದಲ್ಲಿಯ ಇಂಥ ಅಡ್ಡಿಗಳನ್ನು ನಿಮ್ಮ ಆಸಕ್ತಿಗಳಿಂದ ದೂರವಿಡುವ ಅಭ್ಯಾಸ ಹೊಂದಿಲ್ಲದಿದ್ದರೆ ಏಕಾಗ್ರತೆಯಿಲ್ಲದೆ ಒದ್ದಾಡುವಿರಿ. ಈ ಮಾನಸಿಕ ಅಭ್ಯಾಸವೇ 'ಋಣಾತ್ಮಕ ಹೊಂದಾಣಿಕೆ'. ನೀವು ಶ್ರಮಿಕರಾಗಿದ್ದು ಋಣಾತ್ಮಕ ಹೊಂದಾಣಿಕೆಯಿಲ್ಲದಿದ್ದರೆ ನಿಮ್ಮ ಉತ್ಪಾದನೆಯ ಗುಣಮಟ್ಟ, ಸುರಕ್ಷಿತತೆ, ಯಂತ್ರೋಪಕರಣಗಳು ಧಕ್ಕೆಗೊಳ್ಳುವದು ಖಚಿತ. ನಿಮ್ಮ ದಣಿವೂ ಸಹ ಹೆಚ್ಚುವದು.

ಈಗ ಇನ್ನೊಂದು ದೃಷ್ಟಾಂತ. ತಿಂಗಳ ರಜೆಯ ನಂತರ ಇಂದು ನೀವು ವರ್ಗದಲ್ಲಿ ಕುಳಿತಿರುವಿರಿ. ನೀವೊಬ್ಬ ಸೂಕ್ಷ್ಮ ಮನಸ್ಸಿನ ತರುಣಿ. ಅಗೋ, ವರ್ಗದಲ್ಲಿ ಇದೀಗ ಬಂದ ಅತ್ಯಂತ ನಿಷ್ಣಾತ ಉಪನ್ಯಾಸಕರು ನಿರರ್ಗಳವಾಗಿ ತಮ್ಮ ಉಪನ್ಯಾಸ ಪ್ರಾರಂಭಿಸಿದರು. ಕೆಲವೇ ನಿಮಿಷಗಳ ನಂತರ ನಿಮ್ಮನ್ನೇ ದಿಟ್ಟಿಸುತ್ತಾ ನಿಮ್ಮ ಮುಖದಲ್ಲಿ ಏನನ್ನೋ ಓದುತ್ತಿರುವವರಂತೆ ಪಕ್ಕನೇ ಸುಮ್ಮನಾಗಿ ಬಿಟ್ಟರು. ವರ್ಗದ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ನಿಮ್ಮನ್ನೇ ಗಮನಿಸುತ್ತಿದ್ದಾರೆ. 'ಮಿಸ್ ಸುಜಾತಾ, ರಜೆ ಮುಗಿದು ನೀವೀಗ ಕ್ಲಾಸಿನಲ್ಲಿ ಇದ್ದೀರಿ. ಹಗಲು ಗನಸು ಕಾಣುವದು ಬಿಟ್ಟು ಪಾಠಗಳತ್ತ ಗಮನಕೊಡಿ. ಅದು ಸಾಧ್ಯವಿಲ್ಲದಿದ್ದರೆ ನನ್ನನ್ನು ಕೋಪ, ಅಪಮಾನಗಳಿಂದ ಮುಕ್ತಗೊಳಿಸಲು ಹೊರಗೆ ಹೋಗಿ' ಎಂದು ಗದರಿದ ಉಪನ್ಯಾಸಕರನ್ನು ಮುಗಿಸಿಬಿಡಬೇಕೆನ್ನುವಷ್ಟು ಕೋಪ ನಿಮ್ಮಲ್ಲಿ ಕುದಿಯುತ್ತದೆ. ಆದರೆ ತಪ್ಪು ಯಾರದು?

ತೀರ ಇತ್ತೀಚೆಗೆ ನೀವು ಅನುಭವಿಸಿದ ಮಾನಸಿಕ ಭಾವನಾತ್ಮಕ ಅನುಭವಗಳು ನಿಮ್ಮನ್ನು ವಿಚಲಿತಗೊಳಿಸುತ್ತಿದ್ದುದನ್ನು ನಿಯಂತ್ರಿಸಲಾರದ ನಿಮ್ಮದು. ಇದನ್ನೇ 'ಆಂತರಿಕ ಚಾಂಚಲ್ಯವನ್ನು ನಿಯಂತ್ರಿಸುವ ಋಣಾತ್ಮಕ ಹೊಂದಾಣಿಕೆ' ಎನ್ನುವದು. ಈ ಅಭ್ಯಾಸ ನಿಮಗಿಲ್ಲದ್ದು, ಹದಿಹರೆಯದವರ ಮಾನಸಿಕ-ಭಾವನಾತ್ಮಕ ಲೋಕದ ದಾಸ್ಯದ ಪೂರ್ಣ ಕಲ್ಪನೆಯಿದ್ದ ನಿಮ್ಮ ಉಪನ್ಯಾಸಕರಿಗೆ ತಿಳಿಯದಿದ್ದೀತೆ? ನಿಮ್ಮ ವ್ಯಕ್ತಿತ್ವದ



ವ್ಯಕ್ತಿತ್ವ ವಿಕಾಸ


ದಡ್ಡರಲ್ಲಿ ಜಾಣನೆನ್ನಿಸಿಕೊಳ್ಳಬಯಸುವ ವ್ಯಕ್ತಿಯು ಅಲ್ಪ ತೃಪ್ತಿಯ ಮಹಾ ಹೊಂದಾಣಿಕೆಯ ದಾಸನಾಗಿರುತ್ತಾನೆ.

ಸಂಭಾವ್ಯ ದೋಷ ನಿವಾರಣೆಯ ಕಳಕಳಿಯಿಂದಲೇ ಉಪನ್ಯಾಸಕರು ನಿಮ್ಮನ್ನು ಎಚ್ಚರಿಸಿದರು. ರಜೆಯಲ್ಲಿ ಅಪ್ಪ ಕೊಟ್ಟ ಅಪ್ಪಟ ಚಿನ್ನದ ಸರ ತಂದ ಆನಂದ ಹಾಗೂ ನಿಮ್ಮ ನೆರೆಮನೆಯ ಗೆಳೆಯನ-ಆತ್ಮಹತ್ಯೆಯ ದುಃಖ ನೀವಿನ್ನು ಮರೆತು ಅವು ನಿಮ್ಮ ನಿತ್ಯದ ಏಕಾಗ್ರತೆಗೆ ಆತಂಕವಾಗದಂತೆ ಅಭ್ಯಾಸ ಮಾಡಲೇಬೇಕು. ಮನೋ-ಭಾವನಾತ್ಮಕ ಅನುಭವಗಳು ಅನಿಯಂತ್ರಿತವಾದರೆ ಅವು ಏಕಾಗ್ರತೆಯ ಮೇಲೆ ಹೇಗೆ ದಾಳಿ ಮಾಡುವವೆಂಬುದನ್ನು ಕಂಡುಕೊಂಡಿರಾ?

ಮರೆವೆಂಬ ವರದಾನ

ನೆನಪಿಡಿ, ನಾವು ಕೆಲವು ವಿಷಯಗಳನ್ನು ಮರೆಯಲೇಬೇಕು. ಈ ಸೂಚನೆ ಮೋಜಿನದೆನಿಸುತ್ತದಲ್ಲವೇ? ಆದರೆ ಇದು ಸತ್ಯ. ನಿಮ್ಮ ಸ್ವಾಭಿಮಾನವನ್ನು ಗಾಸಿಗೊಳಿಸಿ, ಭವಿಷ್ಯವನ್ನು ಗಂಡಾಂತರದಲ್ಲಿ ನೂಕಿ, ಜೀವನೋತ್ಸಾಹ ಕುಂದಿಸುವ, ಒಟ್ಟಾರೆ ನಿಮ್ಮ ವ್ಯಕ್ತಿತ್ವವನ್ನು ಅನಾಕರ್ಷಕವಾಗಿಸುವ ಘಟನೆಗಳನ್ನು ನೀವು ಮರೆಯಲೇಬೇಕು. ಅದಕ್ಕೆ ಬೇಕಾದ ಮಾನಸಿಕ ಅನುಶಾಸನವನ್ನು ಗಳಿಸಬೇಕು. ಆ ನೆನಪುಗಳನ್ನು ತೆಗೆದು ಹಾಕುವ ಉಲ್ಲಾಸಕರ ವಿಷಯಗಳನ್ನು ಕುರಿತು ಯೋಚಿಸ ತೊಡಗಬೇಕು. ಇದು ಸುಲಭದ ಕೆಲಸವಲ್ಲವೆಂಬುದು ನಿಜ. ಅಸಹ್ಯ ಅನುಭವಗಳ ಬಗೆಗೆ ಮನನ ಮಾಡುವದಾಗಲೀ ಪರರಿಗೆ ಅವುಗಳನ್ನು ಪದೇ ಪದೇ ವಿವರಿಸುವದಾಗಲೀ ಅಗ್ರಾಹ್ಯ.

ಕ್ರಿಕೆಟ್ ಆಯ್ಕೆದಾರರ ಅರ್ಥಹೀನ ಆಟ!



ದ್ರಾವಿಡ್ : ಸಚಿನ್ ಸಂಚಿಗೆ ಬಲಿ?

ಇತ್ತೀಚೆಗೆ ಭಾರತೀಯ ಕ್ರಿಕೆಟ್‌ನಲ್ಲೊಂದು ಅಪರೂಪದ ಘಟನೆ. ಅದು ಢಾಕಾದಲ್ಲಿ ಪಾಕ್ ಎದುರು ಸ್ಮರಣೀಯ ಗೆಲುವು ದಾಖಲು ಮಾಡಿ 'ಸ್ವಾತಂತ್ರ್ಯೋತ್ಸವ ಕಪ್' ಬಾಚಿಕೊಂಡಿದ್ದಲ್ಲ. ಪಾಕ್ ಮೇಲೆ ಗೆಲುವು ಇದೇ ಮೊದಲ ಸಲವಲ್ಲ. ಅಪರೂಪದ್ದಾದರೂ ಈ ಹಿಂದೆಯೂ ಇಂತಹ ಗೆಲುವು ಬಂದಿಲ್ಲವೆಂದಲ್ಲ. ಆದರೆ ಈ ಘಟನೆ ಮಾತ್ರ ಹಿಂದೆಂದೂ ನಡೆಯದಂತಹುದು. ನಿಜ, ಅದೆಂದರೆ ಇತ್ತೀಚೆಗೆ ಪ್ರಕಟಿಸಲ್ಪಟ್ಟ ಭಾರತೀಯ 'ಎ' ತಂಡದ ಆಯ್ಕೆಯ ಕುರಿತಂತೆ ಬ್ರಿಜೇಶ್ ಪಟೇಲ್ ಸಹಿತ ದಕ್ಷಿಣ ವಲಯದ ಮೂವರು ಪ್ರತಿನಿಧಿಗಳು ಮುಕ್ತವಾಗಿ ಟೀಕಿಸಿದ್ದು.

ಪಾಕಿಸ್ತಾನದ ಪ್ರವಾಸಕ್ಕೆ ಪ್ರಕಟಿತ ಭಾರತ 'ಎ' ತಂಡದಲ್ಲಿ ಎಸ್.ಶರತ್, ಅಮೋಲ ಮುಜುಂದಾರ, ಸುನಿಲ್ ಜೋಶಿ, ಅಬೆ ಕುರುವಿಲ್ಲಾ, ದೊಡ್ಡ ಗಣೇಶ, ಡೇವಿಡ್ ಜಾನ್ಸ್‌ರಂತಹ ಯಾವ ಪ್ರಮುಖ ಹೆಸರುಗಳೂ ಇಲ್ಲದಿರುವುದು ಆಟಗಾರರ ಆಯ್ಕೆ ಕೇವಲ 'ವಶೀಲಿ' ಮೇಲೆ ನಡೆದಿದೆ ಎಂಬ ಸಂಶಯಕ್ಕೆ ಎಡೆ ಮಾಡಿ ಕೊಟ್ಟಿರುವುದು ಸುಳ್ಳಲ್ಲ.

ಈ ಪ್ರತಿಭಾವಂತ ಆಟಗಾರರಿಗಾಗಿರುವ ಅನ್ಯಾಯವನ್ನು ದಾಖಲಿಸಿರುವ ಬ್ರಿಜೇಶ್, ತಮಿಳುನಾಡಿನ ವಿ.ವಿ.ಕುಮಾರ್ ಹಾಗೂ ಕೇರಳದ ಜಿ.ಕೆ.ರಾಮದಾಸ ಅವರು ತಮಗೆ ಬರೆದಿರುವ ಪತ್ರವನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ರಾಜಸಿಂಗ್ ಡುಂಗರ್‌ಪುರ ತೀರ ಹಗುರವಾಗಿ ಪರಿಗಣಿಸಿದ್ದು ನಿಜಕ್ಕೂ ಖೇದದ ಸಂಗತಿಯೇ.

ಆದರೆ ಒಂದು ಮಾತನ್ನು ತಳ್ಳಿಹಾಕುವಂತಿಲ್ಲ. ಅದು ಮುಂಬೈ ರಣಜಿ ತಂಡವನ್ನು ಎಷ್ಟರ ಮಟ್ಟಿಗೆ ದೃಷ್ಟಿಯಲ್ಲಿಟ್ಟುಕೊಂಡು ಭಾರತ 'ಎ' ತಂಡವನ್ನು ಆಯ್ಕೆ ಮಾಡಲಾಯಿತೆನ್ನುವುದು. ಭಾರತೀಯ ತಂಡದಲ್ಲಿ ಇತ್ತೀಚಿನವರೆಗೂ ಆಡಿದ್ದ ಅಬೆ ಕುರುವಿಲ್ಲಾ ಹಾಗೂ ಸೌರವಗಂಗೂಲಿ ಹಾಗೂ ರಾಹುಲ ದ್ರಾವಿಡ ರಂಗಪ್ರವೇಶ ಮಾಡುವ ವರೆಗೂ ಸಚಿನ್ 'ಉತ್ತರಾಧಿಕಾರಿ' ಎಂದೇ ಸುದ್ದಿ ಮಾಡಿದ್ದ ಅಮೋಲ್ ಮುಜುಂದಾರ ಅವರಿಬ್ಬರನ್ನೂ ಭಾರತ 'ಎ' ತಂಡಕ್ಕೆ ಆಯ್ಕೆ ಮಾಡಿದ್ದೇ ಆದರೆ ಮುಂಬೈ ರಣಜಿ ತಂಡ ದುರ್ಬಲವಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಮೇಲಾಗಿ ಪಾಕ್ ಪ್ರವಾಸಕ್ಕೆ ಭಾರತದ ಬಲಿಷ್ಠ ತಂಡವನ್ನೇ ಕಳುಹಿಸಬೇಕೆಂದಿದ್ದರೆ ಇವರಿಬ್ಬರ ಅನುಭವದ ಅವಶ್ಯಕತೆ ತಂಡಕ್ಕೆ ಇದ್ದೇ ಇತ್ತು. ಮೇಲಾಗಿ ಇವರಿಬ್ಬರೂ ಉತ್ತಮ 'ಫಾರಂ' ನಲ್ಲೂ ಇದ್ದಾರೆ. ಇವೆಲ್ಲವುಗಳ ಹಿನ್ನೆಲೆಯಲ್ಲೂ ಅವರನ್ನು ಭಾರತ 'ಎ' ತಂಡದಿಂದ ಕೈಬಿಟ್ಟಿದ್ದು 'ಮುಂಬೈ ಲಾಬಿ'ಯ ಪ್ರಭಾವದಿಂದಲೇ ಎಂದೆನ್ನೋಣವೇ?

ತಂಡದ ಆಯ್ಕೆಯ ಸಂದರ್ಭದಲ್ಲಿ ಆಯ್ಕೆದಾರರು ಏನನ್ನು ಅಳತೆಗೋಲನ್ನಾಗಿ ತೆಗೆದುಕೊಳ್ಳುತ್ತಾರೆ ಎನ್ನುವುದು ಕೆಲವೊಮ್ಮೆ ಅವರಿಗೇ ಗೊತ್ತಿರುತ್ತದೋ ಇಲ್ಲವೋ ಎಂಬ ಸಂಶಯಕ್ಕೆ ಎಡೆಮಾಡಿಕೊಡದಿರದು. ಇದಕ್ಕೆ ತೀರ ಇತ್ತೀಚಿನ ಹಾಗೂ ಅತ್ಯುತ್ತಮ ನಿದರ್ಶನವೆಂದರೆ ರಾಷ್ಟ್ರೀಯ ತಂಡದಿಂದ ರಾಹುಲ್‌ದ್ರಾವಿಡರಿಗೆ ನೀಡಿರುವ 'ಖೋ'. ಟೆಸ್ಟ್ ಹಾಗೂ ಏಕದಿನ ಪಂದ್ಯಗಳೆರಡರಲ್ಲೂ ಕಳೆದ ಕ್ಯಾಲೆಂಡರ್ ವರ್ಷವೊಂದರಲ್ಲೇ ೯೦೦ಕ್ಕೂ ಅಧಿಕ ಓಟ ಪೇರಿಸಿ ವರ್ಷದ ಕ್ರಿಕೆಟ್ಟಿಗನ ಪ್ರಶಸ್ತಿಯನ್ನು ಬಾಚಿಕೊಂಡ ರಾಹುಲ್‌ರನ್ನು ತಂಡದಿಂದ ಏಕಾಏಕಿ ಕೈಬಿಟ್ಟಿದ್ದು ಅಸಮರ್ಥನೀಯವೆ.

ರಾಹುಲ್ 'ಸಚಿನ್ ಶೈಲಿ'ಯ ಬ್ಯಾಟ್ಸ್‌ಮನ್ ಅಲ್ಲವಾದರೂ ವಿಕೆಟ್ ಮೇಲೆ ಕುದುರಿಕೊಳ್ಳಲು ಬಹಳಷ್ಟು ಸಮಯ ತೆಗೆದುಕೊಳ್ಳುತ್ತಾರೆ. ಆಟದ ವೇಗವನ್ನೇ ಕುಂಠಿತಗೊಳಿಸುತ್ತಾರೆ ಎಂದೆಲ್ಲ ಆಯ್ಕೆ ಸಮಿತಿ ಅವರ ಬಗ್ಗೆ ನುಡಿದಿರುವುದು ಒಪ್ಪಿಕೊಳ್ಳತಕ್ಕ ಮಾತೇ ಅಲ್ಲ. ಇಂದು ಸಚಿನ್-ಅಜರ್-ಸೌರವ್ ಆಡಿದರೇ ಆಟ, ಇಲ್ಲದಿದ್ದರೆ ಕುಸಿತವೇ ಕುಸಿತ ಎನ್ನುವಂತಿರುವ ನಮ್ಮ ಬ್ಯಾಟಿಂಗ್ ಕ್ರಮಾಂಕಕ್ಕೆ ಸಧೃಢತೆ ತಂದುಕೊಟ್ಟವರೇ ರಾಹುಲ್ ಎನ್ನುವುದನ್ನು ಆಯ್ಕೆ ಸಮಿತಿ ಎಂದೂ ಮರೆಯಬಾರದು. ಅತಿಯಾಗಿ ನಿಧಾನವಾಗಿ ಆಡಿ ತಂಡದ ಗೆಲುವಿಗೆ ಅಡ್ಡಗಾಲು ಹಾಕಿದ ಒಂದಿಬ್ಬರು ಆಟಗಾರರು ಆಯ್ಕೆ ಸಮಿತಿ ಈ ಹಿಂದೆಯೂ ಶಿಕ್ಷಿಸಿದ್ದಿದೆ. ಆದರೆ ಅಂತಹ 'ಅಪರಾಧ' ಯಾವುವನ್ನೂ ಮಾಡದ ರಾಹುಲ್ ಈ ರೀತಿ ಒಂದಲ್ಲ, ಎರಡೆರಡು ಸರಣಿಯ ಆಯ್ಕೆಗೆ ಪರಿಗಣಿಸದೇ ಇರುವುದು. "ದಾಲ್ ಮೆ ಕುಛ್ ಕಾಲಾ ಹೈ" ಎನ್ನುವಂತೆ ಬೇರೊಂದು ಲೆಕ್ಕಾಚಾರಕ್ಕೆ ಎಡೆಮಾಡಿಕೊಡದೇ ಇರದು.

ಆದರೆ ಒಂದು ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳಲೇ ಬೇಕಾಗುತ್ತದೆ. ಅದು ಪ್ರಾರಂಭದಿಂದಲೂ ಆಯ್ಕೆ ಸಮಿತಿ ರಾಹುಲ್ ದ್ರಾವಿಡರನ್ನು ನಡೆಸಿಕೊಂಡ ರೀತಿ. ಅವರನ್ನು ಎಂದೂ ಖಾಯಂ ಆಗಿ ಒಂದೇ ಕ್ರಮಾಂಕದಲ್ಲಿ ಆಡಿಸದ ಅಪರಾಧಕ್ಕೆ ಅದು ಒಳಪಡದೇ ಇರದು. ಸಚಿನ್ ಆಟದ 'ಸ್ಪರ್ಶ' ಕಳೆದುಕೊಂಡವರಂತೆ ಕಂಡು ಬಂದಾಗ, ಅವರ ಬ್ಯಾಟಿನಿಂದ ಓಟಗಳ ಹರಿವು ಬಂದ್ ಆದಾಗ, ರಾಹುಲ್‌ರನ್ನು 'ಫುಟ್ಬಾಲ್' ಮಾಡಿ ಸಚಿನ್‌ರಿಗೆ ಬೇಕುಬೇಕಾದಂತೆ ಬ್ಯಾಟಿಂಗ್ ಕ್ರಮಾಂಕ ನೀಡಲಾಗಿದ್ದನ್ನು ಯಾರೂ

○ ವಸಂತ ಮುರ್ಡೇಶ್ವರ


ಮರೆತಿರಲಾರರು. ಒಂದು ದಿನ ಮೂರನೇ ಕ್ರಮಾಂಕದಲ್ಲಿ ಆಡಿದ ಈ ಕನ್ನಡಿಗ ಮೂರನೇ ದಿನ ನಾಲ್ಕನೇ, ಇನ್ನೊಂದು ದಿನ ಎರಡನೇ ಮಗದೊಂದುದಿನ ಆರನೇ ಕ್ರಮಾಂಕದಲ್ಲಿ ಆಟಕ್ಕಿಳಿಯಬೇಕಾಯಿತು. ಆದರೆ ಇವೆಲ್ಲ 'ಕಿರಿಕಿರಿ'ಗಳನ್ನು ಮೀರಿನಿಂತ ರಾಹುಲ್ ಇಡೀ ವಿಶ್ವವೇ ಮೂಗಿನ ಮೇಲೆ ಬೆರಳಿಡುವಂತೆ ಸೊಗಸಾದ ಆಟ ಪ್ರದರ್ಶಿಸಿದರು. ಅವರ ಈ ಆಟ ಆಯ್ಕೆದಾರರಿಗೇ 'ಕಿರಿಕಿರಿ' ಉಂಟು ಮಾಡಿದ್ದರೆ ಅಚ್ಚರಿಯಿಲ್ಲ! ಆ ಕಾರಣದಿಂದಲೇ ಸೌರವ್‌ರೊಂದಿಗೆ 'ಭಾರತದ ಭವಿಷ್ಯದ ಬ್ಯಾಟಿಂಗ್ ಆಧಾರಸ್ತಂಭ' ಎಂದು ಗುರುತಿಸಲ್ಪಟ್ಟರೂ, ತಂಡದಿಂದಲೇ ಹೊರಗೆಸೆಯಲ್ಪಟ್ಟರು.

ಸಾಧನೆಯ ಮೇಲೇ ಆಯ್ಕೆ ನಡೆದಿದ್ದಾದರೆ ಹೈದರಾಬಾದ್‌ನ ವಿ.ವಿ.ಎಸ್. ಲಕ್ಷ್ಮಣರಿಗೂ ತಂಡದಲ್ಲಿ ಸ್ಥಾನ ಸಿಗಲೇಬಾರದಾಗಿತ್ತು. ಆದರೆ ಹಾಗಾಗಲಿಲ್ಲ. ಲಕ್ಷ್ಮಣ ತಮ್ಮ ಸಾಮರ್ಥ್ಯ ಸಿದ್ಧಪಡಿಸದಿದ್ದರೂ ತಂಡದಲ್ಲಿ ಉಳಿದರು. ಅದನ್ನು ಸಿದ್ಧಪಡಿಸಿದ ತಪ್ಪಿಗೋ ಎನ್ನುವಂತೆ ರಾಹುಲ್ ಆಯ್ಕೆದಾರರ 'ಕಾಕದೃಷ್ಟಿ'ಗೆ ಗುರಿಯಾದರು. ಇದೇ ಮಾತನ್ನು ತಂಡದ ಉಪನಾಯಕರ ಸ್ಥಾನಕ್ಕೂ 'ಬಡ್ತಿ' ಪಡೆದಿರುವ ಅಜಯ ಜಡೇಜಾರ ಬಗ್ಗೆ ಹೇಳಲೇಬೇಕಾಗುತ್ತದೆ.

ತಮಗೆ ದೊರೆತಿದ್ದ ತಂಪು ಪಾನೀಯದ ಜಾಹೀರಾತೊಂದು ಕೈತಪ್ಪಿ ರಾಹುಲ್‌ರಿಗೆ ದೊರೆತಿದ್ದುದರಿಂದ ಸಚಿನ್‌ರೇ ಅವರನ್ನು ತಂಡದಿಂದ ಹೊರಹಾಕಿಸಿದ್ದಾರೆಂದು ಓಣಿಗಳಲ್ಲಿ ಟೆನಿಸ್‌ಬಾಲ್ ಎದುರು ಬೇಕಾಬಿಟ್ಟಿ ಬ್ಯಾಟ್‌ಬೀಸುವ ಚಿಣ್ಣರು ಹೇಳುವುದನ್ನು ಕೇಳಿದ್ದೇವೆ. ಇದು ಆ ಚಿಣ್ಣರ ತಪ್ಪಲ್ಲ. ಅವರು ಆ ರೀತಿ ಕಾಲ್ಪನಿಕ ಕಥೆ ಕಟ್ಟುವಂತೆ ಆಟಗಾರರನ್ನು ಆರಿಸುವ ನಮ್ಮ ಐವರು 'ಮೇಧಾವಿ'ಗಳಿಗೆ ಈ ಹಿರಿಮೆ ಸಲ್ಲಬೇಕು. ಒಂದು ಸರಣಿಗೆ ಆಯ್ಕೆ ಮಾಡುವಾಗ ಓರ್ವ ಆಟಗಾರನ ಬಗ್ಗೆ ''ಅವರಿಗೆ ನೀಡಿದ ಅವಕಾಶದಲ್ಲಿ ಸಾಕಷ್ಟನ್ನು ಸಾಧಿಸಿಲ್ಲ'' ಎಂದು ಕಾರಣ ಹೇಳುವ ಆಯ್ಕೆ ಸಮಿತಿ ಅಧ್ಯಕ್ಷ ಮುಂದಿನ ಸಲ ಆತನ ಹೆಸರು ಆಯ್ಕೆಯಾದವರ ಪಟ್ಟಿಯಲ್ಲಿದ್ದಾಗ, ಅದೇ ಆಟಗಾರನ ಬಗ್ಗೆ ''ಇವರಿಗೆ ಸಾಕಷ್ಟು ಅವಕಾಶ ದೊರೆತಿಲ್ಲ. ಸಿಕ್ಕಿದ್ದರಲ್ಲೇ ಉತ್ತಮ ಪ್ರದರ್ಶನ ನೀಡಿದ್ದಾರೆ'' ಎಂದು ಸಮಜಾಯಿಸಿಕೊಳ್ಳುವುದು ಎಂತಹ ವಿಪರ್ಯಾಸದ ವಿಷಯ!

ಭಾರತೀಯ ಆಯ್ಕೆ ಸಮಿತಿ ತನ್ನ ಜವಾಬ್ದಾರಿಯನ್ನರಿತುಕೊಳ್ಳಬೇಕಾದ್ದು ಇಂದಿನ ಅವಶ್ಯಕತೆಯೆಂದರೆ ಉತ್ಪ್ರೇಕ್ಷೆಯಾಗಲಾರದು. ಆಯ್ಕೆದಾರರು ತಮ್ಮ ರಾಜ್ಯ ವಲಯಗಳ ಸೀಮೆ ಮೀರಿ ರಾಷ್ಟ್ರೀಯ ತಂಡದ ಸಾಧನೆಯೊಂದನ್ನೇ ಗುರಿಯಾಗಿರಿಸಿಕೊಂಡಲ್ಲಿ ಕಳೆದ ಕೆಲವು ಸಮಯದಿಂದ ಅದು ಕಳೆದುಕೊಂಡಿರುವ ಕ್ರಿಕೆಟ್ ಪ್ರಿಯರ ಆತ್ಮವಿಶ್ವಾಸ, ಗೌರವವನ್ನು ಅದು ಮರಳಿ ಪಡೆದೀತು. ಇಲ್ಲವಾದಲ್ಲಿ ಹಿಂದೊಮ್ಮೆ ಮೋಹಿಂದರ್ ಅಮರನಾಥ ನುಡಿದಿದ್ದಂತೆ ಅದೊಂದು 'ಜೋಕರ್'ಗಳ ಗುಂಪಿನ ಹೊರತು ಇನ್ನೇನೂ ಆಗಲಾರದು.

ಪದಬಂಧ - ೩



ಪದಬಂಧ ೨೮ ಸರಿಯುತ್ತರ

ಎಡದಿಂದ ಬಲಕ್ಕೆ:

೧. ನಾಗರಹಾವು, ೪. ಕಾಮನಬಿಲ್ಲು, ೭. ಮಯೂರಿ, ೯. ಗಡಗಿ, ೧೦. ಆನೆ, ೧೧. ಸುರಸುಂದರ, ೧೪. ತ್ರಿಬ, ೧೬. ರವ, ೧೮. ಜಲಜನಕ, ೨೧. ಜಕು, ೨೨. ನಯನ, ೨೩. ನಮನ, ೨೪. ರಣಕಹಳೆ, ೨೫. ಅಸಮಾನತೆ.

ಮೇಲಿನಿಂದ ಕೆಳಕ್ಕೆ :

೨. ಗಚ್ಚಿನಮನೆ, ೩. ಹಾಡಿಹರಿಸು, ೫. ಮಹಾನಗರ, ೬. ಬಿನ್ನಾಣಗಿತ್ತಿ, ೮. ಕಸುಂ, ೧೦. ಆಚಾರ, ೧೨. ರಮಲ, ೧೩. ದಹನ, ೧೫. ಬದುಕು, ೧೭. ವನಪಯಣ, ೧೮. ಜನ ಸಮೂಹ, ೧೯. ಜಲ, ೨೦. ಕನಕದಾಸ, ೨೧. ಜನಜೀವನ.

ಎಡದಿಂದ ಬಲಕ್ಕೆ

೧. ಅವತಾರ ಪುರುಷನಂತೆ ಹಿತಮಿತವಾಗಿ ಮಾತನಾಡುವ ಮದುವೆಯಾಗದ ಗಂಡು .... (೫)
೪. ತರುಣರಲ್ಲಿ ಗುರುತಿಸಬಹುದಾದಂಥ ಪ್ರತಿಭಾವಂತತನ......... (೫)
೭. ಗಾಯಕರು ಹಾಡಿದ ರಾಗಮಾಲಿಕೆ ತಿರುಗಿದೆ.................... (೩)
೯. ಚಾಲಾಕುತನ ನೌಕರ ಮಾಡಿದ ಕೆಲಸ .... (೩)
೧೦. ಕತ್ತಲಲ್ಲಿ ಪ್ರತಿದಿನ ಕಳವು ಮಾಡು................................ (೨)
೧೧. ಅರಚುವ ಜನರ ನಡುವೆ ಕುಳಿತರೂ ಸುಂದರವಾಗಿ ಹಾಡು, ಕಥೆ ಬರೆಯುವವ .... (೫)
೧೪. ಸುಲಕ್ಷಣವಾಗಿ ಕಾಣುವ ತನಯ................................ (೨)
೧೬. ಜರಡಿಯಿಂದ ಹೊಡಿ ಎಂದಾಗ ತಿರುಗಿದೆ....................... (೨)
೧೮. ನವದ ನಡುವೆ ಬಂದ ರಕ್ತನಾಳ ಹೊಂದಿದ ಮನುಷ್ಯ............ (೫)
೨೧. ಕರದಲ್ಲಿ ಹಣ ಕೊಟ್ಟು ಕೇಳಿದ ಶಕುನ............................ (೨)
೨೨. ನರಮನುಷ್ಯರು ವಾಸಿಸುವ ಶಹರು............................... (೩)
೨೩. ನಯವಿನಯಗಳನ್ನು ತೋರಿಸುವ ಕಣ್ಣು.......................... (೩)
೨೪. ಹನುಮಂತನಿಗೂ ಸರಿಹೋಗದ ದುಡ್ಡಿನ ತೊಂದರೆ............ (೫)
೨೫. ನೌಕರನಿಗೆ ಸಿಗದ ಸಪ್ತಾಹದ ಸೂಟಿ........................... (೫)

ಮೇಲಿನಿಂದ ಕೆಳಕ್ಕೆ

೨. ಬಹಳ ವಿಸ್ತಾರವಾದ, ಅಗಲವಾದ ಹೊಳೆ.......................... (೫)
೩. ಬಯಲು ನಾಟಕದಲ್ಲಿ ಹಿಂದಿನಿಂದ ಕಥೆ ಹಾಡು ಹೇಳುವವ.... (೫)
೫. ಅಪರೂಪಕ್ಕೆ ವಲ್ಲೆಯಂದರೂ, ಹೆಣ್ಣಿನವರು ಮದುವೆ ಗಂಡಿಗೆ ನೀಡಿದ ಕೊಡುಗೆ... (೫)
೬. ಅತಿಯಾದಾಗ ಪುರಸ್ಕಾರ ಮಾಡಲು ಬಂದವರಿಗೆ ಧಿಕ್ಕರಿಸು.... (೫)
೮. ಆನೆಯು ಬಯಸಿದ ಗೃಹ.. (೨)
೧೦. ಕದಡಿ ವನದಲ್ಲಿ ವಾಸಿಸುವ ಕಾಡು ಪ್ರಾಣಿ...................... (೩)
೧೨. ಮದುವೆಗೆ ಒಪ್ಪುವಂತೆ ಹಾಕಿದ ಹಂದರ......................... (೩)
೧೩. ಕಾಡು ಪ್ರಾಣಿಗಳಿಗೆ ಪ್ರಶಕ್ತವಾದ ಮಹಾ ಅರಣ್ಯ.............. (೩)
೧೫. ಅಂತಸ್ತಿನಿಂದ ಕುಣಿಯುತ ಬಂದ ಯುವತಿ...................... (೩)
೧೭. ಪ್ರಜೆಗಳ ಒಳಿತಿಗಾಗಿ ಮಾಡಿದ ಒಳ್ಳೆಯ ಕಾರ್ಯ............... (೫)
೧೮. ಪಾಪಿಷ್ಠರನ್ನು ಶಿಕ್ಷಿಸುವದಕ್ಕಾಗಿಯೇ ರಚಿಸಿದ, ಯಮನ ಜಗತ್ತು (೫)
೧೯. ಮಾವನು ಕಾಯ್ದುಕೊಂಡ ಮರ್ಯಾದೆ.......................... (೨)
೨೦. ಅರಸರು ಮಾಡುತ್ತಿದ್ದ ಅರಣ್ಯ ಸಂಚಾರ........................ (೫)
೨೧. ಕರದಲ್ಲಿ ಹಣವಿಲ್ಲದಿದ್ದರೂ ಮನಸ್ಸಿನಲ್ಲಿ ಎಣಿಕೆ ಮಾಡುವ ಆಶಾವಾದಿ.. (೫)

○ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಕಿಲಕಿಲ



ಯಶಸ್

ಕೂಪನ್ - ೧

ಮಗ್ಗಿ ಸ್ಪರ್ಧೆ

ಹೆಸರು : ....

ತಂದೆ : ....

ಅಂಚೆ ವಿಳಾಸ : ....

....

....

ಶಾಲೆ : ....

ತರಗತಿ : ....

ಈ ವಿದ್ಯಾರ್ಥಿ......................ರಿಂದ ....ರ ವರೆಗೆ ಮಗ್ಗಿ ಕಲಿತಿದ್ದಾನೆ/ಳೆ ಎಂದು ದೃಢೀಕರಿಸುತ್ತೇನೆ.

ಮುಖ್ಯೋಪಾಧ್ಯಾಯರ ಸಹಿ - ಸೀಲು

ಸ್ಪರ್ಧೆಯ ವಿವರ

ಇದೊಂದು ವಿನೂತನ ಸ್ಪರ್ಧೆ. ಗಣಿತದ ಆಧಾರಸ್ತಂಭವಾದ ಮಗ್ಗಿ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸುವುದು ಈ ಸ್ಪರ್ಧೆಯ ಉದ್ದೇಶ. ೧೫ ವರ್ಷದೊಳಗಿನ ಎಲ್ಲಾ ಮಕ್ಕಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ೧ರಿಂದ ೧೦ರ ವರೆಗಿನ ಮಗ್ಗಿಯನ್ನು ನೀವು ಕಲಿತರೆ ನಿಮಗೆ ಒಂದು ತಿಂಗಳು 'ಬಿಸಿಲ ಬದುಕು' ಮಾಸಪತ್ರಿಕೆಯನ್ನು ಬಹುಮಾನವಾಗಿ ಕಳಿಸಲಾಗುವುದು. ೧ರಿಂದ ೨೦ರ ವರೆಗೆ ಮಗ್ಗಿ ಕಲಿತರೆನಿಮಗೆ ೨ ತಿಂಗಳು 'ಬಿಸಿಲ ಬದುಕು' ಮಾಸಿಕ ಕಳಿಸಲಾಗುವುದು.

ನೀವು ಮಾಡಬೇಕಾದುದು :


ಮೇಲಿನ ಮಗ್ಗಿ ಸ್ಪರ್ಧೆ ಕೂಪನ್-೧ನ್ನು ಭರ್ತಿ ಮಾಡಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮಾಡಿಸಿ ನಮಗೆ ಕಳಿಸಿಕೊಡಿ.

ಉದ್ರಿ

'ರಾಣೀ ರಾಣೀ ಕೊಡಿಸಿದರಾರು
ಚಂದದ ಬಣ್ಣದ ಸೀರೆ
ಬಗಲಿಗೆ ಹಾಕಿದ ವೆನಿಟಿ ಬ್ಯಾಗನು
ಕಪ್ಪು ಕನ್ನಡಕ ಬೇರೆ'

'ಕೊಡಿಸುವರಾರು ಉದ್ರಿ ತಂದೆನು
ನಿಮ್ಮಯ ಹೆಸರಿಗೆ ಬರೆಸಿ
ಇಂದೇ ಉಡುತಲಿ ಹೊರಟೆನು ಹೊರಗೆ
ತಿಂಗಳೆ ಆಯಿತು ತರಿಸಿ'

- 'ಶಿಶು' ಸಂಗಮೇಶ, ವಿಜಾಪುರ



ಹತ್ತು ಸಾವಿರ ರೂಪಾಯಿ ಸಿಕ್ಕರೆ...

ಪ್ರಾಮಾಣಿಕತೆ

ನಾನು ಶಾಲೆಗೆ ಹೋಗುವಾಗ ದಾರಿಯಲ್ಲಿ ನನಗೆ "ಹತ್ತು ಸಾವಿರ ರೂಪಾಯಿ ಸಿಕ್ಕರೆ" ನಾನು ಒಂದು ಕ್ಷಣ ನಿಂತು ಯೋಚಿಸುತ್ತೇನೆ. ಏನೆಂದರೆ ಇದು ಯಾರ ಹಣವೋ ಏನೋ? ಒಂದು ವೇಳೆ ನಾವೇನಾದರೂ ಈ ಹಣವನ್ನು ಕಳೆದುಕೊಂಡಿದ್ದರೆ ನಮಗೆ ಎಷ್ಟು ಪಶ್ಚಾತ್ತಾಪವಾಗುತ್ತಿತ್ತು ಹಾಗೇ ಅವರಿಗೂ ಕೂಡ ಎಂದು ಮೌನವಾಗಿ ಯೋಚಿಸಿ ಅದನ್ನು ತೆಗೆದುಕೊಂಡು ಹೋಗಿ ಶಾಲೆಯ ಮುಖ್ಯೋಪಾಧ್ಯಾಯರ ಹತ್ತಿರ ಅದನ್ನು ಕೊಟ್ಟು "ದಯವಿಟ್ಟು ಇದನ್ನು ಕಳೆದುಕೊಂಡವರಿಗೆ ಹೇಗಾದರೂ ತಲುಪಿಸಿರೆಂದು" ಕೇಳಿಕೊಳ್ಳುತ್ತೇನೆ. ಮುಖ್ಯೋಪಾಧ್ಯಾಯರು ಕೂಡಲೇ ಅದನ್ನು ದಿನಪತ್ರಿಕೆಗೆ ಹಾಕಿಸಿ ಸೂಕ್ತ ಮಾಹಿತಿ ಒದಗಿಸಿದವರಿಗೆ ಅದನ್ನು ತಲುಪುವಂತೆ ಮಾಡುತ್ತಾರೆ. ಹಣ ಕಳೆದುಕೊಂಡವರು ಮರಳಿ ತಮ್ಮ ಹಣವನ್ನು ಪಡೆದು ಸಂತೋಷಗೊಂಡು, ನನ್ನ ಪ್ರಾಮಾಣಿಕತೆಗೆ ಮೆಚ್ಚಿ ನನ್ನನ್ನು ಅಭಿನಂದಿಸುತ್ತಾರೆ ಎಂದು ತಿಳಿಯುತ್ತೇನೆ.

- ಶ್ವೇತಾ ನಾಯಕ್, (೭ನೇ ತರಗತಿ)
ಶಿವಮೊಗ್ಗ

ದತ್ತಿನಿಧಿ

ನಾನು ಶಾಲೆಗೆ ಹೋಗುವಾಗ "ಹತ್ತು ಸಾವಿರ ರೂಪಾಯಿಗಳು ಸಿಕ್ಕರೆ" ನಾನು, ಶಾಲೆಯಲ್ಲಿ ಗುರುಗಳಿಗೆ ದುಡ್ಡು ಸಿಕ್ಕ ಬಗ್ಗೆ ತಿಳಿಸಿ ಮನೆಗೆ ಬಂದು ಅಪ್ಪನ ಹತ್ತಿರ ಹೇಳಿ, ಕನ್ನಡ ಸಾಹಿತ್ಯ ಪರಿಷತ್‌ಗೆ, ದತ್ತಿನಿಧಿಯಾಗಿ ಕೊಡಿಸುವೆ. ಏಕೆಂದರೆ ನನಗೆ ಕನ್ನಡ ಭಾಷೆಯ ಮೇಲೆ ಅಪಾರವಾದ ಅಭಿಮಾನವಿದೆ. ಇಷ್ಟು ಚಿಕ್ಕ ಹುಡುಗಿ ಸಿಕ್ಕ ದುಡ್ಡನ್ನು ದತ್ತಿನಿಧಿಯಾಗಿ ಕೊಟ್ಟ ಪ್ರಸಂಗವನ್ನು ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ನನ್ನ ಹೆಸರು ಮತ್ತು ಭಾವಚಿತ್ರ ಪ್ರಕಟವಾದಾಗ ನನಗೆ ಎಲ್ಲಿಲ್ಲದ ಸಂತೋಷವಾಗುತ್ತದೆ.

- ಜಿ.ಎಂ. ರೇಷ್ಮಾ (೪ನೇ ತರಗತಿ)
ಶಾಮರಾಯನಪಾಳ್ಯ

ಆಜೀವ ಚಂದಾದಾರ

'ಬಿಸಿಲ ಬದುಕು' ಪತ್ರಿಕೆಯ ಚಂದಾದಾರನಾಗಲು ಬಹಳ ಆಸೆ. ಆದ್ದರಿಂದ ಸಿಕ್ಕಿದ ಎಲ್ಲಾ ಹಣವನ್ನು ಎಂ.ಓ. ಮೂಲಕ 'ಬದುಕು'ಗೆ ಕಳುಹಿಸಿ ಆಜೀವ ಚಂದಾದಾರನಾಗುವೆ.

- ಎಂ. ವೀರೇಶ (೮ನೇ ತರಗತಿ)
ಹೊಸಮೋಕಾ

ಆಟದ ಬಯಲನ್ನು ಖರೀದಿಸುವೆ

ನನಗೇನಾದರೂ ದಾರಿಯಲ್ಲಿ "ಹತ್ತು ಸಾವಿರ ರೂಪಾಯಿ ಸಿಕ್ಕರೆ" ನಾನು ಮೊದಲು ಮಾಡುವ ಕಾರ್ಯವೇನೆಂದರೆ ಒಂದು ದೊಡ್ಡ ಆಟದ ಬಯಲನ್ನು ಕೊಂಡುಕೊಂಡು ಅದರಲ್ಲಿ ಕ್ರಿಕೆಟ್, ಟೆನ್ನಿಸ್ ಮತ್ತಿತರ ಆಟಗಳನ್ನು ಆಡಲು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತೇನೆ ಹಾಗೂ 'ಬಿಸಿಲ ಬದುಕು' ಮಾಸ ಪತ್ರಿಕೆಯನ್ನು ಕೊಂಡುಕೊಂಡು ನನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳುತ್ತೇನೆ.

ನಾನು ಹೀಗೆ ಉಪಯುಕ್ತ ರೀತಿಯಲ್ಲಿ ಸಿಕ್ಕ ಹಣವನ್ನು ವ್ಯಯ ಮಾಡುತ್ತೇನೆ.

- ಪ್ರವೀಣಕುಮಾರ (೮ನೇ ತರಗತಿ),
ಮರಳಿ

ಪೊಲೀಸ್ ಠಾಣೆಗೆ

ನನಗೆ ಶಾಲೆಗೆ ಹೋಗುವಾಗ "ಹತ್ತು ಸಾವಿರ ರೂಪಾಯಿ ಸಿಕ್ಕರೆ" ನಾನು ಅದನ್ನು ತೆಗೆದುಕೊಂಡು ಬಡಮಕ್ಕಳಿಗೋ, ಅನಾಥ ಮಕ್ಕಳಿಗೋ ಹಂಚುತ್ತೇನೆ. ಇಲ್ಲದಿದ್ದರೆ ಅದನ್ನು ಪೊಲೀಸ್ ಠಾಣೆಗೆ ಒಪ್ಪಿಸುತ್ತೇನೆ.

- ಜಿ. ಟೀಪು (೮ನೇ ತರಗತಿ)
ಹನುಮಂತಾಪುರ

ಅಂಗವಿಕಲರಿಗೆ ದಾನ

ನನಗೆ "ಹತ್ತು ಸಾವಿರ ರೂಪಾಯಿ ಸಿಕ್ಕರೆ" ಪ್ರಾಮಾಣಿಕವಾಗಿ ದೀನ-ದಲಿತರಿಗೆ, ಅಂಗವಿಕಲರಿಗೆ, ಕಣ್ಣು ಇಲ್ಲದವರಿಗೆ, ಕಾಲು ಇಲ್ಲದವರಿಗೆ, ಕೈ ಇಲ್ಲದವರಿಗೆ, ಕಿವುಡರಿಗೆ ತೀರಾ ಹಣದ ಅಡಚಣೆ ಇರುವವರಿಗೆ, ದುಡಿಯುವುದಕ್ಕೆ ಸಾಮರ್ಥ್ಯ ಇಲ್ಲದವರಿಗೆ ಕೊಡುತ್ತೇನೆ.

- ಎಸ್. ಕೊಟ್ರೇಶ್ (೯ನೇ ತರಗತಿ)
ಜಿ. ಕೋಡಿಹಳ್ಳಿ

ಸೈಕಲ್ ಬೇಕು

ನನಗೆ "ಹತ್ತು ಸಾವಿರ ರೂಪಾಯಿ ಸಿಕ್ಕರೆ" ನಾನು ನನ್ನ ಚೀಲದಲ್ಲಿ ಹಾಕಿಕೊಂಡು ಅಪ್ಪನಿಗೆ ಕೊಡುತ್ತೇನೆ. ನನಗೆ ಒಂದು ಸೈಕಲ್ ಬೇಕು ಎಂದು ಹೇಳುತ್ತೇನೆ.

- ಸುಜನ ಹೊನ್ನಳ್ಳಿ (೩ನೇ ತರಗತಿ)
ಮೆಟ್ರಿ

ಬೆನ್ನು ತಟ್ಟಿಸಿಕೊಳ್ಳುವೆ

ನಾನು ದಾರಿಯಲ್ಲಿ ಹೋಗುವಾಗ ನನಗೆ ಬೇರೆಯವರ ವಸ್ತುವಾಗಲಿ, ಹಣವಾಗಲಿ ಸಿಕ್ಕರೆ ಅಂತವುಗಳನ್ನು ನಾನು ನೇರವಾಗಿ ನಮ್ಮ ಗುರುಗಳಿಗೆ ಮುಟ್ಟಿಸುತ್ತೇನೆ. ಕಾರಣ, ನಮ್ಮ ಗುರುಗಳು

ಮುಂದಿನ ತಿಂಗಳ ವಿಷಯ

ನನ್ನ ನೆಚ್ಚಿನ ಗೆಳೆಯ/ಗೆಳತಿ

ಪ್ರತಿಯೊಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಗೂ ಒಬ್ಬ ಆತ್ಮೀಯ ಗೆಳೆಯ/ಗೆಳತಿ ಇದ್ದೇ ಇರುತ್ತಾರೆ. ಮುಂದೆ ದೊಡ್ಡವರಾದ ಮೇಲೆ "ಚಡ್ಡಿ ದೋಸ್ತ್" ಅಂತ ನೆನೆಸಿಕೊಳ್ಳುವುದು ಇಂಥ ಸ್ನೇಹವನ್ನೇ. ನಿಮ್ಮ ಆತ್ಮೀಯ ಗೆಳೆಯ ಅಥವಾ ಗೆಳತಿ ಯಾರು? ಅವರಲ್ಲಿ ಅಂತಹ ವಿಶೇಷ ಏನಿದೆ? ಅವರು ನಿಮಗೇಕೆ ಆತ್ಮೀಯರು? ಈ ಬಗ್ಗೆ ಚುಟುಕಾಗಿ ಬರೆದು ಕಳಿಸಿ.

ಕಿಲಕಿಲ ಕೂಪನ್ ಇಲ್ಲ :

ಇನ್ನು ಮುಂದೆ ನೀವು ಈ ಅಂಕಣಕ್ಕೆ ಬರೆಯಲು ಕಿಲ ಕಿಲ ಕೂಪನ್ ಕಳಿಸುವ ಅಗತ್ಯವಿಲ್ಲ. ನಿಮ್ಮ ಶಾಲೆಯ ಉಪಾಧ್ಯಾಯರಿಂದ ನೀವು ಓದುತ್ತಿರುವ ತರಗತಿ ಬಗ್ಗೆ ದೃಢೀಕರಣ ಪತ್ರ ಪಡೆದು ನಿಮ್ಮ ಬರಹದೊಂದಿಗೆ ಕಳಿಸಿದರೆ ಸಾಕು. ನಿಮ್ಮ ಬರಹ ನಮಗೆ ತಲುಪಲು ಅಂತಿಮ ದಿನಾಂಕ : ೧-೩-೯೮.

ಸಂಪಾದಕರು, ಬಿಸಿಲ ಬದುಕು ಅಂಚೆ ಪೆಟ್ಟಿಗೆ ೭೯೫೧,
ಬಸವೇಶ್ವರನಗರ, ಬೆಂಗಳೂರು-೭೯.

ಹೇಳಿಕೊಡುವ ಹಿತನುಡಿಗಳಾದ ಸುಳ್ಳು ಹೇಳಬಾರದು, ಕಳ್ಳತನ ಮಾಡಬಾರದು, ಸಿಕ್ಕ ವಸ್ತುಗಳನ್ನು ಕಳೆದುಕೊಂಡವರಿಗೆ ಹಿಂತಿರುಗಿಸಬೇಕು ಎಂಬ ಹಿತನುಡಿಗಳನ್ನು ಅನುಸರಿಸುತ್ತ ನಾನು ನಮ್ಮ ಗುರುಗಳಿಂದ ತಂದೆ ತಾಯಿಗಳಿಂದ ಊರಿನ ಹಿರಿಯರಿಂದ ಬೆನ್ನು ತಟ್ಟಿಸಿಕೊಳ್ಳುತ್ತೇನೆ.

- ಎಂ. ಚನ್ನಕೇಶವ (೬ನೇ ತರಗತಿ)
ಬಾದನಹಟ್ಟಿ

ಭೂಕಂಪ ಪರಿಹಾರ ನಿಧಿ

ನನಗೆ ಏನಾದರೂ ಅದೃಷ್ಟವಶಾತ್ ಶಾಲೆಗೆ ಹೋಗುವ ಸಮಯದಲ್ಲಿ "ಹತ್ತುಸಾವಿರ ರೂ.ಗಳು ಸಿಕ್ಕರೆ" ನಾನು ಅದನ್ನು ಭದ್ರವಾಗಿ ಬ್ಯಾಗಿನಲ್ಲಿ ಇಟ್ಟುಕೊಂಡು ಯೋಚಿಸುತ್ತೇನೆ. ಪೋಲಿಸರ ಕೈಗೆ ಕೊಡುವುದೇ ಇಲ್ಲ ಯಾಕೆಂದ್ರ ಈಗಿನ ಪೊಲೀಸರ ಕರ್ತವ್ಯದ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ, ಅದನ್ನು ಕೆಲಭಾಗಗಳಾಗಿ ವಿಂಗಡಿಸಿ ನನ್ನ ವರ್ಗದಲ್ಲಿರುವ ಬಡ ಹುಡುಗರ ಅವಶ್ಯಕತೆಗಳನ್ನು ಪೂರೈಸುತ್ತೇನೆ. ಅನಂತರ ಇನ್ನು ಕೆಲ ದುಡ್ಡನ್ನು ತೆಗೆದುಕೊಂಡು ನಮ್ಮ ಶಾಲೆಯ ಗ್ರಂಥಾಲಯಕ್ಕೆ ಒಳ್ಳೆಯ ಕಥೆ ಪುಸ್ತಕಗಳನ್ನು ಕೊಡಿಸಿ ಆದರಿಂದ ಎಲ್ಲರಿಗೂ ಉಪಯೋಗವಾಗುವ ಕಾರ್ಯ ಮಾಡುವೆ. ಇನ್ನುಳಿದ ದುಡ್ಡಿನಿಂದ ಭಿಕ್ಷುಕರ ಪಾತ್ರೆಗೆ ನೀಡುವೆ. ಇದರಿಂದ ಅವರ ಒಂದು ದಿನದ ಹೊಟ್ಟೆಯಾದರೂ ತುಂಬಲಿ. ಆದಷ್ಟು ಅವರ ಕಷ್ಟ ನೀಗಿಸಲು ಪ್ರಯತ್ನ ಮಾಡುವೆ. ಒಂದು ವೇಳೆ ಇನ್ನು ದುಡ್ಡುಳಿದರೆ ನನ್ನ ಹತ್ತಿರ ಇಟ್ಟುಕೊಂಡು ಯಾವಾಗಾದರೂ ಭೂಕಂಪ, ಜ್ವಾಲಾಮುಖಿಗೆ ಪರಿಹಾರ ಕೊಡಲು ಪೇಪರ್‌ನಲ್ಲಿ ಬಂದರೆ ಆದರಲ್ಲುಳಿದ ದುಡ್ಡನ್ನು ಎಂ.ಓ. ಮಾಡಿ ಅವರಿಗೆ ನೀಡುವೆ.

- ವೀರೇಶ್ (೮ನೇ ತರಗತಿ)
ಮಸ್ಕಿ

ದೇವರ ಹುಂಡಿಗೆ ಹಾಕಲಾರೆ!

ನಾನು ಶಾಲೆಗೆ ಹೋಗುವಾಗ "ಹತ್ತು ಸಾವಿರ ರೂಪಾಯಿ ಸಿಕ್ಕರೆ" ಮೊದಲು ತುಂಬಾ ಸಂತೋಷವಾಗುತ್ತದೆ. ಆದರೆ ಅದೇ ಕ್ಷಣಕ್ಕೆ ದುಃಖವಾಗುತ್ತದೆ. ಅಯ್ಯೋ ಕಳೆದುಕೊಂಡವರು ಎಷ್ಟು ಹುಡುಕುತ್ತಿರಬಹುದು, ಅವರಿಗೆ ಎಷ್ಟು ಅವಶ್ಯವಿತ್ತೋ ಏನೋ? ಎಂದು ನೊಂದುಕೊಳ್ಳುತ್ತೇನೆ. ಅಲ್ಲಿಯೇ ಇದ್ದವರನ್ನು ತಮ್ಮ ದುಡ್ಡು ಏನಾದರೂ ಕಳೆದಿದೆಯೋ ಎಂದು ವಿಚಾರಿಸುತ್ತೇನೆ. ಇಲ್ಲದಿದ್ದರೆ ನಂತರ ಮನೆಗೆ ಹೋಗಿ ಅಪ್ಪ, ಅಮ್ಮನಿಗೆ ವಿಷಯ ತಿಳಿಸುತ್ತೇನೆ. ಅವರು ವಿಚಾರಿಸಿದಾಗಲೂ ಆ ಹಣ ಯಾರದೆಂದು ತಿಳಿಯದಿದ್ದರೆ ಅವರು ಅದನ್ನು ದೇವರ ಹುಂಡಿಗೆ ಹಾಕಲು ಹೇಳಿದರೆ, ನಾನು ಅದನ್ನು ಹುಂಡಿಗೆ ಹಾಕದೆ ಅಲ್ಲಿಯೇ ಹೊರಗೆ ಇದ್ದ ಭಿಕ್ಷುಕರಿಗೆ ತಲಾ ಇಂತಿಷ್ಟು ಎಂದು ಹಣವನ್ನು ಹಂಚುತ್ತೇನೆ. ಇದರಿಂದ ಅವರ ಉದರ ಪೋಷಣೆಯ ಚಿಂತೆ ಸ್ವಲ್ಪ ದಿನವಾದರೂ ಇಲ್ಲವಾಗುತ್ತದೆ.

ಇನ್ನೂ ಹಣ ಉಳಿದರೆ ನನ್ನ ಬಡ ಗೆಳೆಯರಿಗೆ ಪಾಠಿ, ಪುಸ್ತಕ, ಪೆನ್ಸಿಲ್ಲುಗಳನ್ನು ಕೊಂಡುಕೊಳ್ಳಲು ಹಣ ಕೊಡುತ್ತೇನೆ ಮತ್ತು ನನ್ನ ಕೆಲವು ವಸ್ತುಗಳನ್ನು ಕೊಂಡುಕೊಳ್ಳುತ್ತೇನೆ. ಆಗಲೂ ಹಣ ಉಳಿದರೆ ಅದನ್ನು ಮಕ್ಕಳಿಗಾಗಿ ಇರುವ ಬ್ಯಾಂಕಿನಲ್ಲಿ ಇಡುತ್ತೇನೆ. ಏಕೆಂದರೆ ಮುಂದೆ ಅದೇ ಹಣ ಯಾವುದಾದರೊಂದು ಒಳ್ಳೆಯ ಕೆಲಸಕ್ಕೆ ಉಪಯೋಗವಾಗಬಹುದು.

- ಸಚಿನ್ ವಿ. ಹಿಂಡಸಗೇರಿ (೪ನೇ ತರಗತಿ)
ಧಾರವಾಡ



ಅಂಚೆಯಲ್ಲಿ ಠೇವಣಿ

ಶಾಲೆಗೆ ಹೋಗುವಾಗ ದಾರಿಯಲ್ಲಿ ನನಗೆ ಹತ್ತು ಸಾವಿರ ರೂಪಾಯಿ ಸಿಕ್ಕರೆ ಎತ್ತಿಕೊಂಡು ಯಾರು ನೋಡುವಷ್ಟರಲ್ಲಿಯೇ ನನ್ನ ಬ್ಯಾಗ್‌ನಲ್ಲಿ ಹಾಕುತ್ತೇನೆ. ಅಷ್ಟೊಂದು ಹಣ ಏನು ಮಾಡಬೇಕು ಎಂದು ಯೋಚಿಸುತ್ತೇನೆ. ಆ ಹಣವನ್ನು ಶಾಲೆಯ ಟೀಚರ್‌ಗೆ ತೋರಿಸಿದರೆ ಇಷ್ಟೊಂದು ಹಣ ಎಲ್ಲಿಂದ ಕದ್ದೆ ಎಂದು ಅವಮಾನ ಮಾಡುತ್ತಾರೆ. ಅದನ್ನು ಸಹಿಸಲಾರದೆ ಮನೆಗೆ ತಂದು ತಾಯಿಗೆ ಕೊಟ್ಟರೆ ಅವಳು ಎಲ್ಲಿಂದ ಕದ್ದೆ ಇಷ್ಟೊಂದು ಹಣ ಎಂದು ಏಟು ಹಾಕುತ್ತಾಳೆ. ಹಾಗಾದರೆ ಏನು ಮಾಡೋದು ಎಂದು ಮತ್ತೆ ಯೋಚಿಸಲು ಪ್ರಾರಂಭಿಸುತ್ತೇನೆ.

ನಾನು ಆ ಎಲ್ಲಾ ಹಣವನ್ನೂ ಮನೆಗೆ ತಂದು ಯಾರಿಗೂ ತೋರಿಸದೆ ಹಾಗೆ ಇಟ್ಟುಕೊಳ್ಳುತ್ತೇನೆ. ಒಂದು ತಿಂಗಳಿಗೊಮ್ಮೆ ೩೦೦ ರೂಪಾಯಿ ಪೋಸ್ಟ್‌ನಲ್ಲಿ ಠೇವಣಿ ಇಡುತ್ತೇನೆ.

ಉಳಿದ ಸ್ವಲ್ಪ ಹಣ ಇಟ್ಟುಕೊಂಡು ಯಾವುದೇ ಜನರಲ್ ಪುಸ್ತಕಗಳು ಮತ್ತು ಶಾಲೆ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇನೆ.

- ಗೋಪಾಲರೆಡ್ಡಿ (೮ನೇ ತರಗತಿ)
ಕಾಡವಾದ (ಬೀದರ)

ಪ್ರಾಮಾಣಿಕವಾಗಿ ಪ್ರಯತ್ನಿಸುವೆ

ನಾನು ಶಾಲೆಗೆ ಹೋಗುವಾಗ ದಾರಿಯಲ್ಲಿ ಹತ್ತು ಸಾವಿರ ರೂಪಾಯಿ ಸಿಕ್ಕಿದರೆ ಏನು ಮಾಡಬಹುದು? ನಿಜ, ಇದರ ಬಗ್ಗೆ ನಾನು ತುಂಬಾ ಹೊತ್ತು ಯೋಚಿಸಿದೆ ಮತ್ತು ಅಪ್ಪ-ಅಮ್ಮ ಹಾಗೂ ಅಣ್ಣನಲ್ಲಿ ಚರ್ಚಿಸಿದೆ. ಕೊನೆಗೆ ನನಗೆ ಅನಿಸಿದ್ದು ಹೀಗೆ - ಇಷ್ಟು ದೊಡ್ಡ ಮೊತ್ತವನ್ನು ಕಳೆದುಕೊಂಡ ವ್ಯಕ್ತಿಗೆ ಎಷ್ಟು ಸಂಕಟವಾಗಿರಬಹುದೋ ಏನೋ? ಪಾಪ! ಆತ ಆ ಹಣವನ್ನು ಕಷ್ಟಪಟ್ಟು ಸಂಪಾದಿಸಿದ್ದಿರಬಹುದು, ಸಾಲಗಾರರಿಗೆ ಕೊಡುವಂತಹದ್ದಾಗಿರಬಹುದು ಅಥವಾ ಸಾಲ ಪಡೆದುಕೊಂಡದ್ದಾಗಿರಬಹುದು ಇತ್ಯಾದಿ. ಹೀಗಿದ್ದ ಪಕ್ಷ ಅಂಥಾ ಹಣವನ್ನು ನಾವು ನಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದು ಸರಿಯೇ? ನಮ್ಮಂತಹ ಮಕ್ಕಳು ಆ ರೀತಿಯಲ್ಲಿ ಯೋಚಿಸುವುದು ಕೂಡ ತಪ್ಪು. ಆದುದರಿಂದ ನಾನು ಹಣವನ್ನು ಕಳೆದುಕೊಂಡವರಿಗೇ ಪ್ರಾಮಾಣಿಕವಾಗಿ ಹಿಂದುರಿಗಿಸಲು ಪ್ರಯತ್ನಿಸುತ್ತೇನೆ.

- ಕೆ. ಸಂದೇಶ್ ಕುಮಾರ್ (೯ನೇ ತರಗತಿ)
ತಲ್ಲೂರು

ಕಲಾಕೇಂದ್ರ

ನನಗೆ ಎಲ್ಲಾ ಕಲಾಕ್ಷೇತ್ರದಲ್ಲೂ ಮುಂದೆ ಬರಬೇಕೆಂಬ ಆಸೆ. ಒಂದು ವೇಳೆ ನನಗೆ ಹತ್ತು ಸಾವಿರ ರೂಪಾಯಿ ಸಿಕ್ಕರೆ ನಾನು ನನ್ನ ತಂದೆಗೆ ಹೇಳಿ ಒಂದು ಕಲಾಕೇಂದ್ರವನ್ನು ತೆರೆಸುವೆ. ಏಕೆಂದರೆ ನನ್ನಂತೆಯೇ ಇರುವ ಬೇರೆ ವಿದ್ಯಾರ್ಥಿಗಳು ಕಲಾಕೇಂದ್ರದಲ್ಲಿ ಬಂದು ತಮ್ಮ ಕಲೆಯನ್ನು ವ್ಯಕ್ತಪಡಿಸಲು ಸಹಾಯವಾಗುತ್ತವೆ. ಆ ಕಲಾಕೇಂದ್ರದಲ್ಲಿ ವಿಜ್ಞಾನ, ನಾಟಕ ಕ್ಷೇತ್ರ, ಸಂಗೀತಲೋಕ, ಚಿತ್ರಕಲೆ ಮಾಧ್ಯಮ ಮತ್ತು ಒಂದು ಚಿಕ್ಕ ಗ್ರಂಥಾಲಯವನ್ನೂ ತೆಗೆಯುವೆ. ಅಲ್ಲಿ ತರುವ ಪುಸ್ತಕಗಳಲ್ಲಿ ''ಬಿಸಿಲ ಬದುಕು'' ಎಂಬ ಮಾಸ ಪತ್ರಿಕೆಯನ್ನು ತಪ್ಪದೇ ತರಿಸುವೆ. ಏಕೆಂದರೆ ಇದರಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅನೇಕ ವಿಷಯಗಳನ್ನು ಪ್ರಕಟಿಸಲಾಗಿರುತ್ತದೆ. ಒಬ್ಬ ವಿದ್ಯಾರ್ಥಿಯಲ್ಲಿ ಇರುವ ಕಲೆಯನ್ನು ಗುರುತಿಸಿ ಅದಕ್ಕೆ ಪ್ರೋತ್ಸಾಹ ಕೊಟ್ಟು, ಆ ವಿದ್ಯಾರ್ಥಿಯನ್ನು ಆ ಕ್ಷೇತ್ರದಲ್ಲಿ ಮುಂದೆ ತರಬೇಕೆಂಬುದೇ ನನ್ನ ಮಹಾದಾಸೆಯಾಗಿದೆ. ಏಕೆಂದರೆ ''ಇಂದಿನ ಮಕ್ಕಳೇ ನಾಳಿನ ಪ್ರಜೆಗಳು''.

ಆದ್ದರಿಂದ ಅವರಲ್ಲಿರುವ ಒಳ್ಳೆಯ ಗುಣಗಳನ್ನು ಗುರುತಿಸಿ ಬೆಳಕಿಗೆ ತರುವುದರಿಂದ ಅವರ ಭವಿಷ್ಯ ಉಜ್ವಲವಾಗಬಹುದು.

ನನಗೆ ಈ ''ಹತ್ತುಸಾವಿರ ರೂಪಾಯಿ ಸಿಕ್ಕರೆ'' ಖಂಡಿತವಾಗಿಯೂ ನಾನು ಒಂದು ''ಕಲಾ ಕೇಂದ್ರ''ವನ್ನು ತೆಗೆಸುವೆ.

- ಚಂದ್ರಿಕಾ ಆರ್.ಕೆ. (೧೦ನೇ ತರಗತಿ)
ಗುಲ್ಬರ್ಗಾ

ಯೂನಿಫಾರಂ

ಹಣ ಸಿಕ್ಕರೆ ನಾನು ತಕ್ಷಣ ತಂದೆ ತಾಯಿಗೆ ತಿಳಿಸುವುದಿಲ್ಲ. ನನ್ನ ಅಕ್ಕನೊಂದಿಗೆ ಬಟ್ಟೆ ಅಂಗಡಿಗೆ ಹೋಗಿ ಬಡ ಶಾಲಾ ಮಕ್ಕಳಿಗಾಗಿ ಯೂನಿಫಾರಂ ಕೊಂಡುಕೊಳ್ಳುತ್ತೇನೆ. ನಂತರ ನೋಟ್ ಪುಸ್ತಕಗಳನ್ನು ಖರೀದಿಸುವೆ. ಎಲ್ಲವನ್ನು ತೆಗೆದುಕೊಂಡು ನನ್ನ ತಂದೆ ಮುಖ್ಯೋಪಾಧ್ಯಾಯರಾಗಿರುವ ಶಾಲೆಗೆ ತೆರಳಿ ಮಕ್ಕಳಿಗೆ ಹಂಚುತ್ತೇನೆ.

- ನಿಯಲ್ ವಿನ್ಸೆಂಟ್ (೯ನೇ ತರಗತಿ)
ಕೊಳ್ಳೇಗಾಲ

ಅನಾಥಾಶ್ರಮಕ್ಕೆ

ಹತ್ತು ಸಾವಿರ ರೂಪಾಯಿ ಸಿಕ್ಕರೆ ಅದರಲ್ಲಿ ಅರ್ಧವನ್ನು ಮಕ್ಕಳ ಅನಾಥ ಆಶ್ರಮಕ್ಕೆ ಕೊಟ್ಟು ಉಳಿದುದನ್ನು ಬಡವರಿಗೆ, ಭಿಕ್ಷುಕರಿಗೆ, ಅಸಹಾಯಕರಿಗೆ ಹಂಚುತ್ತೇನೆ.

- ಅನಿಲ್‌ಕುಮಾರ ಕುಲಕರ್ಣಿ (೯ನೇ ತರಗತಿ)
ಹೊಸಪೇಟೆ

ಬ್ಯಾಂಕಿನಲ್ಲಿ ಠೇವಣಿ

ಸಿಕ್ಕ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿಯನ್ನು ಬಡ ಶಾಲಾ ವಿದ್ಯಾರ್ಥಿಗಳಿಗೆ ನೀಡುವೆ. ಇದು ಪರೋಕ್ಷವಾಗಿ ವಿದ್ಯಾದಾನ ಮಾಡಿದಂತೆ ಅಲ್ಲವೇ?

- ರಮೇಶ್ ಎಸ್. (೧೦ನೇ ತರಗತಿ)
ಮದ್ದೂರು

ಕಳೆದುಕೊಂಡವರಿಗೆ ಶೋಧ

ಹಣ ಕಳೆದುಕೊಂಡವರು ಹತ್ತಿರದಲ್ಲೆಲ್ಲಾದರೂ ಹುಡುಕುತ್ತಿದ್ದಾರೆಯೋ ಎಂದು ಗಮನಿಸುತ್ತೇನೆ. ಅವರು ಸಿಕ್ಕರೆ ಅವರ ದುಡ್ಡನ್ನು ಅವರಿಗೆ ಒಪ್ಪಿಸುತ್ತೇನೆ. ಇಲ್ಲದಿದ್ದರೆ ಅದನ್ನು ಉಪಾಧ್ಯಾಯರ ಕೈಗೆ ಕೊಡುವೆ.

- ಎಸ್.ಎನ್. ಸಚ್ಚಿನ್ (೩ನೇ ತರಗತಿ)
ಸಾಗರ

ಸಿಕ್ಕರೆ... ರೇ....!

ಹತ್ತು ಸಾವಿರ ರೂಪಾಯಿ ಸಿಕ್ಕರೆ.... ರೇ....ಯ ಸಾಮ್ರಾಜ್ಯದಲ್ಲಿ ತೇಲಿದರೆ ದಡ ತಲುಪುವುದು ಸಾಧ್ಯವಾಗುವುದೇ? ರೇ.... ರಾಜ್ಯವು ಅಂತ್ಯವಿಲ್ಲದ ಸಮುದ್ರ. ನನಗೇ ಹತ್ತು ಸಾವಿರ ಸಿಕ್ಕರೆ ಹೇಳಿ ಕೇಳಿ ಹೆಣ್ಣು ಮಗು ನಾನು. ಇನ್ನು ಅದು ತಗೋಬೇಕು, ಇದು ತಗೋಬೇಕು ಎಂದು ಕಂಡದ್ದನ್ನು ಕೇಳುವ ವಯಸ್ಸು - ಅದೂ ನನ್ನ ಕೈಗೆ ಶಾಲೆಗೆ ಹೋಗುವಾಗ ಹತ್ತು ಸಾವಿರ ಸಿಕ್ಕರೆ, ಓಹ್.... ಬಂಗಾರದ ಸರ, ಬಳೆ, ಡ್ರೆಸ್‌ಗಳು ಪ್ರತಿಯೊಂದು ಅಂಗಡಿಗಳು ನನ್ನ ಕಣ್ಣ ಮುಂದೆ ಅತೀ ಸುಂದರವಾಗಿ, ಅತಿ ಸಮೀಪದಲ್ಲಿಯೇ ಹಾದು ಹೋದವು. ಡ್ರೆಸ್‌ಗಳ ಹೆಸರುಗಳನ್ನು ನೆನಪಿಸಿಕೊಳ್ಳತೊಡಗಿದೆ. ಆದರೇ ರೇ..... ಸಾಮ್ರಾಜ್ಯ ಕಳಚಿ ಬಿತ್ತು ಅಂಕಲ್! ಏಕೆ ಗೊತ್ತಾ! ಅಮ್ಮ ತಲೆಗೆ ಕುಕ್ಕಿದಳು. 'ಬಿಸಿಲ ಬದುಕು' ಪತ್ರಿಕೆ ಕೈಯಿಂದ ಜಾರಿ ಬಿತ್ತು ಅಂಕಲ್! ಇಹಲೋಕಕ್ಕೆ ಬಂದಾಗ ಕಂಡದ್ದು ಅಮ್ಮನ ನಗು ಮುಖ. ಅಮ್ಮನಿಗೆ ಗೊತ್ತಿತ್ತು ನಾನು ಯಾವ ಪ್ರಪಂಚದಲ್ಲಿದ್ದೇನೆಂದು. ಪಕ್ಕನೆ ನೆನಪಿಗೆ ಬಂದದ್ದು ಅಮ್ಮನ ಉಪದೇಶದ ಮುತ್ತುಗಳು : ಬೇರೆಯವರ ಸ್ವತ್ತು ನಮ್ಮದಲ್ಲ.

- ಸೌಮ್ಯ ಸಾಲಿಮಠ್ (೬ನೇ ತರಗತಿ)
ದಾವಣಗೆರೆ

ಡಬ್ಬಿಂಗ್ ಎಂಬ ಮಾಯಾಜಾಲ

ಡಬ್ಬಿಂಗ್ ಸಂಸ್ಕೃತಿಯಿಂದ ನಿರ್ಮಾಪಕ ಉಳಿಯುತ್ತಾನೆ, ನಿರ್ಮಾಪಕ ಉಳಿದರೆ ಚಿತ್ರೋದ್ಯಮವೂ ಉಳಿಯುತ್ತದೆ, ಹಲವರ ಸಂಸಾರಕ್ಕೆ ಒಂದು ದಾರಿಯಾಗುತ್ತದೆ, ಇತ್ಯಾದಿ ಘೋಷಣೆಗಳು ಕೇಳೋದಕ್ಕೆ ಚೆನ್ನಾಗಿರುತ್ತವೆ. ವಾಸ್ತವದಲ್ಲಿ ಪರಭಾಷೆಯ ಪ್ರೇಕ್ಷಕರನ್ನು ಮೆಚ್ಚಿಸಲೆಂದೇ ತಯಾರಾಗುವ ಈ ಚಿತ್ರಗಳಲ್ಲಿ ಕನ್ನಡತನ ಎಂಬುದು ಇರೋದೇ ಇಲ್ಲ.

ಆ ಪೋಸ್ಟರ್ ನೋಡಿದ ಕೂಡಲೇ ನಿಮಗೆ ಪರಕೀಯ ಪ್ರಜ್ಞೆ ಕಾಡುತ್ತದೆ. ಅದರಲ್ಲೊಂದು ರಕ್ತಸಿಕ್ತ ಮುಖವಿದೆ, ಝಳಪಿಸುವ ಮಚ್ಚು ಇದೆ, ಹೊಗೆಯುಗುಳುವ ಬಂದೂಕು ಇದೆ. ಅಲ್ಲಿರುವ ಮುಖಗಳು ಅಪರಿಚಿತ. ಅದರ ಶೀರ್ಷಿಕೆಯಲ್ಲೂ ಪರಕೀಯ ವಾಸನೆ. ಆದರೆ ಅನುಮಾನ ಬೇಡ, ಅದು ಕನ್ನಡ ಚಿತ್ರ. ಅದೇ ಚಿತ್ರ ಆಂಧ್ರದಲ್ಲಿ ತೆಲುಗುಚಿತ್ರ ಹಾಗೂ ತಮಿಳ್ನಾಡಿನಲ್ಲಿ ತಮಿಳು ಚಿತ್ರವೆಂಬ ಹಣೆಪಟ್ಟಿ ಕಟ್ಟಿಕೊಂಡು ಬಿಡುಗಡೆಯಾಗುತ್ತದೆ ಎನ್ನೋದರ ಬಗ್ಗೆಯೂ ಅನುಮಾನ ಬೇಡ. ಇದು ಎಲ್ಲೆಲ್ಲೂ ಸಲ್ಲುವ ಚಿತ್ರ ಅಥವಾ ಹಾಗಂತ ಅದರ ನಿರ್ಮಾಪಕರು ಅಂದುಕೊಂಡಿದ್ದಾರೆ. ಮೈದಾನ ಕನ್ನಡದ್ದು, ಆಟಗಾರರು ಪರಭಾಷೆಯವರು, ಬೌಂಡರಿ ತಮಿಳು, ತೆಲುಗು. ಹೇಗಿದೆ ಈ ಚಮತ್ಕಾರ?


ಕಳೆದ ಎರಡು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಜನಪ್ರಿಯವಾಗಿರುವ ಹೊಸಪದ ಡಬ್ಬಿಂಗ್‌ರೈಟ್ಸ್, ಕನ್ನಡದಲ್ಲಿ ತಯಾರಾದ ಚಿತ್ರವೊಂದು ತನ್ನ ಸಂಭಾಷಣೆಯನ್ನಷ್ಟೆ ಬದಲಾಯಿಸಿಕೊಂಡು ಪರಭಾಷೆಯಲ್ಲಿ ಬಿಡುಗಡೆಯಾಗುವುದನ್ನು ಡಬ್ಬಿಂಗ್ ಎಂದು ಕರೆಯುತ್ತಾರೆ. ಚಿತ್ರದಲ್ಲಿ ಮುಖ್ಯಪಾತ್ರಗಳ ಹೊರತಾಗಿ ಮಿಕ್ಕವರೆಲ್ಲರೂ ಕನ್ನಡದವರೇ ಆಗಿರುತ್ತಾರೆ, ಅವರು ತುಟಿಯಲ್ಲಿ ಹೊರಬರುವ ಮಾತಷ್ಟೆ ತೆಲುಗೋ, ತಮಿಳೋ ಆಗಿರುತ್ತೆ.

ದಶಕಗಳ ಹಿಂದೆ ಅಂದ್ರೆ ಕನ್ನಡ ಚಿತ್ರರಂಗ ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ ಕನ್ನಡದಲ್ಲಿ ಬರುತ್ತಿದ್ದ ಚಿತ್ರಗಳೆಲ್ಲವೂ ಡಬ್ಬಿಂಗ್ ಚಿತ್ರಗಳೇ. ಉದಾಹರಣೆಗೆ ಲವಕುಶ, ಸಂಪೂರ್ಣ ರಾಮಾಯಣಂ, ಪಂಚಪಾಂಡವರು ಇತ್ಯಾದಿ ಚಿತ್ರಗಳು ಮೂಲತಃ ತೆಲುಗು ಚಿತ್ರಗಳು. ಕರ್ನಾಟಕದಲ್ಲಿ ಆಗಿನ್ನೂ ಚಿತ್ರೋದ್ಯಮ ಕಣ್ಣುಬಿಟ್ಟಿರಲಿಲ್ಲ. ಚಿತ್ರೀಕರಣಕ್ಕೆ ಬೇಕಾದ ಮೂಲಭೂತ ಸೌಕರ್ಯಗಳಾದ ಶೂಟಿಂಗ್ ಸ್ಟುಡಿಯೋ, ಸಂಕಲನ ಕೇಂದ್ರ, ಡಬ್ಬಿಂಗ್-ರಿರೆಕಾರ್ಡಿಂಗ್ ಸ್ಟುಡಿಯೋ ಇತ್ಯಾದಿಗಳಿರಲಿಲ್ಲ. ಅಪರೂಪಕ್ಕೆ ತಯಾರಾಗುತ್ತಿದ್ದ ಕನ್ನಡ ಚಿತ್ರಗಳೆಲ್ಲವೂ ಮದ್ರಾಸಿನಲ್ಲೇ ಚಿತ್ರೀಕರಣ, ಸಂಸ್ಕರಣ ಕೆಲಸವನ್ನು ನಡೆಸುತ್ತಿದ್ದವು. ಕನ್ನಡ ನಟ-ನಟಿ, ತಂತ್ರಜ್ಞರೆಲ್ಲರ ಮನೆಗಳೂ ಮದ್ರಾಸಿನಲ್ಲೇ ಇದ್ದವು.


ಕಾಲದೊಂದಿಗೆ ಪರಿಸ್ಥಿತಿಯೂ ಬದಲಾಗುತ್ತಿದ್ದಂತೆ, ಕನ್ನಡ ಚಿತ್ರೋದ್ಯಮದ ಬೇರು ಇಲ್ಲೇ ಗಟ್ಟಿಯಾಗತೊಡಗಿತು. ಒಂದು ಚಿತ್ರ ನಿರ್ಮಾಣವಾಗೋದಕ್ಕೆ ಬೇಕಾದ ಕನಿಷ್ಟ ಸೌಲಭ್ಯಗಳು ಇಲ್ಲೇ ಸೃಷ್ಟಿಯಾದವು. ಆಗ ರಾಜ್ಯ ಸರ್ಕಾರ ಹೊಸ ನಿರ್ಧಾರವನ್ನು ಪ್ರಕಟಿಸಿತು. ಪರಭಾಷಾ ಚಿತ್ರಗಳ ಡಬ್ಬಿಂಗ್ ಆವೃತ್ತಿಗಳು ಕರ್ನಾಟಕದಲ್ಲಿ ತೆರೆಕಾಣುವಂತಿಲ್ಲ. ಇದಕ್ಕೆ ಕಾರಣ ಕನ್ನಡ ಚಿತ್ರಗಳು ಇಲ್ಲೇ ನೆಲೆಯೂರಬೇಕು ಎನ್ನೋದು. ಡಬ್ಬಿಂಗ್ ಚಿತ್ರಗಳಿಂದ ಕನ್ನಡ ಚಿತ್ರಗಳಿಗೆ ಏಟಾಗುತ್ತದೆ ಎಂಬ ಮುಂಜಾಗ್ರತೆ. ಆ ಕಾರಣದಿಂದಲೇ ನಮ್ಮಲ್ಲೇ ಹೀರೋಗಳು, ನಿರ್ದೇಶಕರು ಸೃಷ್ಟಿಯಾದರು. ಅವರನ್ನು ಮೆಚ್ಚುವ, ಹಾಡಿ ಹೊಗಳುವ ಪ್ರೇಕ್ಷಕರೂ ಸೃಷ್ಟಿಯಾದರು.

ಈಗ ಪರಿಸ್ಥಿತಿ ಉಲ್ಟಾ ಆಗಿದೆ. ತೆಲುಗು, ತಮಿಳು ಚಿತ್ರಗಳು ಇಲ್ಲಿಗೆ ಡಬ್ ಆಗುತ್ತಿಲ್ಲ, ಆಗುವಂತಿಲ್ಲ ಕೂಡಾ. ಬದಲಾಗಿ ಇಲ್ಲಿಯ ಚಿತ್ರಗಳು ಅಲ್ಲಿಗೆ ಡಬ್ ಆಗುತ್ತಿವೆ. ಯಾಕೆಂದರೆ ತಮಿಳು, ಆಂಧ್ರ ಸರ್ಕಾರಗಳಿನ್ನೂ ಡಬ್ಬಿಂಗ್ ಚಿತ್ರಗಳನ್ನು ನಿಷೇದಿಸಿಲ್ಲ. ಕನ್ನಡ ಚಿತ್ರಗಳು ಪರಭಾಷೆಗೆ ಡಬ್ ಆಗುತ್ತಿವೆ ಎನ್ನೋ ಕಾರಣದಿಂದ ಇವೆಲ್ಲವೂ ಅದ್ಭುತ, ಉತ್ಕೃಷ್ಟ ಚಿತ್ರಗಳು ಎಂದು ಮೋಸಹೋಗಬೇಡಿ. ಅದರಲ್ಲಿರುವ ನಟ-ನಟಿಯರು ಇಲ್ಲಿ ಹಾಗೂ ಅಲ್ಲಿಯೂ ಸಲ್ಲುವವರಾಗಿರುತ್ತಾರೆ. ನಿರ್ಮಾಪಕರಿಗೆ ಡಬ್ಬಿಂಗ್ ಹಕ್ಕಿನಿಂದಲೇ ೩೦ ಲಕ್ಷ ಬರುತ್ತದೆ. ಈ ಮೂಲಕ ಅವರ ಆತಂಕ ಕಡಿಮೆಯಾಗುತ್ತದೆ. ಕರ್ನಾಟಕದಲ್ಲಿ ಸುಮಾರಾಗಿ ಆ ಚಿತ್ರ ಓಡಿದರೂ ನಷ್ಟವೇನೂ ಆಗೋಲ್ಲ.

ಡಬ್ಬಿಂಗ್ ಸಂಸ್ಕೃತಿಯಿಂದ ನಿರ್ಮಾಪಕ ಉಳಿಯುತ್ತಾನೆ, ನಿರ್ಮಾಪಕ ಉಳಿದರೆ ಚಿತ್ರೋದ್ಯಮವೂ ಉಳಿಯುತ್ತದೆ, ಹಲವರ ಸಂಸಾರಕ್ಕೆ ಒಂದು ದಾರಿಯಾಗುತ್ತದೆ, ಇತ್ಯಾದಿ ಘೋಷಣೆಗಳು ಕೇಳೋದಕ್ಕೆ ಚೆನ್ನಾಗಿರುತ್ತವೆ.



ಈ ಚಿತ್ರ ಪರಭಾಷೆಗಾಗಿ : ಆನಂದರಾಜ್, ಶಶಿಕುಮಾರ್, ಕೃಷ್ಣಂರಾಜು, ಪಾಂಡ್ಯನ್



ಹೊನ್ನವಳ್ಳಿ :
ಇಂಥವರ ಹೊಟ್ಟೆಗೆ ಕಲ್ಲು


ವಾಸ್ತವದಲ್ಲಿ ಪರಭಾಷೆಯ ಪ್ರೇಕ್ಷಕರನ್ನು ಮೆಚ್ಚಿಸಲೆಂದೇ ತಯಾರಾಗುವ ಈ ಚಿತ್ರಗಳಲ್ಲಿ ಕನ್ನಡತನ ಎಂಬುದು ಇರೋದೇ ಇಲ್ಲ. ಪ್ರೇಕ್ಷಕನಿಗೆ ಇಷ್ಟವಾಗದ ಚಿತ್ರ ನಿರ್ಮಿಸುವ ನಿರ್ಮಾಪಕ ಉದ್ಧಾರವಾದರೆಷ್ಟು ಬಿಟ್ಟರೆಷ್ಟು ಎಂಬ ಕಟುಪ್ರಶ್ನೆಗೆ ಉತ್ತರವೆಲ್ಲಿದೆ. ಹೆಸರಿಗೆ ಕನ್ನಡ ಚಿತ್ರ, ಅದರಲ್ಲಿರುವ ಮುಕ್ಕಾಲು ಪಾಲು ಕಲಾವಿದರೆಲ್ಲರೂ ತೆಲುಗು, ತಮಿಳಿನವರು. ಹಾಡು, ಕುಣಿತ, ಫೈಟ್ ಎಲ್ಲಾ ಅಲ್ಲಿಯದ್ದೇ. ಕನ್ನಡ ಪ್ರೇಕ್ಷಕರು ಕನ್ನಡದಲ್ಲಿ ಡೈಲಾಗ್ ಕೇಳುತ್ತಾ ಪರಕೀಯ ಟೇಸ್ಟನ್ನು ಆಸ್ವಾದಿಸಬೇಕು. ಇದರ ಡಬ್ ಪ್ರತಿಯನ್ನು ನೋಡುವ ಪರಭಾಷೆಯವರಿಗೆ ಆ ಸಮಸ್ಯೆಯಿಲ್ಲ.

ನಟ-ನಟಿಯರ ದೃಷ್ಟಿಕೋನದಿಂದ ನೋಡಿದಾಗ ಸ್ಟಾರ್‌ಗಳಿಗೆ ಈ ವ್ಯವಸ್ಥೆ ಅನುಕೂಲಕರವಾಗಿದೆ. ಪರಭಾಷೆಯಲ್ಲಿ ಅಷ್ಟೇನೂ ಜನಪ್ರಿಯರಲ್ಲದ ಪಾಂಡ್ಯನ್, ವಿನೋದ್ ಅವರಿಗೆ ಡಬ್ಬಿಂಗ್ ನೆಪದಿಂದಾಗಿ ಇಲ್ಲಿ ಅವಕಾಶಗಳು ಸಿಗುತ್ತವೆ. ಈ ಚಿತ್ರಗಳು ಅವರದೇ ನಾಡಿನಲ್ಲೂ ಬಿಡುಗಡೆಯಾಗುವುದರಿಂದ ಅಲ್ಲೂ ಚಾಲ್ತಿಯಲ್ಲಿರುತ್ತಾರೆ. ಉದಾಹರಣೆಗೆ ತಮಿಳು ಚಿತ್ರರಂಗದಲ್ಲಿ ಪಾಂಡ್ಯನ್‌ನಂಥ ನಟರ ಸಂಖ್ಯೆಗೇನೂ ಕೊರತೆಯಿಲ್ಲ. ಅವರು ಆರಕ್ಕೇರದೆ ಮೂರಕ್ಕೇರದೆ ನಿಂತವರು. ಅವರಿಗೆ ಅಲ್ಲಿ ಅವಕಾಶ, ಬೇಡಿಕೆಗಳೆರಡೂ ಕಡಿಮೆ. ಅದೇ ಪಾಂಡ್ಯನ್ ಇಲ್ಲಿಗೆ ಬಂದಾಗ ತಮಿಳು ನಟ ಎಂಬ ಏಕೈಕ ಕಾರಣಕ್ಕಾಗಿ ಕನ್ನಡ ಚಿತ್ರಕ್ಕೆ ನಾಯಕನಾಗುತ್ತಾರೆ. ಅವರು ನಟಿಸಿದ ಕನ್ನಡ ಚಿತ್ರದ ಪರಭಾಷಾ ಆವೃತ್ತಿ ಅವರ ತವರೂರಲ್ಲೂ ನಾಲ್ಕೈದು ವಾರ ಹೋಗುತ್ತದೆ. ಆ ಚಿತ್ರ ಅದೇ ಭಾಷೆಯಲ್ಲಿ ತಯಾರಾಗಿ ಅಷ್ಟೇ ದಿನ ಅಲ್ಲಿ ಓಡಿದ್ದರೆ ನಿರ್ಮಾಪಕನಿಗೆ ನಷ್ಟವಾಗುತ್ತಿತ್ತು. ಈಗ ಅದೇ ಮೊತ್ತ ಬೋನಸ್ ಆಗುತ್ತದೆ.


ಆದರೆ ಪೋಷಕ ನಟರ ಸ್ಥಿತಿಗತಿಯನ್ನು ಒಮ್ಮೆ ಊಹಿಸಿ. ಅವರಿಗೆ ಕನ್ನಡ ಚಿತ್ರಗಳನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಸಿಗುವ ಮೊತ್ತವೂ ಕಡಿಮೆ. ನಾಲ್ಕು ತಿಂಗಳು ಯಾವುದೇ ಪಾತ್ರ ಸಿಗದಿದ್ದಲ್ಲಿ ಮನೆಯ ಪಾತ್ರಪಗಡಗಳನ್ನು ಅಡವಿಡಬೇಕಾಗಬಹುದು. ಈಗ ನೋಡಿ ಪರಭಾಷೆಯಿಂದ ಖಳ-ಪೋಷಕರೆಲ್ಲರೂ ಬರುತ್ತಿದ್ದಾರೆ. ನಮ್ಮವರು ಮೂಲೆ ಸೇರಿದ್ದಾರೆ. ಕಲೆ-ಭಾಷೆಗೆ ಮಿತಿಯಿಲ್ಲ ಎಂದು ಭಾಷಣ ಹೊಡೆಯುವವರೂ ಈ ಪ್ರಾಕ್ಟಿಕಲ್ ಸಮಸ್ಯೆಯತ್ತ ಕಣ್ಣು ಹಾಯಿಸಲೇಬೇಕು. ಅಲ್ಲಿಂದ ಬರುವವರು ಇಲ್ಲಿರುವವರಿಗಿಂತ ಉತ್ತಮರಾಗಿದ್ದರೆ ಆ ಮಾತು ಬೇರೆ. ಈಗ ನಡೀತಾ ಇರುವುದು ಪಾತ್ರಗಳ ಹಂಚಿಕೆ ಹಾಗೂ ಅದರಿಂದ ಬರಬಹುದಾದ ಕಮರ್ಷಿಯಲ್ ಲಾಭ, ಕ್ವಾಲಿಟಿಯಲ್ಲ. ಈ ಪಾತ್ರಕ್ಕೆ ಈತನೇ ಸರಿ ಅಂತ ಹೊರಗಿನಿಂದ ಒಬ್ಬ ಉತ್ತಮ ನಟನನ್ನು (ಉದಾಹರಣೆಗೆ ತಬ್ಬಲಿಯು ನೀನಾದ ಮಗನೆ ಚಿತ್ರದ ನಾಸಿರುದ್ದೀನ್ ಶಾ ಪಾತ್ರ) ಕರೆದುಕೊಂಡು ಬರುವುದು ಬೇರೆ, ಇವನನ್ನು ಹಾಕಿಕೊಂಡರೆ ಪರಭಾಷಾ ಮಾರ್ಕೆಟ್ ಸಿಗುತ್ತದೆ ಎಂಬ ವ್ಯವಹಾರಿಕ ದೃಷ್ಟಿಯಲ್ಲಿ ಆಮದು ಮಾಡುವುದು ಬೇರೆ. ಸಿನಿಮಾ ಒಟ್ಟಾರೆಯಾಗಿ ವ್ಯಾಪಾರವೇ ಎನ್ನುವುದನ್ನು ಒಪ್ಪಿಕೊಂಡರೂ ಅಕ್ಕಿ ಬೇಳೆಯ ಗುಣಮಟ್ಟವೂ ಚೆನ್ನಾಗಿದ್ದಲ್ಲಿ ತಾನೆ ಗಿರಾಕಿ ಮೆಚ್ಚುವುದು.

ಡಬ್ಬಿಂಗ್ ರೈಟ್ಸ್ ಎಂಬ ಪದಕ್ಕೆ ಚಾಲನೆ ದೊರಕಿದ್ದು ಪೊಲೀಸ್ ಸ್ಟೋರಿ ಎಂಬ ಹಸಿಹಸಿ ಕ್ರೌರ್ಯದ ಚಿತ್ರದ ತೆಲುಗು ಆವೃತ್ತಿ ಅಲ್ಲಿ ಯಶಸ್ಸು ಕಂಡಾಗ. ಆ ಚಿತ್ರದ ನಾಯಕ ಸಾಯಿಕುಮಾರ್ ಮೂಲತಃ ತೆಲುಗಿನವರಾದರೂ ಅಲ್ಲಿ ಅವರು ಕಂಠದಾನ ಕಲಾವಿದರಾದರು. ಹಾಗಾಗಿ ಅವರು ನಟಿಸಿದ ಚಿತ್ರ ತೆಲುಗಲ್ಲಿ ಯಶಸ್ಸಾಗುವುದಕ್ಕೂ ಅವರು ಆಂಧ್ರವಾಡು ಆಗಿದ್ದಕ್ಕೂ ಸಂಬಂಧವಿರಲಿಲ್ಲ. ಈ ಲಾಜಿಕ್‌ನ್ನು ಅರ್ಥಮಾಡಿಕೊಳ್ಳದ ನಮ್ಮ ನಿರ್ಮಾಪಕರು ತೆಲುಗಿನ ಹೀರೋ ಇದ್ದರೆ ಆಂಧ್ರದಲ್ಲಿ ಚಿತ್ರ ಕ್ಲಿಕ್ ಆಗುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಅನಂತರ ಅದೇ ಟ್ರೆಂಡ್‌ನಲ್ಲಿ ತಯಾರಾದ ಇತರೇ ಸಾಯಿ ಚಿತ್ರಗಳು ಅಲ್ಲಿ ಭಯಂಕರ ಸಾಧನೆಯನ್ನೇನೂ ಮಾಡಲಿಲ್ಲ. ಆದರೆ ಸಿಕ್ಕಿದಷ್ಟೂ ಲಾಭವೇ ಅಲ್ಲವೇ ಎಂದು ನಿರ್ಮಾಪಕರು ಇಬ್ಬರು-ಮೂವರು ವಿವಿಧ ಭಾಷಾ ಹೀರೊಗಳ ಚೌಚೌವನ್ನು ತಯಾರಿಸುತ್ತಲೇ ಇದ್ದಾರೆ.

ನಿರ್ಮಾಪಕನಿಲ್ಲದೆ ಚಿತ್ರರಂಗವಿಲ್ಲ, ಆದರೇ, ಆತನೇ ಚಿತ್ರರಂಗವಲ್ಲ. ಇಲ್ಲಿ ನಟ-ನಟಿಯರಿದ್ದಾರೆ, ನಿರ್ದೇಶಕನಿದ್ದಾನೆ, ಅವೆಲ್ಲಕ್ಕಿಂತಲೂ ಮುಖ್ಯವಾಗಿ ಇವರ ಕೆಲಸವನ್ನು ಮೆಚ್ಚಬೇಕಾದ ಅಥವಾ ತಿರಸ್ಕರಿಸಬೇಕಾದ ಪ್ರೇಕ್ಷಕನಿದ್ದಾನೆ. ಈ ಎಲ್ಲಾ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಡಬ್ಬಿಂಗ್ ರೈಟ್ಸ್ ಎಂಬ ಮರೀಚಿಕೆ ಎಷ್ಟು ಪೊಳ್ಳು ಎನ್ನುವುದು ಅರಿವಾಗುತ್ತದೆ. ಈಗ ಸುಮ್ಮನೇ ಊಹಿಸಿ, ನಾಳೆ ಕರ್ನಾಟಕದಂತೆ ಆಂಧ್ರ, ತಮಿಳ್ನಾಡು ಸರ್ಕಾರಗಳೂ ಡಬ್ಬಿಂಗ್ ಚಿತ್ರಗಳನ್ನು ನಿಷೇಧಿಸಿದರೆ ಏನಾಗಬಹುದು? ಈಗಾಗಲೇ ಅಲ್ಲಿಯ ಕಾರ್ಮಿಕರು, ನಿರ್ಮಾಪಕರು ಕನ್ನಡ ಚಿತ್ರಗಳ ತೆಲುಗು-ತಮಿಳು ದಿರಿಸು ಧರಿಸಿ ಬರುವುದರಿಂದ ಕಂಗಾಲಾಗಿದ್ದಾರೆ. ಯಾಕೆಂದರೆ ಅಲ್ಲಿಯ ಚಿತ್ರಗಳಿಗೆ ಈ ಚಿತ್ರಗಳು ಪ್ರತಿಸ್ಪರ್ಧಿಯಾಗಿವೆ. ಅವು ಅದ್ದೂರಿ ಚಿತ್ರಗಳಾದರೆ, ಇವು ಲೋಬಜೆಟ್ ಚಿತ್ರಗಳು. ನಷ್ಟದ ಬಾಬ್ತು ಜಾಸ್ತಿ.



ಥ್ರಿಲ್ಲರ್ ಮಂಜು :
ಇವರಿಗೆ ಪರಭಾಷೆಯವರೆ ಬೇಕು




ಅಶೋಕ್ :
ಹೋರಾಟ ಮಾಡಬೇಕಾದವರು ಸುಮ್ಮನಿದ್ದಾರೆ

○ ಕೇಶವ ನಾಡಕರ್ಣಿ

ಸಿನಿಮಾ
ಹಾಗೂ
ಪೊಲೀಸ್ ವೃತ್ತಿ
ಎರಡು ಭಿನ್ನ ಜಗತ್ತಿನಲ್ಲಿ
ಕಾರ್ಯ ನಿರ್ವಹಿಸುತ್ತಿರುವ
ವ್ಯಕ್ತಿ ಈತ.

ಬಿ.ಸಿ. ಪಾಟೀಲ್



ನಿಮಗೆ 'ಬಿಸಿಪಿ' ಅಂದ್ರೆ ಗೊತ್ತಾ?

ಸ್ವಲ್ಪ ಯೋಚಿಸಿ... ಬೆಂಗಳೂರು ಸಿಟಿ ಪೊಲೀಸ್ ಅಂತ. ಜೊತೆಗೆ ಬೆಂಗಳೂರಿನ ಎಲ್ಲ ಪೊಲೀಸರ ಟೋಪಿಯ ಮೇಲೂ ಈ ಬಿಸಿಪಿ ಅಂತ ಇದೆ. ಹೀಗೆ ಬೆಂಗಳೂರು ಪೊಲೀಸರನ್ನೇ ಪ್ರತಿನಿಧಿಸುವ ವ್ಯಕ್ತಿಯೊಬ್ಬರಿದ್ದಾರೆ ಯಾರು ಗೊತ್ತಾ?

ಯಶವಂತಪುರದ ಸರ್ಕಲ್ ಇನ್ಸ್‌ಪೆಕ್ಟರ್ ಆಗಿರುವ ಜೊತೆಗೆ ಕನ್ನಡ ಚಿತ್ರನಟ ಹಾಗೂ ನಿರ್ಮಾಪಕ ಬಿ.ಸಿ.ಪಾಟೀಲ್ ಅವರೇ ಬಿಸಿಪಿ. ಇದು ಕೂಡಾ ಅವರೇ ಹೇಳುವ ಜೋಕ್. ಆದರಿದು ಜೋಕ್ ಅಲ್ಲ ಫ್ಯಾಕ್ಟ್ ಕೂಡಾ, ಅಲ್ಲವೆ? ನೀವು 'ನಿಷ್ಕರ್ಷ' ಚಿತ್ರ ನೋಡಿದ್ದರೆ ಈ ಬಿ.ಸಿ.ಪಾಟೀಲ್ ನೆನಪಿರುತ್ತಾರೆ. ವಿಲನ್ ಪಾತ್ರದಲ್ಲಿ ಮಿಂಚಿ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿರುವ ಅವರು ವೃತ್ತಿಯಿಂದ ಸರ್ಕಲ್ ಇನ್ಸ್‌ಪೆಕ್ಟರ್. ಎರಡು ವಿರುದ್ಧ ಜಗತ್ತನ್ನು ಬೆಸೆದಿರುವ ಅವರದು ಸಾಹಸದ ಬದುಕೆನ್ನಬಹುದು.

ಭೂಗತ ದೊರೆಗಳ ಜಗತ್ತಾಗುತ್ತಿರುವ ಬೆಂಗಳೂರಲ್ಲಿ ಜನನಿಬಿಡವಾದ ಯಶವಂತಪುರದ ಪೊಲೀಸ್ ಸ್ಟೇಷನ್‌ನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸುವ ತಲೆ ಬಿಸಿಯಲ್ಲಿ ನಟನೆ, ಚಿತ್ರ ನಿರ್ಮಾಣದಲ್ಲಿ ತೊಡಗಿಕೊಂಡಿರುವುದು ಕುತೂಹಲ ಹುಟ್ಟಿಸುತ್ತದೆ.

ಧಾರವಾಡ ಜಿಲ್ಲೆಯ ಹಿರೇಕೆರೂರು ಹತ್ತಿರದ ಯಲಿವಾಳದಲ್ಲಿ ಹುಟ್ಟಿದ ಪಾಟೀಲರಿಗೆ ಈಗ ನಲವತ್ತು (೧೯೫೬). ಅವರು ಮಕ್ಕಳ ದಿನಾಚರಣೆಯಾದ ನವೆಂಬರ್ ೧೪ರಂದು ಹುಟ್ಟಿದರು. ಹೀಗಾಗಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವುದಿಲ್ಲ. ಅಂದು ನೆಹರು ಜಯಂತಿಯನ್ನು ಇಡೀ ರಾಷ್ಟ್ರವೇ ಆಚರಿಸುವಾಗ ನನ್ನದೂ ಸೇರುತ್ತದೆಯಲ್ಲವೆ? ಎಂದು ನಗುತ್ತ ಕೇಳುತ್ತಾರೆ.

ಚಿತ್ರರಂಗಕ್ಕೆ ಬಂದ ಸಂದರ್ಭವನ್ನು ಪಾಟೀಲರು ಹೀಗೆ ನೆನಪಿಸಿಕೊಳ್ಳುತ್ತಾರೆ. ಕಂಪ್ಲಿಯಲ್ಲಿ ಸಬ್ ಇನ್ಸ್‌ಪೆಕ್ಟರಾದಾಗ ಪೊಲೀಸ್ ಸಿಬ್ಬಂದಿಯೊಂದಿಗೆ 'ಕುರುಕ್ಷೇತ್ರ' ನಾಟಕವನ್ನು ಆಡಿದ್ದರಂತೆ. ನಂತರ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ದೇವಸ್ಥಾನವೊಂದರ ರಥ ನಿರ್ಮಾಣಕ್ಕೆ 'ಟಿಪ್ಪು ಸುಲ್ತಾನ್' ನಾಟಕವನ್ನು ಆಡಿದರು. ಈ ಸಂದರ್ಭದಲ್ಲಿ ಜರುಗಿದ ಸಮಾರಂಭಕ್ಕೆ ಚಿತ್ರದ ನಿರ್ದೇಶಕ ದಿ. ನಂಜುಂಡಪ್ಪ ಆಗಮಿಸಿದ್ದರು. ಚಿತ್ರದಲ್ಲಿ ನಟಿಸಲು ಆಹ್ವಾನಿಸಿದಾಗ ತಾಂತ್ರಿಕ ತೊಂದರೆಗಳಿಂದ ಪಾಟೀಲರಿಗೆ ನಟಿಸಲಾಗಲಿಲ್ಲ. ಇದರಿಂದ ಸಾಂಗ್ಲಿಯಾನ ಭಾಗ-೨ ಹಾಗೂ ಸಿಬಿಐ ಶಂಕರ್ ಚಿತ್ರಗಳು ತಪ್ಪಿದವು.

ನಂತರ ಬೆಂಗಳೂರಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ಹೊಂದಿ ಬಂದ ನಂತರ 'ಸಂಘರ್ಷ' ಚಿತ್ರದಲ್ಲಿ ಸುನೀಲ್‌ಕುಮಾರ್ ದೇಸಾಯಿ ಅವರ ಪರಿಚಯವಾಯಿತು. ದೇಸಾಯಿ ಸಲಹೆ ಮೇರೆಗೆ 'ನಿಷ್ಕರ್ಷ' ಚಿತ್ರ ನಿರ್ಮಿಸಿದರು. ಜೊತೆಗೆ ಚಿತ್ರದ ಪ್ರಮುಖವಾದ ವಿಲನ್ ಪಾತ್ರ ನಿರ್ವಹಿಸಿ ಎಲ್ಲರ ಗಮನ ಸೆಳೆದರು. ಇದೀಗ ಸುಮಾರು ೧೫ ಚಿತ್ರಗಳಲ್ಲಿ ನಟಿಸಿ ಹೆಸರಾಗಿದ್ದಾರೆ. ಕರ್ಫ್ಯೂ, ಮಹಾಕ್ಷತ್ರಿಯ, ಜಾಣ, ಕಿಲಾಡಿಗಳು, ಮಹಾಚತುರ, ಕರಡಿಪುರ ಹೀಗೆ ಪಟ್ಟಿ ಬೆಳೆಯುತ್ತದೆ.

ಆದರೆ ಪಾಟೀಲರ ವಿಶೇಷವೆಂದರೆ ಇದುವರೆಗೆ ಯಾರನ್ನೂ ಚಿತ್ರದಲ್ಲಿ ನಟಿಸುವ ಅವಕಾಶ ಕೇಳಿಲ್ಲವಂತೆ! ಕೇಳುವುದೂ ಇಲ್ಲವೆಂದರು. ಪಾತ್ರ ಇಷ್ಟವಾಗುವುದಾದರೆ ಒಪ್ಪುವೆ. ಹೀಗೆ ಒಪ್ಪಿಗೆಯಾಗದ ಅನೇಕ ಚಿತ್ರಗಳಲ್ಲಿ ನಟಿಸುವುದನ್ನು ಬಿಟ್ಟಿದ್ದೇನೆ ಎಂದರು.

ಇದುವರೆಗೆ ನಿಷ್ಕರ್ಷ, ಪೂರ್ಣಸತ್ಯ, ನಿರ್ಬಂಧ ಚಿತ್ರಗಳನ್ನು ನಿರ್ಮಿಸಿರುವ ಅವರು ನಿಷ್ಕರ್ಷದ ಚಿತ್ರೀಕರಣ ಸಂದರ್ಭದಲ್ಲಿ ೧೨ ಲಕ್ಷ ರೂ. ವೆಚ್ಚದ ಕ್ಯಾಮರಾ ಒಡೆದು ನಷ್ಟವಾಯಿತು. ಆದರೆ ಈ ಕಹಿ ಘಟನೆಯಿಂದ ಕುಗ್ಗದ ಪಾಟೀಲರು ಏನಾದರೂ ಸಾಧಿಸುವ ಛಲ ಹೊತ್ತಿದ್ದಾರೆ. ಇದರ ಫಲವೇ 'ಜೈಹಿಂದ್' ಎನ್ನುವ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಮೊದಲಿಗೆ ಅನುಭವವಿರಲಿಲ್ಲ. ಜೊತೆಗೆ ನಟನೆಯಲ್ಲೂ ಹೊಸಬರು. ಈಗ ಅವರು ಎರಡೂ ಕ್ಷೇತ್ರದಲ್ಲಿ ಅನುಭವ ಹೊಂದಿದ್ದಾರೆ.

ಪತ್ನಿ ವನಜಾಕ್ಷಿ ಹಾಗೂ ಸೌಮ್ಯ, ಸೃಷ್ಟಿ ಎನ್ನುವ ಮಕ್ಕಳ ಸುಖೀ ಕುಟುಂಬ ಪಾಟೀಲರದು. ಚಿತ್ರದಲ್ಲಿ ನಟಿಸಲು ಹಾಗೂ ಚಿತ್ರ ನಿರ್ಮಿಸಲು ಪತ್ನಿಯ ಪೂರ್ಣ ಸಹಕಾರವಿದೆ ಎನ್ನುತ್ತಾರೆ ಅವರು.

ಅವರ ಹೆಸರೇ ಬಿ.ಸಿ.ಪಾಟೀಲ್. ಆದರೆ ಬಿಸಿಯಾಗಿರದೆ ಸದಾ ಬ್ಯುಸಿಯಾಗಿರುತ್ತಾರೆ. ಆದರೆ ಅವರು ಸದಾ ಹಸನ್ಮುಖಿ. ಜೊತೆಗೆ ಸ್ನೇಹಮಯಿ. ತಮ್ಮ ಯಶವಂತಪುರದ ಪೊಲೀಸ್ ಸ್ಟೇಷನ್ನಿನ ಆವರಣದಲ್ಲಿ ಪುಟ್ಟ ತೋಟ ಮಾಡಿ ನೀರಿನ ಕಾರಂಜಿಯನ್ನು ರೂಪಿಸಿ ಗಮನ ಸೆಳೆದಿದ್ದಾರೆ.

ಸಿನಿಮಾ ಹಾಗೂ ಪೊಲೀಸ್ ವೃತ್ತಿ ಎರಡು ಭಿನ್ನ ಜಗತ್ತಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಬಿ.ಸಿ. ಪಾಟೀಲರಿಗೆ ಶುಭ ಹಾರೈಸಿ ಬಂದಾಗ ಮುಗುಳ್ನಕ್ಕು ಬೀಳ್ಕೊಟ್ಟರು.


ಚುನಾವಣಾ ಚು(ಕು)ಟುಕು!
ಮತದಾರ
• ಹರಿನಾಥ್ •
ಹಿರೇಕೆರೂರು
ಬೇಗ ಭಾಷಣ ಮುಗ್ಸಿ ಸಾರ್! ನಾವು ಕರ್ಕೊಂಡ್ ಬಂದ ಜನ ತಾವಿರುವ ಅವಧಿ ಮುಗಿತೂಂತ ತಕರಾರು ಮಾಡ್ತಿದಾರೆ !!
ಎಲ್ರು ಬಾಟ್ಲಿ ಕೊಟ್ಟಿದ್ದರು ಅಂತ ಎಲ್ಲರಿಗೂ ಓಟ್ ಬತ್ತಿ ಬಂದಿರೋದು ಯಾವ ನ್ಯಾಯ ಕಣಯ್ಯಾ ?!
ನೀವ್ ಕೇಳ್ತಿರೋದು ಸರಿ ಸಾರ್: ಆದ್ರೆ ಈ ರಾಜಕೀಯ ಹಗರಣಗಳಿಂದಾಗಿ ನಮ್ಮಪ್ಪ ಬೇಸತ್ತು ಯಾರಿಗೂ ಓಟ್ ಕೊಡ್ಬೇಡಿ ಅಂತಾ ಹೇಳಿ ಸತ್ತೋಗವ್ನೆ !!

BISILA BADUKU Kannada Monthly RNI No. 67406 / 97 MARCH 1998 Regd. BGW/394